ಸೋಮವಾರ, ಜನವರಿ 16, 2023 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ವೇಷ
ಮುಂಬೈನಲ್ಲಿ ಭಾನುವಾರ ನಡೆದ ಟಾಟಾ–ಮುಂಬೈ ಮ್ಯಾರಥಾನ್‌ನಲ್ಲಿ ಕಲಾವಿದೆಯೊಬ್ಬರು ಸಾಂಪ್ರದಾಯಿಕ ವೇಷ ತೊಟ್ಟು ಪಾಲ್ಗೊಂಡಿದ್ದರು



ವರ್ತಕರಿಗೆ ಜಲಾವೃತವಾಗುವ ಭಯ: ವಾಹನ ಸವಾರರಿಗೆ ಬೀಳುವ ಭೀತಿ

ಇನ್ನೂ ಸ್ಮಾರ್ಟ್ ಆಗದ ಅವೆನ್ಯೂ ರಸ್ತೆ

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಮಳೆ ಬಂದರೆ ನೀರು ನುಗ್ಗುವ ಭಯ, ವಾಹನ ಸವಾರರಿಗೆ ರಸ್ತೆಯಲ್ಲಿ ಬೀಳುವ ಭೀತಿ...

ಸ್ಮಾರ್ಟ್‌ಸಿಟಿ ಯೋಜನೆಯಡಿ ಕಾಮಗಾರಿ ನಡೆಸಿದ್ದರೂ ಸ್ಮಾರ್ಟ್ ಆಗದ ಚಿಕ್ಕಪೇಟೆಯ ಅವೆನ್ಯೂ ರಸ್ತೆಯ ಸ್ಥಿತಿ ಇದು.

ಮೈಸೂರು ಬ್ಯಾಂಕ್ ವೃತ್ತದಿಂದ ಕೆ.ಆರ್. ಮಾರುಕಟ್ಟೆ ತನಕ 1.2 ಕಿಲೋ ಮೀಟರ್ ಉದ್ದದ ಅವೆನ್ಯೂ ರಸ್ತೆಯನ್ನು ಸ್ಮಾರ್ಟ್‌ಸಿಟಿ ಯೋಜನೆಯಡಿ ಅಭಿವೃದ್ಧಿಪಡಿಸಲಾಗಿದೆ. ಕಾಂಕ್ರೀಟ್ ರಸ್ತೆ ನಿರ್ಮಿಸಲಾಗಿದ್ದು, ಅಲ್ಲಲ್ಲಿ ಬಾಕಿ ಉಳಿಸಲಾಗಿದೆ. ಅವು ಗುಂಡಿಗಳ ರೂಪ ಪಡೆದುಕೊಂಡಿದ್ದು, ದ್ವಿಚಕ್ರ ವಾಹನ ಸವಾರರು ಸಂಚಾರಕ್ಕೆ ಸಂಕಷ್ಟ ಸೃಷ್ಟಿಸಿದೆ.

ಚಿಕ್ಕಪೇಟೆಯಲ್ಲಿ ಅತ್ತಿಂದಿತ್ತ ಸರಕು ಸಾಗಣೆಗೆ ಎರಡು ಚಕ್ರದ ತಳ್ಳುವ ಗಾಡಿಗಳನ್ನೇ ಹೆಚ್ಚಾಗಿ ಬಳಸಲಾಗುತ್ತದೆ. ಸರಕು ತುಂಬಿದ ಗಾಡಿಗಳನ್ನು ಎಳೆದು ಸಾಗಿಸಿಕೊಂಡೇ ನೂರಾರು ಜನ ಜೀವನ ನಡೆಸುತ್ತಿದ್ದಾರೆ. ಸರಕು ತುಂಬಿದ ಈ ಗಾಡಿಗಳು ಗುಂಡಿಯಲ್ಲಿ ಸಿಲುಕಿಕೊಂಡರೆ ಗಾಡಿ ಎಳೆಯುವವರು ಪರದಾಡಬೇಕಾದ ಸ್ಥಿತಿ ಇದೆ.

ಅವೆನ್ಯೂ ರಸ್ತೆಯಿಂದ ಅಕ್ಕ-ಪಕ್ಕದ ಅಡ್ಡ ರಸ್ತೆಗಳಿಗೆ ಹೋಗುವ ರಸ್ತೆಗಳು ಅಭಿವೃದ್ಧಿ ಕಂಡಿಲ್ಲ. ಅವೆನ್ಯೂ ರಸ್ತೆಯನ್ನು ಕಾಂಕ್ರೀಟ್‌ನಿಂದ ಎತ್ತರ ಮಾಡಲಾಗಿದೆ. ಈ ರಸ್ತೆಯಿಂದ ಅಡ್ಡ ರಸ್ತೆಗಳಿಗೆ ಇಳಿಯಲು ವಾಹನಗಳ ಸವಾರರು ಪರದಾಡುತ್ತಿದ್ದಾರೆ.





ಪಾದಚಾರಿ ಕೆಳಸೇತುವೆ ದ್ವಾರಕ್ಕೆ ಅಡ್ಡಲಾಗಿ ನಡೆಯುತ್ತಿರುವ ವ್ಯಾಪಾರ ವಹಿವಾಟು (ಎಡಚಿತ್ರ) ಅವೆನ್ಯೂ ರಸ್ತೆಯಲ್ಲಿ ಸ್ಮಾರ್ಟ್‌ಸಿಟಿ ಯೋಜನೆಯಡಿ ನಿರ್ಮಿಸಿರುವ ರಸ್ತೆಯಲ್ಲಿ ಉಳಿದಿರುವ ಗುಂಡಿ –ಪ್ರಜಾವಾಣಿ ಚಿತ್ರಗಳು / ಕಿಶೋರ್‌ಕುಮಾರ್ ಬೋಳಾರ್

ಪಾದಚಾರಿ ಮಾರ್ಗಗಳಿಗೆ ಹುಡುಕಾಟ

ಸ್ಮಾರ್ಟ್‌ಸಿಟಿ ಯೋಜನೆಯಡಿ ಪಾದಚಾರಿ ಮಾರ್ಗಗಳು ನಿರ್ಮಾಣವಾಗಿದ್ದರೂ, ಅವುಗಳನ್ನು ಪಾದಚಾರಿಗಳು ಹುಡುಕಬೇಕಾಗಿದೆ.

ಪಾದಚಾರಿ ಮಾರ್ಗವೇ ಕಾಣಿಸದಂತೆ ವ್ಯಾಪಾರ ವಹಿವಾಟನ್ನು ಕೆಲವು ಬೀದಿಬದಿ ವ್ಯಾಪಾರಿಗಳು ವಿಸ್ತರಿಸಿಕೊಂಡಿದ್ದಾರೆ. ವಿಕ್ಟೋರಿಯಾ ಆಸ್ಪತ್ರೆ ಕಡೆಯಿಂದ ಬಂದು ಕೆ.ಆರ್.ಮಾರುಕಟ್ಟೆ ಮತ್ತು ಅವಿನ್ಯೂ ರಸ್ತೆ ಕಡೆಗೆ ಸಾಗುವ ಪಾದಚಾರಿಗಳಿಗಾಗಿ ಅಂಡರ್ ಪಾಸ್(ಕೆಳ ಸೇತುವೆ) ನಿರ್ಮಿಸಲಾಗಿದೆ. ಎರಡೂ ಕಡೆಯ ಪ್ರವೇಶ ದ್ವಾರಗಳನ್ನು ಹುಡುಕಾಡಿ ಪ್ರವೇಶ ಮಾಡಬೇಕಾಗಿದೆ.

ಎರಡು ಬದಿಯಲ್ಲಿನ ಅಂಗಡಿ ಮುಂಗಟ್ಟುಗಳು ಈ ದ್ವಾರಗಳನ್ನೇ ಮುಚ್ಚುವಷ್ಟು ವ್ಯಾಪಿಸಿಕೊಂಡಿವೆ. ಪಾದಚಾರಿಗಳ ಸಮಸ್ಯೆ ಕಂಡರೂ ಕಾಣಿಸದಂತೆ ಪೊಲೀಸರು ಸುಮ್ಮನಿರುತ್ತಾರೆ ಎಂದು ಸ್ಥಳೀಯರು ದೂರುತ್ತಾರೆ.

‘ಮೇಲಾಧಿಕಾರಿಗಳ ಗಮನಕ್ಕೆ ತಂದಾಗ ಒಂದು ದಿನ ಸಮಸ್ಯೆ ಸರಿಯಾಗುತ್ತದೆ. ಮರುದಿನ ಮತ್ತೆ ಅದೇ ಸ್ಥಿತಿಗೆ ಮರಳುತ್ತದೆ’ ಕುಸುಮ್ ಜನರಲ್ ಸ್ಟೋರ್‌ನ ಸಿ.ಬಿ.ಕೃಷ್ಣಮೂರ್ತಿ ಅವರು ಹೇಳುತ್ತಾರೆ.

ಚೌಡೇಶ್ವರಿ ಟೆಂಪಲ್ ರಸ್ತೆಯ ವೃತ್ತದಲ್ಲಿ ಸರಕು ಸಾಗಣೆ ಆಟೊರಿಕ್ಷಾವೊಂದು ತಿರುವು ಪಡೆಯಲು ಯತ್ನಿಸಿ ಕಳೆದ ವಾರವಷ್ಟೇ ಪಲ್ಟಿ ಹೊಡೆದಿದೆ.


ಇದರ ಅಡಿಗೆ ಸಿಲುಕಿದ್ದ ಸಂಚಾರ ಪೊಲೀಸ್ ಸಿಬ್ಬಂದಿಯೊಬ್ಬರು ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

‘ಅವೈಜ್ಞಾನಿಕವಾಗಿ ಕಾಂಕ್ರೀಟ್ ರಸ್ತೆ ನಿರ್ಮಿಸಲಾಗಿದೆ. ಹಳೇ ರಸ್ತೆಯನ್ನು ಅಗೆದು ಹೊಸ ರಸ್ತೆ ನಿರ್ಮಿಸಿಲ್ಲ. ಇರುವ ರಸ್ತೆಯ ಮೇಲೆ ಕಾಂಕ್ರೀಟ್ ಹಾಕಿ ಎತ್ತರ ಮಾಡಲಾಗಿದೆ. ರಸ್ತೆಯ ಮೇಲೆ ಒಂದು ಅಡಿ ಎತ್ತರಕ್ಕೆ ಪಾದಚಾರಿ ಮಾರ್ಗ ನಿರ್ಮಿಸಲಾಗಿದೆ. ಮೂರು ಮೆಟ್ಟಿಲು ಹತ್ತಿ ಬರಬೇಕಿದ್ದ ಅಂಗಡಿಗಳಿಗೆ ಈಗ ಇಳಿದು ಹೋಗಬೇಕಾಗಿದೆ. ಮಳೆ ಬಂದರೆ ನೂರಾರು ಅಂಗಡಿಗಳು ಜಲಾವೃತವಾಗುತ್ತವೆ ಎಂದು ಇಲ್ಲಿನ ವರ್ತಕರು ಹೇಳುತ್ತಾರೆ. ಈ ರೀತಿ ಅವೈಜ್ಞಾನಿಕವಾಗಿ ರಸ್ತೆ ನಿರ್ಮಿಸುವುದೇ ಸ್ಮಾರ್ಟ್‌ಸಿಟಿಯೇ’ ಎಂದು ಅವರು ಪ್ರಶ್ನಿಸುತ್ತಾರೆ.

ಈ ಬಗ್ಗೆ ಪ್ರತಿಕ್ರಿಯೆ ಪಡೆಯಲು ಸ್ಮಾರ್ಟ್‌ಸಿಟಿ ಯೋಜನೆ ವ್ಯವಸ್ಥಾಪಕ ನಿರ್ದೇಶಕ ರಾಜೇಂದ್ರ ಚೋಳನ್ ಅವರನ್ನು ಸಂಪರ್ಕಿಸಲು ಪ್ರಯತ್ನಿಸಲಾಯಿತು. ಆದರೆ, ಅವರು ದೂರವಾಣಿ ಕರೆ ಸ್ವೀಕರಿಸಲಿಲ್ಲ.



ಅವೆನ್ಯೂ ರಸ್ತೆಯಲ್ಲಿ ಪಾದಚಾರಿಗಳು ಸಂಚಾರಕ್ಕೆ ತಡಕಾಡಬೇಕಾದ ಸ್ಥಿತಿ ಇದೆ. ಮೋದಿ ಹೆಲ್ಪ್‌ಲೈನ್‌ಗೆ ಕರೆ ಮಾಡಿದಾಗ ರಸ್ತೆ ರಿಪೇರಿಯಾಗುತ್ತದೆ. ಬಳಿಕ ಮತ್ತೆ ಅದೇ ಸ್ಥಿತಿ
ಸಿ.ಬಿ.ಕೃಷ್ಣಮೂರ್ತಿ
ಕುಸುಮ್ ಜನರಲ್ ಸ್ಟೋರ್



ಅವೈಜ್ಞಾನಿಕ ಕಾಮಗಾರಿ ನಿರ್ಮಿಸಲಾಗಿದ್ದು, ಮಳೆ ಬಂದರೆ ನೂರಾರು ಅಂಗಡಿಗಳು ಜಲಾವೃತ ಆಗುತ್ತವೆ. ಪೊಲೀಸ್ ಸಿಬ್ಬಂದಿ ಮೇಲೆ ವಾಹನ ಪಲ್ಟಿ ಹೊಡೆದು ಆಸ್ಪತ್ರೆ ಸೇರುವಷ್ಟು ಅವ್ಯವಸ್ಥೆಯಾಗಿದೆ –
ನಂದಕುಮಾರ್, ವರ್ತಕರು

ಸುದ್ದಿ 2 ನಿಮಿಷ

ಸಂಕ್ರಾಂತಿ ಬಳಿಕ ಸಂಪುಟ, ಪಕ್ಷದಲ್ಲಿ ಬದಲಾವಣೆ: ಸಿಪಿವೈ ಸುಳಿವು

ರಾಮನಗರ: ಸಂಕ್ರಾಂತಿ ನಂತರ ರಾಜ್ಯ ಸಚಿವ ಸಂಪುಟ ಹಾಗೂ ಪಕ್ಷ ಎರಡರಲ್ಲೂ ಕೊಂಚ ಬದಲಾವಣೆಯ ನಿರೀಕ್ಷೆ ಇದೆ. ಸಂಪುಟ ವಿಸ್ತರಣೆ ವಿಚಾರದಲ್ಲಿ ಮುಖ್ಯಮಂತ್ರಿ ನಿರ್ಧಾರವೇ ಅಂತಿಮ ಎಂದು ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ಹೇಳಿದರು.

ರಾಮನಗರದಲ್ಲಿ ಪತ್ರಕರ್ತರಿಗೆ ಅವರು ಪ್ರತಿಕ್ರಿಯೆ ನೀಡಿದರು.‘ಮುಖ್ಯಮಂತ್ರಿ ಅವರಿಗೂ ಸಂಪುಟ ವಿಸ್ತರಣೆ ಆಸೆ ಇದೆ. ಈಗಿನ ಸಂಪುಟ ಪರಿಪೂರ್ಣವಾಗಿಲ್ಲ ಎಂಬುದೂ ಅವರಿಗೆ ಗೊತ್ತಿದೆ. ಈ ವಿಚಾರದಲ್ಲಿ ಅಂತಿಮ ಪ್ರಯತ್ನ ನಡೆಯುತ್ತಿದೆ. ಮುಂದಿನದು ವರಿಷ್ಠರಿಗೆ ಬಿಟ್ಟ ತೀರ್ಮಾನ’ ಎಂದರು.

‘ಹಳೆ ಮೈಸೂರು ಭಾಗದಲ್ಲಿ ಇಷ್ಟು ವರ್ಷ ಹೊಂದಾಣಿಕೆ ರಾಜಕಾರಣ ಮಾಡಿಕೊಂಡು ಪಕ್ಷಕ್ಕೆ ಹಿನ್ನಡೆ ಆಗಿತ್ತು. ಇದೆಲ್ಲ ಪಕ್ಷದ ವರಿಷ್ಠರ ಗಮನಕ್ಕೆ ಹೋಗಿದೆ. ಬೆಂಗಳೂರು ಸುತ್ತಮುತ್ತ ಯಾಕೆ ಬಿಜೆಪಿ ಬೆಳೆದಿಲ್ಲ ಎಂಬುದರ ಅರಿತು ಪಕ್ಷಕ್ಕೆ ಗೊತ್ತಾಗಿದೆ. ಹೊಂದಾಣಿಕೆ ರಾಜಕೀಯದ ಕುರಿತು ಪಕ್ಷದ ವೇದಿಕೆಯಲ್ಲಿ ಮಾತನಾಡಿದ್ದೇನೆ. ಸದ್ಯ ಹಳೆ ಮೈಸೂರು ಭಾಗದಲ್ಲಿ ಪಕ್ಷ ಸಂಘಟನೆಗೆ ಹೆಚ್ಚು ಒತ್ತು ನೀಡಿದ್ದು, ಮುಂದಿನ ದಿನಗಳಲ್ಲಿ ಹೆಚ್ಚು ಸೀಟು ಗೆಲ್ಲುತ್ತೇವೆ’ ಎಂದರು.

‘ಜಿಲ್ಲೆಯಲ್ಲಿ ಮೂರು ಸ್ಥಾನಗಳನ್ನು ನಾವು ಗೆದ್ದೇ ಗೆಲ್ಲುತ್ತೇವೆ. ಸಂಸದೆ ಸುಮಲತಾ ಅವರನ್ನು ಪಕ್ಷಕ್ಕೆ ಸೇರಿಸಿಕೊಳ್ಳಬೇಕೆಂದು ಈ ಭಾಗದ ಮುಖಂಡರೆಲ್ಲ ಮನವಿ ಮಾಡಿದ್ದೇವೆ. ಇನ್ನೇನು ತೀರ್ಮಾನ ಮಾಡಲಾಗುತ್ತದೆ. ಸುಮಲತಾ ಅವರಿಗೂ ಮನವಿ ಮಾಡಿದ್ದೇವೆ’ ಎಂದರು.

‘ಎಚ್‌.ಡಿ. ಕುಮಾರಸ್ವಾಮಿ ಒಂದು ರೀತಿ ವಲಸೆ ಹಕ್ಕಿ ಇದ್ದ ಹಾಗೆ. ಅವರಿಗೆ ಪರ್ಮನೆಂಟ್ ಕ್ಷೇತ್ರ ಅಂತ ಯಾವುದೂ ಇಲ್ಲ. ಅವರು ಚುನಾವಣೆ ವೇಳೆ ಎಲ್ಲಿ ಬೇಕಾದರೂ ಸ್ಪರ್ಧೆ ಮಾಡುತ್ತಾರೆ. ಈ ಹಿಂದೆ ಸಾತನೂರು, ಕನಕಪುರ, ರಾಮನಗರ, ಚಿಕ್ಕಬಳ್ಳಾಪುರ, ಚನ್ನಪಟ್ಟಣದಲ್ಲಿ ಸ್ಪರ್ಧೆ ಮಾಡಿದ್ದಾರೆ. ನಾಳೆ ಬೇಕಿದ್ದರೆ ಮಂಡ್ಯದಲ್ಲೂ ಸ್ಪರ್ಧೆ ಮಾಡುತ್ತಾರೆ. ರಾಮನಗರದಲ್ಲಿ ಮಗನನ್ನು ಬೆಳೆಸಬೇಕು ಎಂದು ಚನ್ನಪಟ್ಟಣಕ್ಕೆ ಬಂದಿದ್ದಾರೆ’ ಎಂದು ಲೇವಡಿ ಮಾಡಿದರು.



ಅಂಚೆ ಪರಂಪರೆ ಜಾಡು ನಡಿಗೆ ಇಂದು

ಬೆಂಗಳೂರು: ಹೆರಿಟೇಜ್ ಬೇಕು ಸಂಸ್ಥೆ ಸಹಯೋಗದಲ್ಲಿ ಅಂಚೆ ಇಲಾಖೆಯು ನಗರದಲ್ಲಿ ಸೋಮವಾರ ‘ಅಂಚೆ ಪರಂಪರೆ ಜಾಡು’ ನಡಿಗೆ ಹಮ್ಮಿಕೊಂಡಿದೆ.

ಮಧ್ಯಾಹ್ನ 3 ಗಂಟೆಗೆ ಮಿಲ್ಲರ್ಸ್ ರಸ್ತೆಯಿಂದ ನಡಿಗೆ ಪ್ರಾರಂಭವಾಗಲಿದೆ. ನಗರದ ವಿವಿಧೆಡೆ ಸಂಚರಿಸಿ, ಸರ್ಕಾರಿ ವಸ್ತು ಸಂಗ್ರಹಾಲಯ ಕಟ್ಟಡದಲ್ಲಿರುವ ಸಂದೇಶ್ ಮ್ಯೂಸಿಯಂ ಆಫ್ ಕಮ್ಯುನಿಕೇಷನ್‌ನಲ್ಲಿ ಕೊನೆಗೊಳ್ಳಲಿದೆ. ಬಳಿಕ ವಸ್ತು ಸಂಗ್ರಹಾಲಯ ರಸ್ತೆಯ ಅಂಚೆ ಕಚೇರಿಯಲ್ಲಿ ಸಂಜೆ ಅಂಚೆ ಕಚೇರಿ ಉದ್ಘಾಟಿಸಲಾಗುತ್ತದೆ.

ಕರ್ನಾಟಕ ಅಂಚೆ ವೃತ್ತದ ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ಎಸ್. ರಾಜೇಂದ್ರ ಕುಮಾರ್ ಅವರು ಅಂಚೆ ಕಾರ್ಡ್‌ಗಳನ್ನು ಬಿಡುಗಡೆ ಮಾಡಲಿದ್ದಾರೆ. ಅಂಚೆ ನಿರ್ದೇಶನಾಲಯದ ನಿವೃತ್ತ ನಿರ್ದೇಶಕ ಚಾರ್ಲ್ಸ್ ಲೋಬೊ ಅವರು ರಚಿಸಿದ ಇ ಪುಸ್ತಕವನ್ನು ಬಿಡುಗಡೆ ಮಾಡಲಾಗುತ್ತದೆ ಎಂದು ಉಪಮುಖ್ಯ ಅಂಚೆ ಪಾಲಕ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಯೋಗಥಾನ್

ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ಭಾನುವಾರ ಆಯೋಜಿಸಿದ್ದ ‘ಯೋಗಥಾನ್’ನಲ್ಲಿ ವಿವಿಧ ವಯೋಮಾನದವರು ಯೋಗಾಭ್ಯಾಸ ಮಾಡಿದರು – ಪ್ರಜಾವಾಣಿ ಚಿತ್ರ

ಪಿಎಸ್‌ಐ ಮುಖಕ್ಕೆ ಪೆಪ್ಪರ್ ಸ್ಪ್ರೇ: ರೌಡಿ ಬಂಧನ

ಬೆಂಗಳೂರು: ಬಂಧಿಸಲು ಹೋಗಿದ್ದ ಪಿಎಸ್‌ಐ ಹಾಗೂ ಹೆಡ್ ಕಾನ್‌ಸ್ಟೆಬಲ್ ಮುಖಕ್ಕೆ ಪೆಪ್ಪರ್ ಸ್ಪ್ರೇ ಎರಚಿ ಪರಾರಿಯಾಗಿದ್ದ ರೌಡಿ ಮನು ಅಲಿಯಾಸ್ ಜೆಡಿಯನ್ನು ವಿಜಯನಗರ ಪೊಲೀಸರು ಬಂಧಿಸಿದ್ದಾರೆ.

‘ಜ. 9ರಂದು ವಿಶ್ವೇಶ್ವರಯ್ಯ ಬಡಾವಣೆಯ ಮಂಗನಹಳ್ಳಿ ಕೆರೆ ಬಳಿ ಮನು ಅಡಗಿದ್ದ ಮಾಹಿತಿ ಸಿಕ್ಕಿತ್ತು. ಪಿಎಸ್‌ಐ ಮೌನೇಶ್ ಬಡಗಿ, ಹೆಡ್ ಕಾನ್‌ಸ್ಟೆಬಲ್‌ಗಳಾದ ಕುಮಾರ್, ಮಹಾಲಿಂಗಯ್ಯ ಸ್ಥಳಕ್ಕೆ ಹೋಗಿದ್ದರು.’

‘ಪೊಲೀಸರನ್ನು ಕಂಡು ಆರೋಪಿ ತಪ್ಪಿಸಿಕೊಳ್ಳಲು ಮುಂದಾಗಿದ್ದ. ಪಿಎಸ್‌ಐ ಹಾಗೂ ಹೆಡ್ ಕಾನ್‌ಸ್ಟೆಬಲ್ ಕುಮಾರ್ ಮುಖಕ್ಕೆ ಪೆಪ್ಪರ್ ಸ್ಪ್ರೇ ಎರಚಿದ್ದ. ಇಬ್ಬರ ಮುಖವೂ ವಿಪರೀತ ಉರಿಯಲಾರಂಭಿಸಿತ್ತು. ಅಷ್ಟರಲ್ಲೇ ರೌಡಿ ಸ್ಥಳದಿಂದ ಪರಾರಿಯಾಗಿದ್ದ’ ಎಂದು ಪೊಲೀಸರು ತಿಳಿಸಿದರು.

ಟರ್ಮಿನಲ್–2 ಕಾರ್ಯಾರಂಭ

ಕೆಂಪೇಗೌಡ ವಿಮಾನ ನಿಲ್ದಾಣದಿಂದ ಕಲಬುರಗಿಗೆ ಹಾರಿದ ‘ಸ್ಟಾರ್ ಏರ್’ ವಿಮಾನ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಬೆಂಗಳೂರು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್-2 (ಟಿ2) ಭಾನುವಾರ ಮಕರ ಸಂಕ್ರಾಂತಿ ಯಂದು ಮೊದಲ ದೇಶೀಯ ವಿಮಾನ ಹಾರಾಟದ ಕಾರ್ಯಾಚರಣೆ ಆರಂಭಿಸಿದೆ.

‘ಸ್ಟಾರ್ ಏರ್’ ಏರ್‌ಲೈನ್ ವಿಮಾನ ಹೊಸ ಟರ್ಮಿನಲ್‌ನಿಂದ ಮೊದಲ ಹಾರಾಟ ಆರಂಭಿಸಿದ ವಿಮಾನ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು. ಬೆಳಿಗ್ಗೆ 8.40ಕ್ಕೆ ಇಲ್ಲಿಂದ ಟೇಕ್ ಆಫ್ ಆದ ವಿಮಾನ ಕಲಬುರಗಿಗೆ ಹಾರಿತು. ಬೆಳಿಗ್ಗೆ 11.25ಕ್ಕೆ ಕಲಬುರಗಿಯಿಂದ ಹಿಂತಿರುಗಿದೆ. ಮುಂದಿನ ಕೆಲ ತಿಂಗಳಲ್ಲಿಯೇ ಇತರೆ ದೇಶೀಯ ಹಾಗೂ ಅಂತಾರಾಷ್ಟ್ರೀಯ ವಿಮಾನಯಾನ ಸಂಸ್ಥೆ ಗಳು ಹಂತ ಹಂತವಾಗಿ ಟಿ–2ನಿಂದ ಕಾರ್ಯಾಚರಣೆ ಪ್ರಾರಂಭಿಸುವ ನಿರೀಕ್ಷೆ ಇದೆ.

‘ಟಿ–2ನಿಂದ ಸ್ಟಾರ್ ಏರ್ ಹೊಸದಾಗಿ ಕಾರ್ಯಾಚರಣೆ ಆರಂಭಿಸಿದೆ. ಬಾಕಿ ಉಳಿದಿರುವ ಟರ್ಮಿನಲ್–2 ಕೆಲಸಗಳು ಶೀಘ್ರ ಪೂರ್ಣಗೊಳ್ಳಲಿದ್ದು ಇತರ ವಿಮಾನಯಾನ ಸಂಸ್ಥೆಗಳ ವಿಮಾನಗಳು ಹಂತಹಂತವಾಗಿ ಟಿ–2ರಲ್ಲಿ ಕಾರ್ಯಾ ಚರಣೆ ಆರಂಭಿಸಲಿವೆ ಎಂದು ಬಿಐಎಎಲ್‌ನ ಎಂ.ಡಿ ಹರಿ ಮರಾರ್ ತಿಳಿಸಿದರು.

ಟರ್ಮಿನಲ್ ಬುಲೆವಾರ್ಡ್ ರಸ್ತೆ: ಪ್ರಯಾಣಿಕರು ಟಿ–2 ಗೆ ಸುಲಭವಾಗಿ ಪ್ರವೇಶಿಸಲು, 4.4 ಕಿ.ಮೀ. ಉದ್ದದ ‘ಟರ್ಮಿನಲ್ ಬುಲೆವಾರ್ಡ್’ ಹೆಸರಿನ ರಸ್ತೆಯನ್ನು ಈ ವಾರದ ಆರಂಭದಲ್ಲಿ ಉದ್ಘಾಟಿಸಲಾಗಿದೆ.

ಈ ರಸ್ತೆಯು ಟಿ–2 ನಿರ್ಗಮನ ಮತ್ತು ಆಗಮನ ದ್ವಾರಕ್ಕೆ ಸಂಪರ್ಕ ಕಲ್ಪಿಸಲಿದೆ. ಈ ಮಾರ್ಗದಲ್ಲಿ ಯಾವುದೇ ಟ್ರಾಫಿಕ್ ಸಿಗ್ನಲ್ ಇಲ್ಲದೇ ಇರುವುದು ಪ್ರಯಾಣಿಕರ ಸುಗಮ ಪ್ರಯಾಣಕ್ಕೆ ಅನುವು ಮಾಡಿಕೊಡಲಿದೆ. ಟಿ–2 ಪ್ರಯಾಣಿಕರನ್ನು ಪಾರ್ಕಿಂಗ್ ಪ್ರದೇಶದಲ್ಲಿ ಪುಟ್ಟ ಕಾರುಗಳ (ಬಗಿ) ಮೂಲಕ ಕರೆದೊಯ್ಯುವ ವ್ಯವಸ್ಥೆ ಇದೆ. ಟಿ1 ಮತ್ತು ಟಿ2 ನಡುವೆ ಶಟಲ್ ಸೇವೆ ಲಭ್ಯವಿದೆ.



ದೇವನಹಳ್ಳಿ ವಿಮಾನ ನಿಲ್ದಾಣ ಟರ್ಮಿನಲ್ 2 ಗೆ ಆಗಮಿಸಿದ ಪ್ರಯಾಣಿಕರನ್ನು ಸ್ವಾಗತಿಸಲಾಯಿತು.

ಇರಿದ ಪತ್ನಿ: ಠಾಣೆ ಮೆಟ್ಟಿಲೇರಿದ ಪತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರೀತಿಸಿ ಮದುವೆಯಾಗಿದ್ದ ಪತ್ನಿ, ನನ್ನ ಮೇಲೆ ಹಲ್ಲೆ ಮಾಡಿದ್ದಾರೆ’ ಎಂದು ಆರೋಪಿಸಿ 39 ವರ್ಷದ ವ್ಯಕ್ತಿಯೊಬ್ಬರು ಗಿರಿನಗರ ಠಾಣೆಗೆ ದೂರು ನೀಡಿದ್ದು, ಈ ಸಂಬಂಧ ಎಫ್‌ಐಆರ್ ದಾಖಲಾಗಿದೆ.

‘ಸ್ಥಳೀಯ ನಿವಾಸಿಯಾಗಿರುವ ದೂರುದಾರ, ಖಾಸಗಿ ಕಂಪನಿ ಉದ್ಯೋಗಿ. ಜ. 8ರಂದು ಅವರು ದೂರು ನೀಡಿದ್ದಾರೆ. ಅವರ ಪತ್ನಿ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ದಂಪತಿಗೆ 4 ವರ್ಷದ ಮಗಳಿದ್ದಾಳೆ. ಆಕೆಯ ಪಾಲನೆ ವಿಚಾರವಾಗಿ ದಂಪತಿ ನಡುವೆ ಆಗಾಗ ಗಲಾಟೆ ನಡೆಯುತ್ತಿದ್ದ ಬಗ್ಗೆ ಸ್ಥಳೀಯರು ಮಾಹಿತಿ ನೀಡಿದ್ದಾರೆ. ಎಲ್ಲ ಆಯಾಮದಲ್ಲಿ ತನಿಖೆ ನಡೆಸಲಾಗುತ್ತಿದೆ’ ಎಂದು ತಿಳಿಸಿವೆ.

ದೂರಿನ ವಿವರ: ‘ಆರು ವರ್ಷದ ಹಿಂದೆ ಪರಸ್ಪರ ಪ್ರೀತಿಸಿ ಮದುವೆಯಾಗಿದ್ದೇವೆ. ನಮಗೀಗ 4 ವರ್ಷದ ಮಗಳಿದ್ದಾಳೆ. ಆರು ತಿಂಗಳಿನಿಂದ ಪತ್ನಿ, ನಿತ್ಯವೂ ಬೆಳಿಗ್ಗೆ ಜಿಮ್‌ಗೆ ಹೋಗುತ್ತಿದ್ದಾಳೆ. ಅಲ್ಲಿಂದಲೇ ಕೆಲಸಕ್ಕೆ ತೆರಳಿ, ರಾತ್ರಿಯೇ ಮನೆಗೆ ವಾಪಸು ಬರುತ್ತಿದ್ದಾಳೆ. ಇದರಿಂದಾಗಿ ಮಗಳನ್ನು ನೋಡಿಕೊಳ್ಳುವವರು ಯಾರೂ ಇಲ್ಲದಂತಾಗಿದೆ’ ಎಂದು ದೂರಿನಲ್ಲಿ ಪತಿ ತಿಳಿಸಿದ್ದಾರೆ.

‘ಮಗಳನ್ನು ನೋಡಿಕೊಳ್ಳುವ ವಿಚಾರವಾಗಿ ಮಾತನಾಡಿದರೆ, ಪತ್ನಿ ನನ್ನ ಜೊತೆ ಜಗಳ ಮಾಡುತ್ತಿದ್ದಾಳೆ. ಇದೇ ವಿಚಾರವನ್ನು ಅವರ ತಂದೆ–ತಾಯಿಗೆ ತಿಳಿಸಿದ್ದೆ. ಕೆಲಸ ಬಿಡಿಸಿ ಮನೆಯಲ್ಲಿರುವಂತೆ ಪತ್ನಿಗೆ ಹೇಳುವುದಾಗಿ ಭರವಸೆ ನೀಡಿದ್ದರು. ಇದೇ ವಿಚಾರವಾಗಿ ಇಬ್ಬರ ನಡುವೆ ಪುನಃ ಜಗಳ ಶುರುವಾಗಿತ್ತು.’

‘ಜಿಮ್ ಹಾಗೂ ಕೆಲಸಕ್ಕೆ ಹೋಗುವುದನ್ನು ನಿಲ್ಲಿಸುವುದಿಲ್ಲ. ಮಗಳನ್ನು ನೋಡಿಕೊಳ್ಳುವುದಿಲ್ಲ’ ಎಂದು ಪತ್ನಿ ಹೇಳಿದ್ದಳು. ಇದನ್ನು ಪ್ರಶ್ನಿ ಸಿದ್ದಕ್ಕೆ ಚಾಕುವಿನಿಂದ ನನ್ನ ಕೈಗೆ ಇರಿದಿದ್ದಾಳೆ. ಚಿಕಿತ್ಸೆ ಪಡೆದು ಚೇತರಿಸಿಕೊಂಡಿದ್ದೇನೆ. ಹಲ್ಲೆ ಮಾಡಿರುವ ಪತ್ನಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳಿ’ ಎಂದು ಪತಿ ದೂರಿನಲ್ಲಿ ಒತ್ತಾಯಿಸಿದ್ದಾರೆ.

ಬುದ್ಧಿವಾದ ಹೇಳಿದ್ದಕ್ಕೆ ಕೊಲೆ

ಬೆಂಗಳೂರು: ಸೋಲದೇವನಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಕೇಶವಮೂರ್ತಿ (32) ಎಂಬುವರನ್ನು ಚೂರಿಯಿಂದ ಇರಿದು ಕೊಲೆ ಮಾಡಲಾಗಿದ್ದು, ಕೃತ್ಯ ಎಸಗಿರುವ ಆರೋಪಿ ಭರತ್‌ಕುಮಾರ್ (30) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

‘ಪೀಣ್ಯ ಬಳಿಯ ತಿಗಳರಪಾಳ್ಯದ ನಿವಾಸಿ ಕೇಶವಮೂರ್ತಿ ಅವರನ್ನು ಶನಿವಾರ ಕೊಲೆ ಮಾಡಲಾಗಿದೆ. ಪ್ರಕರಣ ದಾಖಲಿಸಿಕೊಂಡು, ಸಂಬಂಧಿಯೂ ಆಗಿರುವ ಭರತ್‌ಕುಮಾರ್‌ನನ್ನು ಬಂಧಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಭರತ್‌ಕುಮಾರ್‌ಗೆ ಕೆಲ ವರ್ಷಗಳ ಹಿಂದೆ ಮದುವೆಯಾಗಿತ್ತು. ಆದರೆ, ದಂಪತಿ ನಡುವೆ ನಿತ್ಯವೂ ಗಲಾಟೆ ನಡೆಯುತ್ತಿತ್ತು. ಮೂರು ದಿನಗಳ ಹಿಂದೆಯಷ್ಟೇ ಮನೆ ಬಿಟ್ಟು ಹೋಗಿದ್ದ ಭರತ್, ವಾಪಸು ಬಂದಿರಲಿಲ್ಲ’

‘ಶನಿವಾರ ಬೆಳಿಗ್ಗೆ ಭರತ್‌ನನ್ನು ಪತ್ತೆ ಮಾಡಿ ಮಾತನಾಡಿದ್ದ ಕೇಶವಮೂರ್ತಿ, ‘ಮನೆಯಲ್ಲಿ ಪತ್ನಿ ಕಾಯುತ್ತಿದ್ದಾಳೆ. ಮನೆಗೆ ಹೋಗು’ ಎಂದು ಬುದ್ಧಿವಾದ ಹೇಳಿದ್ದರು’ ಎಂದು ಮೂಲಗಳು ಹೇಳಿವೆ. ‘ಮನೆಗೆ ಹೋಗುವುದಾಗಿ ಹೇಳಿದ್ದ ಭರತ್, ಮದ್ಯ ಕುಡಿಯೋಣವೆಂದು ಕೇಶವಮೂರ್ತಿ ಅವರನ್ನು ಜೊತೆಯಲ್ಲಿ ಕರೆದುಕೊಂಡು ಹಿಮಾಲಯ ಢಾಬಾ ಬಳಿ ತೆರಳಿದ್ದರು.ಈ ವೇಳೆ ಚೂರಿಯಿಂದ ಕೇಶವಮೂರ್ತಿ ಅವರಿಗೆ ಇರಿದು ಕೊಲೆ ಮಾಡಿದ್ದ’ ಎಂದು ಮೂಲಗಳು ತಿಳಿಸಿವೆ.

ಎಲ್ಲ ಕ್ಷೇತ್ರಗಳಲ್ಲೂ ಸ್ಪರ್ಧೆ: ಜನಾರ್ದನ ರೆಡ್ಡಿ ಘೋಷಣೆ

ಬಾಗೇಪಲ್ಲಿ: ರಾಜ್ಯದ 224 ಕ್ಷೇತ್ರಗಳಲ್ಲಿ ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ ಅಭ್ಯರ್ಥಿಗಳು ಸ್ಪರ್ಧಿಸಲಿದ್ದಾರೆ ಎಂದು ಪಕ್ಷದ ಸಂಸ್ಥಾಪಕ ಗಾಲಿ ಜನಾರ್ದನ ರೆಡ್ಡಿ ಹೇಳಿದ್ದಾರೆ.

ವಾಕರೂ ಹೊಸ ಉತ್ಪನ್ನ

ಬೆಂಗಳೂರು: ವಾಕರೂ ಕಂಪನಿಯು ಸಂಕ್ರಾಂತಿಯ ಸಂದರ್ಭದಲ್ಲಿ ಹೊಸ ಪಾದರಕ್ಷೆಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಕೈಗೆಟುಕುವ ದರದಲ್ಲಿ ಇವು ಲಭ್ಯವಿವೆ ಎಂದು ಪ್ರಕಟಣೆ ತಿಳಿಸಿದೆ.

‘ಈ ಸಂಗ್ರಹದ ಪಾದರಕ್ಷೆಗಳಲ್ಲಿ ಬಾಳಿಕೆ ಬರುವ ಸೋಲ್ ಬಳಸಲಾಗಿದೆ. ಫಿಗ್, ಮಿಂಟ್, ಬೂದು, ಕಪ್ಪು, ನೀಲಿ, ಕಂದು, ನೀಲಿ ಸೇರಿದಂತೆ ವಿವಿಧ ಬಣ್ಣಗಳಲ್ಲಿ ಲಭ್ಯವಿವೆ’ ಎಂದು ಕಂಪನಿ ಹೇಳಿದೆ.

ಹೊತ್ತಿ ಉರಿದ ಟಿಂಬರ್ ಯಾರ್ಡ್ ಲೇಔಟ್ ಗೋದಾಮು

ಬೆಂಕಿ ಅವಘಡ: ₹ 4 ಕೋಟಿ ನಷ್ಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಟರಾಯನಪುರ ಬಳಿಯ ಟಿಂಬರ್ ಯಾರ್ಡ್ ಲೇಔಟ್‌ನಲ್ಲಿ ಬೆಂಕಿ ಅವಘಡ ಸಂಭವಿಸಿದ್ದು, ಸುಮಾರು ₹ 4 ಕೋಟಿ ಮೌಲ್ಯದ ಪ್ಲೇವುಡ್ ಹಾಗೂ ಪೀಠೋಪಕರಣಗಳು ಸುಟ್ಟಿರುವುದಾಗಿ ಅಂದಾಜಿಸಲಾಗಿದೆ.

ನವೀನ್‌ಕುಮಾರ್ ಗುಪ್ತಾ ಎಂಬುವರಿಗೆ ಸೇರಿದ್ದ ಗೋದಾಮಿನಲ್ಲಿ ಶನಿವಾರ ರಾತ್ರಿ 12.30ರ ಸುಮಾರಿಗೆ ಬೆಂಕಿ ಕಾಣಿಸಿಕೊಂಡಿತ್ತು. ಬೆಂಕಿ ಕೆನ್ನಾಲಗೆ ಕ್ರಮೇಣ ಹೆಚ್ಚಾಗಿ, ಇಡೀ ಗೋದಾಮು ಆವರಿಸಿತ್ತು. ಸ್ಥಳೀಯರು ಈ ಬಗ್ಗೆ ಬ್ಯಾಟರಾಯನಪುರ ಪೊಲೀಸರಿಗೆ ಮಾಹಿತಿ ನೀಡಿದ್ದರು.

ಪೊಲೀಸರು ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿ, ಬೆಂಕಿ ನಂದಿಸಲು ರಾತ್ರಿಯಿಂದಲೇ ಕಾರ್ಯಾಚರಣೆ ಆರಂಭಿಸಿದ್ದರು. ಗೋದಾಮಿನಲ್ಲಿ ಅಪಾರ ಪ್ರಮಾಣದಲ್ಲಿ ಪ್ಲೇವುಡ್ ಹಾಗೂ ಪೀಠೋಪಕರಣಗಳು ಇದ್ದಿದ್ದರಿಂದ, ಬೆಂಕಿ ಕೆನ್ನಾಲಗೆ ಹೆಚ್ಚಿತ್ತು. ಭಾನುವಾರ ತಡರಾತ್ರಿವರೆಗೂ 50ಕ್ಕೂ ಹೆಚ್ಚು ಸಿಬ್ಬಂದಿ ಬೆಂಕಿ ನಂದಿಸುವ ಕೆಲಸ ಮುಂದುವರಿಸಿದ್ದರು. ಸ್ಥಳೀಯರು ಸಹ ಸಹಕಾರ ನೀಡಿದ್ದರು.

‘ಪ್ಲೇವುಡ್, ಮನೆಯ ಒಳ ವಿನ್ಯಾಸ ಸಾಮಗ್ರಿ, ಪೀಠೋಪಕರಣ ಸೇರಿದಂತೆ ಹಲವು ಬಗೆಯ ಕಟ್ಟಿಗೆಗಳು ಗೋದಾಮಿನಲ್ಲಿದ್ದವು. ಬೆಂಕಿಯಿಂದಾಗಿ ಎಲ್ಲ ವಸ್ತುಗಳು ಸಂಪೂರ್ಣ ಸುಟ್ಟಿದ್ದು, ಸುಮಾರು ₹ 4 ಕೋಟಿಯಷ್ಟು ನಷ್ಟವಾಗಿರುವುದಾಗಿ ಮಾಲೀಕರು ಹೇಳುತ್ತಿದ್ದಾರೆ’ ಎಂದು ಪೊಲೀಸರು ಮಾಹಿತಿ ನೀಡಿದರು.

‘ವಿದ್ಯುತ್ ಶಾರ್ಟ್ ಸರ್ಕೀಟ್‌ನಿಂದ ಬೆಂಕಿ ತಗುಲಿದೆಯಾ?, ಯಾರಾದರೂ ಉದ್ದೇಶಪೂರ್ವಕವಾಗಿ ಬೆಂಕಿ ಹಚ್ಚಿದ್ದಾರೆಯೇ? ಎಂಬುದು ತನಿಖೆಯಿಂದ ತಿಳಿಯಬೇಕಿದೆ. ಬೆಂಕಿ ನಂದಿಸುವ ಕಾರ್ಯಾಚರಣೆ ಮುಗಿದ ಬಳಿಕ, ಪರಿಶೀಲನೆ ನಡೆಸಿ ದೂರು ನೀಡುವುದಾಗಿ ಮಾಲೀಕರು ತಿಳಿಸಿದ್ದಾರೆ’ ಎಂದು ಪೊಲೀಸರು ಹೇಳಿದರು.

‘ನವೀನ್ ಅವರು ಏಳು ವರ್ಷಗಳ ಹಿಂದೆ ಗೋದಾಮು ತೆರೆದಿದ್ದರು. ಉತ್ತಮ ವಹಿವಾಟು ಸಹ ನಡೆಸುತ್ತಿದ್ದರು’ ಎಂದು ತಿಳಿಸಿದರು.

ಆತಂಕ: ‘ಬೆಂಕಿ ಹೊತ್ತಿಕೊಂಡಿದ್ದ ಗೋದಾಮು ಅಕ್ಕ-ಪಕ್ಕದಲ್ಲಿ ಕಟ್ಟಿಗೆಯ ಮಳಿಗೆಗಳಿವೆ. ಅವಘಡದಿಂದಾಗಿ ಅಕ್ಕ–ಪಕ್ಕದ ವ್ಯಾಪಾರಿಗಳು ಆತಂಕಗೊಂಡಿದ್ದರು. ಭಾನುವಾರ ರಾತ್ರಿ ಬೆಂಕಿ ಕಡಿಮೆಯಾದ ಬಳಿಕವೇ ಅವರೆಲ್ಲರೂ ನಿಟ್ಟುಸಿರು ಬಿಟ್ಟರು.



ಟಿಂಬರ್ ಯಾರ್ಡ್ ಲೇಔಟ್ ಗೋದಾಮಿಗೆ ಹೊತ್ತಿಕೊಂಡಿದ್ದ ಬೆಂಕಿಯನ್ನು ಅಗ್ನಿಶಾಮಕ ದಳದ ಸಿಬ್ಬಂದಿ ಶನಿವಾರ ನಂದಿಸಿದರು – ಪ್ರಜಾವಾಣಿ ಚಿತ್ರ

500 ಸಿಲಿಂಡರ್ ಸ್ಥಳಾಂತರ

ನವೀನ್‌ಕುಮಾರ್ ಗುಪ್ತಾ ಅವರ ಗೋದಾಮು ಪಕ್ಕದಲ್ಲಿ ಎಚ್‌.ಪಿ ಅಡುಗೆ ಅನಿಲ ಸಿಲಿಂಡರ್ ಗೋದಾಮು ಸಹ ಇದೆ. ಬೆಂಕಿ ತಗುಲಿದ್ದ ಮಾಹಿತಿ ತಿಳಿಯುತ್ತಿದ್ದಂತೆ ಸಿಲಿಂಡರ್ ಗೋದಾಮಿನ ಸಿಬ್ಬಂದಿ, ಸ್ಥಳಕ್ಕೆ ಬಂದಿದ್ದರು. ಗೋದಾಮಿನಲ್ಲಿದ್ದ 500 ಸಿಲಿಂಡರ್‌ಗಳನ್ನು ಬೇರೆಡೆ ಸ್ಥಳಾಂತರಿಸಿದರು.

ನಿಂತಿದ್ದ ಲಾರಿಗೆ ಗುದ್ದಿದ ಬೈಕ್: ಬೆಂಗಳೂರು: ತುಮಕೂರು ರಸ್ತೆಯ ರಾಷ್ಟ್ರೀಯ ಹೆದ್ದಾರಿಯಲ್ಲಿ ನಿಂತಿದ್ದ ಲಾರಿಗೆ ಬೈಕ್ ಗುದ್ದಿದ್ದು, ಸವಾರ ಅಖಿಲೇಶ್ (26) ಎಂಬುವವರು ಮೃತಪಟ್ಟಿದ್ದಾರೆ.

‘ರಾಜಾಜಿನಗರ ನಿವಾಸಿ ಅಖಿಲೇಶ್, ಖಾಸಗಿ ಕಂಪನಿ ಉದ್ಯೋಗಿ. ಸ್ನೇಹಿತರನ್ನು ಭೇಟಿಯಾಗಿ ಶನಿವಾರ ರಾತ್ರಿ ಮನೆಗೆ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ’ ಎಂದು ಪೀಣ್ಯ ಸಂಚಾರ ಠಾಣೆ ಪೊಲೀಸರು ತಿಳಿಸಿದರು.

‘ಹೆದ್ದಾರಿಯಲ್ಲಿ ಹೊರಟಿದ್ದ ಲಾರಿಯೊಂದು ಮಾರ್ಗಮಧ್ಯೆ ಕೆಟ್ಟು ನಿಂತಿತ್ತು. ಅದೇ ಮಾರ್ಗದಲ್ಲಿ ತೆರಳುತ್ತಿದ್ದ ಅಖಿಲೇಶ್, ಲಾರಿ ನಿಂತಿದ್ದನ್ನು ಗಮನಿಸಿರಲಿಲ್ಲ. ವೇಗವಾಗಿ ಬೈಕ್ ಚಲಾಯಿಸಿದ್ದರು. ಇದರಿಂದಾಗಿ ನಿಂತಿದ್ದ ಲಾರಿಗೆ ಬೈಕ್ ಗುದ್ದಿತ್ತು. ಅಪಘಾತದಿಂದ ಬೈಕ್ ಜಖಂಗೊಂಡಿತ್ತು. ತೀವ್ರ ಗಾಯಗೊಂಡು ಅಖಿಲೇಶ್ ಮೃತಪಟ್ಟಿದ್ದಾರೆ’ ಎಂದು ಹೇಳಿದರು.

ಭೂಸ್ವಾಧೀನ ವಿರೋಧಿಸಿ ಜಾನುವಾರು ಸಮೇತ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಯಲಹಂಕ: ರಾಮಗೊಂಡನಹಳ್ಳಿ ಮತ್ತು ಸುತ್ತಮುತ್ತಲ ಗ್ರಾಮಗಳ ರೈತರು, ಮಹಿಳೆಯರು ಉದ್ದೇಶಿತ ಡಾ.ಶಿವರಾಮ ಕಾರಂತ ಬಡಾವಣೆ ನಿರ್ಮಾಣಕ್ಕೆ ಬಿಡಿಎ ಭೂಸ್ವಾಧೀನ ವಿರೋಧಿಸಿ, ಅಲಂಕರಿಸಿದ್ದ ಜಾನುವಾರುಗಳ ಸಮೇತ ಪ್ರತಿಭಟನಾ ಮೆರವಣಿಗೆ ನಡೆಸಿದರು.

ರೈತರು ಹಾಗೂ ಪೂರ್ಣಕುಂಭ ಹೊತ್ತ ಮಹಿಳೆಯರು ರಾಮಗೊಂಡನಹಳ್ಳಿಯಲ್ಲಿ ಜಮಾವಣೆಗೊಂಡರು.

ನಂತರ ಬಿಡಿಎ ಮತ್ತು ಸರ್ಕಾರದ ವಿರುದ್ಧ ವಿರುದ್ಧ ಘೋಷಣೆ ಕೂಗಿದರು. ಮಾರ್ಗಮಧ್ಯೆ ಪೊಲೀಸರು ಅಲ್ಲಲ್ಲಿ ಬ್ಯಾರಿಕೇಡ್ ಹಾಕಿ ಮೆರವಣಿಗೆ ತಡೆಯಲು ಯತ್ನಿಸಿದರು. ಆದರೆ, ಭಾರಿ ಸಂಖ್ಯೆಯಲ್ಲಿದ್ದ ಪ್ರತಿಭಟನಕಾರರು, ಬ್ಯಾರಿಕೇಡ್ ಉರುಳಿಸಿ, ಪಾದಯಾತ್ರೆ ಮುಂದುವರಿಸಿ ಆಕ್ರೋಶ ವ್ಯಕ್ತ ಪಡಿಸಿದರು.

ಪೊಲೀಸರು ಪ್ರತಿಭಟನಕಾರರನ್ನು ತಡೆಯುವ ವೇಳೆ ಉಂಟಾದ ತಳ್ಳಾಟದಿಂದ ಅಬ್ಬಿಗೆರೆ ಗ್ರಾಮದ ರೈತ ರಾಜಶೇಖರ್(ರಾಜಣ್ಣ) ಅವರ ತಲೆಗೆ ಗಾಯವಾಗಿದೆ. ನಂತರ ಪುಟ್ಟೇನಹಳ್ಳಿ ಡಿಪೊ ಬಳಿ ಪ್ರತಿಭಟನಾಕಾರರು ಸಭೆ ನಡೆಸಿದರು.

ರೈತ ಮುಖಂಡ ಎಂ.ರಮೇಶ್, ಯಲಹಂಕ ತಾಲ್ಲೂಕಿನ 17 ಹಳ್ಳಿಗಳ 3,546 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಬಿಡಿಎ ಮುಂದಾಗಿದೆ. 1894ರ ಬ್ರಿಟಿಷ್ ಕಾಯಿದೆ ರೂಪದಲ್ಲಿ ಪರಿಹಾರ ನೀಡದೆ. ಕೇಂದ್ರ ಸರ್ಕಾರದ 2013ರ ಭೂಸ್ವಾಧೀನ ಕಾಯಿದೆಯ ಪ್ರಕಾರ ಪರಿಹಾರ ನೀಡಬೇಕು. ತಪ್ಪಿದಲ್ಲಿ ನಮ್ಮ ಹೋರಾಟ ನಿರಂತರವಾಗಿ ಮುಂದುವರಿಯಲಿದೆ ಎಂದು ಎಚ್ಚರಿಸಿದರು.

ರೈತ ಮುಖಂಡ ಮಾವಳಿಪುರ ಬಿ.ಶ್ರೀನಿವಾಸ್ ಮಾತನಾಡಿ, ‘ರೈತರ ಹೋರಾಟ ಹತ್ತಿಕ್ಕಲು ಪ್ರಯತ್ನಿಸಲಾಗುತ್ತಿದೆ. ಭೂಮಿ ಕಳೆದುಕೊಳ್ಳುತ್ತಿರುವ ರೈತರಿಗೆ ಪರಿಹಾರ ನೀಡಬೇಕೆಂದು ಕಳೆದ 16 ವರ್ಷಗಳಿಂದ ಮನವಿ ಮಾಡುತ್ತಾ ಬಂದಿದ್ದರೂ ಸರ್ಕಾರ ಸ್ಪಂದಿಸುತ್ತಿಲ್ಲ’ ಎಂದು ದೂರಿದರು.

ಸ್ಥಳಕ್ಕೆ ಬಂದ ಯಲಹಂಕ ಎಸಿಪಿ ಮಂಜುನಾಥ್, ಪ್ರತಿಭಟನಕಾರರಿಂದ ಮನವಿ ಸ್ವೀಕರಿಸಿದರು.

ರೈತ ಮುಖಂಡರಾದ ಪಿ.ನಾಗರಾಜ ಗೌಡ, ಮುನಿರಾಜು, ಬಸವರಾಜ ಪಾದಯಾತ್ರಿ, ಗೋಪಿ, ಪಂಚಾಕ್ಷರಿ, ವಸಂತ್ ವೀರಸಾಗರ ಉಪಸ್ಥಿತರಿದ್ದರು.



ಯಲಹಂಕ–ದೊಡ್ಡಬಳ್ಳಾಪುರ ಮುಖ್ಯರಸ್ತೆಯ ಪುಟ್ಟೇನಹಳ್ಳಿ ಕೆರೆಯ ಸಮೀಪದಲ್ಲಿ ಪೊಲೀಸರು ರೈತರ ಪ್ರತಿಭಟನಾ ಮೆರವಣಿಗೆಯನ್ನು ತಡೆದರು



ನಗರದಲ್ಲಿ ಭಾನುವಾರ ಶ್ರೀ ರಂಜನಿ ಫೌಂಡೇಶನ್ ಟ್ರಸ್ಟ್ ಆಯೋಜಿಸಿದ್ದ ‘ಸ್ವರ ಸಾಮ್ರಾಟ್ ಉತ್ಸವ 2022–2023’ರ ಕಾರ್ಯಕ್ರಮದಲ್ಲಿ ಕಲಾವಿದೆ ಮಾಳವಿಕಾ ಸರುಕ್ಕೈ ಭರತನಾಟ್ಯ ಪ್ರದರ್ಶಿಸಿದರು ಪ್ರಜಾವಾಣಿ ಚಿತ್ರ

ಸೋಮವಾರ, ಜನವರಿ 16, 2023 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬೆಡಗು

ಅಮೃತಸರದಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ನಟಿ ಸೋನಂ ಬಜ್ವಾ ಹೀಗೆ ಕಾಣಿಸಿಕೊಂಡರು



ಯೋಗದಲ್ಲಿ ಗಿನ್ನಿಸ್ ದಾಖಲೆ: ನಾರಾಯಣಗೌಡ

ಬೆಂಗಳೂರು: 'ರಾಜ್ಯಾದ್ಯಂತ 6 ಲಕ್ಷಕ್ಕೂ ಅಧಿಕ ಜನರು ಏಕಕಾಲಕ್ಕೆ ಯೋಗಾಭ್ಯಾಸ ಮಾಡುವ ಮೂಲಕ ಗಿನ್ನಿಸ್ ದಾಖಲೆ ಬರೆಯಲಾಗಿದೆ' ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಚಿವ ನಾರಾಯಣಗೌಡ ಅವರು ತಿಳಿಸಿದರು.

ಇಲಾಖೆಯು ನಗರದ ಕಂಠೀರವ ಕ್ರೀಡಾಂಗಣದಲ್ಲಿ ಭಾನುವಾರ ಆಯೋಜಿಸಿದ್ದ ಗಿನ್ನಿಸ್ ದಾಖಲೆ ಪ್ರಯತ್ನದ 'ಯೋಗಥಾನ್'ನ ಕಾರ್ಯಕ್ರಮವನ್ನು ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಉದ್ಘಾಟಿಸಿದರು.

'ಈ ಹಿಂದೆ ರಾಜಸ್ಥಾನದಲ್ಲಿ ಏಕಕಾಲದಲ್ಲಿ 1.60 ಲಕ್ಷ ಜನರು ಯೋಗ ಮಾಡುವ ಮೂಲಕ ಗಿನ್ನಿಸ್ ದಾಖಲೆ ಸೃಷ್ಟಿಸಿದ್ದರು. ಈಗ ಆ ದಾಖಲೆಯನ್ನು ಮುರಿಯಲಾಗಿದೆ. ಏಕಕಾಲದಲ್ಲಿ ಐದು ಲಕ್ಷ ಜನ ಯೋಗ ಮಾಡುವ ಗುರಿ ಹಾಕಿಕೊಳ್ಳಲಾಗಿತ್ತು. 6 ಲಕ್ಷಕ್ಕೂ ಅಧಿಕ ಮಂದಿ ಭಾಗವಹಿಸಿ, ಯೋಗ ಮಾಡಿದ್ದಾರೆ' ಎಂದು ನಾರಾಯಣಗೌಡ ಹೇಳಿದರು.

ಆಳ್ವಾಸ್ ಕಾಲೇಜಿನಲ್ಲಿ ಯೋಗಥಾನ್ (ಮಂಗಳೂರು ವರದಿ): 26ನೇ ರಾಷ್ಟ್ರೀಯ ಯುವಜನೋತ್ಸವದ ಅಂಗವಾಗಿ ದಕ್ಷಿಣ ಕನ್ನಡ ಜಿಲ್ಲಾಡಳಿತವು ವಿವಿಧ ಇಲಾಖೆಗಳು, ಹಾಗೂ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ವತಿಯಿಂದ 'ಯೂತ್ ಫಾರ್ ಯೋಗ' ಎಂಬ ಪರಿಕಲ್ಪನೆಯಡಿ 'ಯೋಗಥಾನ್-2023' ಕಾರ್ಯಕ್ರಮ ಇಲ್ಲಿ ಭಾನುವಾರ ಬೆಳಿಗ್ಗೆ ನಡೆಯಿತು.

45 ನಿಮಿಷ ನಡೆದ ಯೋಗಥಾನ್‌ನಲ್ಲಿ ವಿವಿಧ ಶಿಕ್ಷಣ ಸಂಸ್ಥೆಗಳು, ಆಳ್ವಾಸ್ ಶಿಕ್ಷಣ ಸಂಸ್ಥೆಯ 27,632 ವಿದ್ಯಾರ್ಥಿಗಳು ಪಾಲ್ಗೊಂಡರು. ಯೋಗಾಸಕ್ತರನ್ನು ಕೋಡ್ ಸ್ಕ್ಯಾನ್ ಮಾಡಿ ವೇದಿಕೆಗೆ ಬಿಡಲಾಯಿತು.



'ಯೂತ್ ಫಾರ್ ಯೋಗ' ಮೂಡುಬಿದಿರೆಯ ಆಳ್ವಾಸ್ ಶಿಕ್ಷಣ ಸಂಸ್ಥೆ ಆವರಣದ ಪುತ್ತಿಗೆಯ ವನಜಾಕ್ಷಿ ಶ್ರೀಪತಿ ಭಟ್ ವೇದಿಕೆಯಲ್ಲಿ ಭಾನುವಾರ ಬೆಳಿಗ್ಗೆ ನಡೆದ ಯೋಗಥಾನ್‌ನಲ್ಲಿ 27,632 ವಿದ್ಯಾರ್ಥಿಗಳು ಪಾಲ್ಗೊಂಡರು. ಗಿನ್ನಿಸ್ ದಾಖಲೆಯ ಪ್ರಯತ್ನವಾಗಿ 'ಯೂತ್ ಫಾರ್ ಯೋಗ' ಎಂಬ ಪರಿಕಲ್ಪನೆಯೊಂದಿಗೆ ಕಾರ್ಯಕ್ರಮ ನಡೆಯಿತು.

ಸುದ್ದಿ 2 ನಿಮಿಷ

'ಎತ್ತಿನಹೊಳೆ: ಪರಿಸರಕ್ಕೆ ಹಾನಿ ಇಲ್ಲ'

ನವದೆಹಲಿ (ಪಿಟಿಐ): ಎತ್ತಿನಹೊಳೆ ಏತ ನೀರಾವರಿ ಯೋಜನೆ ಅನುಷ್ಠಾನದಿಂದ ಪರಿಸರಕ್ಕೆ ಯಾವುದೇ ಹಾನಿಯಾಗುವುದಿಲ್ಲ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಹಾಸನ ಜಿಲ್ಲೆಯ ಸಕಲೇಶಪುರ ಬಳಿ ಕೈಗೊಳ್ಳಲಾಗುತ್ತಿರುವ ಈ ಯೋಜನೆಗೆ 13.93 ಹೆಕ್ಟೇರ್‌ನಷ್ಟು ಅರಣ್ಯ ಪ್ರದೇಶವನ್ನು ಮಾತ್ರ ಬಳಸಿಕೊಳ್ಳಲಾಗುತ್ತಿದ್ದು, ಇದರಿಂದ ಪರಿಸರದ ಮೇಲೆ ಯಾವುದೇ ಪರಿಣಾಮ ಉಂಟಾಗದು ಎಂದು ಹೇಳಿದೆ.



'ಇದು ಕುಡಿಯುವ ನೀರು ಪೂರೈಕೆಗೆ ಸಂಬಂಧಿಸಿದ ಯೋಜನೆಯಾಗಿದೆ. ಹೀಗಾಗಿ, ಯೋಜನೆ ಅನುಷ್ಠಾನಕ್ಕೆ 2006ರ ಪರಿಸರ ಪರಿಣಾಮ ಮೌಲ್ಯಮಾಪನ (ಇಐಎ) ಅಧಿಸೂಚನೆ ಹಾಗೂ 2009ರ ತಿದ್ದುಪಡಿ ಅನ್ವಯವಾಗುವುದಿಲ್ಲ. ಹೀಗಾಗಿ, ಈ ಯೋಜನೆಗೆ 'ಪರಿಸರ ಅನುಮತಿ'ಯಿಂದ ವಿನಾಯಿತಿ ನೀಡಲಾಗಿದೆ' ಎಂದು ಕೇಂದ್ರ ಜಲ ಶಕ್ತಿ ಖಾತೆ ರಾಜ್ಯ ಸಚಿವ ಪ್ರಹ್ಲಾದ ಸಿಂಗ್ ಪಟೇಲ್ ತಿಳಿಸಿದ್ದಾರೆ. ಈ ಯೋಜನೆ ಕುರಿತು ಜೆಡಿಯುನ ರಾಜ್ಯಸಭಾ ಸದಸ್ಯ ಅನಿಲ್ ಪ್ರಸಾದ್ ಹೆಗ್ಡೆ ಅವರ ಪ್ರಶ್ನೆಗೆ, ಸಚಿವ ಪಟೇಲ್ ಉತ್ತರಿಸಿದ್ದಾರೆ.

'ನಾ ನಾಯಕಿ' ಇಂದು: ಪ್ರಿಯಾಂಕಾ ಗಾಂಧಿ ವಾದ್ರಾ ಭಾಗಿ

ಬೆಂಗಳೂರು: ಕಾಂಗ್ರೆಸ್‌ನ ಮಹಿಳಾ ಕಾರ್ಯಕರ್ತರ 'ನಾ ನಾಯಕಿ' ಮಹಿಳಾ ಸಮಾವೇಶ ಅರಮನೆ ಮೈದಾನದಲ್ಲಿ ಸೋಮವಾರ (ಜ. 16) ನಡೆಯಲಿದ್ದು, ಕಾರ್ಯಕ್ರಮದಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಭಾಗವಹಿಸಲಿದ್ದಾರೆ. ವಿಧಾನಸಭಾ ಚುನಾವಣೆ ಗೆದ್ದು ಅಧಿಕಾರಕ್ಕೆ ಬಂದರೆ ಮಹಿಳೆಯರಿಗಾಗಿ ಪಕ್ಷ ಏನೇನು ಮಾಡಲಿದೆ ಎನ್ನುವುದನ್ನು ಪಕ್ಷದ ನಾಯಕರು ಈ ಸಮಾವೇಶದಲ್ಲಿ ಘೋಷಿಸುವ ಸಾಧ್ಯತೆಯಿದೆ.

'ಸಮಾವೇಶ ಮಹಿಳಾ ಕಾರ್ಯಕರ್ತರಿಗೆ ಸೀಮಿತವಾಗಿದ್ದು, ಪಕ್ಷದ ಪುರುಷ ಕಾರ್ಯಕರ್ತರು ಸಮಾವೇಶಕ್ಕೆ ಬಂದು ಸಮಯ ವ್ಯರ್ಥ ಮಾಡಬೇಡಿ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ.

'ನನ್ನನ್ನೂ ಸೇರಿದಂತೆ ಪುರುಷ ನಾಯಕರು ವೇದಿಕೆಯಲ್ಲಿ ಕುಳಿತುಕೊಳ್ಳದೆ, ಪೂರ್ಣ ಪ್ರಮಾಣದಲ್ಲಿ ಮಹಿಳೆಯರಿಗೆ ಮೀಸಲಿಡಲಾಗುವುದು. ನಾವೆಲ್ಲರೂ ವೇದಿಕೆಯ ಮುಂಭಾಗದಲ್ಲಿ ಕುಳಿತುಕೊಳ್ಳುತ್ತೇವೆ' ಎಂದಿದ್ದಾರೆ.

'ಮಧ್ಯಾಹ್ನ 12 ಗಂಟೆಗೆ ಅರಮನೆ ಮುಖ್ಯ ಮೈದಾನದಲ್ಲಿ (ಮೌಂಟ್ ಕಾರ್ಮೆಲ್ ಕಾಲೇಜು ದ್ವಾರ) ನಡೆಯಲಿರುವ ಸಮಾವೇಶದಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ ಸೇರಿದಂತೆ ಪಕ್ಷದ ಪ್ರಮುಖ ಎಲ್ಲ ನಾಯಕರು ಭಾಗವಹಿಸಲಿದ್ದಾರೆ' ಎಂದೂ ಹೇಳಿದ್ದಾರೆ.

ಬೆಂಗಳೂರಿನಲ್ಲಿ ಮೊದಲ ಬಾರಿ ಸೇನಾ ದಿನಾಚರಣೆ: ಹೊಸ ಸವಾಲು ಎದುರಿಸಲು ಸಜ್ಜು – ಭೂ ಸೇನಾ ಮುಖ್ಯಸ್ಥ

ಎಲ್‌ಎಸಿಯಲ್ಲಿ ಸೇನೆ ಸದಾ ಸನ್ನದ್ಧ: ಪಾಂಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಾಸ್ತವ ನಿಯಂತ್ರಣ ರೇಖೆಯುದ್ದಕ್ಕೂ (ಎಲ್‌ಎಸಿ) ಬಲಿಷ್ಠ ರಕ್ಷಣಾ ಸಾಮರ್ಥ್ಯವನ್ನು ಭಾರತೀಯ ಸೇನೆ ಹೊಂದಿದ್ದು, ಯಾವುದೇ ರೀತಿಯ ಪರಿಸ್ಥಿತಿಯನ್ನು ಎದುರಿಸಲು ಸನ್ನದ್ಧವಾಗಿದೆ' ಎಂದು ಸೇನಾ ಮುಖ್ಯಸ್ಥ ಜನರಲ್ ಮನೋಜ್ ಪಾಂಡೆ ಪ್ರತಿಪಾದಿಸಿದರು.

ಇದೇ ಪ್ರಥಮ ಬಾರಿ ರಾಷ್ಟ್ರ ರಾಜಧಾನಿ ನವದೆಹಲಿಯಿಂದ ಹೊರಗೆ ನಡೆದ ಸೇನಾ ದಿನಾಚರಣೆಯಲ್ಲಿ ಅವರು ಮಾತನಾಡಿದರು. ದೇಶದ ಎಲ್ಲ ಪ್ರಮುಖ ಸ್ಥಳಗಳಲ್ಲಿ ಮಹತ್ವದ ರಾಷ್ಟ್ರೀಯ ಕಾರ್ಯಕ್ರಮಗಳನ್ನು ಆಯೋಜಿಸಲು ಕೇಂದ್ರ ಸರ್ಕಾರ ಸೂಚಿಸಿದ್ದರಿಂದ ಈ ಕಾರ್ಯಕ್ರಮವನ್ನು ಬೆಂಗಳೂರಿನಲ್ಲಿ ಆಯೋಜಿಸಲಾಗಿತ್ತು.

ನಗರದ 'ಮದ್ರಾಸ್ ಎಂಜಿನಿಯರಿಂಗ್ ಗ್ರೂಪ್ ಆ್ಯಂಡ್ ಸೆಂಟರ್'ನಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಸೇನಾ ಮುಖ್ಯಸ್ಥರು, ಸೇನೆಯ ಯಶಸ್ವಿ ಕಾರ್ಯಾಚರಣೆಗಳು ಮತ್ತು ಭವಿಷ್ಯದಲ್ಲಿ ಎದುರಿಸಬೇಕಾದ ಸವಾಲುಗಳನ್ನು ಪಾಂಡೆ ವಿಶ್ಲೇಷಿಸಿದರು.

'ಉತ್ತರದ ಗಡಿ ಪ್ರದೇಶವು ಶಾಂತಿಯುತವಾಗಿದೆ. ಈಗಿರುವ ವ್ಯವಸ್ಥೆಗಳ ಮೂಲಕವೇ ಶಾಂತಿ ಕಾಪಾಡುವ ಪ್ರಕ್ರಿಯೆಗಳನ್ನು ಕೈಗೊಳ್ಳಲಾಗಿದೆ. ಗಡಿ ನಿಯಂತ್ರಣ ರೇಖೆಯಲ್ಲೂ ಯಾವುದೇ ರೀತಿಯ ಸವಾಲು ಮತ್ತು ಸಂದರ್ಭಗಳನ್ನು ಎದುರಿಸಲು ಸೇನೆ ಸನ್ನದ್ಧವಾಗಿದೆ. ಜಮ್ಮು ಮತ್ತು ಪಂಜಾಬ್ ಗಡಿಯಲ್ಲಿ ಡ್ರೋನ್‌ಗಳ ಮೂಲಕ ಶಸ್ತ್ರಾಸ್ತ್ರ ಮತ್ತು ಡ್ರಗ್ಸ್ ಸಾಗಿಸುವ ಪ್ರಯತ್ನಗಳನ್ನು ವಿಫಲಗೊಳಿಸಲು ಪ್ರತಿರೋಧಕ ಡ್ರೋನ್‌ಗಳನ್ನು ಬಳಸಲಾಗುತ್ತಿದೆ' ಎಂದರು.



ಬೆಂಗಳೂರಿನಲ್ಲಿ ಭಾನುವಾರ ನಡೆದ 'ಸೇನಾ ದಿನ' ಪರೇಡ್‌ನಲ್ಲಿ ಪ್ಯಾರಾಚೂಟ್ ರೆಜಿಮೆಂಟ್ ಯೋಧರ ಪಥಸಂಚಲನ ಗಮನಸೆಳೆಯಿತು

– ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

ಪಶ್ಚಿಮ ಗಡಿಯಲ್ಲಿನ ಪರಿಸ್ಥಿತಿ ಬಗ್ಗೆ ವಿವರಿಸಿದ ಅವರು, 'ಗಡಿಯ ಇನ್ನೊಂದು ಬದಿಯಲ್ಲಿ ಭಯೋತ್ಪಾದಕರಿಗೆ ಮೂಲಸೌಕರ್ಯಗಳನ್ನು ಕಲ್ಪಿಸಲಾಗಿದೆ. ಆದರೆ, ಪಾಕಿಸ್ತಾನದಿಂದ ನಡೆಯುವ ಒಳನುಸುಳುವಿಕೆಯ ಪ್ರಯತ್ನಗಳನ್ನು ನಮ್ಮ ಯೋಧರು ಯಶಸ್ವಿಯಾಗಿ ವಿಫಲಗೊಳಿಸುತ್ತಿದ್ದಾರೆ' ಎಂದು ವಿವರಿಸಿದರು.

'ದುರ್ಗಮ ಸ್ಥಳಗಳು ಮತ್ತು ಕಠಿಣ ಹವಾಮಾನ ಪರಿಸ್ಥಿತಿಯಲ್ಲೂ ನಮ್ಮ ಯೋಧರು ಗಡಿ ಪ್ರದೇಶದಲ್ಲಿ ಸನ್ನದ್ಧ ಸ್ಥಿತಿಯಲ್ಲಿದ್ದಾರೆ. ಈ ಯೋಧರಿಗೆ ಎಲ್ಲ ರೀತಿಯ ಅತ್ಯಾಧುನಿಕ ಶಸ್ತ್ರಾಸ್ತ್ರಗಳು, ಉಪಕರಣಗಳು ಮತ್ತು ಸೌಲಭ್ಯಗಳನ್ನು ಕಲ್ಪಿಸಲಾಗಿದೆ. ಗಡಿ ಪ್ರದೇಶಗಳಲ್ಲಿ, ಸ್ಥಳೀಯ ಆಡಳಿತಗಳ ಸಹಯೋಗದಲ್ಲಿ ಸೇನೆಯು ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸಿದೆ' ಎಂದು ತಿಳಿಸಿದರು.

'ಆತ್ಮನಿರ್ಭರದಿಂದ ಆಧುನಿಕತೆ ಎನ್ನುವುದು ನಮ್ಮ ಮೂಲ ಮಂತ್ರ. ಭವಿಷ್ಯದ ದೃಷ್ಟಿಯಿಂದ ಸೇನೆಯಲ್ಲಿ ಮಹತ್ವದ ಪರಿವರ್ತನೆ ಪ್ರಕ್ರಿಯೆಗಳನ್ನು ಕೈಗೊಳ್ಳಲಾಗಿದೆ. ಬದಲಾಗುತ್ತಿರುವ ಕಾಲಘಟ್ಟಕ್ಕೆ ತಕ್ಕಂತೆ ಯೋಧರನ್ನು ಸಜ್ಜುಗೊಳಿಸಲಾಗುತ್ತಿದೆ. ಕೆಲವು ಹಳೆಯ ಘಟಕಗಳಿಗೆ ಹೊಸ ಸ್ಪರ್ಶ ನೀಡಲಾಗುತ್ತಿದೆ. ಇದರಿಂದ, ಯಾವುದೇ ಸವಾಲುಗಳನ್ನು ಯೋಧರು ಎದುರಿಸಬೇಕು ಎನ್ನುವುದು ಈ ಪ್ರಕ್ರಿಯೆಯ ಉದ್ದೇಶ' ಎಂದರು.

'ಅಗ್ನಿಪಥ ಯೋಜನೆಯು ಐತಿಹಾಸಿಕ ಮತ್ತು ಪ್ರಗತಿಶೀಲ ಹೆಜ್ಜೆಯಾಗಿದೆ. ಈ ನೇಮಕಾತಿಗೆ ಯುವಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಪುರುಷ ಅಗ್ನಿವೀರರ ಮೊದಲ ತಂಡದ ತರಬೇತಿ ಈಗಾಗಲೇ ಆರಂಭವಾಗಿದೆ. ಈ ಯೋಧರಿಗೆ ಸಿಮ್ಯುಲೇಟರ್ ಸೇರಿದಂತೆ ಆಧುನಿಕ ಉಪಕರಣಗಳ ಬಗ್ಗೆ ಹೆಚ್ಚು ತರಬೇತಿ ನೀಡಲಾಗುತ್ತಿದೆ. ಮಹಿಳಾ ಅಗ್ನಿವೀರರಿಗೆ ಮಾರ್ಚ್‌ನಲ್ಲಿ ತರಬೇತಿ ಆರಂಭವಾಗಲಿದೆ. ಸೇನೆಗೆ ನಾರಿಶಕ್ತಿಯಿಂದ ಮತ್ತಷ್ಟು ಬಲ ದೊರೆತಿದೆ. ಮಹಿಳಾ ಅಧಿಕಾರಿಗಳು ಮತ್ತು ಯೋಧರು ಸಿಯಾಚಿನ್ ಸೇರಿದಂತೆ ಎಲ್ಲ ರೀತಿಯ ಕಾರ್ಯಾಚರಣೆಗಳಲ್ಲಿ ಪಾಲ್ಗೊಳ್ಳುತ್ತಿರುವುದು ಹೆಮ್ಮೆಯ ವಿಷಯವಾಗಿದೆ' ಎಂದರು.

'ಅಂತರರಾಷ್ಟ್ರೀಯ ರಕ್ಷಣಾ ಸಹಕಾರ ಕ್ಷೇತ್ರದಲ್ಲಿ ಭಾರತೀಯ ಸೇನೆಯ ಯೋಧರು ಮಹತ್ವದ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದಾರೆ. ಎಂಟು ಕಾರ್ಯಾಚರಣೆಗಳಲ್ಲಿ 5,800 ಕ್ಕೂ ಹೆಚ್ಚು ಯೋಧರು ವಿಶ್ವ ಶಾಂತಿಪಾಲನಾ ಪಡೆಯಲ್ಲಿ ಪಾಲ್ಗೊಂಡಿದ್ದಾರೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಆಕರ್ಷಕ ಪಥಸಂಚಲನ: ಸೇನಾ ದಿನದ ಅಂಗವಾಗಿ ವಿವಿಧ ರೆಜಿಮೆಂಟ್‌ಗಳ ಯೋಧರಿಂದ ಆಕರ್ಷಕ ಪಥಸಂಚಲನ ಮತ್ತು ವಿವಿಧ ಸಾಹಸ ಪ್ರದರ್ಶನಗಳು ಪ್ರೇಕ್ಷಕರ ಗಮನಸೆಳೆದವು.

'ತಂತ್ರಜ್ಞಾನ ಆಧಾರಿತ ಸೇನೆ'



ಮನೋಜ್ ಪಾಂಡೆ

'ಇಂದಿನ ಮಾಹಿತಿ ತಂತ್ರಜ್ಞಾನ ಯುಗದಲ್ಲಿ ಯುದ್ಧ ಕ್ಷೇತ್ರವು ಜಟಿಲವಾಗುತ್ತಿದ್ದು, ಸೈಬರ್ ಯುದ್ಧದಂತಹ ಅಪಾಯ ಮತ್ತು ಸವಾಲುಗಳನ್ನು ಎದುರಿಸಲು ತಂತ್ರಜ್ಞಾನ ಆಧಾರಿತವಾಗಿ ಸೇನೆ ಪರಿವರ್ತನೆಗೊಳ್ಳಬೇಕಾಗಿದೆ' ಎಂದು ಸೇನಾ ಮುಖ್ಯಸ್ಥ ಜನರಲ್ ಮನೋಜ್ ಪಾಂಡೆ ಪ್ರತಿಪಾದಿಸಿದರು.

'ಮಾಹಿತಿ ಕದನವು ಭವಿಷ್ಯದಲ್ಲಿ ಎದುರಾಗುವ ಮಹತ್ವದ ಸವಾಲು. ಹೀಗಾಗಿ, ಕೃತಕ ಬುದ್ಧಿಮತ್ತೆ, ಬ್ಲಾಕ್ ಚೈನ್, ಮಾನವರಹಿತ ವ್ಯವಸ್ಥೆಯಂತಹ ಅತ್ಯಾಧುನಿಕ ತಂತ್ರಜ್ಞಾನಗಳನ್ನು ಸಹ ದೇಶಿಯವಾಗಿ ಅಭಿವೃದ್ಧಿಪಡಿಸಲಾಗುತ್ತಿದೆ. ಭಾರತೀಯ ಸೇನೆಯು ಭವಿಷ್ಯದ ಯುದ್ಧಗಳನ್ನು ಎದುರಿಸಿ ವಿಜಯಿಯಾಗುತ್ತದೆ ಎನ್ನುವ ಅಚಲ ವಿಶ್ವಾಸ ನಮ್ಮದಾಗಿದೆ' ಎಂದು ಭರವಸೆ ನೀಡಿದರು.

ನರಸಿಂಹಗೆ 'ಬೇಂದ್ರೆ ಸಾಹಿತ್ಯ ಸೇವಾ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ.ರಾ. ಬೇಂದ್ರೆ ಕಾವ್ಯ ಕೂಟ ನೀಡುವ 'ದ.ರಾ. ಬೇಂದ್ರೆ ಸಾಹಿತ್ಯ ಸೇವಾ ಪ್ರಶಸ್ತಿ'ಗೆ ಉದಯಭಾನು ಕಲಾಸಂಘದ ಕಾರ್ಯದರ್ಶಿ ಎಂ. ನರಸಿಂಹ ಆಯ್ಕೆಯಾಗಿದ್ದಾರೆ.

ಕೂಟವು ಇದೇ ಮೊದಲ ಬಾರಿ ಪ್ರಶಸ್ತಿ ನೀಡುತ್ತಿದೆ. ಪ್ರಶಸ್ತಿಯು ₹ 10 ಸಾವಿರ ನಗದು ಒಳಗೊಂಡಿದೆ. ಇದೇ 31ರಂದು ಕನ್ನಡ ಭವನದ ನಯನ ಸಭಾಂಗಣದಲ್ಲಿ ನಡೆಯುವ ಬೇಂದ್ರೆ ಅವರ 127ನೇ ಜನ್ಮದಿನ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಕೂಟದ ಅಧ್ಯಕ್ಷ ಜಿ. ಕೃಷ್ಣಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಎಂ. ನರಸಿಂಹ

ಭಾಗವತ್‌ಗೆ ಸುಧೀಂದ್ರ ಕುಲಕರ್ಣಿ ಸವಾಲು

'ಗಾಂಧಿ ಕುರಿತು ಅಂಬೇಡ್ಕರ್ ವಾದಿಗಳೂ ಅಪಪ್ರಚಾರ ನಡೆಸುತ್ತಿದ್ದಾರೆ. ಕರಿಯರ ವಿರೋಧಿಯಾಗಿದ್ದರು ಎಂದು ದಕ್ಷಿಣ ಆಫ್ರಿಕಾದಲ್ಲೇ ಅಪಪ್ರಚಾರ ನಡೆಯುತ್ತಿದೆ'

'ಗಾಂಧಿ ದ್ವೇಷ ನಿಲ್ಲಿಸುವಂತೆ ಸ್ವಯಂಸೇವಕರಿಗೆ ಹೇಳಿ'

ಮಂಗಳೂರು: 'ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಸರಸಂಘಚಾಲಕ ಮೋಹನ್ ಭಾಗವತ್ ಆರ್ಗನೈಸರ್ ಮತ್ತು ಪಾಂಚಜನ್ಯ ಪತ್ರಿಕೆಗಳಿಗೆ ನೀಡಿದ ಸಂದರ್ಶನದಲ್ಲಿ ಮಹಾತ್ಮ ಗಾಂಧಿ ಅವರನ್ನು ಹೊಗಳಿದ್ದಾರೆ. ಈ ಬಗ್ಗೆ ಅವರು ಪ್ರಾಮಾಣಿಕರಾಗಿದ್ದ ಗಾಂಧೀಜಿ ಕುರಿತ ಅಪಪ್ರಚಾರ ನಿಲ್ಲಿಸಲು ಸ್ವಯಂಸೇವಕರಿಗೆ ಹೇಳಲಿ' ಎಂದು ಚಿಂತಕ ಸುಧೀಂದ್ರ ಕುಲಕರ್ಣಿ ಸವಾಲು ಹಾಕಿದರು.

ಗಾಂಧೀಜಿಯವರ ಅಪಪ್ರಚಾರಕ್ಕೆ ಉತ್ತರ ರೂಪದಲ್ಲಿ ಲೇಖಕ ಎಂ.ಜಿ. ಹೆಗಡೆ ರಚಿಸಿರುವ 'ಮಿನುಗು ನೋಟ' ಕೃತಿಯನ್ನು ಗಾಂಧಿ ವಿಚಾರ ವೇದಿಕೆ ಆಶ್ರಯದಲ್ಲಿ ಇಲ್ಲಿ ಭಾನುವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಬಿಡುಗಡೆ ಮಾಡಿ ಅವರು ಮಾತನಾಡಿದರು.

'ನಿಮ್ಮ ಸರಸಂಘ ಚಾಲಕರು ಗಾಂಧೀಜಿಯನ್ನು ಹೊಗಳುತ್ತಾರೆ. ನೀವು ನೋಡಿದರೆ, ಗಾಂಧೀಜಿ ಕುರಿತು ಅಪಪ್ರಚಾರ ನಡೆಸುತ್ತಿದ್ದೀರಿ. ನಿಮ್ಮ ನಿಲುವು ಏನು. ಪ್ರಾಮಾಣಿಕ ನಂಬಿಕೆ ಏನು ಎಂದು ಆರ್‌ಎಸ್‌ಎಸ್‌ನವರನ್ನು ಗಾಂಧಿ ವಿಚಾರವಾದಿಗಳು ಪ್ರಶ್ನೆ ಮಾಡಬೇಕು' ಎಂದರು.

ಹಿಂದೂ ವಿರೋಧಿಯಲ್ಲದ ಜಾತ್ಯತೀತತೆ ಮತ್ತು ಮುಸ್ಲಿಂ ವಿರೋಧಿ ಅಲ್ಲದ ಹಿಂದುತ್ವದ ಅಗತ್ಯವಿದೆ. ಕೇವಲ ಹಿಂದೂ ಧರ್ಮದ ಧರ್ಮಾಂಧತೆ ಬಗ್ಗೆ ಮಾತನಾಡಿ, ಮುಸ್ಲಿಂ ಧರ್ಮದ ಧರ್ಮಾಂಧತೆ ಕುರಿತ ಮೌನ ಸರಿಯಲ್ಲ. ಮುಸ್ಲಿಮರೂ ತಮ್ಮ ಧರ್ಮದ ಅಸಹಿಷ್ಣುತೆ, ಉಗ್ರವಾದದ ಬಗ್ಗೆ ಹೋರಾಡಬೇಕು' ಎಂದರು.

'ಗಾಂಧೀಜಿ ವಿರುದ್ಧ ದುರುದ್ದೇಶಪೂರ್ವಕವಾಗಿ ವಿಷ ಕಾರುವುದಕ್ಕೆ ಉತ್ತರಿಸದಿದ್ದರೆ ಅವರ ವಿಚಾರದ ಕುರಿತ ನಮ್ಮ ಬದ್ಧತೆಯೇ ಪ್ರಶ್ನಾರ್ಹವಾಗುತ್ತದೆ' ಎಂದರು.

ಮೃಗಾಲಯಗಳಿಗೆ 9 ತಿಂಗಳಲ್ಲಿ ₹ 75.72 ಕೋಟಿ ಆದಾಯ

ಪ್ರಜಾವಾಣಿ ವಾರ್ತೆ

ಮೈಸೂರು: 'ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧೀನದಲ್ಲಿ ಬರುವ ಮೃಗಾಲಯಗಳಿಗೆ 2022ರ ಏ.1ರಿಂದ ಡಿ.31ರವರೆಗೆ (9 ತಿಂಗಳಲ್ಲಿ) 52,77,013 ಸಂದರ್ಶಕರು ಭೇಟಿ ನೀಡಿದ್ದಾರೆ. ₹ 75.72 ಕೋಟಿ ಆದಾಯ ಸಂಗ್ರಹವಾಗಿದೆ' ಎಂದು ಪ್ರಾಧಿಕಾರದ ಅಧ್ಯಕ್ಷ ಎಂ.ಶಿವಕುಮಾರ್ ತಿಳಿಸಿದರು.

'ಕೋವಿಡ್ ನಂತರ ಮೃಗಾಲಯಗಳಿಗೆ ಜನರ ಭೇಟಿ ಜಾಸ್ತಿ ಆಗುತ್ತಿರುವುದರಿಂದ ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತಿದೆ' ಎಂದು ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

'ಮೈಸೂರಿನ ಮೃಗಾಲಯಕ್ಕೆ 25.05 ಲಕ್ಷ ಮಂದಿ ಭೇಟಿ ನೀಡಿದ್ದು, ₹24.76 ಕೋಟಿ ಆದಾಯ ಬಂದಿದೆ. ಬನ್ನೇರುಘಟ್ಟಕ್ಕೆ 16.12 ಲಕ್ಷ ಮಂದಿ ಸಂದರ್ಶಿಸಿದ್ದು, ₹ 42.68 ಕೋಟಿ ಆದಾಯ ಬಂದಿದೆ. ಮೈಸೂರು ಝೂಗೆ ಡಿಸೆಂಬರ್‌ನಲ್ಲೇ 5.24 ಲಕ್ಷ ಬಂದಿದ್ದರು. ಇದು ಇತ್ತೀಚಿನ ವರ್ಷಗಳಲ್ಲಿ ದಾಖಲೆಯಾಗಿದೆ' ಎಂದರು.

ಮೃಗಾಲಯಗಳ ವರಮಾನ ವಿವರ

ಹೆಸರು	ಸಂದರ್ಶಕರ ಸಂಖ್ಯೆ	ವರಮಾನ (₹ಗಳಲ್ಲಿ)
ಮೈಸೂರು	25,05,514	24,76,91,745
ಕಾರಂಜಿಕೆರೆ	2,57,218	1,45,68,300
ಬನ್ನೇರುಘಟ್ಟ	16,12,721	42,68,86,415
ಹಂಪಿ	1,24,100	1,70,75,220
ಚಿತ್ರದುರ್ಗ	1,17,761	34,17,370
ಗದಗ	1,24,696	67,62,532
ಕಲಬುರಗಿ	74,473	13,11,250
ಬೆಳಗಾವಿ	1,82,718	66,20,415
ದಾವಣಗೆರೆ	35,877	7,37,890
ಶಿವಮೊಗ್ಗ	2,41,935	3,22,54,445
ಒಟ್ಟು	52,77,013	75,72,85,582

(2022ರ ಏ.1ರಿಂದ ಡಿ.31ರವರೆಗೆ)

ಆದಿಯೋಗಿ ಮೂರ್ತಿ ಅನಾವರಣ

ರಾಜ್ಯಕ್ಕೆ ಭವ್ಯ ಭವಿಷ್ಯದ ಉದ್ಘಾಟನೆ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ತಾಲ್ಲೂಕಿನ ಆವಲಗುರ್ಕಿ ಸಮೀಪದ ಜಾಲಾರಿ ನರಸಿಂಹಸ್ವಾಮಿ ಬೆಟ್ಟದ ಬಳಿ ಈಶಾ ಯೋಗ ಕೇಂದ್ರ ನಿರ್ಮಿಸಿರುವ 112 ಅಡಿ ಎತ್ತರದ ಆದಿಯೋಗಿ ಮೂರ್ತಿಯನ್ನು ಭಾನುವಾರ ರಾತ್ರಿ ಅನಾವರಣಗೊಳಿಸಲಾಯಿತು.

ವರ್ಣರಂಜಿತ ಕಾರ್ಯಕ್ರಮದಲ್ಲಿ ನಾನಾ ಗೀತೆಗಳ ಮೂಲಕ ಶಿವನನ್ನು ಸ್ತುತಿಸಲಾಯಿತು. ಜಗ್ಗಿ ವಾಸುದೇವ್ ಅವರ ಪುತ್ರಿ ರಾಧೆ ಜಗ್ಗಿ ಸೇರಿದಂತೆ ಹಲವರು ಕಲಾಪ್ರದರ್ಶನ ನೀಡಿದರು. ಸಾವಿರಾರು ಜನರು ಕಾರ್ಯಕ್ರಮಕ್ಕೆ ಸಾಕ್ಷಿಯಾದರು.

ಮೂರ್ತಿ ಅನಾವರಣಗೊಳಿಸಿ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, '10 ರಿಂದ 15 ನಿಮಿಷ ಆದಿಯೋಗಿಯನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡಿದರೆ ಜ್ಞಾನೋದಯ, ದರ್ಶನ, ಅನುಭಾವ ಆಗುತ್ತದೆ. ಇದು ನೋಡುವುದಲ್ಲ ಅನುಭವಿಸುವುದು' ಎಂದರು.

ಸಂಕ್ರಾಂತಿ ಶುಭ ಸಂದರ್ಭದಲ್ಲಿ ಆದಿಯೋಗಿಯ ಪ್ರತ್ಯಕ್ಷ ದರ್ಶನವನ್ನು ಸದ್ಗುರು ಮಾಡಿಸಿದ್ದಾರೆ. ಶಿವ ವಿಸ್ಮಯ ಮೂರ್ತಿ. ಶಿವನನ್ನು ಯಾರು ಅರ್ಥ ಮಾಡಿಕೊಳ್ಳುತ್ತಾರೊ ಅವರು ಸೃಷ್ಟಿಯನ್ನು ಅರ್ಥ ಮಾಡಿಕೊಂಡಂತೆ.



ಚಿಕ್ಕಬಳ್ಳಾಪುರ ತಾಲ್ಲೂಕಿನ ಆವಲಗುರ್ಕಿ ಸಮೀಪದ ಜಾಲಾರಿ ನರಸಿಂಹಸ್ವಾಮಿ ಬೆಟ್ಟದ ಬಳಿ ಈಶಾ ಯೋಗ ಕೇಂದ್ರ ನಿರ್ಮಿಸಿರುವ 112 ಅಡಿ ಎತ್ತರದ ಆದಿಯೋಗಿಯ ಮೂರ್ತಿಯನ್ನು ಭಾನುವಾರ ಅನಾವರಣಗೊಳಿಸಲಾಯಿತು

ಆದಿಯೋಗಿ ಸ್ಥಾಪನೆಯ ಮೂಲಕ ಕರ್ನಾಟಕಕ್ಕೆ ಭವ್ಯ ಭವಿಷ್ಯದ ಉದ್ಘಾಟನೆ ಆಗಿದೆ ಎಂದರು.

'ಈ ಭಾಗದ ಜನರು ಸದ್ಗುರು ಜತೆ ಇದ್ದೇವೆ. ಯಾರು ಈ ಭಾಗಕ್ಕೆ ನೀರು ತರಲು ಅಡಚಣೆ ಮಾಡಿದ್ದರೊ ಅದೇ ಜನರು ಇಂತಹ ಪುಣ್ಯದ ಕೆಲಸಕ್ಕೆ ತೊಡಕು ಮಾಡುವ ಕೆಲಸ ಮಾಡುವ ಪ್ರಯತ್ನಿಸಿದರು. ಆದರೆ ಆದಿಯೋಗಿ ಇಲ್ಲಿ ನೆಲೆಸುತ್ತೇನೆ ಎಂದು ತೀರ್ಮಾನಿಸಿರುವುದರಿಂದ ಎಲ್ಲ ಅಡಚಣೆ ನಿವಾರಣೆಯಾಗಿ ಮೂರ್ತಿ ಅನಾವರಣ ಆಗಿದೆ' ಎಂದು ಸಚಿವ ಡಾ.ಕೆ.ಸುಧಾಕರ್ ಅವರು ಹೇಳಿದರು.

ಸದ್ಗುರು ಅವರು ಲೋಕಕಲ್ಯಾಣಕ್ಕಾಗಿ ತಮ್ಮನ್ನು ಅರ್ಪಿಸಿಕೊಂಡಿದ್ದಾರೆ. ಅವರಿಗೆ ಸರ್ಕಾರ ಸಹಕಾರ ಕೊಡಲಿದೆ ಎಂದರು. ಜಗ್ಗಿ ವಾಸುದೇವ್ ಅವರು, 'ನನ್ನ ಅಜ್ಜನ ಮನೆಯಾದ ಚಿಕ್ಕಬಳ್ಳಾಪುರದಲ್ಲಿ ಕೆಲ ಕಾಲ ಬಾಲ್ಯ ಕಳೆದಿದ್ದೆ. ಇಲ್ಲಿನ ಬೆಟ್ಟವನ್ನು ಕವರಿ ಬೆಟ್ಟ ಎನ್ನುತ್ತಿದ್ದರು. ಈಗ ಕೌರವರ ಬೆಟ್ಟ ಎನ್ನುತ್ತಿದ್ದು ಇಲ್ಲಿ ಕೀಚಕ, ಶಕುನಿ ಎಲ್ಲರೂ ಇದ್ದಾರೆ. ಅವರನ್ನು ಪೂಜಿಸುವ ಜನರು ಇದ್ದಾರೆ. ಆದರೆ ಅವರು ನಮಗೆ ಬೇಡ' ಎಂದು ಮೂರ್ತಿ ಪ್ರತಿಷ್ಠಾಪನೆಯ ವಿಚಾರ ಹೈಕೋರ್ಟ್ ಮೆಟ್ಟಿಲೇರಿರುವುದಕ್ಕೆ ಪರೋಕ್ಷವಾಗಿ ಬೇಸರ ವ್ಯಕ್ತಪಡಿಸಿದರು.

'ಆದಿಯೋಗಿ ಯೋಗದ ಮೂಲ' ಪುಸ್ತಕವನ್ನು ಈ ವೇಳೆ ಬಿಡುಗಡೆಗೊಳಿಸಲಾಯಿತು.

ಮೀಸಲಾತಿ ಕುರಿತು ಚರ್ಚಿಸಲು ಬುಲಾವ್ – ಯತ್ನಾಳ

ಹೇಳಿಕೆ ನೀಡದಂತೆ ಸೂಚನೆ

ಪ್ರಜಾವಾಣಿ ವಾರ್ತೆ

ವಿಜಯಪುರ: 'ಯಾವುದೇ ವಿವಾದಾತ್ಮಕ ಹೇಳಿಕೆಗಳಿಗೆ ಪ್ರತಿಕ್ರಿಯೆ ನೀಡದಂತೆ ವರಿಷ್ಠರು ಭಾನುವಾರ ಬೆಳಿಗ್ಗೆ ಫೋನ್ ಮಾಡಿ ತಿಳಿಸಿದ್ದಾರೆ' ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ಭಾನುವಾರ ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, 'ಪಂಚಮಸಾಲಿ 2ಎ ಮೀಸಲಾತಿ ಹೋರಾಟ ವಿಷಯವಾಗಿ ಚರ್ಚಿಸುವ ಸಂಬಂಧ ದೆಹಲಿಗೆ ಬರುವಂತೆಯೂ ಪಕ್ಷದ ವರಿಷ್ಠರು ನನಗೆ ಆಹ್ವಾನಿಸಿದ್ದಾರೆ. ಮೀಸಲಾತಿ ಕುರಿತಂತೆ ಕೇಂದ್ರದಿಂದ ಸಿಹಿ ಸುದ್ದಿ ಸಿಗುವ ಆಶಾಭಾವ ಇದೆ' ಎಂದು ಹೇಳಿದರು.

'ಪಕ್ಷದಲ್ಲಿ ಇರಲು ಸಾಧ್ಯವಿಲ್ಲದಿದ್ದರೆ ರಾಜೀನಾಮೆ ಕೊಟ್ಟು ಹೊರಹೋಗಲಿ' ಎಂಬ ಸಚಿವ ಮುರುಗೇಶ ನಿರಾಣಿ ಹೇಳಿಕೆಗೆ ಪ್ರತಿಕ್ರಿಯಿಸಿದ ಯತ್ನಾಳ, 'ಯಾರಪ್ಪಂದ್ರೀ ಪಕ್ಷ..? ಎಂದು ಪ್ರಶ್ನಿಸಿದರು. ನನ್ನನ್ನು ಪಕ್ಷದಿಂದ ಹೊರ ಹಾಕುವ ತಾಕತ್ತು ಯಾರಿಗೂ ಇಲ್ಲ' ಎಂದು ಅವರು ಸವಾಲೆಸೆದರು.

ಸಿಬಿಐ ತನಿಖೆಗೆ ಒಪ್ಪಿಸಲಿ: 'ಕಾರು ಚಾಲಕನ ಸಾವಿನ ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕು' ಎಂದು ಆಗ್ರಹಿಸಿ ಮುಖ್ಯಮಂತ್ರಿ ಅವರಿಗೆ ಪತ್ರ ಬರೆದಿದ್ದೇನೆ' ಎಂದು ಅವರು ತಿಳಿಸಿದರು.

'ಮುರುಗೇಶ ನಿರಾಣಿ ಅವರು ಯಾವುದೋ ಚಾಲಕನ ಸಾವಿನ ಬಗ್ಗೆ ಸಂಶಯ ವ್ಯಕ್ತಪಡಿಸಿ, ಬೇಜವಾಬ್ದಾರಿ ಹೇಳಿಕೆ ನೀಡಿದ್ದಾರೆ. ಸತ್ಯಾಸತ್ಯತೆ ತಿಳಿಯಲು 24 ಗಂಟೆಗಳಲ್ಲಿ ಸಿಬಿಐ ತನಿಖೆಗೆ ಶಿಫಾರಸು ಮಾಡಿ. ಇಲ್ಲವೇ, ಸುಳ್ಳು ಆರೋಪ ಮಾಡಿದ ಸಚಿವರನ್ನು ಸಂಪುಟದಿಂದ ವಜಾಗೊಳಿಸಬೇಕು' ಎಂದು ಅವರು ಆಗ್ರಹಿಸಿದರು.

ಅಂತ್ಯಹಾಡುವ ಕಾಲ ಬಂದಿದೆ: ಸಚಿವ ನಿರಾಣಿ ಸಹೋದರ

ಬಾಗಲಕೋಟೆ: 'ನಡುಬೀದಿಯಲ್ಲಿ ಬೆತ್ತಲಾಗುವ ಕಾಲ ಬಂದಿದೆ' ಎಂದು ಸಚಿವ ಮುರುಗೇಶ ನಿರಾಣಿ ಸಹೋದರ ಸಂಗಮೇಶ ನಿರಾಣಿ, ಶಾಸಕ ಬಸನಗೌಡ ಪಾಟೀಲ ಯತ್ನಾಳ ವಿರುದ್ಧ ಟೀಕಿಸಿದ್ದಾರೆ.

ಅವಹೇಳನಕಾರಿಯಾಗಿ ಹೀಗಳೆಯುತ್ತ ಟ್ವೀಟ್ ಮಾಡಿರುವ ಅವರು, 'ನಿನ್ನ ಭಾಷೆಯಲ್ಲಿಯೇ ಉತ್ತರ ನೀಡುತ್ತೇನೆ. ನಿನಗೆ ಅಂತ್ಯ ಹಾಡುವ ಕಾಲ ಬಂದಿದೆ' ಎಂದೂ ಬರೆದಿದ್ದಾರೆ.

'ನೇರ ಕಾದಾಟದ ಕಣಕ್ಕೆ ಬಂದರೆ ತಾಕತ್ತು ತಿಳಿಯುತ್ತದೆ. ರಾಜಕೀಯ ಮರುಜನ್ಮ ಕೊಟ್ಟವರಿಗೆ ರಾಜಕೀಯ ಮರಣ ಶಾಸನ ಬರೆಯುವುದು ಗೊತ್ತಿದೆ' ಎಂದು ಟೀಕಿಸಿದ್ದಾರೆ.

ಹಣ ಪಡೆವ ಸಂದರ್ಭ ಬಂದರೆ ಆತ್ಮಹತ್ಯೆ: ಆರಗ

ಶಿವಮೊಗ್ಗ: 'ಕೆ.ಎಸ್. ಮಂಜುನಾಥ್ ಅಲಿಯಾಸ್ ಸ್ಯಾಂಟ್ರೊ ರವಿ ಅಂಥವನಿಂದ ಹಣ ತೆಗೆದುಕೊಳ್ಳುವ ಸಂದರ್ಭ ಬಂದರೆ ಆತ್ಮಹತ್ಯೆ ಮಾಡಿಕೊಳ್ಳುವೆ' ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಭಾನುವಾರ ಹೇಳಿದರು.

ತೀರ್ಥಹಳ್ಳಿಯಲ್ಲಿ ಕಾಂಗ್ರೆಸ್ ಮುಖಂಡರ ಬಿಜೆಪಿ ಸೇರ್ಪಡೆ ಕಾರ್ಯಕ್ರಮದಲ್ಲಿ ಮಾತನಾಡಿ, 'ಆತ ಯಾರೆಂದು ನನಗೆ ಗೊತ್ತಿಲ್ಲ. ಆತನ ಜತೆಗೆ ನನಗೆ ಸಂಪರ್ಕ ಇದ್ದರೆ ಬಂಧಿಸದಂತೆ ತಡೆಯುವುದು ನನಗೆ ದೊಡ್ಡ ವಿಚಾರವಾಗಿರಲಿಲ್ಲ' ಎಂದು ಹೇಳಿದರು.

'ನನ್ನ ಗುಜರಾತ್ ಭೇಟಿ ಕಾರ್ಯಕ್ರಮ 6 ತಿಂಗಳು ಮೊದಲೇ ನಿಗದಿಯಾಗಿತ್ತು. ಅಪರಾಧ ವಿಧಿವಿಜ್ಞಾನ ವಿಶ್ವವಿದ್ಯಾಲಯದ ಶಂಕುಸ್ಥಾಪನೆ ಕಾರ್ಯಕ್ರಮಕ್ಕೆ ಸರ್ಕಾರದ ಪ್ರತಿನಿಧಿಯಾಗಿ ಹೋಗಿದ್ದೆ. ನಾನು ಎಲ್ಲಿಗೆ ಹೋಗಿದ್ದೆ ಎಂಬ ಮಾಹಿತಿ ಸರ್ಕಾರದ ಬಳಿ ಇರುತ್ತದೆ. ಈ ಬಗ್ಗೆ ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ನನ್ನ ಹೆಸರು ಹೇಳಿ ಗೊಂದಲ ಹುಟ್ಟಿಸುತ್ತಿರುವುದು ಅವರ ಘನತೆಗೆ ತಕ್ಕುದಲ್ಲ' ಎಂದರು.



ಶಿರಸಿಯಲ್ಲಿ ವಿಶ್ವೇಶ್ವರ ಹೆಗಡೆ ಕಾಗೇರಿ ಅಭಿನಂದನಾ ಸಮಿತಿ ವತಿಯಿಂದ ಏರ್ಪಡಿಸಲಾಗಿದ್ದ ಸಮಾರಂಭದಲ್ಲಿ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರನ್ನು ಸನ್ಮಾನಿಸಲಾಯಿತು. ಪತ್ನಿ ಭಾರತಿ ಹೆಗಡೆ, ತಾಯಿ ಸರ್ವೇಶ್ವರಿ ಹೆಗಡೆ, (ನಿಂತಿರುವವರು–ಎಡದಿಂದ) ಶಾಸಕಿ ರೂಪಾಲಿ ನಾಯಕ್, ಇಂಧನ ಸಚಿವ ವಿ.ಸುನೀಲಕುಮಾರ, ಕೇಂದ್ರ ಸಚಿವ ಪ್ರಹ್ಲಾದ ಜೋಶಿ, ಶಾಸಕ ಹಾಲಪ್ಪ ಇದ್ದಾರೆ

ಖಾಸಗಿಯಾಗಿ ಮಾತನಾಡಿದ್ದೆ: ಯೋಗೇಶ್ವರ್

ರಾಮನಗರ: 'ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ಆಡಿಯೊದಲ್ಲಿರುವುದು ಖಾಸಗಿಯಾಗಿ ಮಾತನಾಡಿರುವ ವಿಚಾರ ಇರಬಹುದು. ವೈಯಕ್ತಿಕವಾಗಿ, ಸ್ವಾಭಾವಿಕವಾಗಿ ಮಾತನಾಡಿರೋದನ್ನು ಮಾಧ್ಯಮಗಳು ಬಿತ್ತರಿಸಿವೆ' ಎಂದು ವಿಧಾನ ಪರಿಷತ್ ಸದಸ್ಯ ಸಿ.ಪಿ. ಯೋಗೇಶ್ವರ್ ಸ್ಪಷ್ಟಪಡಿಸಿದ್ದಾರೆ.

ತಮ್ಮ ಆಡಿಯೊ ಬಹಿರಂಗ ವಿಚಾರವಾಗಿ ಭಾನುವಾರ ನಗರದಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, 'ನಾನು ಅಧಿಕೃತವಾಗಿ ಎಲ್ಲೂ ಈ ವಿಷಯ ಮಾತನಾಡಿಲ್ಲ' ಎಂದರು.

ಇಂದಿನಿಂದ ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿ

ನವದೆಹಲಿ (ಪಿಟಿಐ): ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿಣಿ ಸಭೆ ಸೋಮವಾರ ಇಲ್ಲಿ ಆರಂಭವಾಗಲಿದೆ.

ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರ ಮೂರು ವರ್ಷಗಳ ಅಧಿಕಾರಾವಧಿ ಈ ತಿಂಗಳು ಅಂತ್ಯವಾಗಲಿದೆ. ಅವರನ್ನು 2024ರ ಲೋಕಸಭಾ ಚುನಾವಣೆಯವರೆಗೂ ಈ ಹುದ್ದೆಯಲ್ಲಿ ಮುಂದುವರಿಸುವ ಹಾಗೂ ಮುಂಬರುವ ಸಾರ್ವತ್ರಿಕ ಚುನಾವಣೆಗೆ ಕಾರ್ಯತಂತ್ರ ರೂಪಿಸುವ ಕುರಿತು 2 ದಿನಗಳ ಈ ಕಾರ್ಯಕಾರಿಣಿಯಲ್ಲಿ ಚರ್ಚೆ ನಡೆಸುವ ಸಾಧ್ಯತೆ ಇದೆ.

ಸಭೆಗೂ ಮುನ್ನ ರೋಡ್ ಷೋ ಆಯೋಜಿಸಲಾಗಿದ್ದು, ಇದರಲ್ಲಿ ಪ್ರಧಾನಿ ನರೇಂದ್ರ ಮೋದಿ ಪಾಲ್ಗೊಳ್ಳಲಿದ್ದಾರೆ.

ಸಂಚಾರ ನಿರ್ಬಂಧ : ರೋಡ್‌ಷೋಗಾಗಿ ದೆಹಲಿ ಪೊಲೀಸರು ಸಂಚಾರ ನಿರ್ಬಂಧ ಹೇರಿದ್ದಾರೆ. ಇದರಿಂದ ಹಲವು ಭಾಗಗಳಲ್ಲಿ ಸಂಚಾರ ವ್ಯತ್ಯಯವಾಗಲಿದೆ.

ಮಧ್ಯಾಹ್ನ 3 ಗಂಟೆಗೆ, ಪಟೇಲ್ ಚೌಕದಿಂದ ಆರಂಭವಾಗುವ ಷೋ, ಸಂಸತ್ ಮಾರ್ಗವಾಗಿ ಜೈ ಸಿಂಗ್ ರೋಡ್ ಜಂಕ್ಷನ್‌ಗೆ ಬರಲಿದೆ. ಈ ವೇಳೆ ಭಾರಿ ಸಂಖ್ಯೆಯ ಜನ ಸೇರುವ ನಿರೀಕ್ಷೆ ಇದ್ದು, ಸಂಚಾರವನ್ನು ಸುಗಮಗೊಳಿಸಲು ಕ್ರಮಗಳನ್ನು ಕೈಗೊಳ್ಳಲಾಗಿದೆ' ಎಂದು ಪೊಲೀಸರು ತಿಳಿಸಿದರು.

ಬೊಮ್ಮಾಯಿ ಇಂದು ದೆಹಲಿಗೆ

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬಿಜೆಪಿ ರಾಷ್ಟ್ರೀಯ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಭಾಗವಹಿಸಲು ಸೋಮವಾರ ದೆಹಲಿಗೆ ತೆರಳಲಿದ್ದಾರೆ.

ಸೋಮವಾರ ಸಂಜೆ 4 ಕ್ಕೆ ಮತ್ತು ಮಂಗಳವಾರ ಬೆಳಿಗ್ಗೆಯಿಂದ ಸಂಜೆಯವರೆಗೆ ನಡೆಯುವ ಸಮಿತಿ ಸಭೆಯಲ್ಲಿ ಅವರು ಭಾಗವಹಿಸಲಿದ್ದಾರೆ. ಕೇಂದ್ರ, ರಾಜ್ಯಗಳಲ್ಲಿ ಸಚಿವ ಸಂಪುಟ ವಿಸ್ತರಣೆ ಕುರಿತು ಮಾತುಕತೆ ನಡೆಯುವ ಸಾಧ್ಯತೆ ಇದೆ.

ಸೋಮವಾರ, ಜನವರಿ 16, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 16 | ಪುಟ 16

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ರನ್‌ವೇಯಿಂದ ಕೆಲವೇ ಮೀಟರ್ ದೂರದಲ್ಲಿ ನೆಲಕ್ಕಪ್ಪಳಿಸಿದ ಎಟಿಆರ್–72

ನೇಪಾಳ ವಿಮಾನ ಪತನ: 68 ಬಲಿ

ಕಠ್ಮಂಡು (ರಾಯಿಟರ್ಸ್/ಎಎಫ್‌ಪಿ/ಪಿಟಿಐ): ನೇಪಾಳದ ಪೊಖರಾದಲ್ಲಿ ಪ್ರಯಾಣಿಕ ವಿಮಾನವೊಂದು ಭಾನುವಾರ ಬೆಳಿಗ್ಗೆ ಪತನವಾಗಿದ್ದು, 68 ಜನರು ಮೃತಪಟ್ಟಿದ್ದಾರೆ. ಮೃತರಲ್ಲಿ ಐವರು ಭಾರತೀಯರೂ ಸೇರಿದ್ದಾರೆ. ದೇಶದಲ್ಲಿ 30 ವರ್ಷಗಳಲ್ಲಿ ನಡೆದ ಅತ್ಯಂತ ಭೀಕರ ವಿಮಾನ ಅಪಘಾತ ಇದಾಗಿದೆ. ಪತನದ ವೇಳೆ ವಿಮಾನದಲ್ಲಿ 68 ಪ್ರಯಾಣಿಕರು ಮತ್ತು ನಾಲ್ವರು ಸಿಬ್ಬಂದಿ ಇದ್ದರು.

ನಾಲ್ವರ ಬಗ್ಗೆ ಮಾಹಿತಿ ಲಭ್ಯವಾಗಿಲ್ಲ. ತಾಂತ್ರಿಕ ತೊಂದರೆಯಿಂದ ಅಥವಾ ಪೈಲಟ್ ಅಜಾಗರೂಕತೆಯಿಂದ ಈ ವಿಮಾನ ಪತನವಾಗಿರಬಹುದು ಎಂದು ಮೂಲಗಳು ಹೇಳಿವೆ. ಅವಘಡದ ಬೆನ್ನಲ್ಲೇ ದೇಶದಲ್ಲಿನ ಎಲ್ಲಾ ವಿಮಾನಗಳ ಸುರಕ್ಷತಾ ಪರಿಶೋಧನೆಗೆ ಸರ್ಕಾರವು ಆದೇಶಿಸಿದೆ.

'ಯೇತಿ ಏರ್‌ಲೈನ್ಸ್‌ಗೆ ಸೇರಿದ ಎಟಿಆರ್‌–72 ವಿಮಾನವು ನೇಪಾಳದ ರಾಜಧಾನಿ ಕಠ್ಮಂಡುವಿನಿಂದ ಭಾನುವಾರ ಬೆಳಿಗ್ಗೆ 10.25ಕ್ಕೆ ಹೊರಟಿತ್ತು. ಕಠ್ಮಂಡುವಿನಿಂದ 160 ಕಿ.ಮೀ. ದೂರದಲ್ಲಿರುವ ಪ್ರವಾಸಿ ನಗರ ಪೊಖರಾದಲ್ಲಿ ಬೆಳಿಗ್ಗೆ 10.40ರ ವೇಳೆಗೆ ಈ ವಿಮಾನ ಇಳಿಯಬೇಕಿತ್ತು. ಆದರೆ, ವಿಮಾನ ನಿಲ್ದಾಣದಿಂದ ಕೆಲವೇ ನೂರು ಮೀಟರ್ ದೂರದಲ್ಲಿದ್ದಾಗ ವಿಮಾನವು ನೆಲಕ್ಕೆ ಅಪ್ಪಳಿಸಿದೆ' ಎಂದು ನೇಪಾಳ ನಾಗರಿಕ ವಿಮಾನಯಾನ ಸಚಿವಾಲಯ ಮಾಹಿತಿ ನೀಡಿದೆ.



ಪೊಖರಾದಲ್ಲಿ ವಿಮಾನ ಪತನಗೊಂಡಿದ್ದ ಸ್ಥಳದಲ್ಲಿ ನಡೆದ ರಕ್ಷಣಾ ಕಾರ್ಯಾಚರಣೆ –ಎಪಿ/ಪಿಟಿಐ ಚಿತ್ರ

'ಪೊಖರಾದ ನೂತನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಎಟಿಆರ್‌–72 ವಿಮಾನ ಇಳಿಯಬೇಕಿತ್ತು. ರನ್‌ವೇ ತಲುಪಲು ಕೇವಲ 12ರಿಂದ 15 ಸೆಕೆಂಡ್‌ಗಳಿರುವಾಗ ವಿಮಾನ ಪತನವಾಗಿದೆ. ನೂತನ ವಿಮಾನ ನಿಲ್ದಾಣ ಮತ್ತು ಹಳೆಯ ವಿಮಾನ ನಿಲ್ದಾಣದ ಮಧ್ಯೆ ಹರಿಯುವ ಸೇಟಿ ನದಿಯ ದಂಡೆಗೆ ವಿಮಾನ ಅಪ್ಪಳಿಸಿದೆ' ಎಂದು ಸಚಿವಾಲಯವು ಹೇಳಿದೆ.

'ಪತನದ ನಂತರ ವಿಮಾನ ಎರಡು ತುಂಡಾಗಿದೆ. ಒಂದು ತುಂಡು ನದಿ ದಂಡೆಯಲ್ಲೇ ಇದೆ. ಅಲ್ಲಿಂದ 32 ಶವಗಳನ್ನು ಪತ್ತೆ ಮಾಡಲಾಗಿದೆ. ವಿಮಾನದ ಇನ್ನೊಂದು ತುಂಡು ನದಿಯ ಕಮರಿಗೆ ಬಿದ್ದಿದೆ. ಕಮರಿಯು 300 ಅಡಿಗಳಷ್ಟು ಆಳವಿದ್ದು ಕಡಿದಾದ ಮತ್ತು ಮೊನಚಾದ ಬಂಡೆಗಳಿಂದ ಕೂಡಿದೆ. ಹೀಗಾಗಿ ಕಮರಿಗೆ ಇಳಿದು ಶೋಧಕಾರ್ಯ ನಡೆಸಲು ಭಾನುವಾರ ಸಾಧ್ಯವಾಗಿಲ್ಲ. ಕತ್ತಲಾದ ಕಾರಣ ಭಾನುವಾರ ಸಂಜೆಯ ವೇಳೆಗೆ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಲಾಗಿದೆ. ಸೋಮವಾರ ಬೆಳಿಗ್ಗೆ ಕಾರ್ಯಾಚರಣೆ ಮತ್ತೆ ಆರಂಭಿಸಲಾಗುತ್ತದೆ' ಎಂದು ರಕ್ಷಣಾ ಪಡೆಯು ಮಾಹಿತಿ ನೀಡಿದೆ.

9ನೇ ಪುಟ ನೋಡಿ

ಐವರು ಭಾರತೀಯರ ಸಾವು

ಅವಘಡದಲ್ಲಿ ಮೃತಪಟ್ಟವರಲ್ಲಿ ಐವರು ಭಾರತೀಯರು ಇದ್ದು, ಅವರಲ್ಲಿ ನಾಲ್ವರು ಪ್ಯಾರಾಗ್ಲೈಡಿಂಗ್‌ಗೆ ಪೊಖರಾಗೆ ಹೊರಟಿದ್ದರು ಎಂದು ಯೇತಿ ಏರ್‌ಲೈನ್ಸ್‌ನ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಮೃತ ಭಾರತೀಯರನ್ನು ಅಭಿಷೇಕ್ ಕುಶ್ವಾಹಾ (25), ವಿಶಾಲ್ ಶರ್ಮಾ (22), ಅನಿಲ್ ಕುಮಾರ್ ರಾಜ್‌ಬರ್ (27), ಸೋನು ಜೈಸ್ವಾಲ್ (35) ಮತ್ತು ಸಂಜಯ್ ಜೈಸ್ವಾಲ್ ಎಂದು ಗುರುತಿಸಲಾಗಿದೆ. ಇವರಲ್ಲಿ ಮೊದಲ ನಾಲ್ವರು ಉತ್ತರ ಪ್ರದೇಶದ ಗಾಜಿಪುರದವರು. ಪತನದಲ್ಲಿ ಮೃತಪಟ್ಟ ಇತರರ ಗುರುತುಗಳು ಇನ್ನೂ ಪತ್ತೆಯಾಗಿಲ್ಲ. ಎಲ್ಲಾ ಮೃತದೇಹಗಳನ್ನು ಸಂಗ್ರಹಿಸಿದ ನಂತರ ಗುರುತು ಪತ್ತೆ ನಡೆಸಲಾಗುತ್ತದೆ ಎಂದು ನೇಪಾಳ ನಾಗರಿಕ ವಿಮಾನಯಾನ ಸಚಿವಾಲಯ ಮಾಹಿತಿ ನೀಡಿದೆ.

ಅಪಘಾತದಲ್ಲಿ ಮೃತಪಟ್ಟವರ ಕುಟುಂಬಗಳಿಗೆ ಪ್ರಧಾನಿ ನರೇಂದ್ರ ಮೋದಿ ಸಂತಾಪ ಸೂಚಿಸಿದ್ದಾರೆ.



ಕಿಚ್ಚು ಹಾಯ್ದ ರಾಸು ಮಕರ ಸಂಕ್ರಾಂತಿ ಹಬ್ಬದ ಪ್ರಯುಕ್ತ ಮೈಸೂರು ತಾಲ್ಲೂಕಿನ ಸಿದ್ದಲಿಂಗಪುರದಲ್ಲಿ ಭಾನುವಾರ ರಾಸುಗಳನ್ನು ಕಿಚ್ಚು ಹಾಯಿಸಲಾಯಿತು
ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

ಬೆಳಗಾವಿಗೆ ಮಹಾರಾಷ್ಟ್ರದ ಎಟಿಎಸ್ ತಂಡ

ಗಡ್ಕರಿಗೆ ಬೆದರಿಕೆ: ಕೈದಿ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಭೂಗತಪಾತಕಿ ದಾವೂದ್ ಇಬ್ರಾಹಿಂ ತಂಡದ ಸದಸ್ಯ ಎಂದು ಹೇಳಿಕೊಂಡು ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರ ಕಚೇರಿಗೆ ಬೆದರಿಕೆ ಕರೆ ಮಾಡಿದ್ದ ಕೈದಿಯನ್ನು, ಮಹಾರಾಷ್ಟ್ರದ ಪೊಲೀಸರು ಭಾನುವಾರ ಇಲ್ಲಿ ತೀವ್ರ ವಿಚಾರಣೆಗೆ ಒಳಪಡಿಸಿದರು.



ಜಯೇಶ್ ಪೂಜಾರಿ

ತನಿಖೆಗೆ ಮಹಾರಾಷ್ಟ್ರದ ಎಟಿಎಸ್ ಮತ್ತು ನಾಗ್ಪುರದ ಪೊಲೀಸರ ತಂಡ ಧಾವಿಸಿದ್ದು, ಕೈದಿಯಿಂದ ಮಾಹಿತಿ ಕಲೆ ಹಾಕಿತು. ಆತನಿಂದ ಡೈರಿ ಜಪ್ತಿ ಮಾಡಿದೆ. ಆದರೆ, ಕರೆ ಮಾಡಲು ಬಳಸಿದ್ದ ಮೊಬೈಲ್ ಸಿಕ್ಕಿಲ್ಲ.

ಕೊಲೆ ಸೇರಿ ಮೂರು ಪ್ರಕರಣಗಳಲ್ಲಿ ಶಿಕ್ಷೆಗೆ ಗುರಿಯಾಗಿ, ಸದ್ಯ ಇಲ್ಲಿನ ಹಿಂಡಲಗಾ ಜೈಲಿನಲ್ಲಿರುವ ಜಯೇಶ್ ಪೂಜಾರಿ ಶನಿವಾರ ಬೆದರಿಕೆ ಕರೆ ಮಾಡಿದ್ದರು.

'ನನಗೆ ₹100 ಕೋಟಿ ಕೊಡಿ. ಇಲ್ಲದಿದ್ದರೆ ಗಡ್ಕರಿ ಇದ್ದಾಗಲೇ ಬಾಂಬ್ ಸ್ಫೋಟಗೊಳಿಸಿ ಸಾಯಿಸುತ್ತೇನೆ. ಪೊಲೀಸರಿಗೆ ಮಾಹಿತಿ ನೀಡಿದರೆ ಕಚೇರಿಯನ್ನೇ ಸ್ಫೋಟಿಸುತ್ತೇನೆ' ಎಂದು ಪೂಜಾರಿ ಬೆದರಿಕೆ ಒಡ್ಡಿದ್ದ.

ಹಿಂಡಲಗಾ ಜೈಲಿನಿಂದಲೇ ಕರೆ ಬಂದಿದೆ ಎಂದು ಪತ್ತೆ ಮಾಡಿರುವ ನಾಗ್ಪುರದ ಪೊಲೀಸರ ತಂಡ, ಬೆಳಗಾವಿಗೆ ದೌಡಾಯಿಸಿದ್ದು, ಕೈದಿಯನ್ನು ವಿಚಾರಣೆಗೆ ಒಳಪಡಿಸಿದೆ.

'ಪೂಜಾರಿ ವಿರುದ್ಧ ಕೊಲೆ ಸೇರಿದಂತೆ ಮೂರು ಪ್ರಕರಣಗಳಿದ್ದು, ಶಿಕ್ಷೆಗೆ ಗುರಿಯಾಗಿದ್ದಾನೆ' ಎಂದು ಮೂಲಗಳು ಖಚಿತಪಡಿಸಿವೆ.

4ನೇ ಪುಟ ನೋಡಿ

'ಕಾರಾಗೃಹದಲ್ಲೇ ಮೊಬೈಲ್ ಬಳಕೆ'

ಹಿಂಡಲಗಾ ಕಾರಾಗೃಹದಲ್ಲಿ ಮೊಬೈಲ್ ಬಳಕೆಗೆ ಅವಕಾಶವಿಲ್ಲ, ನಿಷೇಧಿಸಲಾಗಿದೆ. ಹಲವರು ಅಕ್ರಮವಾಗಿ ಬಳಸುತ್ತಿದ್ದು, ಇದನ್ನು ಗಂಭೀರವಾಗಿ ಪರಿಗಣಿಸಲಾಗಿದೆ ಎಂದು ಹಿಂಡಲಗಾ ಕಾರಾಗೃಹದ ಮುಖ್ಯ ಅಧೀಕ್ಷಕ ಕೃಷ್ಣಕುಮಾರ್ ಹೇಳಿದರು.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಅವರು, 'ಕಾರಾಗೃಹದೊಳಗೆ 'ಮೊಬೈಲ್ ಕಾಲ್ ಬ್ಲಾಕ್ ಸಿಸ್ಟಮ್' ವ್ಯವಸ್ಥೆ ಅಳವಡಿಸಲು ಪ್ರಯತ್ನ ನಡೆಸಿದ್ದೇವೆ' ಎಂದು ತಿಳಿಸಿದರು.

> **'ತನಿಖೆಯು ಪ್ರಾಥಮಿಕ ಹಂತದಲ್ಲಿದೆ. ಕರೆ ಮಾಡಿದ್ದ ಜಯೇಶ್‌ನಿಂದ ಡೈರಿ ವಶಪಡಿಸಿಕೊಂಡಿದ್ದೇವೆ. ಸಂಪೂರ್ಣ ತನಿಖೆ ನಡೆದ ಬಳಿಕವೇ ವಿವರ ಲಭ್ಯ**
> **ಅಮಿತೇಶ್ ಕುಮಾರ್**
> ಪೊಲೀಸ್ ಆಯುಕ್ತ, ನಾಗ್ಪುರ

ಭಾರತಕ್ಕೆ 317 ರನ್ ದಾಖಲೆ ಅಂತರದ ಗೆಲುವು

ತಿರುವನಂತಪುರ (ಪಿಟಿಐ): ಭಾರತ ತಂಡ ಏಕದಿನ ಕ್ರಿಕೆಟ್ ಇತಿಹಾಸದಲ್ಲಿ ಅತಿದೊಡ್ಡ ಗೆಲುವು ಪಡೆದು ದಾಖಲೆ ಬರೆಯಿತು. ಭಾನುವಾರ ಇಲ್ಲಿ ನಡೆದ ಕೊನೆಯ ಪಂದ್ಯದಲ್ಲಿ ರೋಹಿತ್ ಶರ್ಮ ಬಳಗ 317 ರನ್‌ಗಳಿಂದ ಶ್ರೀಲಂಕಾ ವಿರುದ್ಧ ಜಯಿಸಿ ಸರಣಿಯಲ್ಲಿ 3–0ಯಿಂದ ಕ್ಲೀನ್‌ಸ್ವೀಪ್ ಸಾಧನೆ ಮಾಡಿತು.



ವಿರಾಟ್ ಕೊಹ್ಲಿ

ವಿರಾಟ್ ಕೊಹ್ಲಿ (ಅಜೇಯ 166) ಮತ್ತು ಶುಭಮನ್ ಗಿಲ್ (116) ಶತಕಗಳ ನೆರವಿನಿಂದ ಭಾರತ 50 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 390 ರನ್ ಗಳಿಸಿದರೆ, ಲಂಕಾ 22 ಓವರ್‌ಗಳಲ್ಲಿ 73 ರನ್‌ಗಳಿಗೆ ಆಲೌಟಾಯಿತು.

ನ್ಯೂಜಿಲೆಂಡ್ ತಂಡ 2008 ರಲ್ಲಿ ಐರ್ಲೆಂಡ್ ವಿರುದ್ಧ ಪಡೆದಿದ್ದ 290 ರನ್‌ಗಳ ಗೆಲುವು ಇದುವರೆಗಿನ ದಾಖಲೆಯಾಗಿತ್ತು. ವಿರಾಟ್ ಕೊಹ್ಲಿ ಅವರು ತವರು ನೆಲದಲ್ಲಿ ಏಕದಿನ ಕ್ರಿಕೆಟ್‌ನಲ್ಲಿ 21ನೇ ಶತಕ ಗಳಿಸಿ, ಸಚಿನ್ ತೆಂಡೂಲ್ಕರ್ (20 ಶತಕ) ದಾಖಲೆ ಮುರಿದರು.

ವಿವರ 10

ಚಿನಕುರಳಿ
ಪ್ರಕಾಶ್ ಶೆಟ್ಟಿ



ಜಮೀನಿನ ಖಾತೆ ಅಕ್ರಮ ಬದಲಾವಣೆಗೆ ₹ 3 ಕೋಟಿ ಲಂಚ ಆರೋಪ

ಇಬ್ಬರು ಅಧಿಕಾರಿಗಳ ವಿರುದ್ಧ ತನಿಖೆ

• ರಾಜೇಶ್ ರೈ ಚಟ್ಲ

ಬೆಂಗಳೂರು: ₹50 ಕೋಟಿಗೂ ಹೆಚ್ಚು ಮೌಲ್ಯದ 3 ಎಕರೆ 16 ಗುಂಟೆ ಜಮೀನಿನ ಖಾತೆಯನ್ನು ಅಕ್ರಮವಾಗಿ ಬದಲಾವಣೆ ಮಾಡಲು ಆದೇಶಿಸಿದ ಆರೋಪದಲ್ಲಿ ಇಬ್ಬರು ಕೆಎಎಸ್ ಅಧಿಕಾರಿಗಳ ವಿರುದ್ಧ ತನಿಖೆ ನಡೆಸಲು ಲೋಕಾಯುಕ್ತ ಪೊಲೀಸರಿಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಡಿಪಿಎಆರ್) ಪೂರ್ವಾನುಮತಿ ನೀಡಿದೆ.

ಸದ್ಯ ಅಮಾನತಿನಲ್ಲಿರುವ, ಬೆಂಗಳೂರು ಉತ್ತರ ಉಪ ವಿಭಾಗದ ಹಿಂದಿನ ಉಪ ವಿಭಾಗಾಧಿಕಾರಿ ಕೆ.ರಂಗನಾಥ್ ಮತ್ತು ಹಾಲಿ ದೊಡ್ಡಬಳ್ಳಾಪುರ ಉಪ ವಿಭಾಗಾಧಿಕಾರಿ ಆಗಿರುವ ಬೆಂಗಳೂರು ಪೂರ್ವ ತಾಲ್ಲೂಕಿನ ತಹಶೀಲ್ದಾರ್ ಹುದ್ದೆಯಲ್ಲಿದ್ದ ಎನ್. ತೇಜಸ್‌ಕುಮಾರ್ ವಿರುದ್ಧ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯಡಿ ಎಫ್‌ಐಆರ್ ದಾಖಲಿಸಿ ತನಿಖೆ ಆರಂಭಿಸಲು ಅನುಮತಿ ನೀಡಿ, ಜನವರಿ 4ರಂದು ಆದೇಶ ಹೊರಡಿಸಲಾಗಿದೆ.

ಪ್ರಜಾವಾಣಿ ವಿಶೇಷ

ಮುಖ್ಯಾಂಶಗಳು

- ರಂಗನಾಥ್, ತೇಜಸ್‌ಕುಮಾರ್ ವಿರುದ್ಧ ತನಿಖೆ
- ₹ 3 ಕೋಟಿಗೂ ಹೆಚ್ಚು ಲಂಚ ಪಡೆದ ಆರೋಪ
- ನ್ಯಾಯಾಲಯಗಳ ತೀರ್ಪು ಪರಿಗಣಿಸದೆ ಖಾತೆ ಬದಲು

ಬೆಂಗಳೂರು ಪೂರ್ವ ತಾಲ್ಲೂಕಿನ ಕೆ.ಆರ್. ಪುರ ಹೋಬಳಿಯ ವಿಜಿನಾಪುರ ಗ್ರಾಮದ ಸರ್ವೆ ನಂ. 92/1ರಲ್ಲಿ ಮೆ. ಗುರುಕಿರಣ್ ಎಂಟರ್‌ಪ್ರೈಸಸ್‌ಗೆ ಸೇರಿದ್ದ ಜಮೀನಿನ ಖಾತೆಯನ್ನು ತಮ್ಮ ಹೆಸರಿಗೆ ವರ್ಗಾಯಿಸುವಂತೆ ಕೋರಿ ಸೈಯದ್ ಇಸ್ಮಾಯಿಲ್ ಮತ್ತು ಇತರರು ಉಪ ವಿಭಾಗಾಧಿಕಾರಿಗೆ ಅರ್ಜಿ ಸಲ್ಲಿಸಿದ್ದರು. ಕಾನೂನುಬದ್ಧ ಹಕ್ಕುಗಳಿಲ್ಲದಿದ್ದರೂ ಸರಿಯಾಗಿ ವಿಚಾರಣೆ ನಡೆಸದೆ, ನ್ಯಾಯಾಲಯಗಳ ತೀರ್ಪುಗಳನ್ನೂ ಪರಿಗಣಿಸದೆ, ಅಧಿಕಾರ ದುರುಪಯೋಗಪಡಿಸಿ, ಭ್ರಷ್ಟಾಚಾರ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುವ ಕಾರಣ ತನಿಖೆಗೆ ಅನುಮತಿ ನೀಡಲಾಗಿದೆ ಎಂದು ಆದೇಶದಲ್ಲಿ ವಿವರಿಸಲಾಗಿದೆ.

ಸೈಯದ್ ಇಸ್ಮಾಯಿಲ್, ರಷೀದಾಬಿ ಮತ್ತು ಇತರರಿಗೆ ಅಕ್ರಮವಾಗಿ ಖಾತೆ ಮಾಡಿದ ಬಗ್ಗೆ ಭ್ರಷ್ಟಾಚಾರ ನಿಗ್ರಹ ದಳದಲ್ಲಿ (ಎಸಿಬಿ) ದೂರು ಸಲ್ಲಿಕೆಯಾಗಿತ್ತು. ಪ್ರಾಥಮಿಕ ತನಿಖೆ ನಡೆಸಿದ್ದ ಎಸಿಬಿ ಅಧಿಕಾರಿಗಳು, ಎಫ್‌ಐಆರ್ ದಾಖಲಿಸಿ ತನಿಖೆ ಕೈಗೊಳ್ಳಲು ಅನುಮತಿ ನೀಡುವಂತೆ 2018ರ ಅ.10ರಂದು ಡಿಪಿಎಆರ್‌ಗೆ ಪ್ರಸ್ತಾವ ಸಲ್ಲಿಸಿದ್ದರು. ಅದು ಅಲ್ಲಿಯೇ ಬಾಕಿ ಉಳಿದಿತ್ತು. ಈಗ ಎಸಿಬಿ ರದ್ದುಗೊಂಡು, ಲೋಕಾಯುಕ್ತ ಪೊಲೀಸ್ ವಿಭಾಗಕ್ಕೆ ತನಿಖೆಯ ಅಧಿಕಾರ ಮರಳಿದೆ. ಹೀಗಾಗಿ, ಎಸಿಬಿ ಸಲ್ಲಿಸಿದ್ದ ಪ್ರಸ್ತಾವದ ಆಧಾರದಲ್ಲಿ ಈ ಪ್ರಕರಣದಲ್ಲಿ ತನಿಖೆ ನಡೆಸಲು ಲೋಕಾಯುಕ್ತ ಪೊಲೀಸರಿಗೆ ಅನುಮತಿ ನೀಡಲಾಗಿದೆ.

4ನೇ ಪುಟ ನೋಡಿ

'ಭವಿಷ್ಯದ ಪರಿಸ್ಥಿತಿ ಎದುರಿಸಲು ಸನ್ನದ್ಧರಾಗಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಷ್ಯಾ ಹಾಗೂ ಉಕ್ರೇನ್ ನಡುವಣ ಯುದ್ಧ ವಿಶ್ವದ ಎಲ್ಲ ದೇಶಗಳಿಗೂ ಪಾಠ ಕಲಿಸಿದ್ದು, ಭವಿಷ್ಯದ ಪರಿಸ್ಥಿತಿ ಎದುರಿಸಲು ಭಾರತೀಯ ಸೇನೆಯು ಸದಾ ಸನ್ನದ್ಧ ಸ್ಥಿತಿಯಲ್ಲೇ ಇರಬೇಕಿದೆ' ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದರು.

ನಗರದ ಎಎಸ್‌ಸಿ ಕೇಂದ್ರದ ಮೈದಾನದಲ್ಲಿ ಭಾನುವಾರ ನಡೆದ ಸೇನಾ ದಿನಾಚರಣೆಯಲ್ಲಿ ಅವರು ಮಾತನಾಡಿದರು.

'ಭಾರತೀಯ ಸೇನೆಗೆ ಜ.15 ಶುಭ ದಿನ. ಈ ಸಂದರ್ಭದಲ್ಲಿ ದೇಶದ ಜನರು ಹಾಗೂ ಕೇಂದ್ರದ ಪರವಾಗಿ ಸೇನೆ ಸಿದ್ಧತೆಯಲ್ಲಿ ಇರಬೇಕೆಂಬ ಸೂಚನೆ ನೀಡುತ್ತಿದ್ದೇನೆ' ಎಂದರು.

'ಉಕ್ರೇನ್‌ನಲ್ಲಿ ಭಾರತದ ವಿದ್ಯಾರ್ಥಿಗಳು ವೈದ್ಯಕೀಯ ಶಿಕ್ಷಣ ಪಡೆಯುತ್ತಿದ್ದರು. ಯುದ್ಧದ ವೇಳೆ ಭಾರತೀಯ ವಿದ್ಯಾರ್ಥಿಗಳನ್ನು ಸುರಕ್ಷಿತವಾಗಿ ವಾಪಸ್ ಕರೆತರುವುದು ಸವಾಲಿನ ಕೆಲಸವಾಗಿತ್ತು. ಪ್ರಧಾನಿ ನರೇಂದ್ರ ಮೋದಿ ಅವರ ನಿರಂತರ ಪ್ರಯತ್ನದಿಂದ ಯಶಸ್ಸು ದೊರೆಯಿತು. ಉಕ್ರೇನ್ ಮತ್ತು ರಷ್ಯಾ ಅಧ್ಯಕ್ಷರ ಜತೆಗೆ ಪ್ರಧಾನಿ ಮಾತುಕತೆ ನಡೆಸಿದ ಪರಿಣಾಮ ಕೆಲವು ತಾಸುಗಳ ಕಾಲ ಯುದ್ಧವನ್ನೇ ಸ್ಥಗಿತಗೊಳಿಸಲು ಸಫಲವಾಗಿದ್ದೆವು. ಆಗ ವಿದ್ಯಾರ್ಥಿಗಳನ್ನು ಸ್ವದೇಶಕ್ಕೆ ಕರೆತರಲಾಯಿತು. ಇಂತಹ ಪ್ರಯತ್ನದ ಬಗ್ಗೆ ದೇಶಕ್ಕೆ ಹೆಮ್ಮೆ ಇದೆ. ಇತರ ರಾಷ್ಟ್ರಗಳು ಇಂತಹ ಪ್ರಯತ್ನ ಮಾಡಲಿಲ್ಲ' ಎಂದು ಹೇಳಿದರು.

'ಭಾರತೀಯ ಸೇನಾ ಪಡೆಗಳು ತಮ್ಮ ಸಾಮರ್ಥ್ಯ ಹಾಗೂ ರಕ್ಷಣಾ ವಿಧಾನ ವೃದ್ಧಿಸಿಕೊಂಡಿವೆ. ಯುದ್ಧ ಸಾಮಗ್ರಿ ಮತ್ತು ಶಸ್ತ್ರಾಸ್ತ್ರಗಳ ವಿಷಯದಲ್ಲಿ ಭಾರತೀಯ ಸೇನೆ ವಿಶ್ವದಲ್ಲಿ ಉನ್ನತ ಸ್ಥಾನದಲ್ಲಿದೆ. ಸ್ವದೇಶಿ ನಿರ್ಮಿತ ಯುದ್ಧ ಹೆಲಿಕಾಪ್ಟರ್‌ಗಳು ಶಕ್ತಿಯುತವಾಗಿವೆ' ಎಂದು ಶ್ಲಾಘಿಸಿದರು.

4ನೇ ಪುಟ ನೋಡಿ

ಶಿರಸಿಯಲ್ಲಿ ಪರಿಸರ ವಿ.ವಿ ಸ್ಥಾಪನೆ: ಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ

ಶಿರಸಿ: 'ರಾಜ್ಯದ ಮೊದಲ ಪರಿಸರ ವಿಶ್ವವಿದ್ಯಾಲಯವನ್ನು ಶಿರಸಿಯಲ್ಲಿ ಸ್ಥಾಪಿಸಲಾಗುವುದು. ಬಜೆಟ್‌ನಲ್ಲಿ ಇದಕ್ಕೆ ಅನುದಾನ ಘೋಷಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಭಾನುವಾರ ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, 'ಇಲ್ಲಿರುವ ತೋಟಗಾರಿಕೆ, ಅರಣ್ಯ ಕಾಲೇಜು ವಿಲೀನಗೊಳಿಸಿ ವನ್ಯಜೀವಿ, ಪರಿಸರ ಸಂರಕ್ಷಣೆ, ಕೃಷಿ ಅಧ್ಯಯನಕ್ಕೆ ಪೂರಕವಾಗಿ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಗುವುದು' ಎಂದು ತಿಳಿಸಿದರು.

'ಅರಣ್ಯವಾಸಿಗಳ ರಕ್ಷಣೆ ಕುರಿತ ಪ್ರಶ್ನೆಗೆ, 'ಒಕ್ಕಲೆಬ್ಬಿಸುವುದನ್ನು ತಡೆಯಲು ಅಗತ್ಯವಿದ್ದರೆ ಸುಪ್ರೀಂ ಕೋರ್ಟ್‌ಗೆ ಮತ್ತೆ ಪ್ರಮಾಣಪತ್ರ ಸಲ್ಲಿಸಲಾಗುವುದು. ಅರಣ್ಯ ಅತಿಕ್ರಮಣದಾರರ ಒಕ್ಕಲೆಬ್ಬಿಸುವ ಕೆಲಸವನ್ನು ಸರ್ಕಾರ ಯಾವುದೇ ಕಾರಣಕ್ಕೂ ಮಾಡದು. ಸುಪ್ರೀಂಕೋರ್ಟ್ ತೀರ್ಪು ಬರುವವರೆಗೆ ಅತಿಕ್ರಮಣದಾರರಿಗೆ ತೊಂದರೆ ನೀಡದಂತೆ ಅರಣ್ಯ ಇಲಾಖೆ ಸಿಬ್ಬಂದಿಗೆ ಸೂಚಿಸಲಾಗಿದೆ' ಎಂದು ತಿಳಿಸಿದರು.

‘ಕೈ’ ತೆಕ್ಕೆಯಿಂದ ಮತ್ತೆ ಕ್ಷೇತ್ರ ಕಸಿಯಲು ಬಿಜೆಪಿ ಯತ್ನ

ಪ್ರಜಾ ಮತ
ಜನತಂತ್ರದ ಹಬ್ಬ
ಕರ್ನಾಟಕ ವಿಧಾನಸಭಾ ಚುನಾವಣೆ - 2023

• ರಾಜೇಶ್ ರೈ ಚಟ್ಲ

ಬೆಂಗಳೂರು:ಬಿಜೆಪಿ ಭದ್ರಕೋಟೆಯಾಗಿದ್ದ ಹೆಬ್ಬಾಳ ವಿಧಾನಸಭಾ ಕ್ಷೇತ್ರ ಈಗ ಕಾಂಗ್ರೆಸ್ ತೆಕ್ಕೆಯಲ್ಲಿದೆ. ‘ಮುಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ’ ಎಂದು ಪದೇ ಪದೇ ಹೇಳಿಕೆ ನೀಡುತ್ತಲೇ, ಸಿದ್ದರಾಮಯ್ಯ ಅತ್ಯಾಪ್ತರ ವಲಯದಲ್ಲಿ ಗುರುತಿಸಿಕೊಂಡಿರುವ ಬೈರತಿ ಸುರೇಶ್ ಕ್ಷೇತ್ರದ ಹಾಲಿ ಶಾಸಕ.

ಕ್ಷೇತ್ರ ಸ್ಥಿತಿ–ಗತಿ

ದುಡಿಯುವ ವರ್ಗದವರೇ ಹೆಚ್ಚಿನ ಸಂಖ್ಯೆಯಲ್ಲಿರುವ ಇಲ್ಲಿ ಬಹುಮಹಡಿ ಕಟ್ಟಡಗಳು, ಅಪಾರ್ಟ್‌ಮೆಂಟ್‌ಗಳು, ಶ್ರೀಮಂತರ ಬಂಗಲೆಗಳೂ ಸಾಕಷ್ಟಿವೆ. ಟೆಕ್ ಪಾರ್ಕ್‌ಗಳು, ಉದ್ಯಾನವನಗಳು, ಗಗನಚುಂಬಿ ಕಟ್ಟಡಗಳು, ಫ್ಲೈ ಓವರ್, ಕೆರೆಗಳು ಕ್ಷೇತ್ರದ ವ್ಯಾಪ್ತಿಯಲ್ಲೇ ಬರುತ್ತವೆ. ಸಂಚಾರ ದಟ್ಟಣೆ, ಕಸದ ಸಮಸ್ಯೆ, ರಸ್ತೆಗಳ ಉನ್ನತೀಕರಣ ಸೇರಿದಂತೆ ಜೆ.ಸಿ. ನಗರ, ಗಂಗೇನಹಳ್ಳಿ, ಮನೋರಾಯನಪಾಳ್ಯ, ವಿ ನಾಗೇನಹಳ್ಳಿಯ ಪ್ರದೇಶಗಳನ್ನು ಒಳಗೊಂಡ ಇಲ್ಲಿ, ಕಿರಿದಾದ ರಸ್ತೆ, ಆಟದ ಮೈದಾನ ಸೇರಿದಂತೆ ಇನ್ನಿತರ ಮೂಲಸೌಕರ್ಯಗಳ ಕೊರತೆ ಇದೆ. ಹೊರರಾಜ್ಯಗಳಿಂದ ಕೆಲಸ ಅರಸಿ ನಗರಕ್ಕೆ ಬಂದು ನೆಲೆಸಿರುವ ಉತ್ತರ ಭಾರತ ಮೂಲದ ಜನರು ಈ ಭಾಗದಲ್ಲಿ ದೊಡ್ಡ ಸಂಖ್ಯೆಯಲ್ಲಿದ್ದಾರೆ.

2008ರಲ್ಲಿ ಬಿಜೆಪಿಯ ಕಟ್ಟಾ ಸುಬ್ರಹ್ಮಣ್ಯ ನಾಯ್ಡು, 2013ರಲ್ಲಿ ಬಿಜೆಪಿಯ ಆರ್. ಜಗದೀಶ್ ಕುಮಾರ್ ಆರಿಸಿ ಬಂದಿದ್ದರು. ಆದರೆ 2015ರ ನವಂಬರ್‌ನಲ್ಲಿ ಹೃದಯಾಘಾತದಿಂದ ಜಗದೀಶ್ ಕುಮಾರ್ ನಿಧನರಾಗಿದ್ದರಿಂದ 2016ರಲ್ಲಿ ಉಪ ಚುನಾವಣೆ ನಡೆದಿತ್ತು.

ಉಪ ಚುನಾವಣೆಯಲ್ಲಿ ತಮ್ಮ ಆಪ್ತ ಬೈರತಿ ಸುರೇಶ್‌ಗೆ ಟಿಕೆಟ್ ಕೊಡಿಸಲು ಸಿದ್ದರಾಮಯ್ಯ ಯತ್ನಿಸಿದ್ದರು. ಆದರೆ, ಕೊನೆ ಕ್ಷಣದಲ್ಲಿ ಹಿಂದಿನ ಚುನಾವಣೆಯಲ್ಲಿ, ಸ್ಪರ್ಧಿಸಿ ಸೋತಿದ್ದ, ಕಾಂಗ್ರೆಸ್‌ನ ಹಿರಿಯ ಮುಖಂಡ ಸಿ.ಕೆ. ಜಾಫರ್ ಷರೀಫ್ ಮೊಮ್ಮಗ ಅಬ್ದುಲ್ ರೆಹಮಾನ್ ಷರೀಫ್ ಅವರಿಗೇ ಕಾಂಗ್ರೆಸ್ ಮಣೆ ಹಾಕಿತ್ತು. ಆದರೆ, ಮತದಾರರು ಅವರ ಕೈಹಿಡಿಯಲಿಲ್ಲ. 19 ಸಾವಿರ ಮತಗಳ ಅಂತರದಿಂದ ಬಿಜೆಪಿಯ ವೈ.ಎ. ನಾರಾಯಣಸ್ವಾಮಿ ಮೇಲುಗೈ ಸಾಧಿಸಿದ್ದರು.

ಅದೇ ಗೆಲುವಿನ ಉಮೇದಿನಲ್ಲಿ 2018 ರಲ್ಲಿ ನಾರಾಯಣಸ್ವಾಮಿ ಮತ್ತೆ ಕಣಕ್ಕಿಳಿದಿದ್ದರು. ಹಿಂದಿನ ಚುನಾವಣೆಯಲ್ಲಿ ಸೋತಿದ್ದ ಅಬ್ದುಲ್ ರೆಹಮಾನ್ ಷರೀಫ್ ಅವರಿಗೆ ಟಿಕೆಟ್ ನೀಡದೆ, ಕುರುಬ ಸಮುದಾಯದ ಬೈರತಿ ಸುರೇಶ್‌ಗೆ ಕಾಂಗ್ರೆಸ್ ಟಿಕೆಟ್ ನೀಡಿತ್ತು. ತಮ್ಮವರಿಗೆ ಟಿಕೆಟ್ ನೀಡಿಲ್ಲ ಎಂಬ ಅಸಮಾಧಾನದ ನಡುವೆಯೂ ಮುಸ್ಲಿಂ ಮತಗಳು ಸುರೇಶ್ ಕೈಹಿಡಿದ ಕಾರಣ ಅವರು ಸುಲಭವಾಗಿ ದಡ ಸೇರಿದ್ದರು. ಒಕ್ಕಲಿಗ ಸಮುದಾಯದ ನಾರಾಯಣಸ್ವಾಮಿ ಬಿಜೆಪಿಯಿಂದ, ಹನುಮಂತೇಗೌಡ ಜೆಡಿಎಸ್‌ನಿಂದ ಸ್ಪರ್ಧಿಸಿದ್ದು ಕೂಡಾ ಅವರಿಗೆ ವರವಾಗಿತ್ತು.

ಹೆಬ್ಬಾಳ ಕ್ಷೇತ್ರದಲ್ಲಿ ಒಟ್ಟು 2.69 ಲಕ್ಷ ಮತದಾರರು ಇದ್ದಾರೆ. ಈ ಪೈಕಿ ಒಕ್ಕಲಿಗರು, ಮುಸ್ಲಿಮರು, ಪರಿಶಿಷ್ಟರು, ಬ್ರಾಹ್ಮಣರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಈ ಬಾರಿಯೂ ಕಾಂಗ್ರೆಸ್‌ನಿಂದ ಬೈರತಿ ಸುರೇಶ್‌ಗೆ ಟಿಕೆಟ್ ಸಿಗುವುದು ಪಕ್ಕಾ. ಬಿಜೆಪಿಯಿಂದ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಮತ್ತೊಮ್ಮೆ ಅದೃಷ್ಟ ಪರೀಕ್ಷೆಗೆ ಇಳಿಯಲು ಇಚ್ಛಿಸಿದ್ದಾರೆ. ಮತ್ತೊಂದೆಡೆ, ವಿಧಾನ ಪರಿಷತ್ ಸದಸ್ಯ ವೈ.ಎ. ನಾರಾಯಣಸ್ವಾಮಿ ಕೂಡ ಸ್ಪರ್ಧೆಗೆ ಟಿಕೆಟ್ ಬಯಸಿದ್ದಾರೆ. ಮೊಹಿದ್ ಅಲ್ತಾಫ್ ಅವರಿಗೆ ಜೆಡಿಎಸ್ ಈಗಾಗಲೇ ಟಿಕೆಟ್ ಘೋಷಿಸಿದೆ.

ಹೆಬ್ಬಾಳ



ಬೈರತಿ ಸುರೇಶ್
ಹಾಲಿ ಶಾಸಕ (ಕಾಂಗ್ರೆಸ್)



2016ರ ಉಪಚುನಾವಣೆ
ವೈ.ಎ. ನಾರಾಯಣ ಸ್ವಾಮಿ (ಬಿಜೆಪಿ)- **60,367**
ಸಿ.ಕೆ. ಅಬ್ದುಲ್ ರಹಮಾನ್ ಷರೀಫ್ (ಕಾಂಗ್ರೆಸ್)- **41,218**
ಇಸ್ಮಾಯಿಲ್ ಷರೀಫ್ ನಾನಾ (ಜೆಡಿಎಸ್)- **3,666**

ಹಾಲಿ ಮತದಾರರ ವಿವರ
1,37,751 ಪುರುಷರು
1,31,805 ಮಹಿಳೆಯರು
53 ತೃತೀಯ ಲಿಂಗಿಗಳು
2,69,609 ಒಟ್ಟು

ಚುನಾವಣೆ ಮತಗಳ ವಿವರ

ಪಕ್ಷಗಳು	2018	2013	2008
ಕಾಂಗ್ರೆಸ್	74,453	33,026	46,715
ಬಿಜೆಪಿ	53,313	38,162	41,763
ಜೆಡಿಎಸ್	14,092	25,073	4,149

ಕೋಲಾರದಲ್ಲಿ ಸಿದ್ದರಾಮಯ್ಯಗೆ ಮನೆ, ಕಚೇರಿ ಹುಡುಕಾಟ

ಕೋಲಾರ: ‘ವಿಧಾನಸಭೆ ಚುನಾವಣೆಯಲ್ಲಿ ಕೋಲಾರ ಕ್ಷೇತ್ರದಲ್ಲಿ ಸ್ಪರ್ಧಿಸಲು ನಿರ್ಧರಿಸಿರುವ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗಾಗಿ ಬಾಡಿಗೆ ಮನೆ, ಕಚೇರಿಗಾಗಿ ಹುಡುಕಾಟ ನಡೆದಿದೆ.

‘ಕ್ಷೇತ್ರದಿಂದ ಗೆದ್ದರೆ ಜನರ ಕೈಗೆ ಸಿದ್ದರಾಮಯ್ಯ ಸಿಗುವುದಿಲ್ಲ’ ಎಂದು ಬಿಜೆಪಿ ಹಾಗೂ ಜೆಡಿಎಸ್ ಮುಖಂಡರು ಟೀಕಿಸಿದ ಬೆನ್ನಲೇ ಸಿದ್ದರಾಮಯ್ಯ ಅವರ ಸೂಚನೆ ಮೇರೆಗೆ ಪಕ್ಷದ ಸ್ಥಳೀಯ ಮುಖಂಡರು ನಗರದ ಬೈಪಾಸ್ ರಸ್ತೆಯಲ್ಲಿಯೇ ಮನೆ, ಕಚೇರಿಗಾಗಿ ಶೋಧ ನಡೆಸಿದ್ದಾರೆ.

‘ಯಾರೋ ಟೀಕಿಸುತ್ತಾರೆ ಎಂಬ ಉದ್ದೇಶಕ್ಕೆ ಅಲ್ಲ; ಕ್ಷೇತ್ರದಲ್ಲಿ ಸ್ಪರ್ಧಿಸುವುದಾಗಿ ಘೋಷಿಸಿದ ದಿನದಿಂದಲೇ ನಾವು ಹುಡುಕಾಟ ಆರಂಭಿಸಿದ್ದೇವೆ. ಉತ್ತಮ ಪಾರ್ಕಿಂಗ್ ವ್ಯವಸ್ಥೆ ಇರುವ ಮನೆ ಹಾಗೂ ಕಚೇರಿ ಬೇಕಿದೆ. ರಾಷ್ಟ್ರೀಯ ಹೆದ್ದಾರಿ ಬಳಿಯೇ ನಾಲ್ಕೈದು ಮನೆ ನೋಡಿದ್ದು, ಇನ್ನೂ ಅಂತಿಮಗೊಂಡಿಲ್ಲ’ ಎಂದು ವಿಧಾನ ಪರಿಷತ್ ಸದಸ್ಯ ಎಂ.ಎಲ್.ಅನಿಲ್ ಕುಮಾರ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಕೋಲಾರ ಕ್ಷೇತ್ರವು ಸಿದ್ದರಾಮಯ್ಯ ಅವರಿಗೆ ಸುರಕ್ಷಿತವಲ್ಲ ಎಂಬುದಾಗಿ ಬಿಜೆಪಿ ಹಾಗೂ ಜೆಡಿಎಸ್ ನಾಯಕರು ಮೇಲೆ ಬಿದ್ದು ಹೇಳಿಕೆ ನೀಡುತ್ತಿದ್ದಾರೆ. ಸಿದ್ದರಾಮಯ್ಯ ಅವರ ಮೇಲೆ ಅವರಿಗೆ ದಿಢೀರ್ ಪ್ರೀತಿ ಹುಟ್ಟಲು ಕಾರಣವೇನು’ ಎಂದು ಪ್ರಶ್ನಿಸಿದರು.

ಕಾವೇರಿ ನೀರು ಸರಬರಾಜು ಸೇವೆಗೆ ಚಾಲನೆ

ಯಲಹಂಕ: ಕೋಗಿಲು ಮತ್ತು ಸುತ್ತಮುತ್ತಲ ಬಡಾವಣೆಗಳಿಗೆ ಪೂರ್ಣ ಪ್ರಮಾಣದಲ್ಲಿ ಕಾವೇರಿ ನೀರು ನೀಡಬೇಕೆಂದು ಮೂರು ವರ್ಷಗಳಿಂದ ಪ್ರಯತ್ನಿಸಲಾಗುತ್ತಿದೆ. ಆದರೆ, ಜನರಿಂದ ನಿರೀಕ್ಷಿಸಿದ ಮಟ್ಟಿಗೆ ಸಹಕಾರ ದೊರೆಯದ ಕಾರಣ, ನಮ್ಮ ಗುರಿ ಈಡೇರಿಸಲು ಸಾಧ್ಯವಾಗುತ್ತಿಲ್ಲ ಎಂದು ಶಾಸಕ ಕೃಷ್ಣಬೈರೇಗೌಡ ಬೇಸರ ವ್ಯಕ್ತಪಡಿಸಿದರು.

ಬ್ಯಾಟರಾಯನಪುರ ಕ್ಷೇತ್ರದ ಪ್ರಕೃತಿ ಬಡಾವಣೆಯಲ್ಲಿ ಕಾವೇರಿ ನೀರು ಸರಬರಾಜು ಸೇವೆ ಉದ್ಘಾಟಿಸಿ ಮಾತನಾಡಿದ ಅವರು, ‘ನೀರು ನೀಡಲು ಸಿದ್ಧರಾಗಿದ್ದರೂ ಜನರೇ ಅರ್ಜಿ ಸಲ್ಲಿಸಿ ಮೀಟರ್ ಅಳವಡಿಸಿಕೊಂಡು ಸಂಪರ್ಕ ಪಡೆಯಲು ಮುಂದೆ ಬರುತ್ತಿಲ್ಲ. ನೀರು ಸರಬರಾಜು ಮಾಡುವ ಪ್ರಕ್ರಿಯೆ ವಿಳಂಬ ಆಗುತ್ತಿದೆ. ಈಗಾಗಲೇ ಕೆಲವರು ಅರ್ಜಿಗಳನ್ನು ಸಲ್ಲಿಸಿದ್ದು, ಉಳಿದವರೂ ಸಹ ತಕ್ಷಣ ಅರ್ಜಿ ಸಲ್ಲಿಸಿ ಸಂಪರ್ಕ ಪಡೆಯಬೇಕು’ ಎಂದು ಮನವಿ ಮಾಡಿದರು.

ಬೆಂಗಳೂರು ಜಲಮಂಡಳಿ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಹನುಮಂತ ಗಂಟಿ, ಕಾಂಗ್ರೆಸ್ ಮುಖಂಡ ಟಿ.ವೆಂಕಟರಾಮರೆಡ್ಡಿ, ಎಚ್.ಎ.ಶಿವಕುಮಾರ್, ಗೋಪಾಲ್ ರೆಡ್ಡಿ, ಕೆ.ಎನ್. ನಾಗೇಂದ್ರಕುಮಾರ್, ಮುಖಂಡರಾದ ನಾಗೇಶ್, ವೇಣುಗೋಪಾಲ್ ರೆಡ್ಡಿ, ಸೋಮಣ್ಣ ಇದ್ದರು.



ಬ್ಯಾಟರಾಯನಪುರ ಕ್ಷೇತ್ರದ ಪ್ರಕೃತಿ ಬಡಾವಣೆಯಲ್ಲಿ ಕಾವೇರಿ ನೀರು ಸರಬರಾಜು ಸೇವೆಯನ್ನು ಶಾಸಕ ಕೃಷ್ಣಬೈರೇಗೌಡ ಉದ್ಘಾಟಿಸಿದರು

ಅಯ್ಯಪ್ಪಸ್ವಾಮಿ ಪೂಜೆ: ಜನಾರ್ದನ ರೆಡ್ಡಿ ಭಾಗಿ

ಪ್ರಜಾವಾಣಿ ವಾರ್ತೆ

ಬಾಗೇಪಲ್ಲಿ: ತಾಲ್ಲೂಕಿನ ಹೊಸಕೋಟೆ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀಅಯ್ಯಪ್ಪಸ್ವಾಮಿ ದೇವಾಲಯದಲ್ಲಿ ಭಾನುವಾರ ರಾತ್ರಿ ನಡೆದ ಪೂಜೆಯಲ್ಲಿ ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ ಸಂಸ್ಥಾಪಕ ಗಾಲಿ ಜನಾರ್ದನ ರೆಡ್ಡಿ ಭಾಗಿಯಾದರು.

ಮರು ಪರಿಷ್ಕರಣೆ: ಶಿವಾಜಿನಗರದಲ್ಲೇ ಕಡಿಮೆ ಮತದಾರರು

ಮೂರು ಕ್ಷೇತ್ರಗಳ ಅಂತಿಮ ಮತದಾರರ ಪಟ್ಟಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿವಾಜಿನಗರ, ಚಿಕ್ಕಪೇಟೆ ಹಾಗೂ ಮಹದೇವಪುರ ವಿಧಾನಸಭೆ ಕ್ಷೇತ್ರಗಳ ಮತದಾರರ ಅಂತಿಮ ಪಟ್ಟಿ ಪ್ರಕಟಗೊಂಡಿದೆ. ಮಹದೇವಪುರ ಕ್ಷೇತ್ರ ನಗರದಲ್ಲೇ ಅತೀ ಹೆಚ್ಚು ಮತದಾರರನ್ನು ಹೊಂದಿರುವ ಎರಡನೇ ಕ್ಷೇತ್ರವಾಗಿದೆ.

ಮತದಾರರ ಪಟ್ಟಿ ಪರಿಷ್ಕರಣೆ ಹೆಸರಿನಲ್ಲಿ ಮತದಾರರ ಮಾಹಿತಿ ಕಳವು ಮಾಡಿರುವ ಆರೋಪದ ಪ್ರಕರಣದಲ್ಲಿ ಈ ಮೂರು ಕ್ಷೇತ್ರಗಳ ಮತದಾರರ ಪಟ್ಟಿಯನ್ನು ಸಂಪೂರ್ಣವಾಗಿ ಮರು ಪರಿಷ್ಕರಣೆ ಮಾಡುವಂತೆ ಚುನಾವಣಾ ಆಯೋಗ ನಿರ್ದೇಶನ ನೀಡಿತ್ತು.

ಅದರಂತೆ ಮತದಾರರ ಪಟ್ಟಿಯನ್ನು ಸಿದ್ಧಪಡಿಸಿ ಅಂತಿಮ ಪ್ರಕಟಣೆಯನ್ನು ರಾಜ್ಯ ಮುಖ್ಯ ಚುನಾವಣಾಧಿಕಾರಿ ಕಚೇರಿ ಹೊರಡಿಸಿದೆ. ಕರಡು ಮತದಾರರ ಪಟ್ಟಿಯನ್ನು ನ.9ರಂದು ಪ್ರಕಟಿಸಲಾಗಿತ್ತು. ಆಕ್ಷೇಪಣೆಗಳನ್ನು ಪರಿಹರಿಸಿ ಭಾನುವಾರ ಅಂತಿಮ ಪಟ್ಟಿ ಪ್ರಕಟಿಸಿದೆ.

ಅಂತಿಮ ಮತದಾರರ ಪಟ್ಟಿ ವೆಬ್‌ಸೈಟ್ http://ceokarnataka.kar.nic.inನಲ್ಲಿ ಪ್ರಕಟಿಸಲಾಗಿದೆ. ಮತದಾರರ ಪಟ್ಟಿ ನಿರಂತರ ಪರಿಷ್ಕರಣೆ ಇದ್ದು, ವೋಟರ್ ಹೆಲ್ಪ್‌ಲೈನ್ ಆ್ಯಪ್, ಪೋರ್ಟಲ್ www.nvsp.in ಮೂಲಕ ಅರ್ಜಿ ಸಲ್ಲಿಸಲು ಅವಕಾಶ ಇದೆ ಎಂದು ತಿಳಿಸಿದೆ.

ಬೆಂಗಳೂರಿನ 28 ಕ್ಷೇತ್ರಗಳಲ್ಲೇ ಅತೀ ಹೆಚ್ಚು ಮತದಾರರನ್ನು ಹೊಂದಿರುವ ಕ್ಷೇತ್ರ ಎಂದರೆ ಬೆಂಗಳೂರು ದಕ್ಷಿಣ. 6.50 ಲಕ್ಷ ಮತದರಾರನ್ನು ಈ ಕ್ಷೇತ್ರ ಹೊಂದಿದೆ. ಅದನ್ನು ಬಿಟ್ಟರೆ ಮಹದೇವಪುರ ಕ್ಷೇತ್ರವೇ (5.72 ಲಕ್ಷ) ಹೆಚ್ಚು ಮತದಾರರನ್ನು ಹೊಂದಿರುವ ಕ್ಷೇತ್ರವಾಗಿದೆ.

ಶಿವಾಜಿನಗರದಲ್ಲಿ 1.94 ಲಕ್ಷ ಮತದಾರರಿದ್ದು, ಇದು ಅತೀ ಕಡಿಮೆ ಮತದಾರರನ್ನು ಹೊಂದಿರುವ ಕ್ಷೇತ್ರವಾಗಿದೆ. ಇದನ್ನು ಹೊರತುಪಡಿಸಿ ನಗರದ ಯಾವುದೇ ಕ್ಷೇತ್ರ 2 ಲಕ್ಷಕ್ಕೂ ಕಡಿಮೆ ಮತದಾರರನ್ನು ಹೊಂದಿಲ್ಲ.

ಮತದಾರರ ವಿವರ

ಕ್ಷೇತ್ರದ ಹೆಸರು	ಪುರುಷರು	ಮಹಿಳೆಯರು	ತೃತೀಯ ಲಿಂಗಿಗಳು	ಒಟ್ಟು
ಶಿವಾಜಿನಗರ	98,272	96,658	7	1,94,937
ಚಿಕ್ಕಪೇಟೆ	1,08,852	1,04,197	17	2,13,066
ಮಹದೇವಪುರ	3,08,859	3,63,560	120	5,72,539

ಬೆಂಗಳೂರಿನ ಪಾದಯಾತ್ರಿ ಸಾವು

ತುಮಕೂರು: ತಿಪಟೂರು ತಾಲ್ಲೂಕಿನ ಹೊನ್ನವಳ್ಳಿ ಹತ್ತಿರದ ರೇವಣಸಿದ್ದೇಶ್ವರ ಸ್ವಾಮಿ ಬೆಟ್ಟಕ್ಕೆ ಬೆಂಗಳೂರಿನಿಂದ ಪಾದಯಾತ್ರೆ ಬಂದಿದ್ದ ತಂಡದಲ್ಲಿದ್ದ ಅನಂತಕುಮಾರ್ (52) ಎಂಬುವವರು ಬೆಂಕಿ ಹೊತ್ತಿಕೊಂಡು ಭಾನುವಾರ ಮೃತಪಟ್ಟಿದ್ದಾರೆ.

ಹೊರಟಿದ್ದ ಬೆಂಗಳೂರಿನಿಂದ ಬೆಟ್ಟದಲ್ಲಿ ಮೆಟ್ಟಿಲು ಹತ್ತುವ ಸಮಯದಲ್ಲಿ ಬೆಂಕಿ ತಾಗಿ ಬೆಟ್ಟದ ತಪ್ಪಲಿನ ಒಣ ಹುಲ್ಲಿಗೆ ಬೆಂಕಿ ಹಚ್ಚಲಾಗಿತ್ತು. ಇದನ್ನು ಗಮನಿಸದೆ ಅನಂತಕುಮಾರ್ ಅವರು ಬೆಟ್ಟದ ಮೆಟ್ಟಿಲು ಹತ್ತಿ ಮುಂದೆ ಸಾಗಿದ್ದಾರೆ. ರಭಸವಾಗಿ ಗಾಳಿ ಬೀಸಿ ಮೆಟ್ಟಿಲು ಬಳಿಯ ಒಣಹುಲ್ಲಿಗೂ ಬೆಂಕಿ ಹರಡಿದೆ. ಬೆಂಕಿ ಅನಂತ್‌ಕುಮಾರ್ ಅವರಿಗೆ ತಾಗಿ ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾರೆ. ಪಾದಯಾತ್ರೆ ತಂಡದಲ್ಲಿದ್ದ ಆರು ಜನ ಪಾದಯಾತ್ರಿಗಳಿಗೆ ಚಿಕ್ಕಪುಟ್ಟ ಗಾಯಗಳಾಗಿವೆ.

‘ಆರೋಗ್ಯ ಕ್ಷೇತ್ರ ಮತ್ತಷ್ಟು ಬೆಳವಣಿಗೆ ಆಗಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹೋಮಿಯೋಪಥಿ ಹಾಗೂ ಆಯುರ್ವೇದಿಕ್ ಕ್ಷೇತ್ರಕ್ಕೆ ಕೇಂದ್ರ ಸರ್ಕಾರ ಹೆಚ್ಚಿನ ಪ್ರೋತ್ಸಾಹ ನೀಡುತ್ತಿರುವುದು ಉತ್ತಮ ಬೆಳವಣಿಗೆ’ ಎಂದು ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಶ್ಲಾಘಿಸಿದರು.

ನಗರದಲ್ಲಿ ಭಾನುವಾರ ಡಾ.ಬಿ.ಟಿ.ರುದ್ರೇಶ್ ಅವರ ‘ಅಶ್ವಿನಿ ಸ್ಪರ್ಶ’ ಕೃತಿ ಬಿಡುಗಡೆ ಮಾಡಿ ಮಾತನಾಡಿದರು.

‘ಹೋಮಿಯೋಪಥಿ ಮತ್ತು ಆಯುರ್ವೇದಿಕ್‌ಗೆ ಕೇಂದ್ರವು ವಿಶೇಷ ಸಚಿವಾಲಯ ಸೃಷ್ಟಿಸಿದೆ. ಆಧುನಿಕ ಔಷಧೀಯ ಕ್ಷೇತ್ರಕ್ಕಿಂತ ಹೋಮಿಯೋಪಥಿ ಭಿನ್ನ. ದೇಶದ ಆರೋಗ್ಯ ಕ್ಷೇತ್ರವು ಸಾಕಷ್ಟು ಹೆಸರು ಮಾಡಿದ್ದರೂ ಈ ಕ್ಷೇತ್ರವು ಮತ್ತಷ್ಟು ಬೆಳವಣಿಗೆ ಹೊಂದಬೇಕಿದೆ’ ಎಂದು ಆಶಿಸಿದರು.



ನಗರದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ (ಮಧ್ಯೆ) ಅವರು ಡಾ.ಬಿ.ಟಿ. ರುದ್ರೇಶ್ (ಎಡದಿಂದ 2ನೇಯವರು) ಅವರ ‘ಅಶ್ವಿನಿ ಸ್ಪರ್ಶ’ ಪುಸ್ತಕ ಲೋಕಾರ್ಪಣೆಗೊಳಿಸಿದರು. (ಎಡದಿಂದ) ಶಿಕ್ಷಣ ತಜ್ಞ ಡಾ.ಗುರುರಾಜ ಕರಜಗಿ, ಹೋಮಿಯೋಪತಿ ಮೆಡಿಕಲ್ ಅಸೋಸಿಯೇಷನ್ ಆಫ್ ಇಂಡಿಯಾದ ಅಧ್ಯಕ್ಷ ರಾಮ್‌ಜೀ ಸಿಂಗ್ ಮತ್ತು ಡಾ.ಎಂ. ಶ್ರೀವತ್ಸನ್ ಇದ್ದರು –ಪ್ರಜಾವಾಣಿ ಚಿತ್ರ

‘ಹೋಮಿಯೋಪಥಿ ಕ್ಷೇತ್ರದಲ್ಲಿನ ರುದ್ರೇಶ್ ಅವರ ವೈದ್ಯಕೀಯ ಸೇವೆಗಾಗಿ ರಾಜ್ಯ ಸರ್ಕಾರ ಗೌರವಿಸಿದೆ. ನಿಸ್ವಾರ್ಥ ಸೇವೆಯಿಂದ ನಾಡಿನ ಜನರ ಮನ ಗೆದ್ದಿದ್ದಾರೆ’ ಎಂದರು.

ಶಿಕ್ಷಣ ತಜ್ಞ ಡಾ.ಗುರುರಾಜ ಕರಜಗಿ ಮಾತನಾಡಿ, ಅಂಕಣ ಬರಹವನ್ನು ರುದ್ರೇಶ್ ಅವರು ಅಶ್ವಿನಿ ಸ್ಪರ್ಶ ಎಂಬ ಕೃತಿ ಹೊರತಂದಿದ್ದಾರೆ. ಇವರು ಸುಮಾರು 25 ಲಕ್ಷಕ್ಕೂ ಅಧಿಕ ಜನರಿಗೆ ಚಿಕಿತ್ಸೆ ನೀಡಿದ್ದಾರೆ. ಹೋಮಿಯೋಪಥಿ ಕ್ಷೇತ್ರದ ಬಗೆಗಿನ ಹಲವು ಅಪರೂಪದ ಸಂಗತಿಗಳು ಪುಸ್ತಕದಲ್ಲಿ ಅಡಕವಾಗಿದೆ ಎಂದರು.

ಕೃತಿಕಾರ ರುದ್ರೇಶ್ ಮಾತನಾಡಿ, ‘ಕೆಲವರು ವೈದ್ಯಕೀಯ ಸಾಹಿತ್ಯವನ್ನು ಸೃಜನಶೀಲ ಸಾಹಿತ್ಯ ಅಲ್ಲ ಎಂದು ಹೇಳುತ್ತಾರೆ. ಹೀಗೆ ಹೇಳುವವರು ಮನುಷ್ಯನ ಜೀವನವೇ ಸೃಜನಶೀಲ ಅಲ್ಲ ಎಂಬುವುದನ್ನು ಮೊದಲು ಅರಿಯಬೇಕು’ ಎಂದರು. ಹೋಮಿಯೋಪಥಿ ಮೆಡಿಕಲ್ ಅಸೋಸಿಯೇಶನ್ ಆಫ್ ಇಂಡಿಯಾದ ಅಧ್ಯಕ್ಷ ಡಾ.ರಾಮ್‌ಜೀ ಸಿಂಗ್ ಇದ್ದರು.

‘ಸಹಕಾರ ಕ್ಷೇತ್ರ ಬಲವರ್ಧನೆಗೆ ಕ್ರಮ’

ಬೆಂಗಳೂರು: ‘ಗ್ರಾಮೀಣ ಪ್ರದೇಶದಲ್ಲಿ ಸಹಕಾರಿ ಕ್ಷೇತ್ರವನ್ನು ಬಲಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ’ ಎಂದು ಸಹಕಾರ ಭಾರತಿ ರಾಷ್ಟ್ರೀಯ ಅಧ್ಯಕ್ಷ ದೀನಾನಾಥ್ ಠಾಕೂರ್ ಹೇಳಿದರು.

ಪದ್ಮನಾಭನಗರದ ಪ್ರಾಂತೀಯ ಸಹಕಾರ ಆಡಳಿತ ನಿರ್ವಹಣಾ ಸಂಸ್ಥೆ (ಆರ್‌ಐಸಿಎಂ)ಯಲ್ಲಿ ಸಹಕಾರ ಭಾರತಿ-ಕರ್ನಾಟಕ ಶುಕ್ರವಾರ ಆಯೋಜಿಸಿದ್ದ ಸಹಕಾರ ಭಾರತಿ ರಾಜ್ಯ ಕಾರ್ಯಕಾರಿಣಿ ಉದ್ಘಾಟಿಸಿ ಅವರು ಮಾತನಾಡಿದರು.

‘ರಾಷ್ಟ್ರದಲ್ಲಿ ಸಹಕಾರಿ ಕ್ಷೇತ್ರವು ಬಲಗೊಳ್ಳುತ್ತಿದೆ. ಪ್ರತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲೂ ಶಕ್ತಿಯುತವಾಗಿ ಕಟ್ಟಲಾಗುವುದು’ ಎಂದು ಹೇಳಿದರು.


ಸಹಕಾರ ಭಾರತಿ ಕರ್ನಾಟಕದ ಅಧ್ಯಕ್ಷ ರಾಜಶೇಖರ ಶೀಲವಂತ ಮಾತನಾಡಿದರು. ಸಹಕಾರ ಭಾರತಿ ರಾಷ್ಟ್ರೀಯ ಸಂರಕ್ಷಕ ರಮೇಶ್ ವೈದ್ಯ, ರಾಜ್ಯ ಪ್ರಧಾನ ಕಾರ್ಯದರ್ಶಿ ಮೋಹನ್ ದಾಸ್ ನಾಯಕ್ ಇದ್ದರು.

ನಗರದಲ್ಲಿ ಇಂದು

ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹದ ಅಂಗವಾಗಿ ರಸ್ತೆ ಸುರಕ್ಷತಾ ರ‍್ಯಾಲಿ: ಉದ್ಘಾಟನೆ: ಸಿ.ಎಚ್. ಪ್ರತಾಪ್ ರೆಡ್ಡಿ, ಅತಿಥಿ: ಎಸ್.ಎನ್. ಸಿದ್ದರಾಮಪ್ಪ, ಉಪಸ್ಥಿತಿ: ಎಂ.ಎ. ಸಲೀಂ, ಎಂ.ಎನ್. ಅನುಚೇತ್, ಆಯೋಜನೆ: ಬೆಂಗಳೂರು ಸಂಚಾರ ಪೊಲೀಸ್, ಸಾರಿಗೆ ಇಲಾಖೆ, ಸ್ಥಳ: ಕಿಂಗ್ಸ್ ರಸ್ತೆ, ಕಬ್ಬನ್ ಉದ್ಯಾನ, ಬೆಳಿಗ್ಗೆ 10

40ನೇ ವಾರ್ಷಿಕೋತ್ಸವ ಪ್ರಯುಕ್ತ ಅಂಗಾಂಗ ದಾನಿಗಳಿಗೆ ಸನ್ಮಾನ: ಅತಿಥಿ: ಡಾ.ಕೆ. ಸುಧಾಕರ್, ಆಯೋಜನೆ ಹಾಗೂ ಸ್ಥಳ: ಬೆಂಗಳೂರು ಮೆಡಿಕಲ್ ಸರ್ವಿಸಸ್ ಟ್ರಸ್ಟ್, ಎಚ್‌ಎಎಲ್ 3ನೇ ಹಂತ, ಬೆಳಿಗ್ಗೆ 10.30

ಕರ್ನಾಟಕ ಚಲನಚಿತ್ರ ಪತ್ರಕರ್ತರ ಸಂಘ ಉದ್ಘಾಟನೆ: ಶುಭನುಡಿ: ವಿಜಯಾ, ಲಾಂಛನ ಬಿಡುಗಡೆ: ಅನಂತ್ ನಾಗ್, ಅಧ್ಯಕ್ಷತೆ: ಗಿರೀಶ್ ಕಾಸರವಳ್ಳಿ, ಸ್ಥಳ: ಎಸ್.ಆರ್.ವಿ. ಥಿಯೇಟರ್, ಮಲ್ಲೇಶ್ವರ, ಬೆಳಿಗ್ಗೆ 11



ಅನಂತ್ ನಾಗ್



ಗೊ.ರು. ಚನ್ನಬಸಪ್ಪ

ಶಿವಯೋಗಿ ಸಿದ್ಧರಾಮ ಜಯಂತಿ ಹಾಗೂ ರುದ್ರಯ್ಯ ಬಸವಲಿಂಗಯ್ಯ ಹಿರೇಮಠ ಇವರ ಸ್ಮರಣಾರ್ಥ ದತ್ತಿ ಉಪನ್ಯಾಸ: ಉದ್ಘಾಟನೆ: ಗೊ.ರು. ಚನ್ನಬಸಪ್ಪ, ಉಪನ್ಯಾಸ: ಪ್ರೊ.ಎಸ್.ಜಿ. ಸಿದ್ಧರಾಮಯ್ಯ, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ರಾಜರಾಜೇಶ್ವರಿನಗರ ಘಟಕ, ಸ್ಥಳ: ಪೂರ್ಣಚಂದ್ರ ತೇಜಸ್ವಿ ರಂಗಮಂದಿರ, ಅನ್ನಪೂರ್ಣೇಶ್ವರಿ ನಗರ, ಸಂಜೆ 5.30



ಟ್ಯೂಬ್‌ಲೈಟ್‌ಗಳನ್ನು ಧ್ವಂಸಗೊಳಿಸುತ್ತಾ ಹೊರಬಂದ ಸೈನಿಕರು

ಸೈನಿಕರು ಬೈಕ್ ಸಾಹಸ ಪ್ರದರ್ಶಿಸಿದರು

ಯೋಧರ ಸಾಹಸ ಆಕರ್ಷಕ ಪಥಸಂಚಲನ

ಸೇನಾ ಶಕ್ತಿ ಪ್ರದರ್ಶನ: ಶೌರ್ಯ ಪ್ರಶಸ್ತಿ, ಪದಕ ಪ್ರದಾನ



ಬೆಂಗಳೂರಿನ ಎಂಇಜಿ ಸೆಂಟರಿನಲ್ಲಿ ನಡೆದ ಸೇನಾ ದಿನದ ಪರೇಡ್‌ನಲ್ಲಿ ತುರ್ತು ರಕ್ಷಣೆಯ ಪ್ರಾತ್ಯಕ್ಷಿಕೆಯನ್ನು ನಡೆಸಿದ ಹೆಲಿಕಾಪ್ಟರ್ ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈನವಿರೇಳಿಸುವ ಯೋಧರ ಸಾಹಸ ಪ್ರದರ್ಶನ, ಆಕರ್ಷಕ ಪಥಸಂಚಲನ, ಡ್ರೋನ್ ಮತ್ತು ಹೆಲಿಕಾಪ್ಟರ್‌ಗಳ ಹಾರಾಟ, ಅತ್ಯಾಧುನಿಕ ಶಸ್ತ್ರಾಸ್ತ್ರಗಳ ಪ್ರದರ್ಶನದೊಂದಿಗೆ ಇಲ್ಲಿನ 'ಮದ್ರಾಸ್ ಎಂಜಿನಿಯರಿಂಗ್ ಗ್ರೂಪ್ ಆ್ಯಂಡ್ ಸೆಂಟರ್'ನಲ್ಲಿ(ಎಂಇಜಿ) ಸೇನಾ ದಿನವನ್ನು ಸಂಭ್ರಮದೊಂದಿಗೆ ಭಾನುವಾರ ಆಚರಿಸಲಾಯಿತು.

ಇದೇ ಪ್ರಥಮ ಬಾರಿ ನಗರದಲ್ಲಿ ನಡೆದ ಸೇನಾ ದಿನ ಕಾರ್ಯಕ್ರಮವು ಯೋಧರ ಸ್ಮರಣೆ ಮತ್ತು ವಿಶಿಷ್ಟ ಕಾರ್ಯಾಚರಣೆಗಳು ಹಾಗೂ ಸೇನೆಯಲ್ಲಿ ಅತ್ಯಾಧುನಿಕ ತಂತ್ರಜ್ಞಾನದ ಅಳವಡಿಕೆಯ ಪ್ರದರ್ಶನಕ್ಕೆ ಸಾಕ್ಷಿಯಾಯಿತು.

ಯುದ್ಧ ಸ್ಮಾರಕದಲ್ಲಿ ಸೇನಾ ಮುಖ್ಯಸ್ಥ ಜನರಲ್ ಮನೋಜ್ ಪಾಂಡೆ ಅವರು ಹುತಾತ್ಮ ಯೋಧರಿಗೆ ಪುಷ್ಪ ನಮನ ಸಲ್ಲಿಸಿದರು. ನಂತರ, ಅಸಾಧಾರಣ ಸಾಹಸ ಪ್ರದರ್ಶನ ಮತ್ತು ಸೇವೆ ಸಲ್ಲಿಸಿದ ಯೋಧರಿಗೆ ಮತ್ತು ಘಟಕಗಳಿಗೆ ಶೌರ್ಯ ಪ್ರಶಸ್ತಿ, ಸೇನಾ ಪದಕ ಹಾಗೂ ಪ್ರಶಂಸಾ ಪ್ರಮಾಣ ಪತ್ರಗಳನ್ನು ಪ್ರದಾನ ಮಾಡಿದರು. ಲಾನ್ಸ್ ನಾಯಕ್ ಗೋಪಾಲ್ ಸಿಂಗ್ ಬಡೋರಿಯಾ ಅವರಿಗೆ ಮರಣೋತ್ತರವಾಗಿ ಶೌರ್ಯ ಚಕ್ರ ಪ್ರದಾನ ಮಾಡಲಾಯಿತು. ಇವರ ತಂದೆ ಮುನಿಮ್ ಸಿಂಗ್ ಬಡೋರಿಯಾ ಅವರು ಸೇನಾ ಮುಖ್ಯಸ್ಥರಿಂದ ಪ್ರಶಸ್ತಿ ಸ್ವೀಕರಿಸಿದರು.

ಕರ್ನಾಟಕ ಮತ್ತು ಕೇರಳ ಉಪವಲಯದ ಜನರಲ್ ಆಫೀಸರ್ ಕಮಾಂಡಿಂಗ್ ಮೇಜರ್ ಜನರಲ್ ರವಿ ಮುರುಗನ್ ನೇತೃತ್ವದಲ್ಲಿ ವಿವಿಧ ರೆಜಿಮೆಂಟ್‌ಗಳ ಯೋಧರಿಂದ ಆಕರ್ಷಕ ಪಥಸಂಚಲನ ನಡೆಯಿತು.

ರೆಜಿಮೆಂಟ್ ಆಫ್ ಆರ್ಟಿಲರಿ, ಮದ್ರಾಸ್ ರೆಜಿಮೆಂಟ್ ಸೆಂಟರ್, ಬಾಂಬೆ ಎಂಜಿನಿಯರಿಂಗ್ ಗ್ರೂಪ್ (ಬಾಂಬೆ ಸ್ಯಾಪರ್ಸ್), ಪ್ಯಾರಾಚೂಟ್ ರೆಜಿಮೆಂಟ್, ಮಹರ್ ರೆಜಿಮೆಂಟ್ ಯೋಧರು ಮತ್ತು ಆರ್ಮಿ ಸರ್ವಿಸ್ ಕೋರ್‌ನ ಅಶ್ವಾರೂಢ ಸವಾರರ ಪಥಸಂಚಲನವು ಮಿಲಿಟರಿ ಬ್ಯಾಂಡ್‌ಗಳೊಂದಿಗೆ ಆಕರ್ಷಕವಾಗಿ ನಡೆಯಿತು.

ಧ್ರುವ ಮತ್ತು ರುದ್ರ ಹೆಲಿಕಾಪ್ಟರ್‌ಗಳು ಹಾಗೂ ಸುಖೋಯಿ ಯುದ್ಧ ವಿಮಾನಗಳ ಹಾರಾಟ ಗಮನಸೆಳೆಯಿತು. ಇದೇ ಸಂದರ್ಭದಲ್ಲಿ, ರಾಷ್ಟ್ರ ಧ್ವಜ ಮತ್ತು ಸೇನಾ ಧ್ವಜ ಹೊಂದಿದ್ದ ಡ್ರೋನ್‌ಗಳ ಹಾರಾಟವೂ ಗಮನಸೆಳೆಯಿತು. 6ರಿಂದ 8 ಕೆ.ಜಿ. ತೂಕವನ್ನು ಕೊಂಡೊಯ್ಯುವ ಸಾಮರ್ಥ್ಯವನ್ನು ಈ ಡ್ರೋನ್‌ಗಳು ಹೊಂದಿವೆ. ಕೃಷಿಯಲ್ಲಿ ಬಳಸುವ ಡ್ರೋನ್‌ನಿಂದ ಪುಷ್ಪವೃಷ್ಟಿ ಮಾಡಲಾಯಿತು.

ಪ್ಯಾರಾಚೂಟ್ ರೆಜಿಮೆಂಟ್ ಯೋಧರು ಪ್ಯಾರಾಚೂಟ್‌ಗಳ ಮೂಲಕ ಗಗನದಿಂದ ಪರೇಡ್ ಮೈದಾನದಲ್ಲಿಳಿದು ಚಪ್ಪಾಳೆಗಿಟ್ಟಿಸಿದರು.

ಆರ್ಮಿ ಸರ್ವಿಸ್ ಕೋರ್ ಕ್ಯಾಪ್ಟನ್ ಅಭಿಜಿತ್ ಸಿಂಗ್ ನೇತೃತ್ವದಲ್ಲಿ 'ಟೊರ್ನಾಡೊ' ತಂಡದ ವಿವಿಧ ಕಸರತ್ತುಗಳು ಪ್ರೇಕ್ಷಕರ ಮೈಜುಮ್ಮೆನಿಸಿದವು. ಏಳು ಬುಲೆಟ್‌ಗಳಲ್ಲಿ 27 ಯೋಧರು, ವ್ಹೀಲಿ ಪ್ರದರ್ಶನ ಸೇರಿದಂತೆ ಹತ್ತಾರು ಸಾಹಸಗಳು ಗಮನಸೆಳೆದವು.







ಯುದ್ಧ ವಿಮಾನಗಳ ಕಸರತ್ತು, ಬೈಕ್ ಸಾಹಸಗಳನ್ನು ಸೇನಾ ಪಡೆಯ ಮುಖ್ಯಸ್ಥ ಜನರಲ್ ಮನೋಜ್ ಪಾಂಡೆ ಮತ್ತು ಇತರರು ನೋಡಿ ರೋಮಾಂಚನಗೊಂಡರು
—ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

ಸೇನಾ ದಿನದ ಮಹತ್ವ

ಭಾರತದಲ್ಲಿ ಕೊನೆಯದಾಗಿ ಕಾರ್ಯನಿರ್ವಹಿಸಿದ್ದ ಬ್ರಿಟಿಷ್ ಕಮಾಂಡರ್ ಇನ್ ಚೀಫ್ ಜನರಲ್ ಫ್ರಾನ್ಸಿಸ್ ರಾಯ್ ಬಚರ್ ಅವರಿಂದ ಭಾರತೀಯ ಸೇನೆಯ 'ಕಮಾಂಡರ್ ಇನ್ ಚೀಫ್' ಆಗಿ 1949ರ ಜನವರಿ 15ರಂದು ಲೆಫ್ಟಿನೆಂಟ್ ಜನರಲ್ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಅಧಿಕಾರ ಸ್ವೀಕರಿಸಿದ್ದರು. ಬ್ರಿಟಿಷರು ಸೇನೆಯ ಅಧಿಕಾರವನ್ನು ಹಸ್ತಾಂತರಿಸಿದ ಈ ಐತಿಹಾಸಿಕ ದಿನವನ್ನು ಸೇನಾ ದಿನ ಎಂದು ಆಚರಿಸಲಾಗುತ್ತಿದೆ.



ಸೈನಿಕರು ಪ್ಯಾರಾಚೂಟ್ ಸಾಹಸ ಪ್ರದರ್ಶಿಸಿದರು

ಶತ್ರುಗಳನ್ನು ಸದೆ ಬಡಿದ ಯೋಧರು!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ಎಎಸ್‌ಸಿ ಕೇಂದ್ರದ ಮೈದಾನದಲ್ಲೂ ಭಾನುವಾರ ನಡೆದ ಸೇನಾ ದಿನಾಚರಣೆಯಲ್ಲಿ ಭಾರತೀಯ ಸೇನೆಯ ಶಕ್ತಿ ಅನಾವರಣಗೊಂಡಿತು.

ಎಂಇಜಿ ಕೇಂದ್ರದಲ್ಲಿ ಸೇನಾ ದಿನದ ಕಾರ್ಯಕ್ರಮದ ನಂತರ, ಸೇನೆಯ ಶೌರ್ಯ ಮತ್ತು ಸಾಹಸಮಯ ಪ್ರದರ್ಶನಗಳು ನಗರದ ಎಎಸ್‌ಸಿ ಕೇಂದ್ರದಲ್ಲಿ ನಡೆದವು.

ಕಾರ್ಯಕ್ರಮದ ಆರಂಭದಲ್ಲಿ ಅಶ್ವಾರೂಢ ಯೋಧರಿಂದ ಸಾಹಸ ಪ್ರದರ್ಶನ ನಡೆದವು. ಬಳಿಕ ಅತ್ಯಾಧುನಿಕ ಲಘು ಹೆಲಿಕಾಪ್ಟರ್, ಸೇನಾ ವೈಮಾನಿಕ ಹೆಲಿಕಾಪ್ಟರ್‌ಗಳು ಮತ್ತು ಸೇನೆಯ ಸಾಹಸ ವಿಭಾಗದ ಮೈಕ್ರೊಲೈಟ್ ಏರ್‌ಕ್ರಾಫ್ಟ್‌ಗಳ ಆಕರ್ಷಕ ಹಾರಾಟಕ್ಕೆ ಮೈದಾನ ಸಾಕ್ಷಿಯಾಯಿತು.

ಟೆಂಟ್ ಪೆಗ್ಗಿಂಗ್ ಮತ್ತು ಸಿಕ್ಸ್ ಬಾರ್ ಜಂಪಿಂಗ್ (ಆರು ಅಡೆತಡೆಗಳನ್ನು ಜಂಪ್ ಮಾಡುವುದು) ಸಾಹಸ ಚಟುವಟಿಕೆಗಳ ಪ್ರದರ್ಶನವೂ ನಡೆಯಿತು. ಯುದ್ಧ ಪ್ರದರ್ಶನ ಮತ್ತು ಮಿಲಿಟರಿಯ ಕೆಚ್ಚೆದೆಯ ಯೋಧರ ವಿಶೇಷ ತಂಡಗಳ ಕಾರ್ಯಾಚರಣೆಗಳು ಸೇರಿದ್ದವು. ಸಮರ ಕಲೆಗಳ ಪ್ರದರ್ಶಿಸಲಾಯಿತು. ಪ್ಯಾರಾ ತಂಡಗಳ 'ಸ್ಕೈಡೈವಿಂಗ್' ರೋಮಾಂಚನಗೊಳಿಸಿತು.

ಸ್ವದೇಶಿ ಯುದ್ಧ ಹೆಲಿಕಾಪ್ಟರ್ ರುದ್ರದಿಂದ ಜಿಗಿದು ಯೋಧರು ವೈರಿಗಳನ್ನು ಸದೆ ಬಡಿಯುವ ಸಾಹಸ ಮನಮೋಹಕವಾಗಿತ್ತು. ಎಎಸ್‌ಸಿ ಯೋಧರ 'ಟೊರ್ನಾಡೋಸ್' ತಂಡದ ಕೌಶಲ ಪ್ರೇಕ್ಷಕರಿಗೆ ರಸದೌತಣ ನೀಡಿತು. ಟೆಕ್ವಾಂಡೊ ಪ್ರದರ್ಶನ ತಂಡದ ಸಾಹಸಗಳು ಎಲ್ಲರನ್ನೂ ಆಕರ್ಷಿಸಿದವು.



ಸೇನಾ ಯೋಧರು ವೈರಿಗಳನ್ನು ಸದೆಬಡಿಯುವ ಸಾಹಸ ಪ್ರಾತ್ಯಕ್ಷಿಕೆ ಪ್ರದರ್ಶಿಸಿದರು

ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ ಪ್ರಶ್ನೆ

'ಗಾಂಧಿ ಹಂತಕರು ದೇಶಪ್ರೇಮಿಗಳೇ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಿಂದೂ ಮಹಾ ಸಭಾದವರು ಗಾಂಧಿಯನ್ನು ಕೊಂದರು. ಹಂತಕರನ್ನು ಇಂದು ದೇಶಪ್ರೇಮಿಗಳು ಎಂದು ಬಿಂಬಿಸಲಾಗುತ್ತಿದೆ. ವಿಧಾನಸೌಧದಲ್ಲಿ ಅವರ ಭಾವಚಿತ್ರಗಳನ್ನು ಹಾಕುವ ಮಟ್ಟಕ್ಕೆ ಸರ್ಕಾರ ಹೋಗಿದೆ. ಇದು ಅತ್ಯಂತ ನೀಚತನದ ರಾಜಕಾರಣ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಹೇಳಿದರು.

ಮಹಾತ್ಮ ಗಾಂಧೀಜಿ ಅವರ ಮಾತು, ಬರಹ, ಚಿಂತನೆ ಕುರಿತ, ನಟರಾಜ್ ಹುಳಿಯಾರ್ ಸಂಪಾದಿತ 'ಎಲ್ಲರ ಗಾಂಧೀಜಿ' ಪುಸ್ತಕ ಬಿಡುಗಡೆ ಮಾಡಿ ಅವರು ಮಾತನಾಡಿದರು.


'ಸರ್ಕಾರದ ತಪ್ಪುಗಳ ಬಗ್ಗೆ ಧ್ವನಿ ಎತ್ತಿದರೆ ದೇಶದ್ರೋಹದ ಹಣೆಪಟ್ಟಿ ಕಟ್ಟಲಾಗುತ್ತಿದೆ. ಮೊಕದ್ದಮೆಗಳನ್ನು ದಾಖಲಿಸಿ ಜೈಲಿಗೆ ಕಳುಹಿಸಲಾಗುತ್ತಿದೆ. ಇಂತಹ ಮನಃಸ್ಥಿತಿಯಿಂದ ಹೊರ ಬರಲು ಗಾಂಧಿ, ಬುದ್ಧ, ಬಸವ ಮತ್ತು ಅಂಬೇಡ್ಕರ್ ಚಿಂತನೆಗಳೇ ಪರಿಹಾರ ಮಾರ್ಗಗಳು' ಎಂದು ಪ್ರತಿಪಾದಿಸಿದರು.

'ಸಂವಿಧಾನ ಜಾರಿಗೆ ಬಂದ ದಿನವೇ ಆರ್‌ಎಸ್‌ಎಸ್ ಅದನ್ನು ವಿರೋಧಿಸಿತ್ತು. ಮನುಸ್ಮೃತಿ ಮೇಲೆ ನಂಬಿಕೆ ಇಟ್ಟಿರುವವರು ಅಂಬೇಡ್ಕರ್ ನೀಡಿರುವ ಸಂವಿಧಾನಕ್ಕೆ ಗೌರವ ಕೊಡಲು ಸಾಧ್ಯವೇ ಇಲ್ಲ. ಆದ್ದರಿಂದಲೇ ಈಗ ಆಡಳಿತ ನಡೆಸುವವರು ಸಂವಿಧಾನಕ್ಕೆ ಬೆಲೆ ಇಲ್ಲದಂತೆ ಮಾಡಿದ್ದಾರೆ' ಎಂದರು.

'ದೇಶದಲ್ಲಿ ಭ್ರಾತೃತ್ವ ಇರಬೇಕು. ಹಿಂದೂ-ಮುಸ್ಲಿಮರು ಒಂದೇ ತಾಯಿ ಮಕ್ಕಳಂತೆ ಬದುಕಬೇಕು ಎಂದು ಹೇಳಿದ್ದೆ ಗಾಂಧೀಜಿ ಅವರ ತಪ್ಪೇ' ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

'ಗಾಂಧಿ ಆದರ್ಶಗಳನ್ನು ಮರೆತರೆ ದೇಶವನ್ನು ಸರಿದಾರಿಯಲ್ಲಿ ಕೊಂಡೊಯ್ಯುವುದು ಕಷ್ಟ. ಅವರ ಚಿಂತನೆ, ಬರಹ ಮತ್ತು ಭಾಷಣಗಳು ಎಂದೆಂದಿಗೂ ಪ್ರಸ್ತುತ. ಅಧಿಕಾರದಲ್ಲಿ ಇರುವವರು ಇವರ ಚಿಂತನೆಗಳನ್ನು ಅರಿತು ನಡೆದರೆ ಆರೋಗ್ಯಕರ ಸಮಾಜ ನಿರ್ಮಾಣ ಸಾಧ್ಯ' ಎಂದು ಅವರು ಹೇಳಿದರು.

ಹಿರಿಯ ವಕೀಲ ಪ್ರೊ.ರವಿವರ್ಮ ಕುಮಾರ್, ಲೇಖಕ ನಟರಾಜ್ ಹುಳಿಯಾರ್ ಮಾತನಾಡಿದರು.



'ಎಲ್ಲರ ಗಾಂಧೀಜಿ' ಪುಸ್ತಕವನ್ನು ಸಿದ್ದರಾಮಯ್ಯ ಬಿಡುಗಡೆ ಮಾಡಿದರು. ನಟರಾಜ್ ಹುಳಿಯಾರ್, ಪ್ರೊ. ರವಿವರ್ಮ ಕುಮಾರ್, ಕೆ.ಮರುಳಸಿದ್ಧಪ್ಪ ಇದ್ದರು

'ಗಾಂಧೀಜಿಗಿಂತ ದೊಡ್ಡ ರಾಮಭಕ್ತರಿಲ್ಲ'


'ಗಾಂಧೀಜಿ ಅವರಿಗಿಂತ ದೊಡ್ಡ ರಾಮಭಕ್ತ ಯಾರೂ ಇಲ್ಲ. ಆದರೆ, ಇಂದು ಡೋಂಗಿ ರಾಮಭಕ್ತರದ್ದೆ ಕಾಲ' ಎಂದು ಸಾಹಿತಿ ಕೆ.ಮರಳುಸಿದ್ಧಪ್ಪ ಬೇಸರ ವ್ಯಕ್ತಪಡಿಸಿದರು.

ಗಾಂಧೀಜಿ 20ನೇ ಶತಮಾನದ ವಿಸ್ಮಯ, ಅವರಿಗೆ ಹೋಲಿಕೆ ಮಾಡುವ ಮತ್ತೊಂದು ವ್ಯಕ್ತಿತ್ವ ಇಲ್ಲ. ಪ್ರದರ್ಶನ ಪ್ರಿಯ ರಾಮಭಕ್ತರು ಈಗ ಕೋಟ್ಯಂತರ ಜನ ಇದ್ದಾರೆ. ರಾಮನನ್ನು ಸಂಪೂರ್ಣ ಅಪವ್ಯಾಖ್ಯಾನಗೊಳಿಸಿ ದೇಶವನ್ನು ಬೇರೆ ದಿಕ್ಕಿಗೆ ಕೊಂಡೊಯ್ಯುತ್ತಿದ್ದಾರೆ ಎಂದರು.

ಗಾಂಧಿ ಬರಹಗಳನ್ನು ಮತ್ತೆ ಮತ್ತೆ ಓದುವ ಮೂಲಕ ಪ್ರಸ್ತುತಗೊಳಿಸುವುದೇ ನಿಜವಾದ ದೇಶಭಕ್ತಿ. ಗಾಂಧಿಯನ್ನು ಜನ ಸ್ವೀಕಾರ ಮಾಡುತ್ತಿದ್ದಾರೆ ಎಂಬುದಕ್ಕೆ ನಟರಾಜ್ ಹುಳಿಯರ್ ಅವರ 'ಎಲ್ಲರ ಗಾಂಧೀಜಿ' ಪುಸ್ತಕ ಒಂದೇ ತಿಂಗಳಲ್ಲಿ ಮರುಮುದ್ರಣ ಆಗಿರುವುದೇ ಸಾಕ್ಷಿ ಎಂದು ಹೇಳಿದರು.

ಬಿಡುಗಡೆಯಾದ ಪುಸ್ತಕ

ಪುಸ್ತಕ: ಎಲ್ಲರ ಗಾಂಧೀಜಿ
ಲೇಖಕರು: ನಟರಾಜ್ ಹುಳಿಯಾರ್
ಪುಟ: 386
ಬೆಲೆ: ₹300
ಪ್ರಕಾಶಕರು: ಪಲ್ಲವ ಪ್ರಕಾಶನ



ಗವಿಪುರದ ಶಿವಲಿಂಗಕ್ಕೆ 'ಬೆಳಕಿನ ತಿಲಕ'

ಪ್ರಜಾವಾಣಿ ವಾರ್ತೆ



ಬೆಂಗಳೂರು: ಮಕರ ಸಂಕ್ರಾಂತಿಯ ದಿನವಾದ ಭಾನುವಾರ ಸೂರ್ಯ ತನ್ನ ಪಥ ಬದಲಿಸುವ ಸಂದರ್ಭದಲ್ಲಿ ಭಾಸ್ಕರನ ರಶ್ಮಿ ಗವಿಪುರದಲ್ಲಿರುವ ಗವಿಗಂಗಾಧರೇಶ್ವರ ದೇಗುಲದ ಶಿವಲಿಂಗವನ್ನು 3 ನಿಮಿಷ 12 ಸೆಕೆಂಡ್‌ಗಳಷ್ಟು ಸ್ಪರ್ಶಿಸಿತು. ಈ ಕ್ಷಣಕ್ಕೆ ಸಾವಿರಾರು ಭಕ್ತಾದಿಗಳು ಸಾಕ್ಷಿಯಾದರು. ದೇಗುಲದ ಬಲಭಾಗದ ಕಿಂಡಿಯಿಂದ ಸಂಜೆ 5.20ರ ವೇಳೆಗೆ ಸೂರ್ಯರಶ್ಮಿ ಪ್ರವೇಶಿಸಿತು. ಮೊದಲು ಗವಿಗಂಗಾಧರೇಶ್ವರ ದೇವರ ಪಾದ ಸ್ಪರ್ಶಿಸಿತು. ಬಳಿಕ ನಂದಿ ವಿಗ್ರಹದ ಮೂಲಕ ಹಾದುಹೋದ ಸೂರ್ಯಕಿರಣಗಳು, ಇಡೀ ಶಿವಲಿಂಗವನ್ನು ಆವರಿಸಿದವು. ಈ ಅವಧಿಯಲ್ಲಿ ದೇವರಿಗೆ ನಿರಂತರವಾಗಿ ಅಭಿಷೇಕ ನಡೆಸಲಾಯಿತು.

ಸೂರ್ಯರಶ್ಮಿ ದೇವರನ್ನು ಸ್ಪರ್ಶಿಸಿ ಮರೆಯಾದ ನಂತರ ಮತ್ತೊಮ್ಮೆ ದೇವರಿಗೆ ಅಭಿಷೇಕ ಮಾಡಿ, ಪೂಜೆ ನಡೆಸಲಾಯಿತು. ಸೂರ್ಯರಶ್ಮಿ ಶಿವಲಿಂಗವನ್ನು ಸ್ಪರ್ಶಿಸುವ ಅವಧಿಯಲ್ಲಿ ಭಕ್ತರಿಗೆ ಪ್ರವೇಶ ನಿರ್ಬಂಧಿಸಲಾಗಿತ್ತು. ದೇವಾಲಯದ ಹೊರಗಡೆ ವಿಶೇಷ ಎಲ್‌ಇಡಿ ಪರದೆಯಲ್ಲಿ ವೀಕ್ಷಣೆಗೆ ಅವಕಾಶ ಮಾಡಿಕೊಡಲಾಗಿತ್ತು. ಸೂರ್ಯರಶ್ಮಿ ಶಿವಲಿಂಗ ಸ್ಪರ್ಶಿಸಿ ಮರೆಯಾದ ಬಳಿಕ ಗಂಗಾಜಲವನ್ನು ಪ್ರೋಕ್ಷಣೆ ಮಾಡಿ, ದೇವರಿಗೆ ವಿಶೇಷ ಅಲಂಕಾರ ಮಾಡಲಾಯಿತು. ಬಳಿಕ ಭಕ್ತರಿಗೆ ದರ್ಶನಕ್ಕೆ ಅವಕಾಶ ಕಲ್ಪಿಸಲಾಯಿತು.


20 ಸಾವಿರಕ್ಕೂ ಹೆಚ್ಚು ಭಕ್ತರು: ನಗರದ ನಾನಾ ಭಾಗಗಳಿಂದ 20 ಸಾವಿರಕ್ಕೂ ಹೆಚ್ಚು ಭಕ್ತರು ಬಂದಿದ್ದರು. ಸೂರ್ಯನ ಕಿರಣಗಳು ಶಿವಲಿಂಗದ ಮೇಲೆ ಬೀಳುವಾಗ ಶಿವನಾಮ ಪಠಿಸಿದರು. ಬಳಿಕ ಸರತಿಸಾಲಿನಲ್ಲಿ ನಿಂತು, ದೇವರ ದರ್ಶನ ಪಡೆದರು.

ಸಂಕ್ರಾಂತಿ ಹಬ್ಬದ ಪ್ರಯುಕ್ತ ಭಾನುವಾರ ಮುಂಜಾನೆಯೇ ಗವಿಗಂಗಾಧರೇಶ್ವರ ದೇವಾಲಯದಲ್ಲಿ ಭಕ್ತರ ಸಮೂಹ ಹೆಚ್ಚಿನ ಸಂಖ್ಯೆಯಲ್ಲಿ ಬಂದಿತ್ತು. ಜನರು ಸರದಿ ಸಾಲಿನಲ್ಲಿ ನಿಂತು, ಗಂಗಾಧರೇಶ್ವರನ ದರ್ಶನ ಪಡೆದರು. ಮುಂಜಾನೆ 5ರಿಂದ ಮಧ್ಯಾಹ್ನ 12ರವರೆಗೆ ಭಕ್ತರಿಗೆ ಸುಗಮ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿತ್ತು.

'ಈ ವರ್ಷ ಯಾವುದೇ ತೊಂದರೆಯಿಲ್ಲ'

'ಕಳೆದ ವರ್ಷ 18 ಸೆಕೆಂಡುಗಳು ಮಾತ್ರ ಸೂರ್ಯಾಭಿಷೇಕ ನಡೆದಿತ್ತು. ಪೂರ್ಣ ಪ್ರಮಾಣದ ಸೂರ್ಯ ನಮಸ್ಕಾರ ಸಾಕಾರವಾಗಿರಲಿಲ್ಲ. ಇದರಿಂದಾಗಿ ಸಾಕಷ್ಟು ತೊಂದರೆಗಳು ಎದುರಾಗಿದ್ದವು. ಈ ವರ್ಷ 3 ನಿಮಿಷ 12ಸೆಕೆಂಡ್‌ಗಳಷ್ಟು ಸೂರ್ಯ ರಶ್ಮಿ ಸ್ಪರ್ಶದಿಂದ ಪೂಜೆ ಸಾಕಾರಗೊಂಡಿದೆ. ಆದ್ದರಿಂದ, ಈ ವರ್ಷ ಯಾವುದೇ ತೊಂದರೆಯಾಗುವುದಿಲ್ಲ' ಎಂದು ಗವಿಗಂಗಾಧರೇಶ್ವರ ದೇಗುಲದ ಪ್ರಧಾನ ಅರ್ಚಕ ಸೋಮಸುಂದರ ದೀಕ್ಷಿತ್ ಹೇಳಿದರು.





ಗವಿಗಂಗಾಧರೇಶ್ವರ ದೇವಸ್ಥಾನದ ಶಿವಲಿಂಗದ ಮೇಲೆ ಸೂರ್ಯರಶ್ಮಿ ಬೀಳುವ ಸಮಯದಲ್ಲಿ ಹಾಲಿನ ಅಭಿಷೇಕ ನೆರವೇರಿಸಲಾಯಿತು (ಎಡಚಿತ್ರ). ಭಕ್ತಾದಿಗಳು ದೇವರ ದರ್ಶನ ಪಡೆದುಕೊಂಡರು – ಪ್ರಜಾವಾಣಿ ಚಿತ್ರ



ಬ್ಯಾಟರಾಯನಪುರ ಕ್ಷೇತ್ರದ ಕೋಗಿಲು ಗ್ರಾಮದಲ್ಲಿ ಸಂಕ್ರಾಂತಿ ಹಬ್ಬದ ಪ್ರಯುಕ್ತ ವೇಣುಗೋಪಾಲಸ್ವಾಮಿ ಭಜನಾ ಮಂಡಳಿ ವತಿಯಿಂದ ಭಜನಾ ಮೆರವಣಿಗೆ ಕಾರ್ಯಕ್ರಮ ನಡೆಯಿತು

ಭಜನಾ ಮೆರವಣಿಗೆ

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರದ ಕೋಗಿಲು ಗ್ರಾಮದಲ್ಲಿ ಸಂಕ್ರಾಂತಿ ಅಂಗವಾಗಿ ವೇಣುಗೋಪಾಲಸ್ವಾಮಿ ಭಜನಾ ಮಂಡಳಿಯಿಂದ ಭಜನಾ ಮೆರವಣಿಗೆ ನಡೆಯಿತು.

ಭಜನಾ ಮಂಡಳಿಯ ಸದಸ್ಯರು, ಗರುಡುಕಂಬವನ್ನು ಹಿಡಿದು, ದೇವರ ನಾಮಗಳನ್ನು ಹಾಡುತ್ತ, ಕೋಗಿಲು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು.

ನಂತರ, ಪೂಜಮ್ಮ ದೇವಾಲಯ ದಲ್ಲಿ ಪೂಜೆ ನೆರವೇರಿಸಿ, ವೇಣು-ಗೋಪಾಲಸ್ವಾಮಿ ದೇವಾಲಯದಲ್ಲಿ ಮೆರವಣಿಗೆ ಕೊನೆಗೊಂಡಿತು. ಮುಖಂಡ ರಾದ ಕೆ.ಎ. ಮುನೀಂದ್ರಕುಮಾರ್, ಕೆ.ಎನ್. ನಾಗೇಂದ್ರಕುಮಾರ್, ಅಶ್ವತ್ಥ್ ಗುರೂಜಿ, ಕೋ.ಪಿ.ಸುಬ್ಬರಾಯಪ್ಪ, ಗಂಗಾಧರ್, ಗೋಪಾಲ್ ಇದ್ದರು.



ನಗರದ ವೈಯಾಲಿಕಾವಲ್‌ನಲ್ಲಿ ಭಾನುವಾರ ಮಹಿಳೆಯರು ಪೊಂಗಲ್ ತಯಾರಿಕೆಯಲ್ಲಿ ತೊಡಗಿದ್ದರು ಪ್ರಜಾವಾಣಿ ಚಿತ್ರ



ಕೆ.ಆರ್.ಪುರದ ಸಿಲಿಕಾನ್ ಸಿಟಿ ಕಾಲೇಜಿನಲ್ಲಿ ಸುಗ್ಗಿ ಸಂಭ್ರಮ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಗ್ರಾಮೀಣ ಸೊಗಡು ಪರಿಚಯಿಸುವ ಗುಡಿಸಲು ನಿರ್ಮಿಸಿದ್ದರು

ಸಂಭ್ರಮದಿಂದ ಸಂಕ್ರಾಂತಿ ಆಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವರ್ಷದ ಪ್ರಥಮ ಹಬ್ಬವಾದ ಸಂಕ್ರಾಂತಿಯನ್ನು ನಗರದೆಲ್ಲೆಡೆ ಸಂಭ್ರಮ ಸಡಗರದಿಂದ ಭಾನುವಾರ ಆಚರಿಸಲಾಯಿತು.

ಚಿಣ್ಣರು, ಯುವತಿಯರು, ಮಹಿಳೆಯರು ಹೊಸ ಉಡುಗೆಗಳನ್ನು ತೊಟ್ಟು, ಸಕ್ಕರೆ ಅಚ್ಚು, ಎಳ್ಳು, ಬೆಲ್ಲದ ಪೊಟ್ಟಣ, ಕಬ್ಬಿನ ಜಲ್ಲೆಯನ್ನು ತಮ್ಮ ಸ್ನೇಹಿತರು ಹಾಗೂ ಬಂಧುಗಳಿಗೆ ಹಂಚಿ ಸಂಭ್ರಮಿಸಿದರು. ಮನೆ ಮನೆಗಳೂ ತಳಿರು ತೋರಣಗಳಿಂದ ಸಿಂಗಾರ-ಗೊಂಡಿದ್ದವು.

ನಗರದ ಮೈದಾನಗಳಲ್ಲಿ ರಾಸುಗಳಿಗೆ ಕಿಚ್ಚು ಹಾಯಿಸುವ ಸ್ಪರ್ಧೆ, ರಂಗೋಲಿ ಸ್ಪರ್ಧೆ, ಧಾನ್ಯಗಳ ರಾಶಿ ಪೂಜೆಗಳು ಹಬ್ಬದ ಸಂಭ್ರಮವನ್ನು ಹೆಚ್ಚಿಸಿದವು. ಮನೆಗಳ ಮುಂಭಾಗ ಬಣ್ಣ ಬಣ್ಣದ ರಂಗೋಲಿಗಳು ರಾರಾಜಿಸಿದವು. ಬಹುತೇಕರು ಮನೆಯಲ್ಲಿಯೇ ಪೊಂಗಲ್ ತಯಾರಿಸಿ, ಕುಟುಂಬದ ಸದಸ್ಯರು ಒಟ್ಟಾಗಿ ಸವಿದರು.

ಮೈಸೂರು ರಸ್ತೆಯ ಗಾಳಿ ಆಂಜನೇಯ ದೇವಸ್ಥಾನ, ಮಲ್ಲೇಶ್ವರದ ಲಕ್ಷ್ಮಿ ನರಸಿಂಹ ದೇವಸ್ಥಾನ, ಬಸವನಗುಡಿಯ ದೊಡ್ಡ ಬಸವಣ್ಣ ದೇವಸ್ಥಾನ, ಕೆ.ಆರ್.ಮಾರುಕಟ್ಟೆಯ ಕೋಟೆ ಪ್ರಸನ್ನ ವೆಂಕಟರಮಣ ದೇವಸ್ಥಾನ, ಹಲಸೂರಿನ ಸೋಮೇಶ್ವರ ದೇವಸ್ಥಾನ, ಯಶವಂತಪುರ ಸರ್ಕಲ್‌ನ ಗಾಯತ್ರಿ ದೇವಸ್ಥಾನ, ಜೆ.ಪಿ. ನಗರದ ರಾಗಿಗುಡ್ಡ ಆಂಜನೇಯ ದೇವಸ್ಥಾನ, ಬನಶಂಕರಿಯ ದೇವಗಿರಿ ವೆಂಕಟೇಶ್ವರ ದೇವಾಲಯ ಸೇರಿ ವಿವಿಧ ದೇವಸ್ಥಾನದಲ್ಲಿ ವಿಶೇಷ ಪೂಜೆಗಳು ನಡೆದವು.

ದೇವರ ದರ್ಶನಕ್ಕೆ ಸರದಿ ಸಾಲಿನಲ್ಲಿ ಜನರು ನಿಂತಿರುವ ದೃಶ್ಯ ಎಲ್ಲೆಡೆ ಸಾಮಾನ್ಯವಾಗಿತ್ತು. ಭಕ್ತರಿಗೆ ಪೊಂಗಲ್ ಮತ್ತು ಕೋಸಂಬರಿ ಪ್ರಸಾದ ನೀಡಲಾಯಿತು. ಹಬ್ಬದ ಪ್ರಯುಕ್ತ ಕೆ.ಆರ್.ಮಾರುಕಟ್ಟೆ, ಜಯನಗರ, ಮಲ್ಲೇಶ್ವರ ಮಾರುಕಟ್ಟೆಗಳಲ್ಲಿ ಕಬ್ಬಿನ ಜಲ್ಲೆ, ಹೂವು, ಹಣ್ಣುಗಳಿಗೆ ವಿಪರೀತ ಬೇಡಿಕೆಯಿತ್ತು.



ರಾಜರಾಜೇಶ್ವರಿ ನಗರ, ಮಲ್ಲೇಶ್ವರ ಆಟದ ಮೈದಾನ, ಮತ್ತಿಕೆರೆ, ಯಶವಂತಪುರ, ಯಲಹಂಕ ಉಪನಗರ, ಪದ್ಮನಾಭ-ನಗರಗಳಲ್ಲಿ ವಿವಿಧ ಸಂಸ್ಥೆಗಳು ಬೆಂಕಿಯ ಕಿಚ್ಚಿನ ಮೇಲೆ ದನಗಳನ್ನು ಹಾಯಿಸುವ ಆಚರಣೆ ನಡೆಸಿದವು.

ಹೊಸಕೆರೆಹಳ್ಳಿ ಸುತ್ತಮುತ್ತ ಸಂಕ್ರಾಂತಿಯನ್ನು ಕಾಟಮರಾಯ ಹಬ್ಬವೆಂದು ಆಚರಿಸಲಾಯಿತು. ಅಲ್ಲಿನ ಕಾಟಮರಾಯ ಮೂರ್ತಿ ಸಮೀಪ ಸ್ಥಳೀಯ ವಿವಿಧ ಸಂಘಗಳು ರಾಸುವಿನ ಕಿಚ್ಚು ಹಾಯಿಸಿದವು. ಬನಶಂಕರಿ 3ನೇ ಹಂತದ ಭುವನೇಶ್ವರಿ ನಗರದ ಮಹಾಲಕ್ಷ್ಮೀ ದೇವಸ್ಥಾನದಲ್ಲಿ ಚಿತ್ರಕಲಾ ಸ್ಪರ್ಧೆ, ರಂಗೋಲಿ ಸ್ಪರ್ಧೆ, ಜನಪದ ಗಾಯನ ಹಾಗೂ ಮೊಸರು ಗಡಿಗೆ ಒಡೆಯುವ ಸ್ಪರ್ಧೆಗಳು ನಡೆದವು.



ಸಂಕ್ರಾಂತಿ ಹಬ್ಬದ ಪ್ರಯುಕ್ತ ಕನಕನಪಾಳ್ಯದಲ್ಲಿ ರಾಸುಗಳಿಗೆ ಕಿಚ್ಚು ಹಾಯಿಸಲಾಯಿತು



ನಗರದ ಮಹಾಲಕ್ಷ್ಮಿಲೇಔಟ್ ವಿಧಾನಸಭಾ ಕ್ಷೇತ್ರದ ನಂದಿನಿಲೇಔಟ್ ವಾರ್ಡ್‌ನ ನವರಾತ್ರಿ ವೃತ್ತದಲ್ಲಿ ಸಂಕ್ರಾಂತಿ ಹಬ್ಬದ ಅಂಗವಾಗಿ ರಾಸುಗಳನ್ನು ಕಿಚ್ಚು ಹಾಯಿಸಲಾಯಿತು

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.


ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ:
peoplesproblem@prajavani.co.in.
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.



'ನಿರ್ವಹಣೆಯಿಲ್ಲದ ಪಾದಚಾರಿ ಮೇಲ್ಸೇತುವೆ'

ಮೆಜೆಸ್ಟಿಕ್ ಬಸ್ ನಿಲ್ದಾಣ ಬಳಿ ಇರುವ ಪಾದಚಾರಿ ಮೇಲ್ಸೇತುವೆ ಸಂಪೂರ್ಣ ಹಾಳಾಗಿದೆ. ಇದರಿಂದ, ಪಾದಚಾರಿಗಳು ನಡೆದಾಡಲು ಪರದಾಡುವಂತಾಗಿದೆ. ಕೇಂದ್ರ ಸ್ಥಳದಲ್ಲಿಯೇ ಈ ರೀತಿ ಆಗಿದ್ದರೂ ಅಧಿಕಾರಿಗಳು ಕಣ್ಣು ಮುಚ್ಚಿ ಕುಳಿತಿರುವುದು ವಿಪರ್ಯಾಸ. ಮಾರ್ಗದುದ್ದಕ್ಕೂ ನೀರು ನಿಂತಿದೆ. ಇದರಿಂದ ಸಾಂಕ್ರಾಮಿಕ ರೋಗ ಹರಡುವ ಭೀತಿ ಎದುರಾಗಿದೆ. ಕಸ ಎಸೆಯುತ್ತಿರುವುದರಿಂದ ಮೂಗು ಮುಚ್ಚಿಕೊಂಡೇ ಸಾಗಬೇಕಾದ ಪರಿಸ್ಥಿತಿ ಇದೆ. ಆದ್ದರಿಂದ ಸಂಬಂಧ ಪಟ್ಟ ಅಧಿಕಾರಿಗಳು ನೀರು ಸರಾಗವಾಗಿ ಹೋಗಲು ಅನುವು ಮಾಡಿಕೊಟ್ಟು, ಸಮಸ್ಯೆ ನಿವಾರಿಸಬೇಕು.


ಮನೋಜ್, ಮಲ್ಲೇಶ್ವರ



'ರಸ್ತೆಯೇ ಕಸದ ತೊಟ್ಟಿ'

ಚಿಕ್ಕಪೇಟೆ ರಸ್ತೆಗಳು ಅಕ್ಷರಶಃ ಕಸದ ತೊಟ್ಟಿಯಂತಾಗಿವೆ. ರಸ್ತೆಯಲ್ಲಿ ನಡೆದಾಡಲೂ ಸಾಧ್ಯವಾಗದ ರೀತಿಯಲ್ಲಿ ಕಸ ಸುರಿಯಲಾಗುತ್ತಿದೆ. ಇವು ಕ್ರಮೇಣ ಕೊಳೆತು ದುರ್ನಾತ ಬೀರುತ್ತವೆ. ಇದರಿಂದ ರಸ್ತೆಯಲ್ಲಿ ಮೂಗು ಮುಚ್ಚಿಕೊಂಡೇ ಸಾಗುವ ಪರಿಸ್ಥಿತಿ ಇದೆ. ರಸ್ತೆಯಲ್ಲೆಲ್ಲ ತ್ಯಾಜ್ಯ ಹರಡಿ, ವಾಹನ ಸವಾರರು ಮತ್ತು ಪಾದಚಾರಿಗಳಿಗೆ ತೊಂದರೆಯಾಗುತ್ತಿದೆ. ಇಲ್ಲಿ ಕಸ ಹಾಕದಂತೆ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು.

ಮಂಜುನಾಥ್, ಸ್ಥಳೀಯ ನಿವಾಸಿ



'ಅವೈಜ್ಞಾನಿಕ ಕಾಮಗಾರಿ'

ಕೆಂಪಾಪುರದ ಚಿರಂಜೀವಿ ಲೇಔಟ್‌ನ ಮೂರನೇ ಮುಖ್ಯ ರಸ್ತೆಯಲ್ಲಿ ಇತ್ತೀಚೆಗೆ ಒಳಚರಂಡಿ ದುರಸ್ತಿ ಕಾಮಗಾರಿಯನ್ನು ಮಾಡಲಾಗಿದೆ. ಜಲಮಂಡಳಿ ಸಿಬ್ಬಂದಿಯು ಚರಂಡಿ ಮೇಲಿನ ಕಲ್ಲು ಹಾಸುಗಳನ್ನು ಸರಿಯಾಗಿ ಜೋಡಿಸಿಲ್ಲ. ಇದರಿಂದ ವಾಹನ ಸವಾರರಿಗೆ ಸಂಚಾರ ಸಂಕಟವನ್ನು ತಂದಿದೆ. ಅವೈಜ್ಞಾನಿಕ ಕಾಮಗಾರಿಗಳಿಂದ ಜನರು ಪ್ರತಿನಿತ್ಯ ಸಮಸ್ಯೆ ಎದುರಿಸುತ್ತಿದ್ದಾರೆ. ದ್ವಿಚಕ್ರ ವಾಹನಗಳ ಸವಾರಿ ಈ ರಸ್ತೆಯಲ್ಲಿ ಕಷ್ಟಕರವಾಗಿದ್ದು, ನಿಯಂತ್ರಣ ಕಳೆದುಕೊಂಡು ಬೀಳುವ ಸಾಧ್ಯತೆಯಿದೆ. ಸಂಬಂಧಪಟ್ಟ ಸ್ಥಳೀಯ ಅಧಿಕಾರಿಗಳು ಸೂಕ್ತ ರೀತಿಯಲ್ಲಿ ದುರಸ್ತಿ ಮಾಡಿ, ಸುಗಮ ಸಂಚಾರಕ್ಕೆ ಅವಕಾಶ ಮಾಡಿಕೊಡಬೇಕು.

ಶಿವಪ್ರಸಾದ್, ಸ್ಥಳೀಯ ನಿವಾಸಿ



'ನಿರ್ಮಾಣವಾಗದ ಚರಂಡಿ'

ವಿಶ್ವೇಶ್ವರಯ್ಯ ಬಡಾವಣೆಯ ಒಂದನೇ ಹಂತದ ರಸ್ತೆಯಲ್ಲಿ ಪ್ರತಿನಿತ್ಯ ನೂರಾರು ವಾಹನಗಳು, ಶಾಲಾ ಬಸ್ಸುಗಳು ಸಂಚರಿಸುತ್ತವೆ. ಈ ರಸ್ತೆಯ ಪಕ್ಕದಲ್ಲಿ ಚರಂಡಿ ನಿರ್ಮಿಸಲು ರಸ್ತೆ ಅಗೆದು ಆರು ತಿಂಗಳಾಗಿವೆ. ಈವರೆಗೂ ಚರಂಡಿ ನಿರ್ಮಾಣ ಕಾಮಗಾರಿ ಪೂರ್ಣಗೊಳಿಸಿಲ್ಲ. ಅಗೆದ ಮಣ್ಣನ್ನು ರಸ್ತೆಗೆ ಹಾಕಲಾಗಿದೆ. ಇದರಿಂದ ಸಂಚಾರ ಸಮಸ್ಯೆಯಾಗಿದೆ. ರಸ್ತೆ ದೂಳುಮಯ ಆಗುತ್ತಿದೆ. ಆದಷ್ಟು ಬೇಗ ಚರಂಡಿ ಕಾಮಗಾರಿ ಪೂರ್ಣಗೊಳಿಸಿ, ರಸ್ತೆಯ ಮೇಲಿನ ಮಣ್ಣನ್ನು ತೆರವುಗೊಳಿಸಬೇಕು.

ಸಿ.ಎನ್. ರಾಮಚಂದ್ರ, ವಿಶ್ವೇಶ್ವರಯ್ಯ ಬಡಾವಣೆ

ರಾಜಭವನದಲ್ಲಿ ಗೋವುಗಳಿಗೆ ಪೂಜೆ ಸಲ್ಲಿಕೆ

ಮಕರ ಸಂಕ್ರಾಂತಿ ಹಬ್ಬದ ಪ್ರಯುಕ್ತ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ರಾಜಭವನದಲ್ಲಿ ಗೋವುಗಳಿಗೆ ಪೂಜೆ ಸಲ್ಲಿಸಿದರು. ನಂತರ ಮಾತನಾಡಿದ ಅವರು, 'ನಾಡಿನ ಸಮಸ್ತ ಜನರಿಗೆ ಮಕರ ಸಂಕ್ರಾಂತಿ ಹಬ್ಬದ ಶುಭಾಶಯಗಳು. ದೇವರು ಆರೋಗ್ಯ, ಆಯಸ್ಸು ಮತ್ತು ಶಾಂತಿಯನ್ನು ನೀಡಿ ಕಾಪಾಡಲಿ' ಎಂದು ಹೇಳಿದರು.

ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಶಂಕರಪುರ ವಿಭಾಗದಿಂದ ಬನಶಂಕರಿಯ ಜೆಎಸ್‌ಎಸ್ ಶಾಲಾ ಮೈದಾನದಲ್ಲಿ ಸಂಕ್ರಾಂತಿ ಉತ್ಸವ ಹಾಗೂ ಆರೆಸ್ಸೆಸ್ ಪಥಸಂಚಲನ ಕಾರ್ಯಕ್ರಮ ನಡೆಸಲಾಯಿತು. ಕಂದಾಯ ಸಚಿವ ಆರ್. ಅಶೋಕ ಹಾಗೂ ಸಂಸದ ತೇಜಸ್ವಿಸೂರ್ಯ ಭಾಗವಹಿಸಿ, ಪಥಸಂಚಲನ ನಡೆಸಿದರು.



ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಗೋವುಗಳಿಗೆ ಪೂಜೆ ಸಲ್ಲಿಸಿದರು.



ದಾಸರಹಳ್ಳಿ ಕ್ಷೇತ್ರದಲ್ಲಿ ಸಂಕ್ರಾಂತಿ ಹಬ್ಬದ ಪ್ರಯುಕ್ತ ಕೆಪಿಸಿಸಿ ಮಹಿಳಾ ಪ್ರಧಾನ ಕಾರ್ಯದರ್ಶಿ ಗೀತಾ ಶಿವರಾಂ ಅವರು ಬಾಗಿನ ಉಡುಗೊರೆ ನೀಡಿದರು

ಸಂಕ್ರಾಂತಿ ಪ್ರಯುಕ್ತ 10,000 ಮನೆಗೆ ಬಾಗಿನ ಉಡುಗೊರೆ

ಪೀಣ್ಯ ದಾಸರಹಳ್ಳಿ: ಮಕರ ಸಂಕ್ರಾಂತಿ ಹಬ್ಬದ ಅಂಗವಾಗಿ ಕೆಪಿಸಿಸಿ ಮಹಿಳಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಗೀತಾ ಶಿವರಾಮ್ ಅವರು ಕ್ಷೇತ್ರದ ಹತ್ತು ಸಾವಿರಕ್ಕೂ ಹೆಚ್ಚು ಜನರಿಗೆ ಎಳ್ಳು ಬೆಲ್ಲದ ಜತೆಗೆ ಬಾಗಿನ ಉಡುಗೊರೆ ನೀಡಿದರು.

ಗೀತಾ ಮಾತನಾಡಿ, 'ದಾಸರಹಳ್ಳಿ ಕ್ಷೇತ್ರದಲ್ಲಿ ಕಾಂಗ್ರೆಸ್ ಗಟ್ಟಿಯಾಗಿ ಬೇರೂರಿದ್ದು ಅದನ್ನು ಹೆಮ್ಮರವಾಗಿ ಬೆಳೆಸುವ ಶಕ್ತಿ ನಮ್ಮ ಬೂತ್ ಮಟ್ಟದ ಕಾಂಗ್ರೆಸ್ ಕಾರ್ಯಕರ್ತರಿಗಿದೆ. ಇವರೇ ನಮ್ಮ ಪಕ್ಷದ ಮೂಲ ಜೀವಾಳ. ಅವರ ಸೇವೆಯನ್ನು ನೆನೆಯಲು ಹಾಗೂ ಅವರಿಗೆ ಶಕ್ತಿ ತುಂಬಲು ನಾವೆಲ್ಲರೂ ಅವರ ಜೊತೆಗಿದ್ದೇವೆ' ಎಂದು ಹೇಳಿದರು.

ಚೊಕ್ಕಸಂದ್ರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ್ ನಾಗಯ್ಯ, ಶಿವರಾಮ್, ಪುಟ್ಟರಾಜು, ಕೇಶವಾಚಾರಿ, ಮೂರ್ತಿ, ಪ್ರಕಾಶ್, ರೇವತಿ ಹಾಜರಿದ್ದರು.



ಉಲ್ಲಾಳು ವಾರ್ಡ್‌ನ ನಗೆಮನೆ ಆವರಣದಲ್ಲಿ ನಾಗರಿಕ ವೇದಿಕೆ ವತಿಯಿಂದ ಆಯೋಜಿಸಿದ್ದ 'ಮಕರ ಸಂಕ್ರಾಂತಿ ಸುಗ್ಗಿ ಸಂಭ್ರಮ'ದಲ್ಲಿ ಮುಖಂಡರಾದ ಮಾದಯ್ಯ, ಅಶೋಕ್ ರಾಮಸಂದ್ರ, ಅನಿಲ್ ಕುಮಾರ್, ಸತೀಶ್, ಪುಟ್ಟಸ್ವಾಮಿ ಇದ್ದರು

ಸೋಮವಾರ • ಜನವರಿ 16, 2023 ಪ್ರಜಾವಾಣಿ

ತುಮಕೂರು: ಎನ್‌ಎಚ್–544ಇ ವಿಸ್ತರಣೆಗೆ ಅಸ್ತು

ನವದೆಹಲಿ: 'ತುಮಕೂರು ಜಿಲ್ಲೆಯ ಶಿರಾ ವಲಯದಲ್ಲಿ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿ (ಎನ್‌ಎಚ್) 544ಇ ವಿಸ್ತರಣೆಗೆ ಅನುಮೋದನೆ ನೀಡಲಾಗಿದೆ' ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಭಾನುವಾರ ಹೇಳಿದ್ದಾರೆ.

'₹166.58 ಕೋಟಿ ವೆಚ್ಚದಲ್ಲಿ ಈ ಹೆದ್ದಾರಿಯನ್ನು ಎರಡು ಲೇನ್‌ಗಳಿಗೆ ವಿಸ್ತರಿಸಲಾಗುತ್ತದೆ. ಇದರಿಂದ ಕರ್ನಾಟಕ ಮತ್ತು ಆಂಧ್ರಪ್ರದೇಶ ನಡುವಣ ಅಂತರ ರಾಜ್ಯ ಸಂಪರ್ಕ ಇನ್ನಷ್ಟು ಸುಧಾರಣೆಯಾಗಲಿದೆ' ಎಂದು ಅವರು ಟ್ವೀಟ್ ಮಾಡಿದ್ದಾರೆ.

19ರಂದು ಜಮ್ಮು ತಲುಪಲಿರುವ 'ಜೋಡೊ' ಯಾತ್ರೆ

ಶ್ರೀನಗರ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ನೇತೃತ್ವದ ಭಾರತ್ ಜೋಡೊ ಯಾತ್ರೆಯು ಜನವರಿ 19ರಂದು ಜಮ್ಮು ಮತ್ತು ಕಾಶ್ಮೀರಕ್ಕೆ ತಲುಪಲಿದ್ದು, 30 ರಂದು ಶ್ರೀನಗರದಲ್ಲಿ ಸಮಾರೋಪಗೊಳ್ಳಲಿದೆ ಎಂದು ಕಾಂಗ್ರೆಸ್ ಮುಖಂಡೆ ರಜನಿ ಪಾಟೀಲ್ ಭಾನುವಾರ ತಿಳಿಸಿದ್ದಾರೆ.

ಪಾದಯಾತ್ರೆಗೆ ಎಲ್ಲಾ ರೀತಿಯ ಸಹಕಾರ ನೀಡುವುದಾಗಿ ಜಮ್ಮು ಮತ್ತು ಕಾಶ್ಮೀರದ ಆಡಳಿತ ಭರವಸೆ ನೀಡಿದೆ ಎಂದೂ ಅವರು ಹೇಳಿದ್ದಾರೆ.

ಪಂಜಾಬ್ –ಜಮ್ಮು ಗಡಿಯಲ್ಲಿರುವ ಲಖನ್‌ಪುರದಲ್ಲಿ ರಾಹುಲ್‌ಗಾಂಧಿ ಅವರನ್ನು ಸ್ವಾಗತಿಸಲಾಗುವುದು. ಬಳಿಕ ಕಥುವಾ, ಸಾಂಬಾ ದಾರಿಯಾಗಿ ಜಮ್ಮುವಿನ ಸತ್ವಾರಿ ಚೌಕ್‌ಗೆ ಯಾತ್ರೆ ತೆರಳಲಿದೆ. ಅಲ್ಲಿ ಸಾರ್ವಜನಿಕ ಸಭೆ ಹಮ್ಮಿಕೊಳ್ಳಲಾಗಿದೆ ಎಂದಿದ್ದಾರೆ.

ಅನಂತನಾಗ್‌ಗೆ ತೆರಳಿದ ಬಳಿಕ ಯಾತ್ರೆ ಶ್ರೀನಗರಕ್ಕೆ ತಲುಪಲಿದೆ ಎಂದೂ ವಿವರಿಸಿದ್ದಾರೆ.

ಹಗರಣದಲ್ಲಿ ಸಿಲುಕಿಸುವ ಯತ್ನ: ಸಿಸೋಡಿಯಾ

ನವದೆಹಲಿ (ಪಿಟಿಐ): 'ನನ್ನ ಮೇಲೆ ಹಗೆತನ ಸಾಧಿಸುತ್ತಿರುವ ಸಿಬಿಐ, ದೆಹಲಿ ಅಬಕಾರಿ ನೀತಿ ಹಗರಣದಲ್ಲಿ ಸಿಲುಕಿಸಲು ಪ್ರಯತ್ನಿಸುತ್ತಿದೆ' ಎಂದು ದೆಹಲಿ ಉಪ ಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಅವರು ಭಾನುವಾರ ದೂರಿದ್ದಾರೆ.

'ಸಿಬಿಐ ಅಧಿಕಾರಿಗಳು ನನಗೆ ಸೇರಿದ ಕಂಪ್ಯೂಟರ್ ಜಪ್ತಿ ಮಾಡಿದ್ದು, ಅದರಲ್ಲಿ ಸಂಗ್ರಹಿಸಿಡಲಾಗಿರುವ ದಾಖಲೆಗಳನ್ನು ತಿರುಚುವ, ಅಳಿಸಿಹಾಕುವ ಸಾಧ್ಯತೆ ಇದೆ' ಎಂದಿದ್ದಾರೆ.

ಸಿಸೋಡಿಯಾ ಆರೋಪವನ್ನು ತಳ್ಳಿ ಹಾಕಿರುವ ಸಿಬಿಐ, ನಾವು ಕಾನೂನಿನ ಪ್ರಕಾರವೇ ಶೋಧ ಕಾರ್ಯ ನಡೆಸಿದ್ದೇವೆ ಎಂದು ಹೇಳಿದೆ.

ಅಂತಿಮ ಹಂತದಲ್ಲಿ ಪ್ರಕ್ರಿಯೆ • ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿಕೆ

ಗಂಗಾಮತಸ್ಥರಿಗೆ ಎಸ್‌ಟಿ ಮೀಸಲು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಈಗಾಗಲೇ ಕೇಂದ್ರ ಸಚಿವರ ಜೊತೆಗೆ ಚರ್ಚೆ
- ಕಾನೂನು ಸಚಿವಾಲಯ ಕೋರಿದ್ದ ಮಾಹಿತಿ ಸಲ್ಲಿಕೆ
- ಸದಾ ಗಂಗಾಮತಸ್ಥರ ಭಕ್ತನಾಗಿರುವೆ ಎಂದ ಸಿ.ಎಂ

ಹಾವೇರಿ: 'ಅಂಬಿಗರ ಸಮಾಜಕ್ಕೆ (ಗಂಗಾಮತಸ್ಥರು) ಪರಿಶಿಷ್ಟ ಪಂಗಡದ (ಎಸ್‌ಟಿ) ಮೀಸಲಾತಿ ಸೌಲಭ್ಯ ನೀಡುವ ಪ್ರಕ್ರಿಯೆ ಅಂತಿಮ ಹಂತದಲ್ಲಿದೆ. ಸಮಾಜದ ಬೇಡಿಕೆಯನ್ನು ಈಡೇರಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾನುವಾರ ಹೇಳಿದರು.

ತಾಲ್ಲೂಕಿನ ನರಸೀಪುರದಲ್ಲಿ ನಿಜಶರಣ ಅಂಬಿಗರ ಚೌಡಯ್ಯನವರ 5ನೇ ಶರಣ ಸಂಸ್ಕೃತಿ ಉತ್ಸವ ಉದ್ಘಾಟಿಸಿ ಅವರು ಮಾತನಾಡಿದರು.

'ಪರಿಶಿಷ್ಟ ಪಂಗಡದ ಮೀಸಲಾತಿ ಅಡಿ ಪರಿಗಣಿಸಲು ಕೇಂದ್ರ ಸಚಿವ ಅರ್ಜುನ್ ಮುಂಡಾ ಅವರನ್ನು ಭೇಟಿ ಮಾಡಿ ಈಗಾಗಲೇ ಚರ್ಚಿಸಲಾಗಿದೆ. ಕೇಂದ್ರದ ಕಾನೂನು ಸಚಿವಾಲಯವು ಕೆಲವು ಸ್ಪಷ್ಟೀಕರಣ ಕೇಳಿದೆ. ಅದನ್ನು ರಾಜ್ಯದಿಂದ ಒದಗಿಸಲಾಗಿದೆ. ಎಲ್ಲ ಪ್ರಕ್ರಿಯೆಗಳು ಅಂತಿಮ ಹಂತದಲ್ಲಿವೆ' ಎಂದು ತಿಳಿಸಿದರು.

₹5 ಕೋಟಿ ಅನುದಾನ: 'ಅಂಬಿಗರ ಸಮಾಜದ ಆರ್ಥಿಕ, ಶೈಕ್ಷಣಿಕ, ಧಾರ್ಮಿಕ ಪ್ರಗತಿಗಾಗಿ ಅಂಬಿಗರ ಚೌಡಯ್ಯನವರ ಮಠಕ್ಕೆ ₹10 ಕೋಟಿ ಅನುದಾನ ಘೋಷಿಸಿದ್ದು, ಸದ್ಯ ₹5 ಕೋಟಿ ಬಿಡುಗಡೆ ಮಾಡಲಾಗಿದೆ ಎಂದು ತಿಳಿಸಿದರು.

ಶೀಘ್ರ ಬಾಕಿ ಅನುದಾನವನ್ನು ಬಿಡುಗಡೆ ಮಾಡಲಾಗುವುದು. ಗಂಗಾಮತದ ಜಿಲ್ಲಾ ಸಮುದಾಯ ಭವನಕ್ಕೆ ಈ ಬಜೆಟ್‌ನಲ್ಲಿ ಅನುದಾನ ಒದಗಿಸಲಾಗುವುದು' ಎಂದು ಭರವಸೆ ನೀಡಿದರು.

'ನೀವು ಗಂಗಾ ಮಾತೆಯ ಮಕ್ಕಳು. ನಾನು ಗಂಗಾ ಮಾತೆ ಮಗ. ನನ್ನ ತಾಯಿ ಗಂಗಮ್ಮ, ನಾವೆಲ್ಲರೂ ಗಂಗಾ ಮಾತೆಯ ಮಕ್ಕಳು. ಸದಾ ಕಾಲ ಗಂಗಾ ಮಾತೆ ಮಗನಾಗಿ ಗಂಗಾಮತಸ್ಥರ ಭಕ್ತನಾಗಿ ಇರುವೆ' ಎಂದು ಮುಖ್ಯಮಂತ್ರಿ ಇದೇ ಸಂದರ್ಭದಲ್ಲಿ ಭಾವುಕರಾದರು.

ಸಮಾರಂಭದಲ್ಲಿ ನಿಜಶರಣ ಅಂಬಿಗರ ಚೌಡಯ್ಯನವರ ಗುರುಪೀಠದ ಶಾಂತಭೀಷ್ಮಚೌಡಯ್ಯ ಸ್ವಾಮೀಜಿ, ಫಕೀರದಿಂಗಾಲೇಶ್ವರಶ್ರೀ, ಶಾಂತ ಗಂಗಾಧರಶ್ರೀ , ಶರಣಬಸವಶ್ರೀ, ಸಚಿವ ಬಿ.ಸಿ.ಪಾಟೀಲ, ಶಾಸಕರಾದ ನೆಹರು ಓಲೇಕಾರ, ಶ್ರೀನಿವಾಸ ಮಾನೆ, ವಿರೂಪಾಕ್ಷಪ್ಪ ಬಳ್ಳಾರಿ ಇದ್ದರು.



ಹಾವೇರಿ ತಾಲ್ಲೂಕಿನ ನರಸೀಪುರದಲ್ಲಿ ನಿಜಶರಣ ಅಂಬಿಗರ ಚೌಡಯ್ಯನವರ 5ನೇ ಶರಣ ಸಂಸ್ಕೃತಿ ಉತ್ಸವವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸಾಂಕೇತಿಕವಾಗಿ ತೆಪ್ಪವನ್ನು ಹುಟ್ಟು ಹಾಕಿ ಉದ್ಘಾಟಿಸಿದರು. ವಿಧಾನ ಪರಿಷತ್ ಸದಸ್ಯ ಎಸ್. ರವಿಕುಮಾರ್, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಶಾಂತಭೀಷ್ಮ ಚೌಡಯ್ಯ ಸ್ವಾಮೀಜಿ, ಸಚಿವ ಸಿ.ಸಿ.ಪಾಟೀಲ, ಲಾಲಾಜಿ ಮೆಂಡನ್ ಇದ್ದಾರೆ –ಪ್ರಜಾವಾಣಿ ಚಿತ್ರ


ಸುದ್ದಿ 2 ನಿಮಿಷ

ಸಿದ್ದರಾಮಯ್ಯ ಭರವಸೆ ಉಚಿತ, ಸಾಲ ಖಚಿತ: ಸುನಿಲ್‌ಕುಮಾರ್

ಬೆಂಗಳೂರು: 'ಸಿದ್ದರಾಮಯ್ಯ ಆಡಳಿತ ಎಂದರೆ ಭರವಸೆ ಉಚಿತ, ಸಾಲ ಖಚಿತ. ರಾಜ್ಯದ ಬೊಕ್ಕಸದ ಮೇಲೆ ಋಣಭಾರ ಹೊರಿಸುವ ಅರ್ಥನೀತಿಯನ್ನು ಬದಲಾಯಿಸಿಕೊಳ್ಳಿ' ಎಂದು ಇಂಧನ ಸಚಿವ ವಿ.ಸುನಿಲ್‌ಕುಮಾರ್ ಹೇಳಿದ್ದಾರೆ.

ಈ ಕುರಿತು ಸರಣಿ ಟ್ವೀಟ್ ಮಾಡಿರುವ ಅವರು, 'ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ಕೆಪಿಸಿಎಲ್ ಮೇಲಿನ ₹10,203 ಕೋಟಿ ಸಾಲವೂ ಸೇರಿ 2013 ರಿಂದ 2018 ಅವಧಿಯಲ್ಲಿ ₹33,414.20 ಕೋಟಿ ಸಾಲದ ಹೊರೆಯನ್ನು ಎಸ್ಕಾಂಗಳ ಮೇಲೆ ಹೊರಿಸಿದರು. ಅವರೇ ಸ್ಟೇರಿಂಗ್ ಹಿಡಿದು ಸಮನ್ವಯ ಸಾಧಿಸಿದ ಮೈತ್ರಿ ಸರ್ಕಾರದ ಕಾಲದಲ್ಲಿ ₹27,178 ಕೋಟಿ ಸಾಲದ ಹೊರೆ ಎಸ್ಕಾಂಗಳ ಮೇಲೆ ಬಿತ್ತು' ಎಂದಿದ್ದಾರೆ. 'ಕುತ್ತಿಗೆವರೆಗೆ ಮುಳುಗಿದ್ದ ಎಸ್ಕಾಂಗಳನ್ನು ಸಾಲದ ಹೊರೆಯಿಂದ ಮೇಲೆತ್ತಿದ್ದೇವೆ ಎಂದು ಅವರು ಬೆನ್ನು ಚಪ್ಪರಿಸಿಕೊಂಡಿದ್ದಾರೆ. ಸಮಕಾಲೀನ ರಾಜಕಾರಣದ ಉತ್ತರಪುರುಷ ಎಂದು ಬಿರುದಾಂಕಿತರಾದ ಇವರಿಂದ ಇಂಥ ಸುಳ್ಳು ಬಡಾಯಿಗಿಂತ ಹೆಚ್ಚಿನದನ್ನು ನಿರೀಕ್ಷಿಸಲು ಸಾಧ್ಯವೇ? ಅವರು ಎಸ್ಕಾಂಗಳ ಮೇಲೆ ಹೊರಿಸಿ ಹೋದ ಸಾಲದ ಗಂಟನ್ನು ಇಳಿಸಿದ್ದು ನಾವು ಎಂಬುದನ್ನು ಮರೆಯಬಾರದು' ಎಂದಿದ್ದಾರೆ.

'ವಾಸ್ತವ ಮರೆ ಮಾಚುವುದಕ್ಕಾಗಿ ಸಾಲವನ್ನು ಬಂಡವಾಳ ಹೂಡಿಕೆ ಎಂದು ವ್ಯಾಖ್ಯಾನಿಸಿದ್ದೀರಿ. ಇಷ್ಟೊಂದು ಸಾಲ ಮಾಡಿದ ಮೇಲೆ ಹೊರೆ ಇಳಿಸಿದ್ದೇನೆ ಎಂದು ಬೆನ್ನು ತಟ್ಟಿಕೊಳ್ಳುವ ನಿಮ್ಮ ಜ್ಞಾನನಿಧಿಯ ಬಗ್ಗೆ ಸಾಮಾನ್ಯ ಪ್ರಜೆಯೂ ಕನಿಕರ ವ್ಯಕ್ತಪಡಿಸಬಹುದು. ಈ ಕಾರಣಕ್ಕಾಗಿ ನೀವು ಕತ್ತಲೆಯಲ್ಲಿ ಬಜೆಟ್ ಓದಿದ ಸಂಗತಿಯನ್ನು ನೆನಪಿಸಿದ್ದೇನೆ. ನಿಮ್ಮ ನಡೆ–ನುಡಿಯೊಳಗಿನ ಕಪಟತನ ಎಲ್ಲರಿಗೂ ಗೊತ್ತು' ಎಂದಿದ್ದಾರೆ.



'ಹವಾಮಾನ ಮುನ್ಸೂಚನೆ ನಿಖರತೆಯಲ್ಲಿ ಸುಧಾರಣೆ'

ನವದೆಹಲಿ (ಪಿಟಿಐ): 'ಕಳೆದ 8–9 ವರ್ಷಗಳಲ್ಲಿ ಹವಾಮಾನ ಇಲಾಖೆಯ ಮುನ್ಸೂಚನೆಯ ನಿಖರತೆಯು ಶೇ 40ರಷ್ಟು ಸುಧಾರಿಸಿದೆ' ಎಂದು ಕೇಂದ್ರ ಭೂವಿಜ್ಞಾನ ಸಚಿವ ಜಿತೇಂದ್ರ ಸಿಂಗ್ ಅವರು ಭಾನುವಾರ ತಿಳಿಸಿದರು.

ಭಾರತೀಯ ಹವಾಮಾನ ಇಲಾಖೆಯ (ಐಎಂಡಿ) 148ನೇ ಸಂಸ್ಥಾಪನಾ ದಿನವನ್ನು ಉದ್ದೇಶಿಸಿ ಮಾತನಾಡಿದ ಅವರು, '2025ರ ಹೊತ್ತಿಗೆ ದೇಶದ ಎಲ್ಲಾ ಭಾಗಗಳು ಡಾಪ್ಲರ್ ರೇಡಾರ್‌ಗಳ (ಹವಾಮಾನ ಮುನ್ಸೂಚನೆಯ ರೇಡಾರ್) ವ್ಯಾಪ್ತಿಗೆ ಒಳಪಡಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

'ದೇಶದಲ್ಲಿರುವ ಡಾಪ್ಲರ್ ರೇಡಾರ್‌ಗಳ ಸಂಖ್ಯೆಯು ಹೆಚ್ಚಾಗಿವೆ. 2013ರಲ್ಲಿ 15 ರೇಡಾರ್‌ಗಳಿದ್ದವು. 2023ರಲ್ಲಿ ಈ ಸಂಖ್ಯೆ 37ಕ್ಕೆ ತಲುಪಿದೆ. ಮುಂದಿನ 2–3 ವರ್ಷಗಳಲ್ಲಿ ಇನ್ನೂ 25 ಹೆಚ್ಚುವರಿ ರೇಡಾರ್‌ಗಳನ್ನು ಅಳವಡಿಸಲಾಗುವುದು. ಆ ಮೂಲಕ ದೇಶದಲ್ಲಿರುವ ರೇಡಾರ್‌ಗಳ ಸಂಖ್ಯೆಯನ್ನು 62ಕ್ಕೆ ಹೆಚ್ಚಿಸಲಾಗುವುದು' ಎಂದರು.

ಒಳನೋಟ ಪ್ರತಿಕ್ರಿಯೆಗಳಿಗಾಗಿ ಈ ಲಿಂಕ್‌ಗೆ ಭೇಟಿ ನೀಡಿ https://bit.ly/3X9B4HI

'ಮೀಸಲಾತಿ ಸಿಗುವವರೆಗೆ ಸಿಂಹಾಸನದಲ್ಲಿ ಕೂರುವುದಿಲ್ಲ'

ದಾವಣಗೆರೆ: 'ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ಸಿಗುವವರೆಗೂ ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ಬೆಳ್ಳಿ ಸಿಂಹಾಸನದಲ್ಲಿ ಕೂರುವುದಿಲ್ಲ' ಎಂದು ಪೀಠಾಧಿಪತಿ ವಚನಾನಂದ ಸ್ವಾಮೀಜಿ ಪ್ರಕಟಿಸಿದರು.

ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಕ್ಷೇತ್ರದಲ್ಲಿ ಭಾನುವಾರ ನಡೆದ ಹರಜಾತ್ರೆ ಹಾಗೂ 'ಪಂಚಮ ಪೀಠಾರೋಹಣ' ಸಮಾರಂಭದಲ್ಲಿ ಅವರು ಸಿಂಹಾಸನದಲ್ಲಿ ಕೂರಲು ನಿರಾಕರಿಸಿದರು.

'ಸಮುದಾಯಕ್ಕೆ ಮೀಸಲಾತಿ ಸಿಗುವಂತೆ ಮಾಡಿ ಜನರ ಹೃದಯ ಸಿಂಹಾಸನದಲ್ಲಿ ಕೂರಲು ಇಚ್ಛೆ ಪಡುತ್ತೇನೆ. ಪಂಚಮ ಪೀಠಾರೋಹಣ ಮಾಡುವುದಿಲ್ಲ' ಎಂದು ಹೇಳಿದರು.

ರುದ್ರಾಕ್ಷಿ ತುಲಾಭಾರವನ್ನೂ ಬೇಡವೆಂದರು. ಮೀಸಲಾತಿ ಪಡೆದ ಮೇಲೆಯೇ ತುಲಾಭಾರ ಮಾಡಿಸಿಕೊಳ್ಳುವುದಾಗಿ ತಿಳಿಸಿದರು.

ಬೆಳ್ಳಿ ಸಿಂಹಾಸನದ ಮೇಲೆ ಕೂರದ ವಚನಾನಂದ ಸ್ವಾಮೀಜಿಗೆ ಇಳಕಲ್ ಮಹಾಂತೇಶ್ವರ ಸಂಸ್ಥಾನ ಮಠದ ಗುರು ಮಹಾಂತ ಶಿವಯೋಗಿ ಸ್ವಾಮೀಜಿ ಕೇವಲ ರುದ್ರಾಕ್ಷಿ ಪೇಟ ತೊಡಿಸಿದರು.

'ಮೀಸಲಾತಿ ವಿಚಾರವಾಗಿ ನಾವೆಲ್ಲ ನಿಮ್ಮ ಜತೆ ಇದ್ದೇವೆ. ನೀವು ಪೀಠಾರೋಹಣ ತಿರಸ್ಕರಿಸಬಾರದು. ಪೀಠಾರೋಹಣ ಮಾಡಿ ಜನರ ಪ್ರೀತಿಗೆ ಪಾತ್ರರಾಗಬೇಕು' ಎಂದು ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಒತ್ತಾಯಿಸಿದರು.

'ಪ್ರಾಣ ಬಿಟ್ಟೇವು ಮೀಸಲಾತಿ ಬಿಡೆವು ಎಂಬುದು ಇತ್ತೀಚೆಗೆ ಎಲ್ಲರ ಸ್ಲೋಗನ್ ಆಗಿದೆ. ಎಲ್ಲರೂ ಮೀಸಲಾತಿ ಕೇಳುತ್ತಿದ್ದಾರೆ. ಸರ್ಕಾರ ಏನು ಮಾಡುತ್ತದೆ ಎಂಬುದು ಗೊತ್ತಿಲ್ಲ. ಸಮಾಧಾನವಾಗಿ ಇದ್ದರೆ ಸರ್ಕಾರ ನ್ಯಾಯ ಕೊಡುತ್ತದೆ' ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

'ವೀರಶೈವ ಮಹಾಸಭಾವು ಉಪಜಾತಿಗಳಿಂದಾಗಿ ಒಡೆಯುತ್ತಾ ಹೋಗುತ್ತಿದೆ. ಒಂದೊಂದು ಉಪಜಾತಿಗೆ ಒಬ್ಬೊಬ್ಬರು ಸ್ವಾಮೀಜಿಯಾಗಿ, ಅವರು ಒಗ್ಗಟ್ಟಾಗದೇ ಇರುವುದು ಸಮಸ್ಯೆಯಾಗಿದೆ' ಎಂದು ಶಾಮನೂರು ಶಿವಶಂಕರಪ್ಪ ಬೇಸರ ವ್ಯಕ್ತಪಡಿಸಿದರು.



ದಾವಣಗೆರೆ ಜಿಲ್ಲೆಯ ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ಮೇಲೆ ಕೂರಲು ನಿರಾಕರಿಸಿದ ವಚನಾನಂದ ಸ್ವಾಮೀಜಿಗೆ ಇಳಕಲ್ ಮಹಾಂತೇಶ್ವರ ಸಂಸ್ಥಾನ ಮಠದ ಗುರು ಮಹಾಂತ ಶಿವಯೋಗಿ ಸ್ವಾಮೀಜಿ ರುದ್ರಾಕ್ಷಿ ಪೇಟ ತೊಡಿಸಿದರು. ಪಂಚಮಸಾಲಿ ಮಠದ ಪ್ರಧಾನ ಧರ್ಮದರ್ಶಿ ಬಿ.ಸಿ. ಉಮಾಪತಿ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಇದ್ದರು.

ಗಡ್ಕರಿಗೆ ಬೆದರಿಕೆ: ಕೈದಿ ವಿಚಾರಣೆ

ಒಂದನೇ ಪುಟದಿಂದ...

ಪೊಲೀಸರ ಪ್ರಕಾರ, ಕೈದಿಯು ನಾಗ್ಪುರದಲ್ಲಿರುವ ಗಡ್ಕರಿ ಅವರ ಸಾರ್ವಜನಿಕ ಸಂಪರ್ಕ ಕಚೇರಿಗೆ ಶನಿವಾರ ಬೆಳಿಗ್ಗೆ 11.29 ಹಾಗೂ 11.37 ಮತ್ತು ಮಧ್ಯಾಹ್ನ 12.29ಕ್ಕೆ ಕರೆ ಮಾಡಿ ಬೆದರಿಕೆ ಒಡ್ಡಿದ್ದ.

'ಕರೆ ಸ್ವೀಕರಿಸಿದ್ದ ಕಚೇರಿ ಸಿಬ್ಬಂದಿ ವಿಳಾಸ ಕೇಳಿದಾಗ, 'ನಾನು ಕರ್ನಾಟಕದಲ್ಲಿದ್ದೇನೆ ಎಂದಿದ್ದ'. ನಿತಿನ್ ಗಡ್ಕರಿ ಅವರ ಕಚೇರಿ ಸಿಬ್ಬಂದಿ ಜಿತೇಂದ್ರ ಶರ್ಮಾ ನಾಗ್ಪುರದ ಧನತೋಲಿ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ಪುರಿ ದೇಗುಲಕ್ಕೆ ವಿದೇಶಿಯರಿಗೆ ಪ್ರವೇಶ: ರಾಜ್ಯಪಾಲರ ಹೇಳಿಕೆಗೆ ಟೀಕೆ

ಭುವನೇಶ್ವರ (ಪಿಟಿಐ): ಪುರಿಯ ಜಗನ್ನಾಥ ದೇವಾಲಯಕ್ಕೆ ವಿದೇಶಿಯರಿಗೆ ಪ್ರವೇಶ ನೀಡಬೇಕೆಂದು ಒಡಿಶಾ ರಾಜ್ಯಪಾಲ ಗಣೇಶಿ ಲಾಲ್ ಹೇಳಿರುವುದು ವಿವಾದ ಸೃಷ್ಟಿಸಿದೆ.

ಹಲವು ರಾಜಕೀಯ ಮುಖಂಡರು ಹಾಗೂ ಸಂಪ್ರದಾಯವಾದಿಗಳ ಈ ಪ್ರಸ್ತಾವವನ್ನು ಟೀಕಿಸಿದ್ದಾರೆ.

'ದೇವಾಲಯದ ಶತಮಾನಗಳಷ್ಟು ಹಳೆಯದಾದ ಸಂಪ್ರದಾಯಕ್ಕೆ ಚ್ಯುತಿ ತರಬಾರದು' ಎಂದು ಬಿಜೆಪಿ ಮುಖಂಡ ಬಿಜಯ್ ಮಹಪಾತ್ರಾ ಹೇಳಿದ್ದಾರೆ.

'ಮಾಧ್ಯಮಗಳನ್ನು ಬಿಜೆಪಿ ಎಂದೂ ನಿಷೇಧಿಸಿಲ್ಲ'

ನವದೆಹಲಿ (ಪಿಟಿಐ): 'ಬಿಜೆಪಿ ಸರ್ಕಾರವು ಎಂದಿಗೂ ಯಾವ ಮಾಧ್ಯಮ ಸಂಸ್ಥೆಗಳ ಮೇಲೂ ನಿಷೇಧ ಹೇರಿಲ್ಲ. ಯಾರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನೂ ಮೊಟಕುಗೊಳಿಸಿಲ್ಲ' ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಭಾನುವಾರ ಹೇಳಿದ್ದಾರೆ.

ಆರ್‌ಎಸ್‌ಎಸ್ ಪ್ರಕಟಿಸುವ 'ಪಾಂಚಜನ್ಯ' ವಾರಪತ್ರಿಕೆ ಆಯೋಜಿಸಿದ್ದ ಸಭೆಯೊಂದರಲ್ಲಿ ಮಾತನಾಡಿದ ಅವರು, 'ಅಭಿವ್ಯಕ್ತಿ ಸ್ವಾತಂತ್ರ್ಯ ಕುರಿತು ದೇಶದಲ್ಲಿ ಚರ್ಚೆಗಳು ಮತ್ತೆ ಮುನ್ನೆಲೆಗೆ ಬಂದಿವೆ. ಅಟಲ್ ಬಿಹಾರಿ ವಾಜಪೇಯಿ ಅಥವಾ ನರೇಂದ್ರ ಮೋದಿ ಅವರ ನೇತೃತ್ವದ ಸರ್ಕಾರಗಳು ಮಾಧ್ಯಮಗಳ ಮೇಲೆ ನಿಯಂತ್ರಣ ಹೇರಿಲ್ಲ ಮತ್ತು ಯಾರೊಬ್ಬರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನೂ ಕಸಿದಿಲ್ಲ ಎಂಬುದನ್ನು ಮಾಧ್ಯಮಗಳ ಸ್ವಾತಂತ್ರ್ಯ ಹರಣ ಕುರಿತು ಮಾತನಾಡುತ್ತಿರುವವರು ಮರೆತಿದ್ದಾರೆ' ಎಂದು ಹೇಳಿದರು.

ಕಾಂಗ್ರೆಸ್ ಅನ್ನು ಗುರಿಯಾಗಿಸಿಕೊಂಡು ವಾಗ್ದಾಳಿ ನಡೆಸಿದ ಅವರು, ಜನರ ಎಲ್ಲಾ ರೀತಿಯ ಸ್ವಾತಂತ್ರ್ಯವನ್ನು ಕಸಿದಿರುವ ಉದಾಹರಣೆಯು ಕಾಂಗ್ರೆಸ್‌ನ ಇತಿಹಾಸದುದ್ದಕ್ಕೂ ಕಾಣಿಸುತ್ತದೆ ಎಂದು ಹೇಳಿದರು.

ಕಾಂಗ್ರೆಸ್ ಸರ್ಕಾರವು ಸಂವಿಧಾನದ ವಿಧಿ 15ಕ್ಕೆ 1951ರಲ್ಲಿ ತಿದ್ದುಪಡಿ ತಂದಿದ್ದನ್ನು ಉಲ್ಲೇಖಿಸಿದ ಅವರು 'ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಮೊಟಕುಗೊಳಿಸುವ ಸಲುವಾಗಿಯೇ ಕಾಂಗ್ರೆಸ್ ಸಂವಿಧಾನ ತಿದ್ದುಪಡಿ ತಂದಿತ್ತು' ಎಂದರು.

ಈ ಹಿಂದೆ 'ಪಾಂಚಜನ್ಯ' ಪತ್ರಿಕೆ ಮೇಲೆ ಹೇರಿದ್ದ ನಿಷೇಧದ ಕುರಿತು ಮಾತನಾಡಿದ ಅವರು,'ಆ ನಿಷೇಧವು ರಾಷ್ಟ್ರವಾದಿ ಪತ್ರಿಕೋದ್ಯಮದ ಮೇಲೆ ಹೇರಿದ ನಿಷೇಧ ಮಾತ್ರವಾಗಿರಲಿಲ್ಲ. ಬದಲಾಗಿ, ಅಭಿವ್ಯಕ್ತಿ ಸ್ವಾತಂತ್ರ್ಯದ ಸಂಪೂರ್ಣ ದಮನ ಆಗಿತ್ತು' ಎಂದರು.

ಎಲ್ಲ ಆಯಾಮಗಳಿಂದ ತನಿಖೆ: ನಾಗ್ಪುರ ಪೊಲೀಸ್ ಆಯುಕ್ತ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಹಿಂಡಲಗಾ ಕೇಂದ್ರ ಕಾರಾಗೃಹದ ಅಧಿಕಾರಿಗಳ ಅನುಮತಿ ಪಡೆದು ಜಯೇಶ್ ಪೂಜಾರಿ ವಿಚಾರಣೆ ನಡೆಸಿದ್ದೇವೆ. ಎಲ್ಲ ಆಯಾಮಗಳಿಂದ ತನಿಖೆ ಮುಂದುವರಿದಿದೆ' ಎಂದು ನಾಗ್ಪುರ ನಗರ ಪೊಲೀಸ್ ಆಯುಕ್ತ ಅಮಿತೇಶ್ ಕುಮಾರ್ ಹೇಳಿದರು.

ನಾಗ್ಪುರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ದಕ್ಷಿಣ ಕನ್ನಡ ಜಿಲ್ಲೆಯ ಜಯೇಶ್ 2008ರಲ್ಲಿ ಕೊಲೆ ಆರೋಪದಡಿ ಜೈಲು ಸೇರಿದ್ದ. 2018ರಲ್ಲಿ ಆತನಿಗೆ ಗಲ್ಲು ಶಿಕ್ಷೆ ವಿಧಿಸಲಾಗಿತ್ತು. ಜೈಲಿನಿಂದ ತಪ್ಪಿಸಿಕೊಳ್ಳಲೂ ಯತ್ನಿಸಿದ್ದ. ಹಲವರಿಗೆ ಕರೆ ಮಾಡಿ ಬೆದರಿಕೆಯೊಡ್ಡಿದ್ದ' ಎಂದರು.

ಮಾಹಿತಿ ಸಂಗ್ರಹ: '2018ರಲ್ಲಿ ಉತ್ತರ ವಲಯ ಐಜಿಪಿಯಾಗಿದ್ದ ಅಲೋಕ್‌ಕುಮಾರ್ ಅವರಿಗೆ ಕರೆ ಮಾಡಿ ಬೆದರಿಕೆ ಹಾಕಿದ ಸಂಬಂಧ ಎಪಿಎಂಸಿ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದ ಕುರಿತಾಗಿ ಮಹಾರಾಷ್ಟ್ರ ಪೊಲೀಸರು ಮಾಹಿತಿ ಪಡೆದಿದ್ದಾರೆ' ಎಂದು ಮೂಲಗಳು 'ಪ್ರಜಾವಾಣಿ'ಗೆ ಖಚಿತಪಡಿಸಿವೆ.

'ಆತ ಗಲ್ಲುಶಿಕ್ಷೆಗೆ ಗುರಿಯಾಗಿದ್ದ. ನಂತರ ಜೀವಾವಧಿ ಶಿಕ್ಷೆಯಾಗಿ ಪರಿವರ್ತನೆಯಾಗಿತ್ತು' ಎಂದು ಮೂಲಗಳು ಹೇಳಿವೆ.

ಇಬ್ಬರು ಅಧಿಕಾರಿಗಳ ವಿರುದ್ಧ ತನಿಖೆ

ಒಂದನೇ ಪುಟದಿಂದ...

ಏನಿದು ಪ್ರಕರಣ?: ಇಮಾಮ್ ಸಾಬ್ ಎಂಬುವವರಿಂದ ಕೋಲ್ಕತ್ತದ ನ್ಯಾಷನಲ್ ಟೊಬ್ಯಾಕೊ ಕಂಪನಿಯು ಖರೀದಿಸಿದ್ದ ಜಮೀನನ್ನು ದೂರುದಾರರು ಕೋಲ್ಕತ್ತ ಹೈಕೋರ್ಟ್‌ನ ಮಧ್ಯಸ್ಥಿಕೆಯಲ್ಲಿ ನಡೆದ ಹರಾಜಿನಲ್ಲಿ ಖರೀದಿಸಿದ್ದರು. ಆದರೆ, ಜಮೀನಿನ ಮಾಲೀಕತ್ವವನ್ನು ಅರ್ಜಿದಾರರಿಗೆ ಬಿಟ್ಟುಕೊಡದ ಕಾರಣ ಅವರು ಸಿಟಿ ಸಿವಿಲ್ ನ್ಯಾಯಾಲಯದಲ್ಲಿ 2011 ರಲ್ಲಿ ಅಸಲು ದಾವೆ ಹೂಡಿದ್ದರು. ನ್ಯಾಯಾಲಯವು 2013 ಏ. 26ರಂದು ಅರ್ಜಿದಾರರ ಪರ ಡಿಕ್ರಿ ಆದೇಶ ಹೊರಡಿಸಿತ್ತು. ಹೈಕೋರ್ಟ್‌ನಲ್ಲೂ ಅರ್ಜಿದಾರರ ಪರ ತೀರ್ಪು ಬಂದಿತ್ತು. ಈ ಬೆಳವಣಿಗೆಗಳ ಮಧ್ಯೆಯೂ ಪಹಣಿ ಮತ್ತು ಮ್ಯುಟೇಷನ್ ರಿಜಿಸ್ಟರ್‌ನಲ್ಲಿ ನ್ಯಾಷನಲ್ ಟೊಬ್ಯಾಕೊ ಕಂಪನಿ ಹೆಸರೇ ಮುಂದುವರಿದಿತ್ತು. ಜಮೀನನ್ನು ಕೃಷಿಯೇತರ ಉದ್ದೇಶಕ್ಕೆ ಪರಿವರ್ತಿಸಿದ್ದು, ಖಾತಾ ಮಾಡಿಕೊಡುವಂತೆ ದೂರುದಾರರು ಅರ್ಜಿ ಸಲ್ಲಿಸಿದ್ದರು.

ಮೊದಲೇ ಒಳಸಂಚು ರೂಪಿಸಿ ಜಮೀನಿನ ಮರು ಖಾತೆ ಮಾಡಿಕೊಡುವಂತೆ ಸೈಯದ್ ಇಸ್ಮಾಯಿಲ್ ಮತ್ತು ಇತರರು ಸಲ್ಲಿಸಿದ್ದ ಅರ್ಜಿಯನ್ನು ಪುರಸ್ಕರಿಸಿ, ಖಾತೆ ಬದಲಾವಣೆ ಆದೇಶ ಹೊರಡಿಸಿದ ಹಾಗೂ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದ ಆರೋಪ ರಂಗನಾಥ್ ಮತ್ತು ತೇಜಸ್ ಕುಮಾರ್ ಮೇಲಿದೆ. ಇದೇ ಪ್ರಕರಣದಲ್ಲಿ ನೋಂದಣಿ ಮತ್ತು ಮುದ್ರಾಂಕ ಇಲಾಖೆ ಹಾಗೂ ಭೂಮಾಪನ ಇಲಾಖೆ ಅಧಿಕಾರಿಗಳು ಶಾಮೀಲಾಗಿ ಜಮೀನಿನ ಋಣಭಾರ ಪತ್ರದಲ್ಲಿ ತಪ್ಪು ಮಾಹಿತಿ ದಾಖಲಿಸಿರುವ ಆರೋಪವೂ ಇದೆ. ಅಕ್ರಮವಾಗಿ ಖಾತೆ ವರ್ಗಾಯಿಸಲು ₹ 3 ಕೋಟಿಗೂ ಹೆಚ್ಚು ಲಂಚ ಪಡೆಯಲಾಗಿದೆ ಎಂದೂ ದೂರುದಾರರು ಆರೋಪಿಸಿದ್ದರು.

ಈ ಹಿಂದೆಯೇ ಅಮಾನತು: ಅಂದಾಜು ₹ 200 ಕೋಟಿ ಮೌಲ್ಯದ 37 ಎಕರೆ ಸರ್ಕಾರಿ ಗೋಮಾಳವನ್ನು ಪರಭಾರೆ ಮಾಡಿರುವ ಆರೋಪದಲ್ಲಿ ಕೆ.ರಂಗನಾಥ್ ಅವರನ್ನು ಈ ಹಿಂದೆಯೇ ಅಮಾನತು ಮಾಡಲಾಗಿದೆ. ಈ ಅಕ್ರಮದ ಕುರಿತು ಸರ್ಕಾರದ ಆದೇಶದಂತೆ ಎಫ್‌ಐಆರ್ ದಾಖಲಿಸಿಕೊಂಡಿದ್ದ ಎಸಿಬಿ, ರಂಗನಾಥ್ ವಿರುದ್ಧ ತನಿಖೆ ನಡೆಸಿತ್ತು.

ಅಯೋಧ್ಯೆ: ಪ್ರವೇಶ ದ್ವಾರಗಳಿಗೆ ರಾಮಾಯಣ ಪಾತ್ರಗಳ ಹೆಸರು

ಅಯೋಧ್ಯೆ, ಉತ್ತರಪ್ರದೇಶ (ಪಿಟಿಐ): 'ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ನೇತೃತ್ವದ ಉತ್ತರಪ್ರದೇಶ ಸರ್ಕಾರವು ಅಯೋಧ್ಯೆಯ ಪ್ರವೇಶ ದ್ವಾರಗಳಿಗೆ ರಾಮಾಯಣ ಪಾತ್ರಗಳ ಹೆಸರಿಡಲು ತೀರ್ಮಾನಿಸಿದೆ' ಎಂದು ಅಧಿಕಾರಿಯೊಬ್ಬರು ಭಾನುವಾರ ಹೇಳಿದ್ದಾರೆ.

ಅಯೋಧ್ಯೆಯನ್ನು ವಿಶ್ವ ದರ್ಜೆಯ ನಗರವನ್ನಾಗಿ ರೂಪಿಸುವುದು ಯೋಗಿ ಅವರ ಕನಸಾಗಿದ್ದು, ನಗರದ ಪೌರಾಣಿಕ ಪರಂಪರೆಯನ್ನು ಪ್ರವಾಸಿಗರಿಗೆ ಪರಿಚಯಿಸುವ ಸಲುವಾಗಿ ಈ ನಿರ್ಧಾರ ಕೈಗೊಂಡಿದ್ದಾರೆ.

'ಲಖನೌ ಮಾರ್ಗದ ದ್ವಾರಕ್ಕೆ 'ಶ್ರೀರಾಮ ದ್ವಾರ', ಗೋರಖ್‌ಪುರ ರಸ್ತೆಯಲ್ಲಿನ ದ್ವಾರಕ್ಕೆ 'ಹನುಮಾನ್ ದ್ವಾರ', 'ಅಲಹಾಬಾದ್ ರಸ್ತೆಯ ದ್ವಾರಕ್ಕೆ 'ಭರತ ದ್ವಾರ', ಗೊಂಡಾ ರಸ್ತೆಯ ದ್ವಾರಕ್ಕೆ 'ಲಕ್ಷ್ಮಣ ದ್ವಾರ', ವಾರಾಣಸಿ ಮಾರ್ಗದ ದ್ವಾರಕ್ಕೆ 'ಜಟಾಯು ದ್ವಾರ' ಹಾಗೂ ರಾಯ್‌ಬರೇಲಿ ರಸ್ತೆಯಲ್ಲಿನ ದ್ವಾರಕ್ಕೆ 'ಗರುಡ ದ್ವಾರ' ಎಂದು ನಾಮಕರಣ ಮಾಡಲು ನಿರ್ಧರಿಸಲಾಗಿದೆ.

'ಪ್ರತಿಯೊಂದು ಪ್ರವೇಶ ದ್ವಾರದ ಬಳಿಯೂ ವಾಹನ ನಿಲುಗಡೆ, ಶೌಚಾಲಯ, ರೆಸ್ಟೋರೆಂಟ್ ಮತ್ತು ಹೋಟೆಲ್ ಸೇರಿದಂತೆ ವಿಶ್ವದರ್ಜೆಯ ಸೌಕರ್ಯಗಳನ್ನು ಕಲ್ಪಿಸಲಾಗುತ್ತದೆ' ಎಂದು ಜಿಲ್ಲಾಧಿಕಾರಿ ನಿತೀಶ್‌ಕುಮಾರ್ ಅವರು ಹೇಳಿದ್ದಾರೆ.



ಜನಪದ ನೃತ್ಯ

ರಾಷ್ಟ್ರೀಯ ಯುವಜನೋತ್ಸವದ ಅಂಗವಾಗಿ ಭಾನುವಾರ ಧಾರವಾಡದ ಸೃಜನಾ ರಂಗಮಂದಿರದಲ್ಲಿ ಛತ್ತೀಸಗಢದ ಕಲಾವಿದರು ಮರಗಾಲು ಜನಪದ ನೃತ್ಯ ಪ್ರದರ್ಶಿಸಿದರು –ಪ್ರಜಾವಾಣಿ ಚಿತ್ರ/ಗೋವಿಂದರಾಜ ಜವಳಿ

'ಭವಿಷ್ಯದ ಪರಿಸ್ಥಿತಿ ಎದುರಿಸಲು ಸನ್ನದ್ಧರಾಗಿ'

ಒಂದನೇ ಪುಟದಿಂದ

'ಮುಂದಿನ 25 ವರ್ಷಗಳಿಗೆ ಪೂರಕವಾಗಿ ಸೇನೆಯಲ್ಲೂ ಬದಲಾವಣೆ ಆಗಬೇಕಿದೆ. ಯುದ್ಧ ಸಾಮಗ್ರಿ ಆವಿಷ್ಕಾರದಲ್ಲಿ ಹೊಸತನ ಇರಲಿ. ದೇಶ ಹಾಗೂ ಜನರ ರಕ್ಷಣೆಗಾಗಿ ಸೇನೆಗೆ ಕೇಂದ್ರವು ಎಲ್ಲ ಸಹಕಾರ ನೀಡಲಿದೆ' ಎಂದು ಭರವಸೆ ನೀಡಿದರು.

'ಭಾರತ ನಡೆಯತ್ತ ಗಮನ': 'ಈ ಹಿಂದೆ ಭಾರತದ ಮಾತನ್ನು ಬೇರೆ ರಾಷ್ಟ್ರಗಳು ಗಂಭೀರವಾಗಿ ಪರಿಗಣಿಸುತ್ತಿರಲಿಲ್ಲ. ಈಗ ಭಾರತದ ನಡೆ ಹಾಗೂ ಅಭಿವೃದ್ಧಿಯ ಚಿಂತನೆಗಳನ್ನು ಇತರೆ ರಾಷ್ಟ್ರಗಳು ಎಚ್ಚರಿಕೆಯಿಂದ ಗಮನಿಸುತ್ತಿವೆ' ಎಂದು ಪ್ರತಿಪಾದಿಸಿದರು.

'ಭಾರತೀಯ ಸೇನೆ ವಿಶ್ವದ ಅತ್ಯುನ್ನತ ಸ್ಥಳದಲ್ಲಿ ಸೇತುವೆ ನಿರ್ಮಿಸಿದ ದಾಖಲೆ ಹೊಂದಿದೆ. ಭಾರತ ಯುದ್ಧ ಮಾಡುವುದಲ್ಲದೆ ಯುದ್ಧದಿಂದ ಸಮಸ್ಯೆಗೆ ಸಿಲುಕಿದ ರಾಷ್ಟ್ರಕ್ಕೂ ನೆರವು ನೀಡುತ್ತಿದೆ' ಎಂದು ಅವರು ಹೇಳಿದರು.

'ಮೊದಲ ಸ್ಥಾನಕ್ಕೆ ಭಾರತ': ಭಾರತದ ಆರ್ಥಿಕತೆ ಕ್ಷಿಪ್ರವಾಗಿ ಬೆಳೆಯುತ್ತಿದೆ. 2027 ಕ್ಕೆ ದೇಶವು ಆರ್ಥಿಕ ಸ್ಥಿತಿಯಲ್ಲಿ 3ನೇ ಸ್ಥಾನ ತಲುಪಲಿದೆ. 2047ಕ್ಕೆ ವಿಶ್ವದಲ್ಲಿಯೇ ಮೊದಲ ಸ್ಥಾನ ಗಳಿಸುವುದು ಖಚಿತ ಎಂದು ರಾಜನಾಥ್ ಸಿಂಗ್ ಅವರು ಹೇಳಿದರು.

ಇದೇ ವೇಳೆ ನಡೆದ ಯೋಧರ ಸಾಹಸ ಪ್ರದರ್ಶನವು ಮೈನವಿರೇಳಿಸಿತು. ಸೇನಾ ಪಡೆಗಳ ಮುಖ್ಯಸ್ಥ ಜನರಲ್ ಅನಿಲ್ ಚೌಹಾನ್, ಸೇನಾ ಮುಖ್ಯಸ್ಥ ಜನರಲ್ ಮನೋಜ್ ಪಾಂಡೆ, ಸಚಿವ ಡಾ.ಕೆ.ಸುಧಾಕರ್ ಹಾಜರಿದ್ದರು.



ಸೇನಾ ದಿನದ ಪರೇಡ್‌ನಲ್ಲಿ ರಕ್ಷಣಾ ಸಚಿವ ರಾಜನಾಥ ಸಿಂಗ್ ಸೇನಾ ದಿನದ ಮುಖಪುಟ ಬಿಡುಗಡೆ ಮಾಡಿದರು.(ಎಡಬದಿ) ಸೇನಾ ಮುಖ್ಯಸ್ಥ ಜನರಲ್ ಮನೋಜ್ ಪಾಂಡೆ ಹಾಗೂ ಸೇನಾಪಡೆಗಳ ಮುಖ್ಯಸ್ಥ (ಸಿ.ಡಿ.ಎಸ್) ಜನರಲ್ ಅನಿಲ್ ಚೌಹಾನ್; ಇತರರು ಇದ್ದರು –ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್



ವಸತಿ ಶಾಲೆಗೆ ಹೋಗೋಣ ಬನ್ನಿ...

ಎ.ಎಂ.ಸುರೇಶ

ವಸತಿ ಶಾಲೆಗಳ ಪ್ರವೇಶ ಪ್ರಕ್ರಿಯೆ ಈಗಾಗಲೇ ಆರಂಭವಾಗಿದ್ದು, ಅರ್ಜಿ ಸಲ್ಲಿಕೆ, ಸೀಟುಗಳ ಲಭ್ಯತೆ, ಪ್ರವೇಶ ಪರೀಕ್ಷೆಯ ವಿಧಾನ, ದಾಖಲಾತಿ ಕುರಿತ ಸಮಗ್ರ ಮಾಹಿತಿ ಇಲ್ಲಿದೆ

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಡಿಯಲ್ಲಿ ಬರುವ ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚೆನ್ನಮ್ಮ, ಏಕಲವ್ಯ, ಅಂಬೇಡ್ಕರ್, ಅಟಲ್ ಬಿಹಾರಿ ವಾಜಪೇಯಿ, ಇಂದಿರಾಗಾಂಧಿ, ಮಾಸ್ತಿ ವೆಂಕಟೇಶ್ ಅಯ್ಯಂಗಾರ್, ಸಂಗೊಳ್ಳಿ ರಾಯಣ್ಣ, ನಾರಾಯಣ ಗುರು ಸೇರಿದಂತೆ ವಿವಿಧ ಮಾದರಿಯ ವಸತಿ ಶಾಲೆಗಳಲ್ಲಿ 6ನೇ ತರಗತಿ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಸಂಘದ ಅಡಿಯಲ್ಲಿ ವಿವಿಧ ಮಾದರಿಯ 806 ವಸತಿ ಶಾಲೆಗಳು ಕಾರ್ಯನಿರ್ವಹಿಸುತ್ತಿದ್ದು, ಒಟ್ಟು 40,870 ಸೀಟುಗಳು ಪ್ರವೇಶಕ್ಕೆ ಲಭ್ಯವಾಗಲಿವೆ. 2022-23ನೇ ಸಾಲಿನಲ್ಲಿ 5ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಪೋಷಕರು, ತಮ್ಮ ಮಕ್ಕಳನ್ನು 2023-24ನೇ ಸಾಲಿಗೆ 6ನೇ ತರಗತಿಗೆ ಸೇರಿಸಲು ಅರ್ಜಿ ಸಲ್ಲಿಸಬಹುದು.

ವಸತಿ ಶಾಲೆಯ ದಾಖಲಾತಿಗೆ ಪ್ರವೇಶ ಪರೀಕ್ಷೆ

ಅರ್ಜಿ ಸಲ್ಲಿಕೆ ಹೇಗೆ?

ಅರ್ಜಿ ಸಲ್ಲಿಸಲು ಈ ತಿಂಗಳ 22 ಕೊನೆಯ ದಿನವಾಗಿದ್ದು, ಆನ್‌ಲೈನ್ ಮೂಲಕವೇ ಸಲ್ಲಿಸಬೇಕು. ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಪ್ರವೇಶ ಪರೀಕ್ಷೆ ನಡೆಸಿ, ಅದರಲ್ಲಿ ಪಡೆಯುವ ಅಂಕಗಳು, ಮೀಸಲಾತಿ ಹಾಗೂ ಪ್ರವೇಶಕ್ಕಾಗಿ ನಮೂದಿಸಿರುವ ಶಾಲೆಗಳ ಆದ್ಯತಾ ಕ್ರಮದ ಆಧಾರದ ಮೇಲೆ ಕೌನ್ಸೆಲಿಂಗ್ ಮೂಲಕ ಸೀಟು ಹಂಚಿಕೆ ಮಾಡುತ್ತದೆ.

ಅರ್ಜಿಯೊಂದಿಗೆ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳ ಪೋಷಕರ ಕುಟುಂಬದ ವಾರ್ಷಿಕ ಆದಾಯವನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ.

ಪರಿಶಿಷ್ಟ ಜಾತಿ/ಪಂಗಡ ಮತ್ತು ಪ್ರವರ್ಗ 1ರ ವಿದ್ಯಾರ್ಥಿಗಳ ಪೋಷಕರ ಆದಾಯದ ಮಿತಿ ₹2.5 ಲಕ್ಷದ ಒಳಗೆ ಇರಬೇಕು. ಪ್ರವರ್ಗ 2ಎ, 2ಬಿ, 3ಎ ಹಾಗೂ 3ಬಿ ಅಡಿ ಬರುವ ವಿದ್ಯಾರ್ಥಿಗಳ ಪೋಷಕರ ಆದಾಯ ಒಂದು ಲಕ್ಷದ ಒಳಗೆ ಇರಬೇಕು.

ಜಾತಿ-ಆದಾಯ ಪ್ರಮಾಣ ಪತ್ರವಿಲ್ಲದಿದ್ದರೆ ಮೀಸಲಾತಿ ಸೌಲಭ್ಯ ದೊರೆಯುವುದಿಲ್ಲ. ಅಂತಹ ವಿದ್ಯಾರ್ಥಿಗಳನ್ನು ಸಾಮಾನ್ಯ ವರ್ಗದಡಿ ಪರಿಗಣಿಸಲಾಗುತ್ತದೆ.

ಅರ್ಜಿಯ ಜೊತೆಗೆ student Achievement Tracking systemನಿಂದ SATS ಸಂಖ್ಯೆಯನ್ನು ಓದುತ್ತಿರುವ ಶಾಲೆಯಿಂದ ಪಡೆದು ಅದನ್ನು ಅರ್ಜಿ ಸಲ್ಲಿಸುವಾಗ ನಮೂದಿಸಬೇಕು.

ಅರ್ಜಿ ಸಲ್ಲಿಸುವ ಅಭ್ಯರ್ಥಿಯು ರಾಜ್ಯದ ಕಾಯಂ ನಿವಾಸಿ ಆಗಿರಬೇಕು. 9 ರಿಂದ 13 ವರ್ಷ ವಯೋಮಾನದ ಒಳಗೆ ಇರಬೇಕು. ಪ್ರಸಕ್ತ ಸಾಲಿನಲ್ಲಿ 5ನೇ ತರಗತಿಯಲ್ಲಿ ಓದುತ್ತಿದ್ದು, ದಾಖಲಾತಿ ಪರಿಶೀಲನೆ ವೇಳೆ 5ನೇ ತರಗತಿಯ ಅಂಕಪಟ್ಟಿಯನ್ನು ಹೊಂದಿರಬೇಕು.

ಪರೀಕ್ಷೆಯ ಸ್ವರೂಪ

ಮಾರ್ಚ್ 12ರಂದು ಪ್ರವೇಶ ಪರೀಕ್ಷೆ ನಿಗದಿಯಾಗಿದೆ. ಒಟ್ಟು 100 ಅಂಕಗಳಿಗೆ ಪರೀಕ್ಷೆ ನಡೆಯಲಿದೆ. ಶೇ 90ರಷ್ಟು ಪ್ರಶ್ನೆಗಳು 5ನೇ ತರಗತಿ ಪಠ್ಯ ಆಧರಿಸಿರುತ್ತವೆ. ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಯಲ್ಲಿ ಪ್ರಶ್ನೆಗಳಿರುತ್ತವೆ. ಬಹು ಆಯ್ಕೆ ಮಾದರಿಯ ಪ್ರಶ್ನೆಗಳು ಇರಲಿದ್ದು, ತಪ್ಪು ಉತ್ತರಗಳಿಗೆ ಅಂಕಗಳನ್ನು ಕಳೆಯುವುದಿಲ್ಲ. ಅಂದರೆ ಋಣಾತ್ಮಕ ಮೌಲ್ಯಮಾಪನ ಇರುವುದಿಲ್ಲ. ಪರೀಕ್ಷೆಯ ಅವಧಿ ಎರಡು ಗಂಟೆ.


ಕನ್ನಡ, ಇಂಗ್ಲಿಷ್, ಗಣಿತ, ಸಮಾಜ ವಿಜ್ಞಾನ ಮತ್ತು ಸಾಮಾನ್ಯ ವಿಜ್ಞಾನ ವಿಭಾಗದಲ್ಲಿ ತಲಾ 20 ಪ್ರಶ್ನೆಗಳು ಇರುತ್ತವೆ. ಒಎಂಆರ್ ಶೀಟ್‌ನಲ್ಲಿ ಪ್ರತಿಯೊಂದು ಪ್ರಶ್ನೆ ಸಂಖ್ಯೆ ಮುಂದೆ ಎ,ಬಿ,ಸಿ,ಡಿ ಎಂದು ನಾಲ್ಕು ಬಾಕ್ಸ್‌ಗಳು ಇರುತ್ತವೆ. ವಿದ್ಯಾರ್ಥಿಗಳು ಸರಿಯಾದ ಉತ್ತರವನ್ನು ಆಯ್ಕೆ ಮಾಡಬೇಕು. ಉದಾಹರಣೆಗೆ ಉತ್ತರವು 'ಎ' ಆಗಿದ್ದರೆ 'ಎ' ಬಾಕ್ಸ್ ಅನ್ನು ಶೇಡ್ ಮಾಡಬೇಕು. ಒಂದಕ್ಕಿಂತ ಹೆಚ್ಚು ಬಾಕ್ಸ್‌ಗಳನ್ನು ಶೇಡ್ ಮಾಡುವಂತಿಲ್ಲ. ಆ ರೀತಿ ಮಾಡಿದರೆ ಅಂಕಗಳು ಸಿಗುವುದಿಲ್ಲ.

ಪ್ರಮಾಪತ್ರ ಸಲ್ಲಿಕೆ ಕಡ್ಡಾಯ

ವಿಶೇಷ ವರ್ಗಗಳ ಅಡಿ ಬರುವ ಮಕ್ಕಳಿಗೆ ಸೀಟು ಹಂಚಿಕೆಯಲ್ಲಿ ಮೀಸಲಾತಿ ಇರುತ್ತದೆ. ಆಶ್ರಮ ಶಾಲೆಯ ಮಕ್ಕಳು, ಅಲೆಮಾರಿ, ಅರೆ ಅಲೆಮಾರಿ, ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ಸಮುದಾಯಕ್ಕೆ ಸೇರಿದ ಮಕ್ಕಳು, ಅಂಗವಿಕಲರು, ಮಾಜಿ ಸೈನಿಕರ ಮಕ್ಕಳು, ವಿಶೇಷ ದುರ್ಬಲ ವರ್ಗದವರು, ಸಫಾಯಿ ಕರ್ಮಚಾರಿಗಳ ಮಕ್ಕಳಿಗೆ ಮೀಸಲಾತಿ ಇರುತ್ತದೆ. ಆದರೆ, ಇವರು ಕೂಡ ಪರೀಕ್ಷೆಗೆ ಹಾಜರಾಗಿರಬೇಕು ಮತ್ತು ಸಂಬಂಧಪಟ್ಟ ಪ್ರಮಾಣಪತ್ರಗಳನ್ನು ಸಲ್ಲಿಸಿರಬೇಕು. ಅರ್ಜಿ ಸಲ್ಲಿಸುವಾಗ ಯಾವ ಶಾಲೆಗಳಲ್ಲಿ ದಾಖಲಾತಿ ಬಯಸುತ್ತಿರೊ, ಅಂತಹ ಶಾಲೆಗಳನ್ನು ಆದ್ಯತಾ ಕ್ರಮದಲ್ಲಿ ಆಯ್ಕೆ ಮಾಡಿಕೊಳ್ಳಬೇಕು. ಆದ್ಯತಾ ಕ್ರಮದಲ್ಲಿ ದಾಖಲಿಸುವ ಶಾಲೆಗಳನ್ನು ಮಾತ್ರ ಸೀಟು ಹಂಚಿಕೆಗೆ ಪರಿಗಣಿಸಲಾಗುತ್ತದೆ. ಹೀಗಾಗಿ ಹೆಚ್ಚು ಅವಕಾಶಗಳನ್ನು ಬಯಸುವವರು ತಮ್ಮ ಜಿಲ್ಲೆಯಲ್ಲಿರುವ ಎಲ್ಲ ವಸತಿ ಶಾಲೆಗಳನ್ನು ಆದ್ಯತಾ ಕ್ರಮದಲ್ಲಿ ನಮೂದಿಸುವುದು ಒಳ್ಳೆಯದು. ಅದೇ ತಾಲ್ಲೂಕಿನ ಮೂಲ ನಿವಾಸಿಗಳಾದ ವಿದ್ಯಾರ್ಥಿಗಳಿಗೆ ಶೇಕಡ 25ರಷ್ಟು ಸೀಟುಗಳನ್ನು ಮೀಸಲಿಡಲಾಗುತ್ತದೆ.

ಮಾದರಿ ಒಎಂಆರ್ ಶೀಟ್, ಪರೀಕ್ಷೆಯ ಕೈಪಿಡಿ ಹಾಗೂ ಪ್ರವೇಶದ ವಿವರಗಳನ್ನು ಒಳಗೊಂಡ ಸಂಪೂರ್ಣ ಮಾಹಿತಿ http://kea.kar.nic.in ನಲ್ಲಿ ಲಭ್ಯವಿದೆ. ಅರ್ಜಿಗಳನ್ನು ಭರ್ತಿ ಮಾಡುವ ಮುನ್ನ ಸರಿಯಾಗಿ ಓದಿಕೊಳ್ಳುವುದು ಒಳ್ಳೆಯದು. ಒಮ್ಮೆ ಭರ್ತಿ ಮಾಡಿದ ನಂತರ ತಿದ್ದುಪಡಿಗೆ ಅವಕಾಶ ಇರುವುದಿಲ್ಲ. ಹೀಗಾಗಿ ವಿದ್ಯಾರ್ಥಿಗಳು, ಪೋಷಕರು ಮುನ್ನೆಚ್ಚರಿಕೆ ವಹಿಸುವುದು ಸೂಕ್ತ.

ಪ್ರಜಾವಾಣಿ ನೋಡಿಯೊ — ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ — ಪ್ರದೀಪ್ ಕುಮಾರ್ ವಿ. — ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ



ಪ್ರಜಾವಾಣಿ ನೋಡಿಯೊ — ಎಸ್ಸೆಸ್ಸೆಲ್ಸಿಯ ಗಣಿತ ವಿಷಯದ ಇಂಗ್ಲಿಷ್ ಭಾಷೆಯ ಮಾದರಿ ಪ್ರಶ್ನೋತ್ತರಗಳಿಗೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ — ವಿಜ್ಞಾನ

39) ಭಿನ್ನತೆಯ ಮಹತ್ವದ ಕುರಿತು ಬರೆಯಿರಿ

ಉತ್ತರ:- ಭಿನ್ನತೆಯ ಮಹತ್ವ ಪರಿಸರದಲ್ಲಿನ ಜೀವಿ ಸಮುದಾಯಗಳು ಸಂತಾನೋತ್ಪತ್ತಿ ನಡೆಸುವ ತಮ್ಮ ಸಾಮರ್ಥ್ಯವನ್ನು ಬಳಸಿಕೊಂಡು ಸೂಕ್ತವಾದ ಸ್ಥಾನಗಳಲ್ಲಿ ಅಥವಾ ಆವಾಸಗಳಲ್ಲಿ ಸೇರಿಕೊಂಡಿವೆ. ಸಂತಾನೋತ್ಪತ್ತಿ ಸಮಯದಲ್ಲಿ ಡಿಎನ್‌ಎ ಸ್ವಪ್ರತೀಕರಣದಲ್ಲಿನ ಸ್ಥಿರತೆಯು ಜೀವಿಯ ದೇಹ ವಿನ್ಯಾಸದ ಲಕ್ಷಣಗಳನ್ನು ನಿರ್ವಹಿಸಲು ಮುಖ್ಯವಾಗುತ್ತದೆ. ಅದು ಜೀವಿಯು ನಿರ್ದಿಷ್ಟ ಆವಾಸವನ್ನು ಬಳಸಿಕೊಳ್ಳಲು ಅನುವು ಮಾಡಿಕೊಡುತ್ತದೆ. ಆದ್ದರಿಂದ, ಸಂತಾನೋತ್ಪತ್ತಿಯು ಜೀವಿಪ್ರಭೇದಗಳ ಸಂಖ್ಯೆಯ ಸ್ಥಿರತೆಯೊಂದಿಗೆ ಜೋಡಣೆಗೊಂಡಿದೆ. ಆದಾಗ್ಯೂ, ಜೀವಿಗಳ ನಿಯಂತ್ರಣಕ್ಕೆ ಸಿಗದ ಕಾರಣಗಳಿಂದಾಗಿ ಆವಾಸಗಳು ಬದಲಾಗಬಹುದು. ಭೂಮಿಯ ಮೇಲಿನ ತಾಪ ಏರಬಹುದು ಅಥವಾ ಇಳಿಯಬಹುದು, ನೀರಿನ ಮಟ್ಟ ಬದಲಾಗಬಹುದು ಅಥವಾ ಅಲ್ಲಿ ಉಲ್ಕಾಘಾತ ಉಂಟಾಗಬಹುದು ಅಂತಹ ಸಂದರ್ಭದಲ್ಲಿ ಜೀವ ಸಂಕುಲ ಇರಲು ಅದಲ್ಲಿ ಭಿನ್ನತೆ ಇದ್ದಾಗ ಮಾತ್ರ ಸಾಧ್ಯ. ಒಂದು ವೇಳೆ ಸಂತಾನೋತ್ಪತ್ತಿ ನಡೆಸುವ ಜೀವಿಗಳ ಸಮುದಾಯ ಒಂದು ನಿರ್ದಿಷ್ಟ ಆವಾಸಕ್ಕೆ ಹೊಂದಿಕೊಂಡಿದ್ದರೆ ಮತ್ತು ಒಂದುವೇಳೆ ಆ ಆವಾಸವು ತೀವ್ರವಾದ ಬದಲಾವಣೆಗಳಿಗೆ ಗುರಿಯಾದರೆ ಆ ಜೀವಿ ಸಮುದಾಯವು ನಶಿಸಿಹೋಗಬಹುದು. ಆದರೆ ಈ ಸಮುದಾಯದ ಕೆಲವು ಜೀವಿಗಳಲ್ಲಿ ಕೆಲವು ಭಿನ್ನತೆಗಳು ಕಂಡುಬAದರೆ ಅವುಗಳಿಗೆ ಬದುಕುಳಿಯುವ ಕೆಲವು ಅವಕಾಶಗಳಿವೆ. ಒಂದು ವೇಳೆ ಸಮಶೀತೋಷ್ಣ ನೀರಿನಲ್ಲಿ ಬ್ಯಾಕ್ಟೀರಿಯಾ ಸಮುದಾಯವೊಂದು ವಾಸಿಸುತ್ತಿದ್ದು ಮತ್ತು ಜಾಗತಿಕ ತಾಪದ ಏರಿಕೆಯಿಂದಾಗಿ ನೀರಿನ ತಾಪ ಏರಿಕೆಯಾದರೆ ಇವುಗಳಲ್ಲಿ ಬಹುತೇಕ ಬ್ಯಾಕ್ಟೀರಿಯಾಗಳು ಸಾಯಬಹುದು. ಆದರೆ, ಶಾಖವನ್ನು ನಿರೋಧಿಸುವ ಕೆಲವು ರೂಪಾಂತರಗಳು ಉಳಿದುಕೊಳ್ಳಬಹುದು ಮತ್ತು ಸಂತಾನೋತ್ಪತ್ತಿ ನಡೆಸಬಹುದು. ಹೀಗೆ ಕೆಲವು ವೇಳೆ ಭಿನ್ನತೆಯು ಪ್ರಭೇದಗಳು ಬದುಕುಳಿಯಲು ಉಪಯುಕ್ತವಾಗಿವೆ.

40) ಪ್ಲಾಸ್ಟರ್ ಆಫ್ ಪ್ಯಾರಿಸ್ ಯಾವುದಾದರೂ ಎರಡು ಉಪಯೋಗಗಳನ್ನು ಬರೆಯಿರಿ.

ಉತ್ತರ:- ಆಟಿಕೆಗಳ ತಯಾರಿಕೆ, ಆಲಂಕಾರಿಕ ವಸ್ತುಗಳಲ್ಲಿ ನುಣುಪಾದ ಮೇಲ್ಮೈ ನಿರ್ಮಿಸಲು ಇದನ್ನು ಬಳಸುತ್ತಾರೆ. ಮುರಿದ ಮೂಳೆಗಳಿಗೆ ಸರಿಯಾದ ಸ್ಥಳದಲ್ಲಿ ಆಧಾರವಾಗಿ ಲೇಪನ ಮಾಡಲು ವೈದ್ಯರು ಪ್ಲಾಸ್ಟರ್ ಆಫ್ ಪ್ಯಾರಿಸ್‌ಅನ್ನು ಬಳಸುತ್ತಾರೆ.

41) ಮೆಂಡಲಿವ್ ಅವರು ತಮ್ಮ ಆವರ್ತಕ ಕೋಷ್ಟಕದ ರಚನೆಗೆ ಉಪಯೋಗಿಸಿರುವ ಮಾನದಂಡಗಳು ಯಾವುವು?

ಉತ್ತರ :- ಧಾತುಗಳನ್ನು ಅವುಗಳ ಪರಮಾಣುರಾಶಿ, ಮೂಲಭೂತ ಗುಣಗಳು ಮತ್ತು ಒಂದೇ ರೀತಿಯ ರಾಸಾಯನಿಕ ಲಕ್ಷಣಗಳ ಆಧಾರದ ಮೇಲೆ ಧಾತುಗಳನ್ನು ಜೋಡಣೆ ಮಾಡಿದರು

- ಧಾತುಗಳ ಪರಮಾಣು ರಾಶಿಗಳು ಮತ್ತು ಅವುಗಳ ಭೌತ ಮತ್ತು ರಾಸಾಯನಿಕ ಗುಣಗಳ ನಡುವಣ ಸಂಬಂಧವನ್ನು ಪರಿಶೀಲಿಸಿದರು
- ರಾಸಾಯನಿಕ ಗುಣಗಳಲ್ಲಿ ಮೆಂಡಲೀವ್ ಅವರು ಹೈಡ್ರೋಜನ್ ಮತ್ತು ಆಕ್ಸಿಜನ್ ಧಾತುಗಳು ಉಂಟುಮಾಡುವ ಸಂಯುಕ್ತಗಳ ಮೇಲೆ ತಮ್ಮ ಗಮನವನ್ನು ಕೇಂದ್ರೀಕರಿಸಿದರು.
- ಹೈಡ್ರೋಜನ್ ಮತ್ತು ಆಕ್ಸಿಜನ್‌ಗಳು ಅತಿಹೆಚ್ಚು ಕ್ರಿಯಾಪಟುತ್ವವುಳ್ಳ ಮತ್ತು ಬಹುತೇಕ ಧಾತುಗಳೊಂದಿಗೆ ಸಂಯುಕ್ತಗಳೊಂದಿಗೆ ಸಂಯುಕ್ತಗಳನ್ನು ಉಂಟು ಮಾಡುತ್ತಿರುವುದರಿಂದ ಅವರು ಅವುಗಳನ್ನು ಆಯ್ಕೆ ಮಾಡಿಕೊಂಡು
- ಧಾತುವೊಂದು ಉಂಟು ಮಾಡುವ ಹೈಡ್ರೇಡ್‌ಗಳು ಮತ್ತು ಆಕ್ಸೈಡ್ ಗಳಸೂತ್ರಗಳನ್ನು ಆಧರಿಸಿ ಧಾತುವಿನ ವರ್ಗೀಕರಣದಲ್ಲಿ ಇದನ್ನು ಒಂದು ಮೂಲಭೂತ ಗುಣವೆಂದು ಪರಿಗಣಿಸಿದರು.

42) ನಕ್ಷತ್ರಗಳ ಮಿನುಗುವಿಕೆಯ ಬಗ್ಗೆ ಬರೆಯಿರಿ

ಉತ್ತರ:- ನಕ್ಷತ್ರಗಳ ಮಿನುಗುವಿಕೆಯು ವಾಯುಮಂಡಲದಲ್ಲಿ ನಕ್ಷತ್ರಗಳ ಬೆಳಕಿನ ವಕ್ರೀಭವನದಿಂದುಂಟಾಗಿದೆ. ನಕ್ಷತ್ರಗಳ ಬೆಳಕು ಭೂಮಿಯ ವಾಯುಮಂಡಲವನ್ನು ಪ್ರವೇಶಿಸಿ, ಭೂಮಿಯನ್ನು ತಲುಪುವ ಮುನ್ನ ಸತತವಾಗಿ ವಕ್ರೀಭವನ ಹೊಂದುತ್ತದೆ. ವಾಯುಮಂಡಲದಲ್ಲಿನ ವಕ್ರೀಭವನವು ಮಾಧ್ಯಮದ ವಕ್ರೀಭವನ ಸೂಚ್ಯಂಕವು ಬದಲಾಗುತ್ತಿರುವುದರಿಂದ ಉಂಟಾಗುತ್ತದೆ. ವಾಯುಮಂಡಲವು ನಕ್ಷತ್ರದ ಬೆಳಕನ್ನು ಲಂಬದ ಕಡೆ ಬಾಗಿಸುವುದರಿಂದ ನಕ್ಷತ್ರದ ತೋರಿಕೆಯ ಸ್ಥಾನವು ಅದರ ನೈಜ ಸ್ಥಾನಕ್ಕಿಂತ ಸ್ವಲ್ಪ ಬೇರೆಯಾಗಿರುತ್ತದೆ. ದಿಗಂತದಿಂದ ವೀಕ್ಷಿಸಿದಾಗ ನಕ್ಷತ್ರವು ತನ್ನ ನೈಜ ಎತ್ತರಕ್ಕಿಂತ ಸ್ವಲ್ಪ ಎತ್ತರದಲ್ಲಿ ಕಾಣಿಸುತ್ತದೆ. ಮತ್ತೆ ನಕ್ಷತ್ರದ ಈ ತೋರಿಕೆಯ ಸ್ಥಾನವು ಸ್ಥಿರವಲ್ಲ. ಅದು ಲಘುವಾಗಿ ಬದಲಾಗುತ್ತದೆ. ಏಕೆಂದರೆ, ಭೂಮಿಯ ವಾಯುಮಂಡಲದ ಭೌತಿಕ ಪರಿಸ್ಥಿತಿಗಳು ಸ್ಥಿರವಾಗಿಲ್ಲದ ಕಾರಣ ನಕ್ಷತ್ರಗಳು ತುಂಬಾ ದೂರದಲ್ಲಿರುವುದರಿಂದ ಅವು ಅಂದಾಜು ಬಿಂದು ಗಾತ್ರದ ಬೆಳಕಿನ ಮೂಲಗಳಂತೆ ಕಾಣುತ್ತವೆ. ನಕ್ಷತ್ರಗಳಿಂದ ಬರುವ ಬೆಳಕಿನ ಕಿರಣಗಳ ಹಾದಿಯು ಸ್ವಲ್ಪ ಮಟ್ಟಿಗೆ ಬದಲಾಗುವುದರಿಂದ ನಕ್ಷತ್ರಗಳ ತೋರಿಕೆಯ ಸ್ಥಾನದಲ್ಲಿ ಸ್ಥಿತ್ಯಂತರವಾಗುತ್ತದೆ ಮತ್ತು ಕಣ್ಣನ್ನು ಪ್ರವೇಶಿಸುವ ನಕ್ಷತ್ರಗಳ ಬೆಳಕು ಮಿನುಗುತ್ತದೆ. ನಕ್ಷತ್ರಗಳು ಕೆಲವೊಮ್ಮೆ ಪ್ರಕಾಶಮಾನವಾಗಿ ಮತ್ತು ಕೆಲವೊಮ್ಮೆ ಕಂದಿದಂತೆ ಕಾಣುತ್ತವೆ. ಇದೇ ನಕ್ಷತ್ರಗಳ ಮಿನುಗುವಿಕೆಯ ಪರಿಣಾಮ

43) 4.0 cm ಗಾತ್ರದ ವಸ್ತುವನ್ನು, 15 cm ಸಂಗಮ ದೂರವನ್ನು ಹೊಂದಿರುವ ನಮ್ನ ದರ್ಪಣದ ಮುಂದೆ 25 cm ದೂರದಲ್ಲಿ ಇರಿಸಿದೆ. ಸ್ಪಷ್ಟ ಪ್ರತಿಬಿಂಬವನ್ನು ಪಡೆಯಲು ಪರದೆಯನ್ನು ದರ್ಪಣದಿಂದ ಎಷ್ಟು ದೂರದಲ್ಲಿ ಇರಿಸಬೇಕು? ಪ್ರತಿಬಿಂಬದ ಸ್ವಭಾವ ಮತ್ತು ಗಾತ್ರವನ್ನು ಲೆಕ್ಕ ಮಾಡಿ.

ಪರಿಹಾರ :

ವಸ್ತುವಿನ ಗ್ರಾತ್ರ $h = 4.0$ cm;

ವಸ್ತುವಿನ ದೂರ $u = -25.0$ cm;

ಸಂಗಮ ದೂರ $f = -15.0$ cm;

ಪ್ರತಿಬಿಂಬದ ದೂರ $v = ?$ ಪ್ರತಿಬಿಂಬದ ಗಾತ್ರ, $h' = ?$

ಸಮೀಕರಣ 10.1 ರಿಂದ $\frac{1}{v}+\frac{1}{u}=\frac{1}{f}$

ಅಥವಾ $\frac{1}{v}=\frac{1}{f}-\frac{1}{u}=\frac{1}{-15.0}-\frac{1}{-25.0}=-\frac{1}{15.0}+\frac{1}{-25.0}$

ಅಥವಾ $\frac{1}{v}=\frac{-5.0+3.0}{75.0}=\frac{-2.0}{75.0}$

ಅಥವಾ $v = -37.5$ cm.

ಪರದೆಯನ್ನು ದರ್ಪಣದಿಂದ 37.5 cm ದೂರದಲ್ಲಿ ಇರಿಸಬೇಕು. ಪ್ರತಿಬಿಂಬವು ಸತ್ಯ ಪ್ರತಿಬಿಂಬವಾಗಿದೆ. ಹಾಗೂ, ವರ್ಧನೆ,

$m=\frac{h'}{h}=-\frac{v}{u}$

ಅಥವಾ $h'=-\frac{vh}{u}=-\frac{(-37.5\text{cm})(+4.0\text{cm})}{(-25.0\text{cm})}$

ಪ್ರತಿಬಿಂಬದ ಎತ್ತರವು $h' = -6.0$ cm

ಪ್ರತಿಬಿಂಬವು ತಲೆಕೆಳಗಾಗಿದೆ ಮತ್ತು ದೊಡ್ಡದಾಗಿದೆ.


ಪಿಯುಸಿ ಪರೀಕ್ಷೆ ದಿಕ್ಸೂಚಿ

ದ್ವಿತೀಯ ಪಿಯುಸಿ : ಗಣಿತ ಶಾಸ್ತ್ರ

ಮಾದರಿ ಪ್ರಶ್ನೆಗಳು

31) $x^2 + y^2 = a^2$ ವೃತ್ತದಿಂದ ಆವೃತವಾದ ಕ್ಷೇತ್ರಫಲವನ್ನು ಕಂಡುಹಿಡಿಯಿರಿ.

ಉತ್ತರ:– ಕೆಳಗಿನ ಚಿತ್ರದಲ್ಲಿ ತೋರಿಸಿರುವಂತೆ, $x^2+y^2= a^2$ ವೃತ್ತದಿಂದ ಆವೃತವಾಗಿರುವ ಕ್ಷೇತ್ರಫಲ = 4(AOBA ಪ್ರದೇಶದ ಕ್ಷೇತ್ರಫಲ)=4[ವೃತ್ತವನ್ನು ಸೂಚಿಸುವ ವಕ್ರರೇಖೆ, x–ಅಕ್ಷ, x=0 ಮತ್ತು $x= a$ ಗಳಲ್ಲಿ ಎಳೆದಿರುವ ಲಂಬಗಳಿಂದಾವೃತವಾಗಿರುವ ಪ್ರದೇಶದ ಕ್ಷೇತ್ರಫಲ] [ವೃತ್ತವು x-ಮತ್ತು y-ಅಕ್ಷಗಳಿಗೆರಡಕ್ಕೂ ಸಮ್ಮಿತೀಯವಾಗಿರುವುದರಿಂದ].



$$4\int_0^a \sqrt{a^2-x^2}\,dx \qquad \left[\because x^2+y^2=a^2 \Rightarrow y=\pm\sqrt{a^2-x^2}\right]$$

AOBA ಪ್ರದೇಶವು ಮೊದಲ ಚತುರ್ಥಾಂಕದಲ್ಲಿರುವುದರಿಂದ, yಅನ್ನು ಧನ ಚಿಹ್ನೆಯೊಂದಿಗೆ ತೆಗೆದುಕೊಳ್ಳುತ್ತೇವೆ. ಅನುಕಲಿಸಿದಾಗ ನಮಗೆ ಇಡೀ ವೃತ್ತದ ಕ್ಷೇತ್ರಫಲ =


$$4\left[\frac{x}{2}\pm\sqrt{a^2-x^2}+\frac{a^2}{2}.\sin^{-1}\frac{x}{a}\right]_0^a$$

$$4\left[\left(\frac{a}{2}x0+\frac{a^2}{2}.\sin^{-1}1\right)-0\right]=4\left(\frac{a^2}{2}\right)\left(\frac{\pi}{2}\right)=\pi a^2$$

32) $\frac{x^2}{a^2}+\frac{y^2}{b^2}=1$ ದೀರ್ಘವೃತ್ತ, $x = 0$ ಮತ್ತು x = ae ಗಳಲ್ಲಿ X–ಅಕ್ಷಕ್ಕೆ ಎಳೆದಿರುವ ಲಂಬಗಳ ನಡುವಣ ಪ್ರದೇಶದ ಕ್ಷೇತ್ರಫಲವನ್ನು ಕಂಡುಹಿಡಿಯಿರಿ. [$b^2 = a^2(1 – e2)$ ಮತ್ತು $e < 1$ ಆದಾಗ]

ಪರಿಹಾರ: ಬೇಕಾದ BOB'RFSB ಪ್ರದೇಶವು ದೀರ್ಘವೃತ್ತ, $x = 0$ ಮತ್ತು $x = ae$ ಸರಳ ರೇಖೆಗಳಿಂದ ಆವೃತವಾಗಿದೆ.

BOB'RFSB ಪ್ರದೇಶದ ಕ್ಷೇತ್ರಫಲ



$$= 2.\int_0^{ae} y\,dx$$

$$= 2\frac{b}{a}\int_0^{ae}\sqrt{a^2-x^2}\,dx$$

$$=\frac{2b}{a}.\left[\frac{x}{2}.\sqrt{a^2-x^2}+\frac{a^2}{2}\cdot\sin^{-1}\frac{x}{a}\right]_0^{ae}$$

$$=\frac{2b}{2a}\cdot\left[ae\sqrt{a^2-a^2e^2}+a^2\cdot\sin^{-1}e\right]$$

$$=ab\left[e\sqrt{1-e^2}+\sin^{-1}e\right]$$

33) $A = \begin{bmatrix}3 & 1\\ 2 & 5\end{bmatrix}$ ಆದರೆ

$A^2 - 8A + 13I = 0$ ಎಂದು ತೋರಿಸಿ

ಪರಿಹಾರ:– $A=\begin{bmatrix}3 & 1\\ 2 & 5\end{bmatrix}$ ದತ್ತ

$$A^2 = A \times A = \begin{bmatrix}3 & 1\\ 2 & 5\end{bmatrix}\begin{bmatrix}3 & 1\\ 2 & 5\end{bmatrix}$$

$$=\begin{bmatrix}9+2 & 3+5\\ 6+10 & 2+25\end{bmatrix}=\begin{bmatrix}11 & 8\\ 16 & 27\end{bmatrix}$$

$$8A = 8\begin{bmatrix}3 & 1\\ 2 & 5\end{bmatrix}=\begin{bmatrix}24 & 8\\ 16 & 40\end{bmatrix}$$

$$13I = 13\begin{bmatrix}1 & 0\\ 0 & 1\end{bmatrix}=\begin{bmatrix}13 & 0\\ 0 & 13\end{bmatrix}$$

$$\therefore A^2 - 8A + 13I$$

$$=\begin{bmatrix}11 & 8\\ 16 & 27\end{bmatrix}-\begin{bmatrix}24 & 8\\ 16 & 40\end{bmatrix}+\begin{bmatrix}13 & 0\\ 0 & 13\end{bmatrix}$$

$$=\begin{bmatrix}11-24+13 & 8-8+0\\ 16-16+0 & 27-40+13\end{bmatrix}=\begin{bmatrix}0 & 0\\ 0 & 0\end{bmatrix}$$

Hence $A^2 - 8A + 13I = 0$

34)

$\int x\cos x\,dx$ ಕಂಡುಹಿಡಿಯಿರಿ

$f(x) = x$ (ಮೊದಲನೇ ಉತ್ಪನ್ನ) ಮತ್ತು $g(x) = \cos x$ (ಎರಡನೇ ಉತ್ಪನ್ನ) ಇರಲಿ ನಂತರ ಭಾಗಶಃ ಅನುಕಲನದಿಂದ

$$\int x\cos x\,dx = x\int\cos x\,dx-\int\left[\frac{d}{dx}(x)\int\cos x\,dx\right]dx$$

$$= x\sin x-\int\sin x\,dx = x\sin x+\cos x+C$$

ನಾವು $f(x) = \cos x$ ಮತ್ತು $g(x) = x$ ಎಂದು ತೆಗೆದುಕೊಂಡಾಗ, ನಂತರ

$$\int x\cos x\,dx=\cos x\int x\,dx-\int\left[\frac{d}{dx}(\cos x)\int x\,dx\right]dx$$

$$=(\cos x)\frac{x^2}{2}+\int\sin x\frac{x^2}{2}dx$$

ಪ್ರಜಾವಾಣಿ ನೋಡಿಯೊ — ಪಿಯುಸಿಯ ಭೌತವಿಜ್ಞಾನದ ಇಂಗ್ಲಿಷ್ ಭಾಷೆಯ ಮಾದರಿ ಪ್ರಶ್ನೋತ್ತರಗಳಿಗೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in




ಸುಭಾಷಿತ

ಗದ್ದಲವಿರುವ ಸಾಮಾಜಿಕ ಜೀವನ, ನಿಶ್ಶಬ್ದವಾದ ಏಕಾಂತದ ಬದುಕು ಎರಡರಲ್ಲೂ ಮನಸ್ಸು ಮಿಳಿತವಾಗಬೇಕು.

–ಸ್ವಾಮಿ ವಿವೇಕಾನಂದ

ಸಂವಿಧಾನದ ಮೇಲೆ ವಾಗ್ಬಾಣ ಟೀಕೆ ಮೊನಚಾಗಿಸಿದ ಧನಕರ್

ಉಪರಾಷ್ಟ್ರಪತಿ ಜಗದೀಪ್ ಧನಕರ್ ಅವರು ರಾಜ್ಯಸಭೆಯ ಸಭಾಪತಿಯಾಗಿ ಮಾಡಿದ ಮೊದಲ ಭಾಷಣದಲ್ಲಿ ನ್ಯಾಯಾಂಗದ ಬಗ್ಗೆ ಟೀಕೆ ಮಾಡಿದ್ದರು. ಈಗ ಅವರು ತಮ್ಮ ಟೀಕೆಯನ್ನು ಇನ್ನಷ್ಟು ಮುಂದಕ್ಕೆ ಒಯ್ದಿದ್ದಾರೆ. ಅವರು ಸಂವಿಧಾನದ ಮೂಲ ಸ್ವರೂಪಕ್ಕೆ ಸಂಬಂಧಿಸಿದ ತಾತ್ವಿಕತೆಯನ್ನು ಪ್ರಶ್ನಿಸಿದ್ದಾರೆ. ಇದು ಯೋಜಿತ ವಾಗ್ದಾಳಿ ಎಂಬುದು ಸ್ಪಷ್ಟ. ಸಂಸತ್ತು ಹಾಗೂ ನ್ಯಾಯಾಂಗದ ನಡುವಿನ ಸಂಬಂಧದ ಕುರಿತ ಅವರ ಅನಿಸಿಕೆಗಳು ತಪ್ಪಾಗಿದ್ದವು. ಆದರೆ ಈಗ ಅವರು ಸಂವಿಧಾನದ ಮೂಲ ಸ್ವರೂಪಕ್ಕೆ ಸಂಬಂಧಿಸಿದ ತಾತ್ವಿಕತೆ ಕುರಿತು ಆಡಿರುವ ಮಾತುಗಳು ಹೆಚ್ಚು ಕೆಡುಕನ್ನು ಉಂಟುಮಾಡುವಂಥವು, ಬಗೆಬಗೆಯ ಪರಿಣಾಮಗಳನ್ನು ಉಂಟುಮಾಡುವಂಥವು. ಸಂವಿಧಾನದ ಮೂಲ ಸ್ವರೂಪಕ್ಕೆ ಸಂಬಂಧಿಸಿದ ತಾತ್ವಿಕತೆ ಮೇಲಿನ ಆಕ್ರಮಣ ಅಂದರೆ ಅದು ಸಂವಿಧಾನದ ಮೇಲಿನ ಆಕ್ರಮಣವೇ ಸರಿ. ಏಕೆಂದರೆ, ಧನಕರ್ ಹೇಳಿರುವಂತೆ ಮೂಲ ಸ್ವರೂಪವು ಇಲ್ಲವೆಂದಾದರೆ, ಸಂವಿಧಾನದ ಅತ್ಯಗತ್ಯ ಅಂಶಗಳೇ ಇಲ್ಲವಾದಂತೆ. ಆಗ ಸಂವಿಧಾನವು ಮೌಲ್ಯ ಕಳೆದುಕೊಳ್ಳುತ್ತದೆ. ಮೂಲ ಸ್ವರೂಪವೆಂಬ ತಾತ್ವಿಕತೆ ಇಲ್ಲವಾದರೆ, ಮೂಲಭೂತ ಹಕ್ಕುಗಳನ್ನೂ ಮೊಟಕುಗೊಳಿಸುವ ಶಾಸನಗಳನ್ನು ಸಂಸತ್ತು ಜಾರಿಗೆ ತರಬಹುದು ಎಂದಾಗುತ್ತದೆ. ಜೀವಿಸುವ ಸ್ವಾತಂತ್ರ್ಯ, ಕಾನೂನಿನ ಪರಮಾಧಿಕಾರ, ಸಂಸದೀಯ ಪ್ರಜಾಸತ್ತೆ, ಅಧಿಕಾರದ ಮಿತಿಗಳನ್ನು ನಿಗದಿಪಡಿಸುವಿಕೆ, ನ್ಯಾಯಾಂಗಕ್ಕೆ ಇರುವ ಪರಾಮರ್ಶೆಯ ಅಧಿಕಾರ... ಇಂಥವನ್ನು ಕೂಡ ಮೊಟಕುಗೊಳಿಸುವ ಶಾಸನಗಳನ್ನು ಜಾರಿಗೆ ತರಬಹುದು ಎಂಬ ಅರ್ಥ ಬರುತ್ತದೆ. ಆ ರೀತಿ ಆದರೆ, ನಮ್ಮ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಮತ್ತೆ ಏನು ಉಳಿಯುತ್ತದೆ?



ಧನಕರ್ ಅವರ ಮಾತು ಕೇಂದ್ರ ಸರ್ಕಾರದ ನಿಲುವನ್ನು ಪ್ರತಿಬಿಂಬಿಸುತ್ತದೆಯೇ ಇಲ್ಲವೇ ಎಂಬುದನ್ನು ಪ್ರಧಾನಿ ಸ್ಪಷ್ಟಪಡಿಸಬೇಕು

ಸಂವಿಧಾನಕ್ಕೆ ತಂದ 99ನೆಯ ತಿದ್ದುಪಡಿ ಹಾಗೂ ರಾಷ್ಟ್ರೀಯ ನ್ಯಾಯಾಂಗ ನೇಮಕಾತಿ ಆಯೋಗವನ್ನು (ಎನ್‌ಜೆಎಸಿ) ರಚಿಸಲು ಸಂಸತ್ತು ರೂಪಿಸಿದ ಕಾಯ್ದೆಯನ್ನು ಸುಪ್ರೀಂ ಕೋರ್ಟ್ ಅಸಿಂಧುಗೊಳಿಸಿದ್ದರ ಬಗ್ಗೆ ಪ್ರಸ್ತಾಪಿಸುವ ಮೂಲಕ ಧನಕರ್ ಅವರು ತಮ್ಮ ಕಳವಳ ವ್ಯಕ್ತಪಡಿಸಿದ್ದರು. ಸಂಸತ್ತು ಅನುಮೋದನೆ ನೀಡಿದ ಸಂವಿಧಾನ ತಿದ್ದುಪಡಿ ಅಥವಾ ಶಾಸನವೊಂದನ್ನು ಸುಪ್ರೀಂ ಕೋರ್ಟ್ ಅಸಿಂಧುಗೊಳಿಸಬಹುದು ಎಂಬುದನ್ನು ಧನಕರ್ ಅವರು ಒಪ್ಪುತ್ತಿಲ್ಲ. ಹೀಗೆ ಅಸಿಂಧುಗೊಳಿಸುವುದು ಅವರ ಪ್ರಕಾರ, ಸಂಸತ್ತಿನ ಮೂಲಕ ವ್ಯಕ್ತವಾಗುವ ಜನರ ಇಚ್ಛೆಯನ್ನು ಅಮಾನ್ಯಗೊಳಿಸಿದಂತೆ. 'ಮೇಲರಿಮೆಯ ಭಾವನೆ ಹೊಂದುವುದು, ನ್ಯಾಯಾಂಗದ ವೇದಿಕೆಗಳಿಂದ ಇತರರ ಗಮನ ಸೆಳೆಯುವಂತೆ ವರ್ತಿಸುವುದು ಶಾಸಕಾಂಗದ ಅಧಿಕಾರಗಳನ್ನು ದುರ್ಬಲಗೊಳಿಸುವುದಕ್ಕೆ ಕಾರಣವಾಗುತ್ತಿದೆ' ಎಂಬ ಮಾತುಗಳನ್ನು ಆಡುವ ಮೂಲಕ ಧನಕರ್ ಅವರು ಶಾಸಕಾಂಗ ಹಾಗೂ ನ್ಯಾಯಾಂಗವನ್ನು ಪರಸ್ಪರ ಸಂಘರ್ಷದಲ್ಲಿ ಇರುವಂತೆ ತೋರಿಸಿದ್ದಾರೆ. ಮೂಲ ಸ್ವರೂಪಕ್ಕೆ ಸಂಬಂಧಿಸಿದ ತಾತ್ವಿಕತೆಯು ಸಂಸತ್ತಿನ ಪರಮೋಚ್ಚ ಸ್ಥಾನವನ್ನು ದುರ್ಬಲಗೊಳಿಸುತ್ತದೆ ಎಂದೂ ಧನಕರ್ ಭಾವಿಸಿದ್ದಾರೆ. ಇದು ತಪ್ಪು ಗ್ರಹಿಕೆ. ಸಂಸತ್ತು ಪರಮೋಚ್ಚ ಸಂಸ್ಥೆಯಲ್ಲ. ದೇಶದಲ್ಲಿ ಸಂವಿಧಾನವೇ ಪರಮೋಚ್ಚ. ಸಂಸತ್ತು ಸೃಷ್ಟಿಯಾಗಿರುವುದು ಸಂವಿಧಾನದ ಕಾರಣದಿಂದ. ಸಂಸತ್ತು ಪರಮೋಚ್ಚ ಎಂದು ಬೇರೊಂದು ಕಡೆ ಇರುವ ಪರಿಕಲ್ಪನೆಯನ್ನು ಭಾರತಕ್ಕೆ ಅನ್ವಯಿಸಲು ಆಗದು. ಇಲ್ಲಿ ಇರುವ ಲಿಖಿತ ಸಂವಿಧಾನವು, ತನ್ನ ಮೂರು ಅಂಗಗಳಿಗೆ (ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ) ನಿರ್ದಿಷ್ಟ ಅಧಿಕಾರಗಳನ್ನು, ಜವಾಬ್ದಾರಿಗಳನ್ನು ನೀಡಿದೆ. ಶಾಸಕಾಂಗ ಹಾಗೂ ಕಾರ್ಯಾಂಗ ಕೈಗೊಳ್ಳುವ ತೀರ್ಮಾನಗಳನ್ನು ಪರಿಶೀಲನೆಗೆ ಒಳಪಡಿಸಲು ನ್ಯಾಯಾಂಗಕ್ಕೆ ನೀಡಲಾಗಿರುವ ಅಧಿಕಾರವು, ವ್ಯವಸ್ಥೆಯೊಳಗೆ ಸಮತೋಲನ ಇರುವಂತೆ ನೋಡಿಕೊಳ್ಳುತ್ತದೆ. ಪ್ರಜೆಗಳ ಹಕ್ಕುಗಳು ಮೊಟಕಾಗದಂತೆ ನೋಡಿಕೊಳ್ಳುವ ಬಹುದೊಡ್ಡ ರಕ್ಷಕನಂತೆಯೂ ಈ ಅಧಿಕಾರವು ಕೆಲಸ ಮಾಡುತ್ತದೆ. ಸಂಸತ್ತಿನಲ್ಲಿ ಬಹುಮತ ಇದೆ ಎಂಬ ಮಾತ್ರಕ್ಕೆ ವ್ಯವಸ್ಥೆಯನ್ನು ಹಿಡಿತಕ್ಕೆ ತೆಗೆದುಕೊಳ್ಳಲು ಅವಕಾಶವಾಗದಂತೆ ಇದು ನಿಗಾ ವಹಿಸುತ್ತದೆ. ಈ ಬಗೆಯ ರಚನೆಯು ಬಹುಸಂಖ್ಯಾತವಾದಿ ಭಾವನೆಗಳಿಗೆ ಇಂಬು ಕೊಡುತ್ತಿರುವ ಈಗಿನ ಸಂದರ್ಭಕ್ಕೆ ಬಹುಮುಖ್ಯ.

ಬಹಳ ದೊಡ್ಡ ಸಾಂವಿಧಾನಿಕ ಹುದ್ದೆಯನ್ನು ಹೊಂದಿರುವ ವ್ಯಕ್ತಿಯು ಈಗ ಸಂವಿಧಾನದ ಮೂಲ ಸ್ವರೂಪದ ಪರಿಕಲ್ಪನೆಯನ್ನು ಪ್ರಶ್ನಿಸಿದ್ದಾರೆ. ಸುಪ್ರೀಂ ಕೋರ್ಟ್ ಹಾಗೂ ಹೈಕೋರ್ಟ್‌ಗಳಿಗೆ ನ್ಯಾಯಮೂರ್ತಿಗಳನ್ನು ನೇಮಕ ಮಾಡುವ ಕೊಲಿಜಿಯಂ ವ್ಯವಸ್ಥೆಯ ವಿರುದ್ಧವಾಗಿ ಪಟ್ಟುಬಿಡದ ಅಭಿಯಾನವೊಂದು ನಡೆದಿದೆ. ಶಾಸಕಾಂಗದ ಪಾವಿತ್ರ್ಯವನ್ನು ನ್ಯಾಯಾಂಗವು ಗೌರವಿಸಬೇಕು ಎಂದು ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಹೇಳಿದ್ದಾರೆ. ಇವೆಲ್ಲವನ್ನೂ ಬಿಡಿಬಿಡಿಯಾಗಿ ಗ್ರಹಿಸಲಾಗದು. ಸಂಘರ್ಷಕ್ಕೆ ಸನ್ನದ್ಧವಾದ ರೀತಿಯಲ್ಲಿ ಧನಕರ್ ಅವರು ಮಾತನಾಡುತ್ತಿರುವುದನ್ನು ಉಪೇಕ್ಷಿಸಲಾಗದು. ಇವೆಲ್ಲ ಕೇಂದ್ರ ಸರ್ಕಾರದ ನಿಲುವು, ಅಭಿಪ್ರಾಯಗಳೇ? ಪ್ರಧಾನಿ ನರೇಂದ್ರ ಮೋದಿ ಅವರೇ ಈ ಬಗ್ಗೆ ಸ್ಪಷ್ಟನೆ ನೀಡಬೇಕು.

ದಿನದ ಟ್ವೀಟ್


ಸುರಕ್ಷತೆ ಮುಖ್ಯವಾಗಲಿ



ನೇಪಾಳದಲ್ಲಿ ಮೂರು ದಶಕಗಳಿಂದೀಚೆಗೆ ಸುಮಾರು ಇಪ್ಪತ್ತೆಂಟು ವಿಮಾನ ಅಪಘಾತಗಳು ಸಂಭವಿಸಿವೆ. ಅತ್ಯಂತ ದುರದೃಷ್ಟಕರ. ವಿಮಾನ ಅಪಘಾತದಲ್ಲಿ ಮಡಿದವರಿಗಾಗಿ ನನ್ನ ತೀವ್ರ ಸಂತಾಪ.

ರಾಣಾ ಅಯ್ಯೂಬ್, ಪತ್ರಕರ್ತೆ

ಕಿಡಿನುಡಿ



ಯಶಸ್ಸು ಸಿದ್ಧಿಸಿದಾಗ 'ಚಾಲಕನ ಮಗಳು' ಅಥವಾ 'ಸಫಾಯಿ ಕರ್ಮಚಾರಿಯ ಮಗ' ಎಂದೆಲ್ಲಾ ಒತ್ತಿ ಹೇಳುವ ಅಗತ್ಯವಿದೆಯೇ? ಇದು, ಕಾರ್ಮಿಕರ ಬಗ್ಗೆ ಇರುವ ಗೌರವದ ಕೊರತೆಯನ್ನು ತೋರಿಸುತ್ತದೆ ಹಾಗೂ ವ್ಯಕ್ತಿಗತ ಸಾಧನೆಯನ್ನು ಗೌಣವಾಗಿಸುತ್ತದೆ. ಸಾಧಾರಣ ಕೌಟುಂಬಿಕ ಹಿನ್ನೆಲೆಯ ಅಥವಾ ಸವಾಲಿನ ಪರಿಸ್ಥಿತಿಯಲ್ಲಿ ಇದ್ದವರು ಎಂದು ಸರಳವಾಗಿ ಹೇಳಿದರೆ ಸಾಕು.

ಮೇಜರ್ ಜನರಲ್ ಶೈಲ್ ಝಾ, ನಿವೃತ್ತ ಸೇನಾಧಿಕಾರಿ

25 ವರ್ಷಗಳ ಹಿಂದೆ

ಶುಕ್ರವಾರ, 16-1-1998

● **'ರಾಜೀವ್ ಹೆಸರಿಗೆ ಮಸಿ' ಸೋನಿಯಾ ಪ್ರತಿರೋಧ**

ಬೆಂಗಳೂರು, ಜ. 15– ಬೋಫೋರ್ಸ್ ಫಿರಂಗಿ ಖರೀದಿ ಹಗರಣದಲ್ಲಿ ತಮ್ಮ ಪತಿ ರಾಜೀವ್ ಗಾಂಧಿ ಅವರ ಹೆಸರಿಗೆ ಮಸಿ ಬಳಿಯಲಾಗುತ್ತಿದೆ ಎಂದು ಆಕ್ಷೇಪ ವ್ಯಕ್ತಪಡಿಸಿದ ಸೋನಿಯಾ ಗಾಂಧಿ ಅವರು, ಈ ಹಗರಣದಲ್ಲಿ ಯಾರ್ಯಾರು ಭಾಗಿಗಳಾಗಿದ್ದಾರೆ ಎಂಬುದನ್ನು ಬಹಿರಂಗಪಡಿಸುವಂತೆ ಇಂದು ಇಲ್ಲಿ ಕೇಂದ್ರ ಸರ್ಕಾರಕ್ಕೆ ನೇರ ಸವಾಲು ಹಾಕಿದರು.

ನ್ಯಾಷನಲ್ ಹೈಸ್ಕೂಲ್ ಮೈದಾನದಲ್ಲಿ ಕಿಕ್ಕಿರಿದ ಜನಸ್ತೋಮದ ನಡುವೆ ಕಾಂಗ್ರೆಸ್ ಪಕ್ಷದ ಪರ ಚುನಾವಣಾ ಪ್ರಚಾರ ಭಾಷಣ ಮಾಡಿದ ಅವರು, 'ಬೋಫೋರ್ಸ್ ಎನ್ನುವ ಹೆಸರಿನಲ್ಲಿ ನನ್ನ ಪತಿಯ ಬಗ್ಗೆ ಜನರಲ್ಲಿ ತಪ್ಪು ಭಾವನೆ ಬರುವಂತೆ ಅಪಪ್ರಚಾರ ನಡೆಯುತ್ತಿದೆ' ಎಂದು ನೊಂದು ನುಡಿದರು.

● **ಮಾಜಿ ಪ್ರಧಾನಿ ನಂದಾ ನಿಧನ**

ಅಹಮದಾಬಾದ್, ಜ. 15 (ಯುಎನ್‌ಐ)– ಮಾಜಿ ಪ್ರಧಾನಿ, ಶತಾಯುಷಿ ಹಾಗೂ ಇತ್ತೀಚೆಗೆ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿ 'ಭಾರತ ರತ್ನ' ನೀಡಿ ಗೌರವಿಸಲಾಗಿದ್ದ ಗುಲ್ಜಾರಿಲಾಲ್ ನಂದಾ ಅವರು ಇಂದು ಸಂಜೆ ನಿಧನರಾದರು.

ವೃದ್ಧಾಪ್ಯದ ಕಾರಣ ಸುದೀರ್ಘ ಕಾಲದಿಂದ ಬಳಲುತ್ತಿದ್ದ ನಂದಾ ಅವರು ಸಂಜೆ ನಾಲ್ಕು ಗಂಟೆ ಸಮಯದಲ್ಲಿ ಕೊನೆಯುಸಿರೆಳೆದರು.

ಈ ಗಾಂಧಿವಾದಿ ಮಹಾಚೇತನ ಪ್ರಾಣಬಿಟ್ಟಾಗ ಅವರ ಪುತ್ರಿ ಪುಷ್ಪಾಬೆನ್ ಅವರು ಬಳಿ ಇದ್ದರು.

50 ವರ್ಷಗಳ ಹಿಂದೆ

ಮಂಗಳವಾರ, 16-1-1973

● **ಉತ್ತರ ವಿಯೆಟ್ನಾಂನಲ್ಲಿ ಅಮೆರಿಕ ಯುದ್ಧ ಅಂತ್ಯ**

ಕಿಬ್ಬಿಸ್ಕನ್, ಫ್ಲಾರಿಡ, ಜ. 15– ಉತ್ತರ ವಿಯೆಟ್ನಾಂ ಮೇಲೆ ಮಿಲಿಟರಿ ಆಕ್ರಮಣ ನಿಲ್ಲಿಸುವಂತೆ ಅಮೆರಿಕದ ಅಧ್ಯಕ್ಷ ನಿಕ್ಸನ್ ಅವರು ಆಜ್ಞೆ ಮಾಡಿದ್ದಾರೆ.

ಪ್ಯಾರಿಸ್ ಶಾಂತಿ ಮಾತುಕತೆಯಲ್ಲಿನ ಪ್ರಗತಿಯ ಕಾರಣದಿಂದಾಗಿ ಉತ್ತರ ವಿಯೆಟ್ನಾಂನಲ್ಲಿ ಎಲ್ಲ ಬಗೆಯ ಮಿಲಿಟರಿ ಆಕ್ರಮಣ ಚಟುವಟಿಕೆಗಳನ್ನು ನಿಲ್ಲಿಸುವಂತೆ ನಿಕ್ಸನ್ ಆಜ್ಞೆ ಮಾಡಿರುವುದಾಗಿ ಶ್ವೇತ ಭವನದ ಪ್ರಕಟಣೆ ತಿಳಿಸಿದೆ.

● **ಬಿಇಎಲ್‌ಗೆ ಪೋಲೆಂಡ್ ಪ್ರಧಾನಿ ಭೇಟಿ**

ಬೆಂಗಳೂರು, ಜ. 15– ಪೋಲೆಂಡ್‌ನ ಪ್ರಧಾನಿ ಪಿಯೊಟರ್ ಜರೋಸ್ಜೆವಿಕ್ ಅವರು ಇಂದು ಬಿ.ಇ.ಎಲ್. ಕಾರ್ಖಾನೆಗೆ ಭೇಟಿ ನೀಡಿ, ಅಲ್ಲಿನ ಕಾರ್ಯವಿಧಾನಗಳನ್ನು ವೀಕ್ಷಿಸಿದರು.

ಕಾರ್ಖಾನೆಯ ಮ್ಯಾನೇಜಿಂಗ್ ಡೈರೆಕ್ಟರ್ ಪಿ.ಆರ್. ಸುಬ್ರಹ್ಮಣ್ಯನ್ ಅವರು ಅತಿಥಿಗಳನ್ನು ಸ್ವಾಗತಿಸಿ, ಕಾರ್ಖಾನೆಯ ನಾನಾ ವಿಭಾಗಗಳ ಪರಿಚಯ ಮಾಡಿಕೊಟ್ಟರು. ಬಿ.ಇ.ಎಲ್.ನ ಪ್ರಗತಿಯ ಬಗ್ಗೆ ಪೋಲೆಂಡ್ ಪ್ರಧಾನಿಯವರು ಮೆಚ್ಚುಗೆ ವ್ಯಕ್ತಪಡಿಸಿದರು.

ಯಾತ್ರೆಯ ವೆಚ್ಚ, ದೇಣಿಗೆಯ ಮೂಲವನ್ನು ಪಕ್ಷಗಳು ಜನರ ಮುಂದಿಡಲಿ

ಜನ ಮರುಳೋ ಯಾತ್ರೆ ಮರುಳೋ?



ಗತಿಬಿಂಬ

ವೈ.ಗ.ಜಗದೀಶ್

ಸಂಕ್ರಾಂತಿ ಮುಗಿದ ಬೆನ್ನಲ್ಲೇ, ರಾಜಕೀಯ ಸಂಕ್ರಮಣಕ್ಕೆ ದಾರಿ ಮಾಡಿಕೊಡುವ ಗೌಜು ಬಿರುಸುಗೊಂಡಿದೆ. ಐದು ವರ್ಷಕ್ಕೊಮ್ಮೆ ಮತದೇವರನ್ನು ಒಲಿಸಿಕೊಂಡು, ಅಧಿಕಾರದ ಚುಕ್ಕಾಣಿ ಹಿಡಿದ ಬಳಿಕ ತಾವೇ ದೇವರಂತೆ ಆಡುತ್ತಾ ವರವನ್ನೂ ನೆರವನ್ನೂ ಕೊಡದ ರಾಜಕಾರಣಿಗಳು ಗದ್ದುಗೆಗೇರಲು ಯಾತ್ರೆ ಶುರು ಮಾಡಿದ್ದಾರೆ.

ಐದು ವರ್ಷದ ಹಿಂದೆ ಯಾತ್ರೆ ನಡೆಸಿದ ರಾಜಕಾರಣಿಗಳು ಜನಹಿತದ ರಾಜಕಾರಣ ಮಾಡಿದ್ದು ಅಪರೂಪ. ಬೆಲೆ ಏರಿಕೆ, ನಿರುದ್ಯೋಗ, ಕೈಗೆ ಬಂದ ಬೆಳೆಗೆ ಸಿಗದ ಬೆಲೆ, ಕೋವಿಡ್ ಕಾರಣದಿಂದ ಕಳೆದುಕೊಂಡ ಉದ್ಯೋಗ, ನಿಂತೇಹೋದ ವಹಿವಾಟು, ಸಾಲಶೂಲದ ಇರಿತದಿಂದ ಬಳಲಿ ಬೆಂಡಾದ ಮತದಾರನ ಕಷ್ಟಕ್ಕೆ ಸ್ಪಂದನೆಯೇ ಇಲ್ಲದ ಸ್ಥಿತಿ ಮುಂದುವರಿದಿದೆ. ಅಂತಹವರು ಈಗ ಯಾತ್ರೆ ಗೀಳು ಹಚ್ಚಿಕೊಂಡು ಚಳಿ-ಬಿಸಿಲೆನ್ನದೇ ಓಡಾಡತೊಡಗಿದ್ದಾರೆ. ಜನರ ಗೋಳು ಮಾತ್ರ ತಪ್ಪಿಲ್ಲ.

ಬಿಜೆಪಿ ನಾಯಕರು ಜನಸಂಕಲ್ಪ ಯಾತ್ರೆಯ ಮೊದಲ ಹಂತವನ್ನು ಮುಗಿಸಿದ್ದಾರೆ. ಅನೇಕ ಹೊಸ ಯೋಜನೆಗಳನ್ನು ಕೇಂದ್ರ-ರಾಜ್ಯ ಸರ್ಕಾರಗಳು ಜಾರಿಗೆ ತಂದಿದ್ದರೂ, ಅವು ಅಧಿಕಾರವನ್ನು ಕೊಡಿಸುವುದು ಕಷ್ಟ. ಭ್ರಷ್ಟಾಚಾರ, ಆಡಳಿತ ವೈಫಲ್ಯ, ನೇಮಕಾತಿಗಳಲ್ಲಿ ಅಕ್ರಮ, ಸಾಮರಸ್ಯ ಕದಡುವ ಘಟನೆಗಳಿಗೆ ಬೆಂಬಲ ನೀಡಿದ್ದಾರೆಂಬ ಗುರುತರ ಆರೋಪಗಳು ಆಡಳಿತಾರೂಢರ ಮೇಲೆ ಇವೆ. ಹೀಗಾಗಿ ಅಭಿವೃದ್ಧಿಯ ಮಂತ್ರವು ಗೆಲುವಿನ ಕಡೆಗೆ ತಮ್ಮನ್ನು ಕೊಂಡೊಯ್ಯಲಾರದು ಎಂಬುದು ಗೊತ್ತಾದಂತಿದೆ. ಕೋಮುದ್ವೇಷ ಬಿತ್ತಿ ಮತವನ್ನು ಕ್ರೋಡೀಕರಿಸಿಕೊಳ್ಳುವ ಹಾಗೂ ಜಾತಿಕೇಂದ್ರಿತ ರಾಜಕಾರಣದ ಮುಖೇನ ನಿರ್ದಿಷ್ಟ ಜಾತಿ ಮತವನ್ನು ತಮ್ಮ ತೆಕ್ಕೆಗೆ ತೆಗೆದುಕೊಳ್ಳುವ ಕಡೆಗೆ ಬಿಜೆಪಿ ರಾಜಕಾರಣ ಗಿರಕಿ ಹೊಡೆಯುತ್ತಿದೆ.

ಡಬಲ್ ಎಂಜಿನ್ ಸರ್ಕಾರ ಬಂದರೆ ಅಭಿವೃದ್ಧಿಯ ಹೊಳೆ ಹರಿಯಲಿದೆ ಎಂದು ಬಿಜೆಪಿ ನಾಯಕರು ಹೇಳಿದ್ದರು. ಆದರೆ, ಕೇಂದ್ರದಿಂದ ಕರ್ನಾಟಕಕ್ಕೆ ನ್ಯಾಯ ಸಮ್ಮತವಾದ ಪಾಲು ಬಂದಿಲ್ಲ. ಅನೇಕ ಯೋಜನೆಗಳಿಗೆ ಕತ್ತರಿ ಬಿದ್ದಿದೆ. ಮಹದಾಯಿ, ಮೇಕೆದಾಟು ಯೋಜನೆಗಳಿಗೆ ನಿರೀಕ್ಷಿತ ಬೆಂಬಲ ಕೇಂದ್ರದಿಂದ ಸಿಕ್ಕಿಲ್ಲ. ಹತ್ತಾರು ಯೋಜನೆಗಳ ಅನುಮೋದನೆ ನನೆಗುದಿಗೆ ಬಿದ್ದಿದೆ. ಕೇಂದ್ರ-ರಾಜ್ಯದಲ್ಲಿ ಬೇರೆ ಬೇರೆ ಪಕ್ಷದ ಸರ್ಕಾರಗಳು ಇದ್ದಾಗ, ಒತ್ತಡ ಹೇರಿ ಕೆಲಸ ಮಾಡಿಸಿಕೊಳ್ಳುವ ಅವಕಾಶ ಇರುತ್ತದೆ. ಅದು ಈಗ ಇಲ್ಲ. ಹೀಗಾಗಿ, ಕೇಂದ್ರ ಸರ್ಕಾರದ ತಾರತಮ್ಯ ಧೋರಣೆ ಹೆಚ್ಚುತ್ತಲೇ ಇದೆ.

ಈ ಕಾರಣಕ್ಕಾಗಿಯೇ, ಕಾಂಗ್ರೆಸ್ ನೀಡುತ್ತಿರುವ ಒಂದೊಂದು ಚುನಾವಣಾ ಭರವಸೆಯೂ ಬಿಜೆಪಿ ನಾಯಕರಿಗೆ ಸವಾಲಿನಂತೆ ಭಾಸವಾಗುತ್ತಿದೆ. ಅಧಿಕಾರಕ್ಕೆ ಬಂದರೆ ಪ್ರತೀ ಕುಟುಂಬಕ್ಕೆ 200 ಯೂನಿಟ್ ವಿದ್ಯುತ್ ಉಚಿತವಾಗಿ ನೀಡುವುದಾಗಿ ಕಾಂಗ್ರೆಸ್ ನಾಯಕರು ಹೇಳಿದ್ದೇ ತಡ, ಅದು ಅಸಾಧ್ಯ ಎಂದು ಮುಖ್ಯಮಂತ್ರಿಯಾದಿಯಾಗಿ ಬಿಜೆಪಿ ನಾಯಕರು ಹುಯಿಲೆಬ್ಬಿಸಿದರು. ಉಚಿತ ವಿದ್ಯುತ್ ಕೊಡಲಾಗದೇ ಇದ್ದರೆ ಅದಕ್ಕೆ ತಕ್ಕ ಉತ್ತರವನ್ನು ರಾಜ್ಯದ ಜನರು ಆ ಪಕ್ಷಕ್ಕೆ ಕೊಡಲಿದ್ದಾರೆ. ಕಾಂಗ್ರೆಸ್ ಭರವಸೆಯನ್ನು ಎದುರಿಸುವುದೆಂದರೆ ಈಗಿನಿಂದಲೇ 200 ಯೂನಿಟ್ ವಿದ್ಯುತ್ ಅನ್ನು ಉಚಿತವಾಗಿ ಕೊಡುವ ಯೋಜನೆ ಜಾರಿ ಮಾಡುವುದೇ ಆಗಿದೆ. ವಿದ್ಯುತ್ ಬೆಲೆ ಇಳಿಸುವ ಧೈರ್ಯವನ್ನು, ಕಾಂಗ್ರೆಸ್ ಭರವಸೆಯನ್ನು ಟೀಕೆ ಮಾಡುತ್ತಿರುವ ಇಂಧನ ಸಚಿವ ಸುನಿಲ್‌ಕುಮಾರ್ ಹಾಗೂ ಸರ್ಕಾರ ತೋರಲಿ.

ಸರ್ಕಾರಕ್ಕೆ ಅದು ಸಾಧ್ಯವಾಗದು. ಹೀಗಾಗಿ, 'ರಸ್ತೆ-ಚರಂಡಿ ಸಮಸ್ಯೆಯ ಬಗ್ಗೆ ಚರ್ಚಿಸುವುದು ಬಿಡಿ; 'ಲವ್ ಜಿಹಾದ್' ಬಗ್ಗೆ ಚರ್ಚೆ ನಡೆಸಿ' ಎಂದು ಬಿಜೆಪಿ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಕರೆ ಕೊಟ್ಟಿದ್ದಾರೆ. ಇತ್ತ, ರಾಮನಗರದಲ್ಲಿ ರಾಮದೇವರ ಬೆಟ್ಟದ ಅಭಿವೃದ್ಧಿ, ಕೆಂಪೇಗೌಡರ ಪ್ರತಿಮೆ ಅನಾವರಣ, ಟಿಪ್ಪು ವಿವಾದ, ಪರಿಶಿಷ್ಟ ಜಾತಿ-ಪಂಗಡದವರ ಮೀಸಲಾತಿ ಪ್ರಮಾಣ ಹೆಚ್ಚಳದಂತಹ ಮತಾಕರ್ಷಕ ದಾರಿಗಳನ್ನು ಬಿಜೆಪಿ ಹುಡುಕಿಕೊಂಡಂತಿದೆ. ಆದರೂ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, ಕಾಂಗ್ರೆಸ್‌ನ ಭರವಸೆಗೆ ಸವಾಲೊಡ್ಡುವಂತೆ ಕುಟುಂಬ ನಿರ್ವಹಣೆಗಾಗಿ ಮಹಿಳೆಯರಿಗೆ ₹ 2 ಸಾವಿರದವರೆಗೆ ಕೊಡುಗೆ ಕೊಡುವ ಘೋಷಣೆ ಮಾಡಿದ್ದಾರೆ. ಅದನ್ನು ಜಾರಿಗೊಳಿಸುವ ದಾರಿಯನ್ನೇನೂ ಅವರು ಹೇಳಿಲ್ಲ.

ಮೇಕೆದಾಟು ಯಾತ್ರೆಯ ಯಶಸ್ಸು ಕಂಡ ಕಾಂಗ್ರೆಸ್ ನಾಯಕರು, ಈಗ ಪ್ರಜಾಧ್ವನಿ ಹೆಸರಿನಲ್ಲಿ ಬಸ್ ಯಾತ್ರೆ ಆರಂಭಿಸಿದ್ದಾರೆ. ಬಿಜೆಪಿ ನೇತೃತ್ವದ ಸರ್ಕಾರದ ವೈಫಲ್ಯ, ತಮ್ಮ ಹಿಂದಿನ ಸರ್ಕಾರದ ಸಾಧನೆಯನ್ನು ಮುಂದಿಟ್ಟು ಮತಯಾಚಿಸಲು ಮುಂದಾಗಿರುವ ಕಾಂಗ್ರೆಸ್ ನಾಯಕರು, ಹೊಸ ಭರವಸೆಗಳನ್ನೂ ಕೊಡುತ್ತಿದ್ದಾರೆ. 2018ರ ಪ್ರಣಾಳಿಕೆಯಲ್ಲಿ ಬಿಜೆಪಿ ಘೋಷಿಸಿದ್ದ ಯೋಜನೆಗಳನ್ನು ಜಾರಿ ಮಾಡಿಲ್ಲ ಎಂದು ಟೀಕಿಸುತ್ತಿದ್ದಾರೆ. ಬಿಜೆಪಿಯನ್ನು ಎದುರಿಸಬೇಕಾದರೆ ಆಳುವ ಪಕ್ಷದ ನಡವಳಿಕೆಯನ್ನು ಟೀಕೆ ಮಾಡಿದರೆ ಮಾತ್ರ ಸಾಲದು, ಅನುಷ್ಠಾನ ಯೋಗ್ಯವಾದ ಯೋಜನೆಗಳನ್ನು ಜನರು ಒಪ್ಪುವ ರೀತಿಯಲ್ಲಿ ಮತದಾರರ ಮುಂದಿಡಬೇಕು.

2013ರ ಪೂರ್ವದಲ್ಲಿ ಕೃಷ್ಣಾ ಮೇಲ್ದಂಡೆ ಸೇರಿದಂತೆ ನೀರಾವರಿ ಯೋಜನೆಗಳನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು ಎಂದು ಕಾಂಗ್ರೆಸ್ ನಾಯಕರು ಘೋಷಿಸಿದ್ದರು. ಆದರೆ, ಐದು ವರ್ಷ ಏಕಪಕ್ಷದಲ್ಲಿ, ಒಂದು ವರ್ಷ ಮೈತ್ರಿ ಸರ್ಕಾರದಲ್ಲಿ ಆಡಳಿತ ನಡೆಸಿದರೂ ಭರವಸೆ ಸಾಕಾರವಾಗಲಿಲ್ಲ. 200 ಯೂನಿಟ್ ವಿದ್ಯುತ್ ಉಚಿತ ಘೋಷಣೆಯೇನೋ ಆಕರ್ಷಕವಾಗಿದೆ. ಹೀಗೆ ಘೋಷಣೆ ಮಾಡುವಾಗ ಉತ್ಪಾದನಾ ವೆಚ್ಚವೆಷ್ಟು, ಆ ಮೊತ್ತವನ್ನು ಎಲ್ಲಿಂದ ಸರಿದೂಗಿಸಲಾಗುತ್ತದೆ ಎಂಬುದನ್ನೂ ಜನರ ಮುಂದಿಡಬೇಕು. ಅದನ್ನು ನೀಡದೇ, ಕುಟುಂಬಕ್ಕೆ ಇಷ್ಟು ಕೊಡುತ್ತೇವೆ ಎಂದು ಹೇಳಿದರೆ ಜನ ನಂಬಲಾರರು.

ಎರಡು ರಾಷ್ಟ್ರೀಯ ಪಕ್ಷಗಳಿಗಿಂತ ಒಂದು ಹೆಜ್ಜೆ ಮುಂದಿರುವ ಜೆಡಿಎಸ್ ನಾಯಕ ಎಚ್.ಡಿ. ಕುಮಾರಸ್ವಾಮಿ, ಜನತಾ ಜಲಧಾರೆ ಯಾತ್ರೆ ಮುಗಿಸಿದ್ದಾರೆ. ಎರಡನೇ ಸುತ್ತಿನಲ್ಲಿ ಪಂಚರತ್ನ ಯಾತ್ರೆ ನಡೆಸುತ್ತಿದ್ದಾರೆ. ರೈತರ ಸಾಲಮನ್ನಾ, ನೀರಾವರಿ ಯೋಜನೆಗಳ ಅನುಷ್ಠಾನದಂತಹ ಜನಪ್ರಿಯ ಘೋಷಣೆ ಮಾಡಿರುವ ಅವರು, ಅದರ ಜಾರಿಗೆ ಹಣ ಹೊಂದಿಸುವ ಬಗೆಯನ್ನೂ ವಿವರಿಸುತ್ತಿದ್ದಾರೆ.

ವಿಭಿನ್ನ ರೀತಿಯ ಹೋರಾಟ ನಡೆಸುತ್ತಿರುವ ಕರ್ನಾಟಕ ರಾಷ್ಟ್ರ ಸಮಿತಿಯ (ಕೆಆರ್‌ಎಸ್) ರವಿಕೃಷ್ಣಾ ರೆಡ್ಡಿ, ಜನರಿಗೆ ನೇರವಾಗಿ ತಟ್ಟುವ ವಿಷಯಗಳ ಕಡೆಗೆ ಗಮನಹರಿಸಿದ್ದಾರೆ. ಲಂಚಬಾಕರ ಕೇಂದ್ರಗಳಾಗಿರುವ ಸರ್ಕಾರಿ ಕಚೇರಿಗಳ ಮುಂದೆ ನಿಂತು ಹೋರಾಟ ನಡೆಸುತ್ತಿರುವ ಕೆಆರ್‌ಎಸ್, ಲಂಚಮುಕ್ತ ಕರ್ನಾಟಕದ ಘೋಷಣೆ ಮುಂದಿಟ್ಟಿದೆ. ನವೆಂಬರ್‌ನಲ್ಲಿ ಕನ್ನಡೋತ್ಸವ ಯಾತ್ರೆ ನಡೆಸಿ, ಚುನಾವಣೆಗೆ ಜನರಿಂದ ನೇರವಾಗಿ ವಂತಿಗೆ ಸಂಗ್ರಹಿಸುವ ಗುರಿಯೊಂದಿಗೆ ಮಹಾ ಭಿಕ್ಷಾಯಾತ್ರೆ ನಡೆಸುತ್ತಿದೆ. ಪ್ರತೀ ತಿಂಗಳು ಸಂಗ್ರಹವಾದ ದೇಣಿಗೆ, ವೆಚ್ಚದ ಲೆಕ್ಕವನ್ನು ಕೆಆರ್‌ಎಸ್ ಕೊಡುತ್ತಿದೆ.

ಉಳಿದ ಪಕ್ಷಗಳು ಕೂಡ ತಾವು ನಡೆಸುತ್ತಿರುವ ಯಾತ್ರೆಗೆ ಆಗುತ್ತಿರುವ ಖರ್ಚು, ಅದರ ಮೂಲ, ದೇಣಿಗೆಯ ವಿವರವನ್ನು ಜನರ ಮುಂದಿಡುವ ಕೆಲಸ ಮಾಡಬೇಕು. ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಅವರು ಈಗ ತಿಂಗಳಿಗೆ ಎರಡು ಮೂರು ಬಾರಿ ರಾಜ್ಯಕ್ಕೆ ಬರಲಾರಂಭಿಸಿದ್ದಾರೆ. ಅವರಿಂದ ಯೋಜನೆಗಳಿಗೆ ಚಾಲನೆ ಕೊಡಿಸುವುದು ತಪ್ಪಲ್ಲ. ಆದರೆ, ಅದು ಮತಪ್ರಚಾರದ ಕಾರ್ಯಕ್ರಮವಾಗುತ್ತಿದೆ. ಯುವ ಜನೋತ್ಸವಕ್ಕೆ ಬಂದ ಮೋದಿಯವರು, ಎಂಟು ಕಿ.ಮೀ. ರೋಡ್ ಷೋ ನಡೆಸಿದರು. ಅದೇನೂ ಅಕ್ಷಮ್ಯವಲ್ಲ. ಆದರೆ, ಜನರು ತೆರಿಗೆ ರೂಪದಲ್ಲಿ ನೀಡಿದ ದುಡ್ಡನ್ನು ಈ ಕಾರ್ಯಕ್ರಮಕ್ಕೆ ವೆಚ್ಚ ಮಾಡಲಾಗುತ್ತಿದೆ. ಅದರ ಲೆಕ್ಕವನ್ನು ಸರ್ಕಾರವು ಜನರ ಮುಂದಿಡಬೇಕು. ಆಗ ಮಾತ್ರವೇ ವೆಚ್ಚದಲ್ಲಿ ಪಾರದರ್ಶಕತೆ ಬಂದು, ಜನರಿಗೆ ವಿಶ್ವಾಸ ಮೂಡೀತು.



ಚುರುಮುರಿ



ವಿಲಾಸ ವಿಹಾರ

● ಸುಮಂಗಲಾ

'ನನಗೊಂದು ಇಪ್ಪತ್ತು ಲಕ್ಷ ರೂಪಾಯಿ ರೊಕ್ಕ ಕೊಡು...' ಬೆಕ್ಕಣ್ಣ ಬೆಳ್ಬೆಳಗ್ಗೆ ವರಾತ ಹಚ್ಚಿತು.

'ನನ್ನ ಹತ್ತಿರ ಇಪ್ಪತ್ತು ಸಾವ್ರನೂ ಇಲ್ಲ. ನಾ ಜುಜುಬಿ ಸಂಬಳದ ನೌಕರಿ ಮಾಡತೀನಿ. ಎರಡೇ ವರ್ಷದಾಗೆ ನನ್ನ ಆದಾಯ ಡಬಲ್ ಟ್ರಿಪಲ್ ಆಗಾಕೆ ನಂದೇನು ಅದಾನಿ ಥರಾ ಕಂಪನಿ ಐತೇನು...' ನಾನು ವದರಾಡಿದೆ.

'ಹೋಗ್ಲಿ... ಬ್ಯಾಂಕಿನಾಗೆ ಸಾಲ ಎತ್ತಿಸಿಕೊಡು. ಸಾಲ ತೀರಿಸಲೇಬೇಕು ಅಂತೇನಿಲ್ಲ. ಎನ್‌ಪಿಎ ಅಂದ್ರ ವಸೂಲಾಗದ ಸಾಲದ ಬಾಬತ್ತಿನೊಳಗ ಬರೂ ಹಂಗ ಮಾಡೂಣು. ಕೇಳೀಯಿಲ್ಲೋ... ಮುಂಬೈ ಕಂಪನಿಯೊಂದು ಸುಮಾರು 5,000 ಕೋಟಿ ಸಾಲ ಎನ್‌ಪಿಎ ಅಂತ ಬರೋಡ ಬ್ಯಾಂಕಿಗೆ ಟೋಪಿ ಹಾಕೈತಂತ' ಬೆಕ್ಕಣ್ಣ ತಾನೂ ಬ್ಯಾಂಕಿಗೆ ಟೋಪಿ ಹಾಕುವ ಕನಸು ಕಾಣತೊಡಗಿತು.

'ಟೋಪಿ ಹಾಕೂದು ನಮ್ಮಂಥ ಶ್ರೀಸಾಮಾನ್ಯರು ಅಲ್ಲಲೇ... ಅದಕ್ಕೆ ಬ್ಯಾರೇದೇ ಶಾಣ್ಯಾತನ ಬೇಕಾಗತೈತಿ. ಅದ್ಸರಿ... ಈಗೆದಕ್ಕೆ ಇಪ್ಪತ್ ಲಕ್ಷ?'

'ಮೋದಿ ಮಾಮಾ ಗಂಗಾ ವಿಲಾಸ ಅಂತ ನೌಕಾ ವಿಹಾರ ಶುರು ಮಾಡ್ಯಾರಲ್ಲ... ನಾನೂ ಅದ್ರಾಗೆ ಪ್ರವಾಸ ಹೋಗತೀನಿ. ಎಷ್ಟಕೊಂದು ತೀರ್ಥಕ್ಷೇತ್ರ ದರ್ಶನನೂ ಆಗತೈತಿ. ಕಾಂಗಿಗಳು ಅಷ್ಟ್ ವರ್ಷ ಇದ್ರೂ ಹಿಂತಾ ಅಭಿವೃದ್ಧಿ ಯೋಚನೆನೇ ಮಾಡಿರಲಿಲ್ಲ. ಈಗ ವಿಲಾಸಿ ನೌಕಾ ವಿಹಾರಕ್ಕೆ ಬ್ಯಾರೆ ದೇಶಕ್ಕೆ ಹೋಗೂದೇ ಬ್ಯಾಡ, ನಮ್ಮಲ್ಲೇ ಸಿಗತೈತಿ' ಉದ್ದಕ್ಕೆ ಭಾಷಣ ಕುಟ್ಟಿತು.

'ಅಲ್ಲಲೇ... ಆ ವಿಲಾಸೀ ನೌಕೆ ಗಂಗಾ ನದಿಯ ಡಾಲ್ಫಿನ್ ವಲಯದೊಳಗೆ ಹೋಗತೈತಿ. ಅದ್ರಿಂದ ಡಾಲ್ಫಿನ್‌ಗಳಿಗೆ ಅಪಾಯ ಆಗತೈತಿ. ಹಿಂಗ ಪ್ರವಾಸೀ ತಾಣ ಅಭಿವೃದ್ಧಿ ಅಂತ ಹಾರಾಡಿದ್ದಕ್ಕೆ ಉತ್ತರಾಖಂಡದ ಜೋಶಿಮಠ ಮಕಾಡೆ ಬಿದ್ದೈತಿ. ಐಷಾರಾಮಿ ರೆಸಾರ್ಟ್, ಹೈವೇ, ಡ್ಯಾಂ ಕಟ್ಟೂದು, ಹಿಂತಾ ಅಭಿವೃದ್ಧಿ ಪರಿಸರಮಾತೆಗೆ ವಜ್ಜೆ ಆಗತೈತಿ'.

ಬೆಕ್ಕಣ್ಣ ನನ್ನ ಮಾತು ಕಿವಿಗೇ ಹಾಕಿಕೊಳ್ಳಲಿಲ್ಲ.

'ಒಂದು ಜೋಶಿಮಠ ಬಿದ್ದರೇನಾತು... ಹಂತಾ ಹತ್ತು ಪ್ರವಾಸೀ ನಗರ ಕಟ್ಟತೀವೇಳು' ಉಡಾಫೆಯಿಂದ ನಕ್ಕಿತು!

ಚರ್ಚೆ

ನೀತಿ ಬೋಧೆಗೆ ಪಠ್ಯದ ಪಾರಮ್ಯವೇಕೆ?

ಮಕ್ಕಳಿಗೆ ಸನ್ನಡತೆ ಹೇಳಿಕೊಡಲು ಯಾವ ನಿರ್ದಿಷ್ಟ ಸೂತ್ರಗಳೂ ಬೇಕಿಲ್ಲ

● ಬಿ.ಎಸ್.ಭಗವಾನ್


ನೈತಿಕ ಶಿಕ್ಷಣದ ಕುರಿತು ಈಗ ತೀವ್ರ ಚರ್ಚೆಗಳಾಗುತ್ತಿವೆ. ಉತ್ತಮ ಸಮಾಜಕ್ಕೆ ಉತ್ತಮ ಶಿಕ್ಷಣವೇ ರಹದಾರಿ. ಅಧ್ಯಾಪನ ಶಿಕ್ಷಿಸುವ ವೃತ್ತಿಯಲ್ಲ, ವಾತ್ಸಲ್ಯದ ವೃತ್ತಿ ಎಂಬ ಮಾತಿದೆ. ತರಗತಿಯಲ್ಲಿ ಪಾಠ ಬೋಧನೆ. ಟ್ಯೂಷನ್ನಿನಲ್ಲಿ ಅವೇ ವಿಷಯಗಳ ಬೋಧನೆ, ಹೋಂ ವರ್ಕ್ ಸಹ ಮತ್ತೆ ಅವವೇ ವಿಷಯಗಳಲ್ಲಿ. ಇದ್ದುದರಲ್ಲಿ ಅಷ್ಟು ಬಿಡುವು ಮಾಡಿಕೊಂಡು ಪೋಷಕರು ತಮ್ಮ ಮಕ್ಕಳೊಂದಿಗೆ ನಡೆಸುವ ಲೋಕಾಭಿರಾಮದಲ್ಲೂ ಅದೇ ಅಜೆಂಡಾ!

ಒಬ್ಬ ಅಧ್ಯಾಪಕರು ಶಾಲೆಗೆ ರಜೆ ಹಾಕಿದ್ದಾರೆನ್ನಿ. ಅವರು ತೆಗೆದುಕೊಳ್ಳಬೇಕಾದ ತರಗತಿಯಲ್ಲಿ ಬಹುತೇಕ ಆಗುವುದೇನು? ಮತ್ತೊಬ್ಬ ಅಧ್ಯಾಪಕರಿಂದ ತಾವು ಬೋಧಿಸುವ ವಿಷಯದ ಪಠ್ಯಕ್ರಮದ ಒಂದಷ್ಟು ಮುನ್ನಡೆ! ಮಕ್ಕಳಿಗೆ ಬದುಕಿಗೆ ಪೂರಕವಾದ ನಡೆ ನುಡಿಗಳ ಪರಿಚಯಕ್ಕೆ ವ್ಯವಧಾನ ಎಲ್ಲಿ? ಇಳಿಯುವವರಿಗೆ ಅವಕಾಶ ಕೊಡದೆ ಬಸ್ಸು ಹತ್ತಲು ಹಪಹಪಿಸುವ ಹೈಕಳನ್ನು 'ಇದೇನಾ ಸ್ಕೂಲ್ನಲ್ಲಿ ಕಲಿತಿದ್ದು' ಅಂತ ಬಸ್ ಕಂಡಕ್ಟರ್ ಗದರುವುದಿದೆ. ರಜೆ ಬಂತೆಂದರೆ ಹಾದಿ ಬೀದಿಯಲ್ಲಿ ಕೂಗಾಡುತ್ತ, ಚೀರಾಡುತ್ತ ಕ್ರಿಕೆಟ್‌ನಲ್ಲಿ ಮೈಮರೆಯುವ ಮಕ್ಕಳನ್ನು ವೃದ್ಧರು ಶಪಿಸುವುದಿದೆ. ಮೃಗಾಲಯದಲ್ಲಿ ಮಕ್ಕಳು ಹುಲಿ, ಸಿಂಹವನ್ನು ವಿನಾಕಾರಣ ಕೆಣಕಿ ಅವುಗಳ ಆಕ್ರೋಶಕ್ಕೊಳಗಾಗುವುದಿದೆ. ಈ ವರ್ತನೆಗಳಲ್ಲಿ ಅತಿಶಯ ಕಾಣಬೇಕಾದ್ದಿಲ್ಲ. ಶಾಲೆಯ ಓದು, ಬರಹದ ಜೊತೆಗೆ ಮಕ್ಕಳು ಒಂದಷ್ಟು ಸಂಯಮ, ಪರರಿಗಾಗಿ ಮಿಡಿಯುವ ಸಂಪನ್ನತೆ, ಪರಿಸರ ಪ್ರಜ್ಞೆ ಮೂಡಿಸಿಕೊಂಡಿದ್ದರೆ ಅವರ ಹೊಣೆಗೇಡಿತನಕ್ಕೆ ಸ್ವಲ್ಪ ಮಟ್ಟಿಗಾದರೂ ಕಡಿವಾಣ ಬೀಳುವುದು.

ನೈತಿಕ ಶಿಕ್ಷಣ ಗುಣಾತ್ಮಕ ಶಿಕ್ಷಣದ ಅವಿಭಾಜ್ಯ ಅಂಗ. ಅಂಕಪಟ್ಟಿ ಎನ್ನುವುದು ಒಂದು ಹಾಳೆ ಮಾತ್ರ. ಪಡೆದ ಶಿಕ್ಷಣ ವ್ಯಕ್ತವಾಗುವುದು ವರ್ತನೆಯಲ್ಲಿ. ಹಾಗಾಗಿ 'ಎಜುಕೇಷನ್ ಬಿಯಾಂಡ್ ಅಕಡೆಮಿಕ್' ಪರಿಕಲ್ಪನೆ ಶಿಕ್ಷಣದ ಆರಂಭದಲ್ಲೇ ಕಾರ್ಯರೂಪಕ್ಕೆ ಬರಬೇಕಿದೆ. ಈ ಸಹಜ ಅಭಿಯಾನ 'ನೈತಿಕ ಶಿಕ್ಷಣ', 'ಮಾರಲ್ ಕ್ಲಾಸ್' ಎಂಬ ಹೆಸರಿನಿಂದ ಕರೆಸಿಕೊಳ್ಳಬೇಕಿಲ್ಲ ಅಥವಾ ಒಂದು ವಿಷಯವಾಗಿರಬೇಕಿಲ್ಲ. ಪಠ್ಯ ಮರೆತುಹೋಗುತ್ತದೆ, ಆದರೆ ವಿದ್ಯಾಲಯದಲ್ಲಿ ಮನಗಾಣಿಸಿದ ಮೌಲ್ಯಗಳು ಜೀವನಪರ್ಯಂತ ನೆನಪಿನಲ್ಲಿರುತ್ತವೆ. ಮಕ್ಕಳಲ್ಲಿ ಉತ್ತಮ ನಡತೆ ರೂಪಿಸಲು ಅವರ ಸಾಮಾನ್ಯ ಪ್ರಜ್ಞೆಗಿಂತ ಅಡಿಗಲ್ಲಿಲ್ಲ. ಇಂತಹ ಗ್ರಂಥಗಳನ್ನೇ ಓದಿ, ಅನುಸರಿಸಿ ಎನ್ನುವ ಒತ್ತಾಯದಿಂದ ಗೌಜು, ರಂಪವಷ್ಟೆ. ರೀತಿ, ನೀತಿಗಳನ್ನು ಮಕ್ಕಳಿಗೆ ಸರಳವಾಗಿ ಬೋಧಿಸಬಹುದು. ಅವರು ಸಹಜವಾಗಿ ಕಾಣುವ, ಕೇಳುವ ಸಂಗತಿಗಳಲ್ಲಿನ ಒಪ್ಪು-ತಪ್ಪುಗಳನ್ನು ಉದಾಹರಿಸಿ ಮನಮುಟ್ಟುವಂತೆ ವಿವರಿಸುವುದು ಪರಿಣಾಮಕಾರಿ.

ಕಥಾನಕವು ಉತ್ತಮ ಸಂದೇಶಗಳ ರವಾನೆಗೆ ಅಂಬಾರಿ. ಕಥಾನಾಯಕ ಸತ್ಯ ನುಡಿಯಲು ಕಲಿಯುವ ಸಂದರ್ಭಗಳು ಮಕ್ಕಳಿಗೆ ಚೆನ್ನಾಗಿ ನಾಟುತ್ತವೆ. ಕಠಿಣವಾದರೂ ಸದಾ ಸತ್ಯ ಹೇಳಬೇಕು, ಸರಿಯೆಂದು ತೋರುವುದನ್ನು ಧೈರ್ಯದಿಂದ ನಿರ್ವಹಿಸುವ ಗುಣ ಜಾಯಮಾನವಾಗುವುದು. ನಾಗರಿಕತೆ, ಸೌಹಾರ್ದ ಭಾವ, ಪ್ರಾಮಾಣಿಕತೆ, ಉತ್ತರದಾಯಿತ್ವದಂಥ ಗುಣಗಳು ಪಠ್ಯಕ್ರಮಕ್ಕಿಂತ ಮುಖ್ಯ. ಶಿಕ್ಷಕರು ಮಕ್ಕಳೊಂದಿಗೆ ಆಡಿದರೂ ಆಯಾ ಕ್ರೀಡೆಯ ನಿಯಮಗಳು ಮಕ್ಕಳಿಗೆ ತಿಳಿದು, ನಿಜಜೀವನದಲ್ಲಿ ಹೇಗೆ ನಡೆದುಕೊಳ್ಳಬೇಕೆಂಬ ಅರಿವು ಪರೋಕ್ಷವಾಗಿ ಮೂಡುತ್ತದೆ. ಮನೋವಿಜ್ಞಾನಿ ಸಿಗ್ಮಂಡ್ ಫ್ರಾಯ್ಡ್ ಹೇಳುವಂತೆ, ಮೌಲ್ಯಗಳು ವ್ಯಕ್ತಿಯಲ್ಲಿ ಹುಟ್ಟುವುದಿಲ್ಲ, ಅವನ್ನು ಪೋಷಿಸಬಹುದಷ್ಟೆ. ಮತ್ತೊಬ್ಬರಿಗೆ ತೊಂದರೆ ಕೊಡಬೇಡ, ಅವರೂ ನಿನ್ನ ಹಾಗೆಯೇ ಎಂಬ ತಿಳಿವಳಿಕೆಗೆ ಸಾಮಾನ್ಯ ಪ್ರಜ್ಞೆಯೇ ಸಾಕು, ಯಾವುದೇ ಪುಸ್ತಕದ ಪರಾಮರ್ಶನ ಬೇಕಿಲ್ಲ.

'ಮಕ್ಕಳಿಸ್ಕೂಲ್ ಮನೇಲಲ್ವೆ?' ಕೈಲಾಸಂ ಅವರ ಈ ನುಡಿ ನೈತಿಕ ಬೋಧನೆಗೂ ಅನ್ವಯಿಸುವುದು. ಮನೆ ಮನೆಯೂ ನೈತಿಕ ಶಿಕ್ಷಣಾಲಯವಾಗಿ, ಪೋಷಕರು ಗುರುವರ್ಯರಾಗಿ ಶಿಸ್ತು, ಸಹಬಾಳ್ವೆ, ವಿನಯದಂತಹ ಸದ್ಗುಣಗಳನ್ನು ಮಕ್ಕಳಿಗೆ ಪರಿಚಯಿಸಬಹುದು, ನಡೆ ನುಡಿಗಳನ್ನು ಹೇಳಿಕೊಡಬಹುದು. ಅವರು ಮಕ್ಕಳೊಂದಿಗೆ ಮಕ್ಕಳಾಗಿ ಓದುವುದು, ಬರೆಯುವುದು, ಚಿಂತಿಸುವುದರಿಂದ ಆಗುವ ಉತ್ತೇಜನಕ್ಕೆ ಸಾಟಿಯಿಲ್ಲ.



ಶಾಲೆಯಲ್ಲಿ ಇಂದು ಕಲಿಯುತ್ತಿರುವ ಅದ್ಭುತ ಅಧ್ಯಾಯಗಳು ಹಲವು ಪೀಳಿಗೆಗಳು ಜ್ಞಾನಕ್ಕಾಗಿ ಪಟ್ಟ ಪರಿಶ್ರಮದ ಫಲಗಳೆನ್ನುವುದನ್ನು ಮನದಟ್ಟಾಗಿಸಬೇಕು. 'ಶಿಕ್ಷಣ ಎಂದರೆ ಶಾಲೆಯಲ್ಲಿ ಕಲಿತಿದ್ದೆಲ್ಲವೂ ಮರೆತುಹೋಗಿ ಉಳಿದಿದ್ದು' ಎನ್ನುವುದು ವಿಜ್ಞಾನಿ ಐನ್‌ಸ್ಟೀನ್ ಅವರ ಪ್ರಖರ ಮಾತು. ಸನ್ನಡತೆ ಹೇಳಿಕೊಡಲು ಯಾವ ನಿರ್ದಿಷ್ಟ ಸೂತ್ರಗಳೂ ಬೇಕಿಲ್ಲ. ನಿತ್ಯ ಜೀವನದಲ್ಲಿ ಘಟಿಸುವ ಅನುಭವಗಳಿಂದಲೇ ಮಕ್ಕಳು ಕಲಿಯಬಲ್ಲರು. ಹರಿಯ ಬಯಸುವ ನೀರಿಗೆ ಅಡೆತಡೆಯಾಗುವ ಕಲ್ಲುಗಳನ್ನು ಪಕ್ಕಕ್ಕೆ ಸರಿಸುವಂತೆ ಅವರಿಗೆ ಕಿಂಚಿತ್ತು ಪ್ರೋತ್ಸಾಹ ತುಂಬಿದರಾಯಿತು, ಸರಾಗವಾಗಿ ಅರಿತಾರು.

ಬೀಚಿಯವರು ತಮ್ಮ ಪ್ರಸಿದ್ಧ 'ತಿಂಮನ ತಲೆ' ಕೃತಿಯಲ್ಲಿ ಶಿಷ್ಯನೇ ಗುರುವಿನ ಕಣ್ತೆರೆಸುವ ಪ್ರಸಂಗವೊಂದನ್ನು ಸೊಗಸಾಗಿ ಚಿತ್ರಿಸಿದ್ದಾರೆ. ತಿಂಮ ನಿಘಂಟಿಗಾಗಿ ಮೇಷ್ಟ್ರರ ಮನೆಗೆ ಬರುತ್ತಾನೆ. 'ಇಲ್ಲೇ ನೋಡು, ಮನೆಗೆ ಒಯ್ಯಬೇಡ' ಅಂತ ಗುರುಗಳ ಷರತ್ತು. ಮುಂದೊಂದು ದಿನ ಮೇಷ್ಟರಿಗೆ ಪೊರಕೆ ಬೇಕಾಗುತ್ತದೆ. ಅವರು ತಿಂಮನ ಮನೆಗೆ ಬರುತ್ತಾರೆ. ತಿಂಮ 'ಖಂಡಿತ ಕೊಡ್ತೀನಿ ಸಾರ್, ಆದರೆ ಇಲ್ಲೇ ಬಳಸಬೇಕು' ಎನ್ನುವನು! ಮಕ್ಕಳು ಹಿರಿಯರನ್ನು ಅನುಸರಿಸುತ್ತಾರೆ ಎನ್ನಲು ಇದು ಉದಾಹರಣೆಯಾಗಬಲ್ಲದು.

ವಾಚಕರ ವಾಣಿ

ಅವರಿಗೆ ಉದ್ಯೋಗವಿಲ್ಲ, ಇವರಿಗೆ ಭದ್ರತೆಯಿಲ್ಲ

ಉದ್ಯೋಗ ಭದ್ರತೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಗ್ರಾಮ ಪಂಚಾಯಿತಿ ನೌಕರರು ಫೆಬ್ರುವರಿ 6ರಿಂದ ಅನಿರ್ದಿಷ್ಟ ಅವಧಿಯ ಧರಣಿ ನಡೆಸಲಿರುವುದಾಗಿ ವರದಿಯಾಗಿದೆ. ಸರ್ಕಾರವು ಆರ್ಥಿಕ ಹೊರೆಯನ್ನು ಕಡಿಮೆ ಮಾಡಿಕೊಳ್ಳಲು ಹಲವು ಕೆಲಸಗಳಿಗೆ ಕಡಿಮೆ ಸಂಬಳಕ್ಕೆ ಗುತ್ತಿಗೆ ಆಧಾರದಲ್ಲಿ ನೌಕರರನ್ನು ನೇಮಿಸಿಕೊಳ್ಳುತ್ತದೆ. ಕೆಲವು ವರ್ಷಗಳ ನಂತರ ಅವರು ಕೆಲಸದ ಭದ್ರತೆಗಾಗಿ ಆಗ್ರಹಿಸಿ ಧರಣಿ ನಡೆಸುವುದು ಮತ್ತು ಕೆಲಸಕ್ಕೆ ಹಾಜರಾಗದಿರುವುದು ಸರ್ವೇಸಾಮಾನ್ಯವಾಗಿದೆ.

ಇಂತಹ ಸಂದರ್ಭದಲ್ಲಿ ಸರ್ಕಾರ ಒಂದಿಷ್ಟು ಸಂಬಳ ಹೆಚ್ಚು ಮಾಡಿ ಅವರನ್ನು ಸಮಾಧಾನಪಡಿಸುವುದು ರೂಢಿಯಲ್ಲಿದೆ. ಸರ್ಕಾರದ ಈ ಧೋರಣೆಯಿಂದಾಗಿ ಉದ್ಯೋಗ ಆಕಾಂಕ್ಷಿ ಅಭ್ಯರ್ಥಿಗಳ ಪಾಲಿಗೆ ಸರ್ಕಾರಿ ಕೆಲಸಗಳು ಗಗನಕುಸುಮ ಆಗುತ್ತಿವೆ. ಮತ್ತೊಂದೆಡೆ, ಕೆಲಸವಿದ್ದೂ ಉದ್ಯೋಗ ಭದ್ರತೆ ಇಲ್ಲದೆ ಗುತ್ತಿಗೆ ನೌಕರರು ಪರದಾಡುವಂತಾಗಿದೆ. ಹೀಗೆ ಎರಡೂ ವರ್ಗದವರ ಬದುಕು ಅತಂತ್ರವಾಗಿದೆ.

ಸುನೀಲ್ ಟಿ.ಪಿ., ತಳಗವಾದಿ, ಮಳವಳ್ಳಿ

ಟೋಲ್ ಕೊಡಿ, ರಸ್ತೆ ನಿರ್ವಹಣೆ ಕೇಳಬೇಡಿ!

ತುಮಕೂರಿನಿಂದ ಚಿತ್ರದುರ್ಗದ ಕಡೆ ಇತ್ತೀಚೆಗೆ ಕಾರಿನಲ್ಲಿ ಸಾಗುತ್ತಿದ್ದ ನಾವು, ಪುಣೆ- ಬೆಂಗಳೂರು ರಸ್ತೆಯಲ್ಲಿ ಸರಣಿ ಅಪಘಾತದಿಂದ ಮೂರು ಕಾರುಗಳು ಜಖಂ ಆಗಿದ್ದನ್ನು ಕಂಡೆವು. ರಾಷ್ಟ್ರೀಯ ಹೆದ್ದಾರಿಯಲ್ಲಿ ಆಗಿರುವ ಹೊಂಡವನ್ನು ತಪ್ಪಿಸಲು ಪುಟ್ಟ ಕಾರಿನವರು ನಿಧಾನ ಮಾಡಿದ್ದರಿಂದ ಈ ಅಪಘಾತ ಸಂಭವಿಸಿತ್ತು. ಈ ರಸ್ತೆಯಲ್ಲಿ ಟೋಲ್ ಸಂಗ್ರಹಿಸಲಾಗುತ್ತದೆ. ಆದರೆ ರಸ್ತೆ ನಿರ್ವಹಣೆ ಸಮರ್ಪಕವಾಗಿ ಇಲ್ಲ. ಎಷ್ಟೋ ಕಡೆ ಹೊಂಡ, ಗುಂಡಿ ಬಿದ್ದಿವೆ. ಒಂದೇ ಒಂದು ನಿಮಿಷವೂ ಟೋಲ್ ಸಂಗ್ರಹವನ್ನು ನಿಲ್ಲಿಸದ ಸಂಸ್ಥೆ, ಅದೆಷ್ಟು ಟೋಲ್ ಶುಲ್ಕ ಗಳಿಸಿರಬಹುದು?! ಆದರೂ ರಸ್ತೆ ನಿರ್ವಹಣೆ ಮರೀಚಿಕೆ, ಅದೂ ರಾಷ್ಟ್ರೀಯ ಹೆದ್ದಾರಿಯಲ್ಲಿ!

ನಗರ ಗುರುದೇವ್ ಭಂಡಾರ್ಕರ್, ಹೊಸನಗರ, ಶಿವಮೊಗ್ಗ

ಚಲನಚಿತ್ರೋತ್ಸವ ಎಲ್ಲರನ್ನೂ ಒಳಗೊಳ್ಳಲಿ

ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಈ ಸಲ ತಡವಾಗಬಹುದು ಎಂಬ ವರದಿ (ಪ್ರ.ವಾ., ಜ. 15) ಆಶ್ಚರ್ಯ ಅಥವಾ ಆತಂಕ ಮೂಡಿಸಬೇಕಿಲ್ಲ. ಕರ್ನಾಟಕ ಚಲನಚಿತ್ರ ಅಕಾಡೆಮಿ ಎಂದು ಗೂಗಲ್ ಮಾಡಿದರೆ, ವಿಕಿಪೀಡಿಯಾ ನೋಡಿದರೆ ಹಳೆಯ ಅಧ್ಯಕ್ಷರ ಹೆಸರೇ ಕಾಣುತ್ತದೆ. ಈಗಿನವರು ಪದಗ್ರಹಣ ಮಾಡಿದ ಎರಡು ತಿಂಗಳಲ್ಲಿ ಅಕಾಡೆಮಿ ಏನಾದರೂ ಮಾಡಿದೆಯೇ? ಚಿತ್ರೋತ್ಸವ ತಡವಾಗಿ ನಡೆಯಲು ಆರಂಭವಾಗಿದ್ದು 2015ರಿಂದ (ಎಂಟನೆಯದು ಜ. 28- ಫೆ. 5, 2016). 2020ರಲ್ಲಿ ಮಾರ್ಚ್‌ಗೆ ಜಾರಿತು (ಫೆ. 26- ಮಾರ್ಚ್ 4).

ಈಗ ಚುನಾವಣೆ ಬರಲಿದೆ ಎಂಬ ಕಾರಣಕ್ಕಾಗಿ ಸುಮಾರು 70 ದಿನಗಳ ತಯಾರಿ ನಡೆಸಿ ಮಾರ್ಚ್ 31ರೊಳಗೆ ಮುಗಿಸುವುದು ಸರಿಯಲ್ಲ. ಲಾಂಛನ, ಸಮಿತಿ ರಚನೆ ನಡೆಯಬಹುದು. ಆದರೆ ಅಸಲಿ ಉದ್ದೇಶ (ಗುಣಮಟ್ಟದ ಚಿತ್ರಗಳು, ಅರ್ಥಪೂರ್ಣ ಕಾರ್ಯಕ್ರಮ) ಸಾಧನೆ ಕಷ್ಟಸಾಧ್ಯ. ಹಾವೇರಿ ಸಾಹಿತ್ಯ ಸಮ್ಮೇಳನಕ್ಕೆ ಹಿಂದಿಗಿಂತ ಹೆಚ್ಚು ಹಣ ನೀಡಲಾಗಿತ್ತು. ಆದರೆ ಮೊದಲ ದಿನ ಸರಿಯಾಗಿ ನಡೆಯಲಿಲ್ಲ. ಬೇರೆ ಕಾರಣಕ್ಕೆ ಅದು ವಿವಾದಾಸ್ಪದವೂ ಆಯಿತು. ಚಲನಚಿತ್ರೋತ್ಸವಕ್ಕೆ ಒಂದು ಕೋಟಿ ಹೆಚ್ಚು ನೀಡಬಹುದು, ಉದ್ಘಾಟನೆಗೆ ಹೆಚ್ಚು ವೆಚ್ಚ ಮಾಡಲೂಬಹುದು- ಆದರೆ ಪಾರದರ್ಶಕವಾಗಿ ನಡೆಸದಿದ್ದರೆ ಆರೋಪಗಳು ಬರುವ ಸಂಭವ ಹೆಚ್ಚು. ಅಂತರರಾಷ್ಟ್ರೀಯ ಮಾನ್ಯತೆ, ಧನ ಸಹಾಯಕ್ಕಿಂತ ಎಲ್ಲರನ್ನೂ ಒಳಗೊಂಡ ಚಿತ್ರೋತ್ಸವ ನಡೆಸುವುದು ಮುಖ್ಯವಾಗಬೇಕು. ಹಲವರ ಅಭಿಪ್ರಾಯದಂತೆ ಡೈರೆಕ್ಟರೇಟ್ ಒಂದನ್ನು ಸ್ಥಾಪಿಸಿ ಈ ಚಿತ್ರೋತ್ಸವದ ಆಯೋಜನೆಯನ್ನು ಅದಕ್ಕೆ ವಹಿಸಬೇಕು (ಅಕಾಡೆಮಿ, ಸಚಿವ ಅಥವಾ ವಾರ್ತಾ ಇಲಾಖೆ ನಿರ್ದೇಶಕರಿಗೆ ಅಲ್ಲ). ಆರ್ಟಿಸ್ಟಿಕ್ ಡೈರೆಕ್ಟರ್ ಈ ಬಗೆಗೆ ಗಟ್ಟಿ ನಿಲುವು ತಾಳುತ್ತಾರೆಯೇ?

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಸಾರಾ ಬಗೆಗೆ ಅನಾದರ: ಅನಾರೋಗ್ಯಕರ ಬೆಳವಣಿಗೆ

ಪ್ರಗತಿಪರ, ವಿಚಾರವಾದಿ, ಚಿಂತಕಿ ಸಾರಾ ಅಬೂಬಕ್ಕರ್ ಅವರು ಮುಸ್ಲಿಂ ಮಹಿಳಾ ಕನ್ನಡ ಬರಹಗಾರರಿಗೆ ಮಾದರಿ. ಆಧುನಿಕ ಕನ್ನಡಕ್ಕೆ ಅವರು ನೀಡಿದ ಕೊಡುಗೆ ಅನುಪಮ. ಅವರ ಪ್ರೇರಣೆ, ಪ್ರಭಾವಗಳಿಂದ ದಕ್ಷಿಣ ಕನ್ನಡದ ಮುಸ್ಲಿಂ ಮಹಿಳೆಯರು ಕನ್ನಡ ಸಾಹಿತ್ಯ ರಚನೆಗೆ ತೊಡಗಿಸಿಕೊಂಡಿರುವುದು ಕನ್ನಡ ಸಾಹಿತ್ಯದ ಆರೋಗ್ಯಕರ ಬೆಳವಣಿಗೆ. ಸಾರಾ ಅವರ ನಿಧನಕ್ಕೆ ಸರ್ಕಾರದ ಕಡೆಯಿಂದ ಸಲ್ಲಬೇಕಾದ ಗೌರವವನ್ನು ತೋರಿಸದ್ದಕ್ಕೆ ಸಮಸ್ತ ಕನ್ನಡಿಗರು ಪಶ್ಚಾತ್ತಾಪ ಪಡಬೇಕಾಗಿದೆ.

ಪ್ರೊ. ಶಾಶ್ವತಸ್ವಾಮಿ ಮುಕ್ಕುಂದಿಮಠ, ಸಿಂಧನೂರು

ಆರೋಗ್ಯ ಸೇವೆಯ ಸಮರ್ಪಕ ಅನುಷ್ಠಾನ ಅಗತ್ಯ

ರಾಜ್ಯದಲ್ಲಿ '108' ಆಂಬುಲೆನ್ಸ್ ಸೇವೆ ಸಮರ್ಪಕವಾಗಿ ಇಲ್ಲವೆಂದೂ '104' ಆರೋಗ್ಯ ಸೇವೆ ಸಹಾಯವಾಣಿಯು ಒಂದು ವರ್ಷದಿಂದ ಸ್ಥಗಿತವಾಗಿದೆ ಎಂದೂ ಇತ್ತೀಚೆಗೆ ವರದಿಯಾಗಿತ್ತು. ಈ ಸೇವೆಗಳನ್ನು ಪ್ರಕಟಿಸುವಾಗ ಅತ್ಯಂತ ಹೆಚ್ಚಿನ ಪ್ರಚಾರ ಪಡೆಯುವ ಸರ್ಕಾರ, ನಂತರ ಅದರ ಸಮರ್ಪಕ ಅನುಷ್ಠಾನದ ಬಗ್ಗೆ ಗಮನಹರಿಸುವುದೇ ಇಲ್ಲ. ಇದೀಗ ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಗ್ರಾಮೀಣ ಆರೋಗ್ಯ ಸೇವೆ ಅಂಕಿ ಅಂಶಗಳ ವರದಿಯ ಪ್ರಕಾರ, ದೇಶದ 30 ಹಾಸಿಗೆ ಸಾಮರ್ಥ್ಯದ ಆರೋಗ್ಯ ಕೇಂದ್ರಗಳಲ್ಲಿ ಶೇ 80ರಷ್ಟು ತಜ್ಞ ವೈದ್ಯರ ಹುದ್ದೆಗಳು ಖಾಲಿ ಇವೆ. ಆದರೆ ನಗರ ಪ್ರದೇಶಗಳಲ್ಲಿ ಸಾಮಾನ್ಯ ಕಾಯಿಲೆಗಳಿಗೆ ಚಿಕಿತ್ಸೆ ನೀಡುವ ಜನರಲ್ ವೈದ್ಯರ ಕಣ್ಮರೆ ಆಗಿ ಎಲ್ಲ ಕಡೆ ತಜ್ಞ ವೈದ್ಯರನ್ನು ಕಾಣುವುದು ಸಾಮಾನ್ಯ ಆಗಿದೆ.

ಹೋಬಳಿ ಮಟ್ಟದ ಆರೋಗ್ಯ ಕೇಂದ್ರಗಳಲ್ಲಿ ಸಹ ತಜ್ಞ ವೈದ್ಯರ ಹುದ್ದೆ ಅಸ್ತಿತ್ವದಲ್ಲಿ ಇದ್ದು, ಆ ಹುದ್ದೆಗಳು ಬಹುತೇಕ ಖಾಲಿ ಇರುತ್ತವೆ ಅಥವಾ ಅವರು ವಾರಕ್ಕೆ ಒಂದೆರಡು ಬಾರಿಯೂ ಆರೋಗ್ಯ ಕೇಂದ್ರಕ್ಕೆ ಬರುವುದಿಲ್ಲ. ಕೇವಲ ಪ್ರಚಾರಕ್ಕಾಗಿ ಸೃಷ್ಟಿಸಿ, ಯಾವ ಉಪಯೋಗ ಇಲ್ಲದ, ಸರ್ಕಾರಕ್ಕೆ ಆರ್ಥಿಕ ಹೊರೆ ಆಗಿರುವ ಈ ಹುದ್ದೆಗಳನ್ನು ರದ್ದು ಮಾಡಿ, ತಾಲ್ಲೂಕು ಕೇಂದ್ರ ಹಾಗೂ ಜಿಲ್ಲಾ ಕೇಂದ್ರದ ಆಸ್ಪತ್ರೆಗಳಿಗೆ ಮೂಲ ಸೌಕರ್ಯ ಹೆಚ್ಚಿಸಿ ಜನರಿಗೆ ಸಮರ್ಪಕ ಸೇವೆ ಒದಗಿಸುವತ್ತ ರಾಜ್ಯದ ಆರೋಗ್ಯ ಸಚಿವರು ಗಮನಹರಿಸಬೇಕು.

ಡಾ. ಟಿ.ಜಯರಾಮ್, ಕೋಲಾರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಪಾಕಿಸ್ತಾನಕ್ಕೆ ಆರ್ಥಿಕ ಸಂಕಟ



ಸರ್ಕಾರವು ಕಡಿಮೆ ದರದಲ್ಲಿ ಪೂರೈಸುತ್ತಿರುವ ಗೋಧಿಗಾಗಿ ಸಾಲು ನಿಂತಿರುವ ಜನ –ಚಿತ್ರ ಎಎಫ್‌ಪಿ

ಪ್ರಜಾವಾಣಿ ವಾರ್ತೆ

ನಮ್ಮ ನೆರೆಯ ದೇಶ ಪಾಕಿಸ್ತಾನವು ಶೋಚನೀಯ ಸ್ಥಿತಿ ತಲುಪಿದೆ. ಕಳೆದ ವರ್ಷ ಬಂದ ಪ್ರವಾಹದಿಂದಾಗಿ ದೇಶದ ಮುಕ್ಕಾಲು ಭಾಗ ತತ್ತರಿಸಿತ್ತು. ಪ್ರವಾಹದಿಂದ ಆಗಿರುವ ನಷ್ಟವು ಮೂರು ಸಾವಿರ ಕೋಟಿ ಡಾಲರ್‌ಗೂ ಹೆಚ್ಚು (ಭಾರತದ ರೂಪಾಯಿ ಮೌಲ್ಯದಲ್ಲಿ ಸುಮಾರು ₹2.4 ಲಕ್ಷ ಕೋಟಿ) ಎಂದು ಅಂದಾಜಿಸಲಾಗಿತ್ತು. ಆ ದೇಶದ ರಾಜಕೀಯ ಸ್ಥಿತಿಯು ಸದಾ ಅಸ್ಥಿರವೇ ಎಂಬುದು ಜಗತ್ತಿಗೆ ಗೊತ್ತು. ಈಗಿನ ಅಲ್ಲಿನ ರಾಜಕೀಯ ಸ್ಥಿತಿಯು ಹಿಂದಿಗಿಂತಲೂ ತಳಕ್ಕೆ ಕುಸಿದಿದೆ. ಇಮ್ರಾನ್ ಖಾನ್ ಅವರ ಸರ್ಕಾರವನ್ನು ವಿರೋಧ ಪಕ್ಷಗಳು ಒಂದಾಗಿ ಕಳೆದ ಏಪ್ರಿಲ್‌ನಲ್ಲಿ ಉರುಳಿಸಿದವು. ಶಹಬಾಜ್ ಷರೀಫ್ ನೇತೃತ್ವದ ಮೈತ್ರಿ ಸರ್ಕಾರ ನಂತರ ಅಸ್ತಿತ್ವಕ್ಕೆ ಬಂದಿದೆ. ಆದರೆ, ಈವರೆಗೂ ಆಡಳಿತದ ಮೇಲೆ ಹಿಡಿತ ಸಾಧಿಸಲು ಸಾಧ್ಯವಾಗಿಲ್ಲ. ಉಚ್ಚಾಟಿತರಾದ ಇಮ್ರಾನ್ ಅವರು ದೇಶದಾದ್ಯಂತ ರ‍್ಯಾಲಿಗಳನ್ನು ನಡೆಸಿ ಜನರನ್ನು ಸಂಘಟಿಸುತ್ತಿದ್ದಾರೆ. ಇದು ಸರ್ಕಾರಕ್ಕೆ ದೊಡ್ಡ ತಲೆನೋವಾಗಿದೆ. ಪ್ರಾಂತ್ಯಗಳಲ್ಲಿ ಕೂಡ ರಾಜಕೀಯ ಅಸ್ಥಿರತೆ ಇದೆ. ಈಗ ಬಹುದೊಡ್ಡ ಆರ್ಥಿಕ ಬಿಕ್ಕಟ್ಟಿನಲ್ಲಿ ದೇಶ ಇದೆ.

ದೇಶದ ವಿದೇಶಿ ವಿನಿಮಯ ಮೀಸಲು ದಾಖಲೆ ಮಟ್ಟಕ್ಕೆ ಕುಸಿದಿದೆ. ಕಳೆದ ಡಿಸೆಂಬರ್ ಕೊನೆಯ ಹೊತ್ತಿಗೆ ಇದ್ದ ಮೀಸಲು ಮೊತ್ತವು ಸುಮಾರು 1,000 ಕೋಟಿ ಡಾಲರ್‌ಗೆ (ರೂಪಾಯಿ ಲೆಕ್ಕದಲ್ಲಿ ಸುಮಾರು 82 ಸಾವಿರ ಕೋಟಿ) ಇಳಿದಿದೆ. ದೇಶದ ವಿದೇಶಿ ಸಾಲ ವಿಪರೀತ ಮಟ್ಟದಲ್ಲಿದೆ. ಈ ಸಾಲವನ್ನು ಸರಿಯಾಗಿ ಮರುಪಾವತಿ ಮಾಡಿದರೆ ದೇಶದಲ್ಲಿ ಇರುವ ಮೀಸಲು ಹಣವು 25 ದಿನಗಳ ಆಮದು ವೆಚ್ಚ ಪಾವತಿಸಲಷ್ಟೇ ಸಾಕಾಗಬಹುದು ಎಂದು ಪಾಕಿಸ್ತಾನದ ಮಾಧ್ಯಮಗಳು ವರದಿ ಮಾಡಿವೆ.

ಇಂಧನ ಮತ್ತು ಆಹಾರ ಸಮಸ್ಯೆ ಹಿಂದೆಂದೂ ಕಂಡರಿಯದ ಹಂತಕ್ಕೆ ತಲುಪಿದೆ. ಗೋಧಿ ಎಲ್ಲಿಯೂ ದೊರೆಯುತ್ತಿಲ್ಲ. ಒಂದು ಕೆ.ಜಿ. ಗೋಧಿಯ ದರ 160 ಪಾಕಿಸ್ತಾನಿ ರೂಪಾಯಿಗಿಂತ ಹೆಚ್ಚಾಗಿದೆ. ಒಂದು ರೊಟ್ಟಿಯ ದರ 30 ರೂಪಾಯಿಯನ್ನು ದಾಟಿದೆ. ದೇಶದ ವಿವಿಧ ಭಾಗಗಳಲ್ಲಿ ಗೋಧಿ ಅಂಗಡಿಗಳ ಮುಂದೆ ಜನ ದಟ್ಟಣೆಯಾಗಿ ಕಾಲ್ತುಳಿತಕ್ಕೆ ಹಲವರು ಬಲಿಯಾಗಿದ್ದಾರೆ. ಈರುಳ್ಳಿಯ ದರ ಐದು ಪಟ್ಟು ಹೆಚ್ಚಾಗಿ, 220 ಪಾಕಿಸ್ತಾನಿ ರೂಪಾಯಿಗೆ ಮುಟ್ಟಿದೆ.

ಅತ್ಯಂತ ಕಡಿಮೆ ಪ್ರಮಾಣದ ಆರ್ಥಿಕ ಪ್ರಗತಿ, ಅತಿಯಾದ ಹಣದುಬ್ಬರವು ದೇಶವನ್ನು ಇನ್ನಷ್ಟು ಕಂಗೆಡುವಂತೆ ಮಾಡಿದೆ. ಇದೇ ಜೂನ್‌ಗೆ ಕೊನೆಯಾಗಲಿರುವ ಆರ್ಥಿಕ ವರ್ಷದಲ್ಲಿ ದೇಶದ ಪ್ರಗತಿಯು ಶೇ 2ರಷ್ಟು ಮಾತ್ರ ಇರಲಿದೆ ಎಂದು ವಿಶ್ವ ಬ್ಯಾಂಕ್ ಹೇಳಿದೆ. ಮುಂದಿನ ಆರ್ಥಿಕ ವರ್ಷದಲ್ಲಿ ಕೂಡ ಒಟ್ಟು ಆಂತರಿಕ ಉತ್ಪನ್ನದ ಪ್ರಗತಿಯು ಶೇ 3.2ರಷ್ಟು ಮಾತ್ರ ಇರಲಿದೆ ಎಂದೂ ವಿಶ್ವ ಬ್ಯಾಂಕ್ ಅಂದಾಜಿಸಿದೆ. ಹಾಗಾಗಿ, ದೇಶದ ಆರ್ಥಿಕ ಚೇತರಿಕೆಯು ತಕ್ಷಣಕ್ಕೆ ಸಾಧ್ಯವಿಲ್ಲ. ಹಣದುಬ್ಬರವು ಜನರ ಬದುಕನ್ನು ಹೈರಾಣಾಗಿಸಿದೆ. 2022ರ ಡಿಸೆಂಬರ್‌ನಲ್ಲಿ ಹಣದುಬ್ಬರವು ಶೇ 24.5ರಷ್ಟು ಇತ್ತು ಎಂದು ಪಾಕಿಸ್ತಾನದ ಕೇಂದ್ರೀಯ ಬ್ಯಾಂಕ್ 'ಸ್ಟೇಟ್ ಬ್ಯಾಂಕ್ ಆಫ್ ಪಾಕಿಸ್ತಾನ' ಹೇಳಿದೆ (2021ರ ಡಿಸೆಂಬರ್‌ನಲ್ಲಿ ಹಣದುಬ್ಬರವು ಶೇ 12.3ರಷ್ಟಿತ್ತು). ನಗರಗಳಲ್ಲಿ ಆಹಾರ ಹಣದುಬ್ಬರವು ಶೇ 32.7ರಷ್ಟಕ್ಕೆ ತಲುಪಿದೆ.

ನಿರುದ್ಯೋಗ ಸಮಸ್ಯೆಯಿಂದ ಯುವ ಜನರು ಕಂಗಾಲಾಗಿದ್ದಾರೆ. 1,167 ಕಾನ್‌ಸ್ಟೆಬಲ್ ಹುದ್ದೆಗಳಿಗೆ ಇತ್ತೀಚೆಗೆ ಲಿಖಿತ ಪರೀಕ್ಷೆ ನಡೆದಿತ್ತು. 32 ಸಾವಿರ ಅಭ್ಯರ್ಥಿಗಳು ಈ ಪರೀಕ್ಷೆ ಬರೆದಿದ್ದಾರೆ. ನಿರುದ್ಯೋಗ ಸ್ಥಿತಿ ಹೇಗಿದೆ ಎಂಬುದಕ್ಕೆ ಇದು ಕನ್ನಡಿ ಹಿಡಿದಿದೆ. 32 ಸಾವಿರ ಮಂದಿ ಪರೀಕ್ಷೆ ಬರೆದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು.

ಒಟ್ಟಿನಲ್ಲಿ ದೇಶವು ಚೇತರಿಸಲಾಗದ ಸ್ಥಿತಿ ತಲುಪಿದೆ. ಎಲ್ಲದರ ಪರಿಣಾಮವಾಗಿ 90 ಲಕ್ಷಕ್ಕೂ ಹೆಚ್ಚು ಜನರು ಬಡತನಕ್ಕೆ ತಳ್ಳಲ್ಪಡಲಿದ್ದಾರೆ ಎಂದು ವಿಶ್ವ ಬ್ಯಾಂಕ್ ಹೇಳಿದೆ.

ಬಿಕ್ಕಟ್ಟಿಗೆ ಸರ್ಕಾರದ ನೀತಿಗಳೇ ಕಾರಣ: ವಿಶ್ವ ಬ್ಯಾಂಕ್

ಪಾಕಿಸ್ತಾನದ ಇಂದಿನ ಆರ್ಥಿಕ ಬಿಕ್ಕಟ್ಟಿಗೆ ಕೋವಿಡ್–19 ಮತ್ತು ಕಳೆದ ವರ್ಷದ ಪ್ರವಾಹವೇ ಮುಖ್ಯ ಕಾರಣ ಎನ್ನಲಾಗುತ್ತಿದೆ. ಆದರೆ, ಅಲ್ಲಿನ ಸರ್ಕಾರದ ನೀತಿಗಳೇ ಇದಕ್ಕೆ ಕಾರಣ ಎಂದು ವಿಶ್ವ ಬ್ಯಾಂಕ್ ಇದೇ 13ರಂದು ಬಿಡುಗಡೆ ಮಾಡಿದ ತನ್ನ ವರದಿಯಲ್ಲಿ ಹೇಳಿದೆ.

ರಿಯಲ್ ಎಸ್ಟೇಟ್‌ಗೆ ಕಡಿಮೆ ದರದ ತೆರಿಗೆ: ಪಾಕಿಸ್ತಾನದಲ್ಲಿ ತಯಾರಿಕೆ ಮತ್ತು ಸೇವಾ ವಲಯಕ್ಕೆ ವಿಧಿಸಲಾಗುತ್ತಿರುವ ತೆರಿಗೆಗೆ ಹೋಲಿಸಿದರೆ, ರಿಯಲ್ ಎಸ್ಟೇಟ್ ಕ್ಷೇತ್ರಕ್ಕೆ ವಿಧಿಸುತ್ತಿರುವ ತೆರಿಗೆ ತೀರಾ ಕಡಿಮೆ. 20 ವರ್ಷಗಳಲ್ಲಿ ದೇಶದಲ್ಲಿ ರಿಯಲ್ ಎಸ್ಟೇಟ್ ಕ್ಷೇತ್ರವು ಭಾರಿ ಪ್ರಮಾಣದ ಪ್ರಗತಿ ಸಾಧಿಸಿದೆ. ಈ ಕ್ಷೇತ್ರಕ್ಕೆ ಉತ್ತೇಜನ ನೀಡುವ ಉದ್ದೇಶದಿಂದ ಹಿಂದಿನ ಸರ್ಕಾರಗಳೆಲ್ಲವೂ ತೆರಿಗೆ ಕಡಿತವನ್ನು ಘೋಷಿಸಿದ್ದವು. ಇದರಿಂದ ಸರ್ಕಾರಕ್ಕೆ ಬರಬಹುದಾಗಿದ್ದ ದೊಡ್ಡ ಪ್ರಮಾಣದ ತೆರಿಗೆ ಆದಾಯವು ಖೋತಾ ಆಯಿತು. ರಿಯಲ್ ಎಸ್ಟೇಟ್ ಕ್ಷೇತ್ರದಿಂದ ವರ್ಷಪ್ರತಿ ಬರುತ್ತಿದ್ದ ತೆರಿಗೆಯ ಮೊತ್ತದಲ್ಲಿ ಗಣನೀಯ ಏರಿಕೆಯಾಗಲಿಲ್ಲ. ಹೀಗಿದ್ದೂ, ಸರ್ಕಾರವು ತೆರಿಗೆ ಕಡಿತವನ್ನು ರದ್ದುಪಡಿಸಲಿಲ್ಲ. ಇದರ ಪರಿಣಾಮವಾಗಿ ಪ್ರತಿ ವರ್ಷದ ಬಜೆಟ್‌ನಲ್ಲಿ ವಿತ್ತೀಯ ಕೊರತೆಯ ಪ್ರಮಾಣ ಹೆಚ್ಚಾಯಿತು.

ತೆರಿಗೆ ಪ್ರಮಾಣ ಕಡಿಮೆ ಇದ್ದ ಕಾರಣ, ಈ ಕ್ಷೇತ್ರದಲ್ಲಿ ಹೂಡಿಕೆ ಮಾಡಲು ಹೆಚ್ಚಿನ ಜನರು ಮುಂದಾದರು. ಹೂಡಿಕೆ ಮಾಡುವಲ್ಲಿಯೂ ಕಡಿಮೆ ತೆರಿಗೆ ಮತ್ತು ರಿಯಲ್ ಎಸ್ಟೇಟ್ ಕ್ಷೇತ್ರಕ್ಕೆ ಅಗತ್ಯವಿದ್ದ ಸರಕುಗಳ ಮೇಲಿನ ತೆರಿಗೆಯೂ ಕಡಿಮೆ ಇದ್ದ ಕಾರಣ ಈ ಕ್ಷೇತ್ರಕ್ಕೆ ಬಂಡವಾಳ ಹರಿದುಬಂತು. 20 ವರ್ಷಗಳ ಅವಧಿಯಲ್ಲಿ ಈ ಕ್ಷೇತ್ರದಲ್ಲಿ ಭಾರಿ ಪ್ರಮಾಣದ ಬಂಡವಾಳ ಹೂಡಿಕೆಯಾಯಿತು. ತಯಾರಿಕೆ ಮತ್ತು ಸೇವಾ ವಲಯಗಳಲ್ಲಿ ಹೂಡಿಕೆಯಾದ ಬಂಡವಾಳಕ್ಕೆ ಹೋಲಿಸಿದರೆ, ಈ ಕ್ಷೇತ್ರದಲ್ಲಿ ಹೂಡಿಕೆಯಾದ ಬಂಡವಾಳದ ಉತ್ಪಾದಕತೆ ಕಡಿಮೆ. ಇದು ಸಹ ದೇಶದ ಆರ್ಥಿಕ ಚಟುವಟಿಕೆಯ ಪ್ರಗತಿಯನ್ನು ಕುಂಠಿತಗೊಳಿಸಿತು.


ಸಹಾಯಧನದ ಅವೈಜ್ಞಾನಿಕ ಹಂಚಿಕೆ: ದೇಶದ ಕೃಷಿ ಕ್ಷೇತ್ರದಲ್ಲಿ ಅವೈಜ್ಞಾನಿಕವಾಗಿ ಸಹಾಯಧನ ನೀಡುತ್ತಿರುವುದು ಸಹ ಇಂತಹ ಬಿಕ್ಕಟ್ಟಿನ ಸ್ಥಿತಿಗೆ ಒಂದು ಪ್ರಮುಖ ಕಾರಣ. ಪಾಕಿಸ್ತಾನದಲ್ಲಿ ಕೆಲವೇ ಆಯ್ದ ವಾಣಿಜ್ಯ ಬೆಳೆಗಳಿಗಷ್ಟೇ ಎಲ್ಲಾ ಸ್ವರೂಪದ ಸಹಾಯಧನವನ್ನು ನೀಡಲಾಗುತ್ತಿದೆ. ಸಹಾಯಧನ ಪಡೆದ ಬೆಳೆಗಳಿಗಷ್ಟೇ ವೈಜ್ಞಾನಿಕ ಬೆಂಬಲ ಬೆಲೆಯ ಅನುಕೂಲ ಒದಗಿಸಿಕೊಡಲಾಗಿದೆ. ಜತೆಗೆ ಇಂತಹ ಬೆಳೆಗಳಿಗಷ್ಟೇ ನೀರಾವರಿ ಒದಗಿಸಲಾಗುತ್ತಿದೆ. ಇದರ ಪರಿಣಾಮವಾಗಿ ಹೆಚ್ಚಿನ ಕೃಷಿಕರು ಇಂತಹ ವಾಣಿಜ್ಯ ಬೆಳೆಗಳ ಮೊರೆ ಹೋಗಿದ್ದಾರೆ. ಇದರಿಂದ ಆಹಾರ ಬೆಳೆಗಳ ಕೊರತೆ ಉಂಟಾಗಿದ್ದು, ಆಹಾರ ಪದಾರ್ಥಗಳ ಬೆಲೆ ವಿಪರೀತ ಎನ್ನುವಷ್ಟು ಏರಿಕೆಯಾಗಿದೆ. ಆಹಾರ ಪದಾರ್ಥವನ್ನೂ ಆಮದು ಮಾಡಿಕೊಳ್ಳುವ ಸ್ಥಿತಿ ಎದುರಾಗಿರುವುದರಿಂದ, ಅವುಗಳ ಬೆಲೆ ಮತ್ತಷ್ಟು ಏರಿಕೆಯಾಗಿದೆ. ಮತ್ತೊಂದೆಡೆ ಸರ್ಕಾರದ ಸಹಾಯಧನ ಪಡೆದ ವಾಣಿಜ್ಯ ಬೆಳೆಗಳಿಗೆ ರಫ್ತು ಮಾರುಕಟ್ಟೆ ಭಾರಿ ಪ್ರಮಾಣದಲ್ಲಿ ಕುಸಿದಿದೆ. ಈ ಬೆಳೆಗಳ ಮೇಲೆ ಹೂಡಲಾದ ಬಂಡವಾಳ ಮತ್ತು ಸಹಾಯಧನವು ಆರ್ಥಿಕತೆಗೆ ವಾಪಸಾಗಿಲ್ಲ ಎಂದು ವರದಿಯಲ್ಲಿ ವಿಶ್ಲೇಷಿಸಲಾಗಿದೆ.

ವಿಪರೀತ ಸಾಲ: ಸಾಲವು ಪಾಕಿಸ್ತಾನದ ಅತ್ಯಂತ ದೊಡ್ಡ ಆರ್ಥಿಕ ಸಮಸ್ಯೆಗಳಲ್ಲಿ ಒಂದು. ದೇಶದ ವಾಣಿಜ್ಯ ಬ್ಯಾಂಕ್‌ಗಳು ನೀಡಿರುವ ಒಟ್ಟು ಸಾಲದಲ್ಲಿ ಸರ್ಕಾರ ಪಡೆದಿರುವ ಸಾಲದ ಪ್ರಮಾಣ ಶೇ 63ಕ್ಕಿಂತಲೂ ಹೆಚ್ಚು. ತೆರಿಗೆ ಮೂಲದ ಆದಾಯ ಖೋತಾ ಮತ್ತು ಸಹಾಯಧನದ ಪರಿಣಾಮ ಬಜೆಟ್‌ನ ವಿತ್ತೀಯ ಕೊರತೆ ಭಾರಿ ಪ್ರಮಾಣದಲ್ಲಿ ಹೆಚ್ಚಾಗಿದೆ. ಈ ಕೊರತೆಯನ್ನು ನೀಗಿಸಲು ಸರ್ಕಾರವು ದೇಶದ ವಾಣಿಜ್ಯ ಬ್ಯಾಂಕ್‌ಗಳಿಂದ ಹೆಚ್ಚು ಸಾಲ ಪಡೆದಿದೆ. ಹೆಚ್ಚು ಉದ್ಯೋಗ ಸೃಷ್ಟಿಸುವ ತಯಾರಿಕೆ ಮತ್ತು ಸೇವಾ ವಲಯಕ್ಕೆ ಅಗತ್ಯವಿರುವ ಸಾಲ ಲಭ್ಯವಿಲ್ಲ. ಹೀಗಾಗಿ ಇಲ್ಲಿ ಉದ್ಯೋಗ ಸೃಷ್ಟಿಯಾಗುತ್ತಿಲ್ಲ. ಇದು ಸಹ ದೇಶದ ಆರ್ಥಿಕತೆಯನ್ನು ಕುಂಠಿತಗೊಳಿಸಿದೆ. ಈ ಕಾರಣದಿಂದ ಜನರ ಬಳಿ ಹಣ ಇಲ್ಲದೇ ಇರುವ ಸ್ಥಿತಿ ಉಂಟಾಗಿದೆ ಎಂದು ವರದಿಯಲ್ಲಿ ವಿಶ್ಲೇಷಿಸಲಾಗಿದೆ. ಇವುಗಳ ಜತೆಯಲ್ಲಿ ಷೆಲ್ ಕಂಪನಿಗಳ ಪ್ರಮಾಣ ಹೆಚ್ಚಾಗಿದೆ. ಸರ್ಕಾರದಿಂದ ನೆರವು ಪಡೆಯುವ ಉದ್ದೇಶದಿಂದ ಸ್ಥಾಪಿಸಲಾದ ಇಂತಹ ಕಂಪನಿಗಳು ಕಾರ್ಯನಿರ್ವಹಿಸುತ್ತಲೇ ಇಲ್ಲ. ಇವುಗಳು ಪಡೆದಿರುವ ಸಾಲವೂ ವಾಪಸ್ ಬಂದಿಲ್ಲ. ದೇಶದಲ್ಲಿ ನೋಂದಣಿಯಾದ ಒಟ್ಟು ಕಂಪನಿಗಳಲ್ಲಿ ಇಂತಹ ಕಂಪನಿಗಳ ಪ್ರಮಾಣ ಶೇ 11ರಷ್ಟು ಇದೆ. ಇದು ವಿಶ್ವದಲ್ಲೇ ಹೆಚ್ಚು. ಇಂತಹ ಕಂಪನಿಗಳ ಕಾರಣದಿಂದಲೂ ಸರ್ಕಾರದ ಬಂಡವಾಳ ವ್ಯರ್ಥವಾಗಿದೆ ಎಂದು ವರದಿಯಲ್ಲಿ ವಿಶ್ಲೇಷಿಸಲಾಗಿದೆ.

ಆಧಾರ: ಡಾನ್ ಪತ್ರಿಕೆ, ವಿಶ್ವ ಬ್ಯಾಂಕ್ ವರದಿ, ರಾಯಿಟರ್ಸ್

ನಿರುದ್ಯೋಗ ಪ್ರಮಾಣ

ಆರ್ಥಿಕ ಚಟುವಟಿಕೆಗಳು ಸ್ಥಗಿತವಾಗಿರುವ ಕಾರಣ ದೇಶದಲ್ಲಿ ನಿರುದ್ಯೋಗದ ಪ್ರಮಾಣ ಹೆಚ್ಚಾಗಿದೆ. ದೇಶದ ಒಟ್ಟು ಜನಸಂಖ್ಯೆಯಲ್ಲಿ ಎಲ್ಲಾ ಸ್ವರೂಪದ ಉದ್ಯೋಗದಲ್ಲಿ ಭಾಗಿಯಾಗುತ್ತಿರುವ ಜನರ ಪ್ರಮಾಣ ಶೇ 50ಕ್ಕಿಂತಲೂ ಕಡಿಮೆ ಇದೆ. ಉತ್ಪಾದನೆಯಲ್ಲಿ ಭಾಗಿಯಾಗದೇ ಇರುವ ಆದರೆ, ಸರ್ಕಾರದ ವಿವಿಧ ಸ್ವರೂಪದ ನೆರವು ಪಡೆಯುತ್ತಿರುವ ಜನರ ಪ್ರಮಾಣ ಹೆಚ್ಚು ಇರುವ ಕಾರಣ ಸರ್ಕಾರದ ಬೊಕ್ಕಸ ಬರಿದಾಗುತ್ತಿದೆ ಎಂದು ವಿಶ್ಲೇಷಿಸಲಾಗಿದೆ.



49% ವಿವಿಧ ಸ್ವರೂಪದ ಉದ್ಯೋಗಗಳಲ್ಲಿ ಭಾಗಿಯಾಗುತ್ತಿರುವ ಜನರ ಪ್ರಮಾಣ

51% ಯಾವುದೇ ಸ್ವರೂಪದ ಉದ್ಯೋಗದಲ್ಲಿ ಭಾಗಿಯಾಗದೇ ಇರುವ ಜನರ ಪ್ರಮಾಣ

ನೆರವಿಗೆ ಪದೇ ಪದೇ ಮೊರೆ

ಹಣಕಾಸು ಬಿಕ್ಕಟ್ಟಿನಿಂದ ಹೊರಬರಲು ಪಾಕಿಸ್ತಾನವು ಇನ್ನಿಲ್ಲದ ಯತ್ನ ನಡೆಸುತ್ತಿದೆ. ಹಣಕಾಸಿನ ನೆರವು ನೀಡುವಂತೆ ಎಲ್ಲ ದೇಶಗಳ ಮುಂದೆ ಪದೇಪದೇ ಬೇಡಿಕೆ ಇಡುತ್ತಿದೆ. ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಎದುರು ಪಾಕಿಸ್ತಾನ 23 ಬಾರಿ ಮನವಿ ಮಾಡಿದೆ ಎನ್ನಲಾಗಿದೆ. ಆದರೆ, ಷರತ್ತುಗಳನ್ನು ಈಡೇರಿಸದ ಹೊರತು ಹಣಕಾಸು ನೆರವು ಇಲ್ಲ ಎಂದು ಐಎಂಎಫ್ ಸ್ಪಷ್ಟಪಡಿಸಿದೆ. ಐಎಂಎಫ್ ಷರತ್ತುಗಳನ್ನು ಪೂರೈಸಲು ಪಾಕಿಸ್ತಾನಕ್ಕೆ ಸಾಧ್ಯವಾಗುತ್ತಿಲ್ಲ. ಹೀಗಾಗಿ, ತಕ್ಷಣಕ್ಕೆ ಹಣಕಾಸು ನೆರವು ಸಿಗದೇ ಕಷ್ಟಪಡುತ್ತಿದೆ.

ಪ್ರವಾಹ ಹಾಗೂ ಆ ಬಳಿಕ ಉಂಟಾಗಿರುವ ಆರ್ಥಿಕ ಸಮಸ್ಯೆ ನಿವಾರಣೆಗಾಗಿ ಪಾಕಿಸ್ತಾನಕ್ಕೆ ಅಂತರರಾಷ್ಟ್ರೀಯ ಸಮುದಾಯದಿಂದ ₹73 ಸಾವಿರ ಕೋಟಿ (900 ಕೋಟಿ ಡಾಲರ್) ಹಣಕಾಸಿನ ನೆರವಿನ ಭರವಸೆ ಸಿಕ್ಕಿದೆ.

ಇಸ್ಲಾಮಿಕ್ ಡೆವಲಪ್‌ಮೆಂಟ್ ಬ್ಯಾಂಕ್‌ನಿಂದ ₹35,000 ಕೋಟಿ (420 ಕೋಟಿ ಡಾಲರ್) ವಿಶ್ವ ಬ್ಯಾಂಕ್‌ನಿಂದ ₹16,400 ಕೋಟಿ (200 ಕೋಟಿ ಡಾಲರ್), ಸೌದಿ ಅರೇಬಿಯಾದಿಂದ ₹8200 ಕೋಟಿ (100 ಕೋಟಿ ಡಾಲರ್) ಐರೋಪ್ಯ ಒಕ್ಕೂಟದಿಂದ ₹760 ಕೋಟಿ (9.3 ಕೋಟಿ ಡಾಲರ್), ಅಮೆರಿಕದಿಂದ ₹7,300 ಕೋಟಿ (90 ಕೋಟಿ ಡಾಲರ್) ಜರ್ಮನಿಯಿಂದ ₹720 ಕೋಟಿ (8.8 ಕೋಟಿ ಡಾಲರ್) ಚೀನಾದಿಂದ ₹820 ಕೋಟಿ (10 ಕೋಟಿ ಡಾಲರ್) ನೆರವಿನ ಭರವಸೆ ಸಿಕ್ಕಿರುವುದು ಪಾಕಿಸ್ತಾನಕ್ಕೆ ಕೊಂಚ ಸಮಾಧಾನ ತಂದಿದೆ. ಆದರೆ, ಪಾಕಿಸ್ತಾನದ ಅತ್ಯಂತ ಆಪ್ತ ದೇಶಗಳಲ್ಲಿ ಗುರುತಿಸಿಕೊಂಡಿರುವ ಚೀನಾ, ದೊಡ್ಡ ಮಟ್ಟದ ಸಹಾಯಕ್ಕೆ ಮುಂದಾಗಿಲ್ಲ ಎಂದು ಹೇಳಲಾಗಿದೆ. ಸೌದಿ ಅರೇಬಿಯಾವು ಪಾಕಿಸ್ತಾನಕ್ಕೆ ಈಗಾಗಲೇ ನೀಡಿರುವ 200 ಕೋಟಿ ಡಾಲರ್ ಸಾಲದ ಜೊತೆಗೆ ಮತ್ತೆ 100 ಕೋಟಿ ಡಾಲರ್ ಸಾಲ ನೀಡಲು ಮುಂದಾಗಿದೆ. ಕತಾರ್ ಮೊದಲಾದ ಇಸ್ಲಾಮಿಕ್ ದೇಶಗಳು ಸಹಾಯದ ಭರವಸೆ ನೀಡಿವೆ.

ಹೊರದೇಶಗಳ ಹಣಕಾಸಿನ ನೆರವಿನ ಮೇಲೆ ಅವಲಂಬನೆಯಾಗದೇ, ದೇಶೀಯವಾಗಿ ಆದಾಯ ಕ್ರೋಡೀಕರಿಸಬೇಕಾದ ಅಗತ್ಯವಿದೆ ಎಂದು ಪ್ರಧಾನಿ ಶಹಬಾಜ್ ಷರೀಫ್ ಅವರು ಅಭಿಪ್ರಾಯಪಟ್ಟಿದ್ದಾರೆ. ಪ್ರವಾಹ ಹಾಗೂ ಅದರ ಬಳಿಕ ಉಂಟಾಗಿರುವ ಆರ್ಥಿಕ ಏರುಪೇರು ಸರಿಪಡಿಸಲು ಸುಮಾರು ₹1.3 ಲಕ್ಷ ಕೋಟಿ (1630 ಕೋಟಿ ಡಾಲರ್) ಅಗತ್ಯವಿದೆ ಎಂದು ಪಾಕಿಸ್ತಾನ ಅಂದಾಜಿಸಿತ್ತು. ಈ ಪೈಕಿ ಅರ್ಧದಷ್ಟು ಹಣಕಾಸು ಹೊಂದಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದರೂ, ತಕ್ಷಣಕ್ಕೆ ಪಾಕಿಸ್ತಾನಕ್ಕೆ ಎಷ್ಟು ನೆರವು ಸಿಗಲಿದೆ ಹಾಗೂ ಮರುಪಾವತಿ ಹೇಗೆ ಎಂಬ ವಿಚಾರಗಳಲ್ಲಿ ಸ್ಪಷ್ಟತೆಯಿಲ್ಲ.

ಉಳಿತಾಯಕ್ಕಾಗಿ ಕತ್ತರಿ ಪ್ರಯೋಗ!: ದೇಶದಲ್ಲಿ ಉಂಟಾಗಿರುವ ಇಂಧನ ಕೊರತೆ ಸಮಸ್ಯೆಯನ್ನು ಪರಿಹರಿಸಲು ಸರ್ಕಾರ ಮಾಡದ ಕ್ರಮಗಳಿಲ್ಲ. ವಿದ್ಯುತ್ ಉಳಿತಾಯ ಮಾಡುವುದಕ್ಕಾಗಿ ದೇಶದ ಎಲ್ಲ ಮಾಲ್‌ಗಳನ್ನು ರಾತ್ರಿ 8.30ಕ್ಕೆ ಬಂದ್ ಮಾಡುವಂತೆ ಸರ್ಕಾರ ಆದೇಶಿಸಿದೆ. ಮದುವೆ ಸಮಾರಂಭಗಳಿಗೆ ರಾತ್ರಿ 10 ಗಂಟೆಯ ಗಡುವು ವಿಧಿಸಲಾಗಿದೆ.

ಸರ್ಕಾರಿ ಅಧಿಕಾರಿಗಳು ಬಳಸುವ ವಾಹನವು ತಿಂಗಳಿಗೆ 120 ಲೀಟರ್‌ಗಿಂತ ಹೆಚ್ಚು ಇಂಧನ ಬಳಸುವಂತಿಲ್ಲ. ಕರ್ತವ್ಯದ ಮೇಲೆ ನಗರದಿಂದ ಹೊರಗೆ ಹೋಗುವ ಅಧಿಕಾರಿಗಳಿಗೆ ನೀಡುತ್ತಿದ್ದ ಎರಡು ಡಿ.ಎಗಳನ್ನು ಒಂದಕ್ಕೆ ಇಳಿಸಲಾಗಿದೆ. ವೇತನದಲ್ಲಿ ಶೇ 25ಕ್ಕಿಂತ ಹೆಚ್ಚಿನ ಭತ್ಯೆಗೆ ಕತ್ತರಿ ಹಾಕಲಾಗಿದೆ. ಸರ್ಕಾರದ ಎಲ್ಲ ಘಟಕಗಳು ಹಣಕಾಸು ನಿಧಿ ಬಳಕೆಯ ಸ್ಪಷ್ಟ ವರದಿಯನ್ನು ಸಲ್ಲಿಸುವುದು ಕಡ್ಡಾಯ ಮಾಡಲಾಗಿದೆ. ನಿಯಮಗಳನ್ನು ಮೀರಿದ ಉದ್ಯೋಗಿಗಳ ಶೇ 50ರಷ್ಟು ವೇತನವನ್ನು ಕಡಿತ ಮಾಡುವ ಎಚ್ಚರಿಕೆಯನ್ನೂ ಉಳಿತಾಯಕ್ಕಾಗಿ ಜಾರಿ ಮಾಡಲಾಗಿರುವ ಮಾರ್ಗಸೂಚಿಗಳಲ್ಲಿ ಸೇರಿಸಲಾಗಿದೆ.

ತಾಳೆ ಎಣ್ಣೆ ರಫ್ತು ಕುರಿತು ಭಿನ್ನಮತ

ಐರೋಪ್ಯ ಒಕ್ಕೂಟ– ಮಲೇಷ್ಯಾ ಜಟಾಪಟಿ

ಕ್ವಾಲಾಲಂಪುರ (ರಾಯಿಟರ್ಸ್): ಜಗತ್ತಿನ ಎರಡನೇ ಅತಿದೊಡ್ಡ ತಾಳೆ ಎಣ್ಣೆ ಉತ್ಪಾದಕ ರಾಷ್ಟ್ರ ಮಲೇಷ್ಯಾ, ಐರೋಪ್ಯ ಒಕ್ಕೂಟದ (ಇಯು) ರಾಷ್ಟ್ರಗಳಿಗೆ ತಾಳೆ ಎಣ್ಣೆ ರಫ್ತು ಸ್ಥಗಿತಗೊಳಿಸುವ ಸಾಧ್ಯತೆಯಿದೆ. ಐರೋಪ್ಯ ದೇಶಗಳು ಮಲೇಷ್ಯಾ ಮೇಲೆ ವಿಧಿಸಿರುವ ನಿರ್ಬಂಧಗಳಿಗೆ ತಿರುಗೇಟು ನೀಡಲು ಮಲೇಷ್ಯಾ ಈ ನಿರ್ಧಾರ ತೆಗೆದುಕೊಳ್ಳಬಹುದು ಎನ್ನಲಾಗಿದೆ.

ವ್ಯಾಪಕವಾಗಿ ತಾಳೆ ಎಣ್ಣೆ ಉತ್ಪಾದನೆ ಮಾಡುವ ಉದ್ದೇಶದಿಂದ ಮಲೇಷ್ಯಾದಲ್ಲಿ ಅರಣ್ಯವನ್ನು ಸವರಲಾಗುತ್ತಿದೆ. ಅರಣ್ಯನಾಶ ನಿಲ್ಲಿಸುವ ಮಾತಿಗೆ ಒಪ್ಪಿಕೊಂಡರೆ, ಮಲೇಷ್ಯಾದ ತಾಳೆ ಎಣ್ಣೆಯನ್ನು ಆಮದು ಮಾಡಿಕೊಳ್ಳಲಾಗುವುದು ಎಂದು ಐರೋಪ್ಯ ರಾಷ್ಟ್ರಗಳು ನಿಯಮ ವಿಧಿಸಿವೆ. ಆದರೆ ಈ ನಿಯಮಗಳು ಒಪ್ಪುವಂತಹವಲ್ಲ ಎಂದಿರುವ ಮಲೇಷ್ಯಾ, ಐರೋಪ್ಯ ದೇಶಗಳ ಮಾರುಕಟ್ಟೆಯನ್ನೇ ಕೈಬಿಡಲು ಮುಂದಾಗಿದೆ.

ತಾಳೆ ಎಣ್ಣೆಯಿಂದ ಉತ್ಪಾದಿಸುವ ಜೈವಿಕ ಇಂಧನ ಬಳಕೆಯನ್ನು 2030ರೊಳಗೆ ಹಂತ ಹಂತವಾಗಿ ಸ್ಥಗಿತಗೊಳಿಸುವ ನೀತಿಯನ್ನು 2018ರಲ್ಲಿ ಐರೋಪ್ಯ ಒಕ್ಕೂಟ ಪ್ರಕಟಿಸಿತ್ತು. ನವೀಕರಿಸಬಹುದಾದ ಇಂಧನಕ್ಕೆ ಒತ್ತುಕೊಟ್ಟಿರುವ ಒಕ್ಕೂಟವು, ತಾಳೆ ಉತ್ಪಾದನೆ ಹೆಚ್ಚಿಸಬೇಕು ಎಂಬ ಉದ್ದೇಶಕ್ಕೆ ಆಗುತ್ತಿರುವ ಅರಣ್ಯನಾಶವನ್ನು ತಡೆಯುವ ಉದ್ದೇಶದಿಂದ ಮಲೇಷ್ಯಾ ಮೇಲೆ ನಿರ್ಬಂಧಗಳನ್ನು ವಿಧಿಸಿತ್ತು.

ಜಗತ್ತಿನ ತಾಳೆ ಎಣ್ಣೆ ರಫ್ತಿನಲ್ಲಿ ಮಲೇಷ್ಯಾ ಹಾಗೂ ಇಂಡೊನೇಷ್ಯಾ ದೇಶಗಳು ಶೇ 85ರಷ್ಟು ಪಾಲು ಹೊಂದಿವೆ. ಐರೋಪ್ಯ ಒಕ್ಕೂಟವು ವಿಧಿಸಿರುವ ನಿರ್ಬಂಧಗಳನ್ನು ಪ್ರಶ್ನಿಸಿ ವಿಶ್ವ ವ್ಯಾಪಾರ ಸಂಘಟನೆಗೆ (ಡಬ್ಲ್ಯುಟಿಒ) ಈ ಎರಡೂ ದೇಶಗಳು ದೂರು ಸಲ್ಲಿಸಿವೆ. ಐರೋಪ್ಯ ಒಕ್ಕೂಟದ ಮಾನದಂಡಗಳಿಗೆ ಪೂರಕವಾಗಿ ಆಹಾರ ಗುಣಮಟ್ಟ ಕಾಯ್ದುಕೊಂಡು ಹಾಗೂ ಪರಿಸರದ ನಿಯಮಗಳನ್ನು ಪಾಲಿಸಿಯೇ ಉತ್ಪನ್ನ ರಫ್ತು ಮಾಡಲು ಸಿದ್ಧವಿದ್ದರೂ ಒಕ್ಕೂಟವು ಹೊಸ ನಿರ್ಬಂಧಗಳನ್ನು ಹಾಕುತ್ತಿದೆ ಎಂದು ವಾದ ಮಂಡಿಸಿವೆ.

ಆದರೆ ಇದಕ್ಕೆ ಪ್ರತಿಕ್ರಿಯೆ ನೀಡಿರುವ ಒಕ್ಕೂಟ, ಯಾವುದೇ ದೇಶವನ್ನು ಗುರಿಯಾಗಿಸಿ ನಿಯಮಗಳನ್ನು ರೂಪಿಸಿಲ್ಲ ಎಂದು ಸ್ಪಷ್ಟಪಡಿಸಿದೆ. ಅರಣ್ಯ ನಾಶಕ್ಕೆ ಕಾರಣವಾಗುವ ಉತ್ಪನ್ನಗಳನ್ನು ತಡೆಯುವುದಷ್ಟೇ ಉದ್ದೇಶ ಎಂದು ಒಕ್ಕೂಟ ತಿಳಿಸಿದೆ. ಆದರೆ, ತಾರತಮ್ಯ ನೀತಿ ಅನುಸರಿಸುತ್ತಿರುವ ಒಕ್ಕೂಟದ ವಿರುದ್ಧ ಒಗ್ಗಟ್ಟಿನ ಹೋರಾಟ ನಡೆಸಲು ಮಲೇಷ್ಯಾ ಹಾಗೂ ಇಂಡೊನೇಷ್ಯಾ ನಿರ್ಧರಿಸಿವೆ.

ಐರೋಪ್ಯ ರಾಷ್ಟ್ರಗಳಿಗೆ ಮಲೇಷ್ಯಾದ ತಾಳೆ ರಫ್ತಾಗುವ ಪ್ರಮಾಣ 2015ರಿಂದಲೂ ಕುಸಿಯುತ್ತಿದೆ. ಈಗ, ಮೇಲೇಷ್ಯಾಗೆ ಐರೋಪ್ಯ ಮಾರುಕಟ್ಟೆ ಬಂದ್ ಆಗುವ ಸಾಧ್ಯತೆಯಿದೆ. ಇದಕ್ಕೆ ಪರ್ಯಾಯ ಮಾರುಕಟ್ಟೆಯನ್ನು ಹುಡುಕಿಕೊಳ್ಳುವಲ್ಲಿ ಮಲೇಷ್ಯಾ ಯಶ ಕಂಡಿದೆ ಎನ್ನಲಾಗಿದೆ. ಮಧ್ಯಪ್ರಾಚ್ಯ, ಮಧ್ಯ ಏಷ್ಯಾ ಹಾಗೂ ಉತ್ತರ ಆಫ್ರಿಕಾ ದೇಶಗಳಲ್ಲಿ ತಾಳೆ ಎಣ್ಣೆಗೆ ಮಾರುಕಟ್ಟೆಯನ್ನು ಕಂಡುಕೊಂಡಿದೆ. ಆದರೆ ಯುರೋಪ್‌ನಲ್ಲಿ ಸಂಸ್ಕರಣ ಘಟಕಗಳನ್ನು ಸ್ಥಾಪಿಸಿರುವ ಮಲೇಷ್ಯಾದ ಕಂಪನಿಗಳಿಗೆ ರಫ್ತು ನಿರ್ಬಂಧದಿಂದ ಹೊಡೆತ ಬೀಳಲಿದೆ ಎಂದು ವಿಶ್ಲೇಷಿಸಲಾಗಿದೆ.

ಜೈವಿಕ ಇಂಧನಕ್ಕೆ ಬೇಡಿಕೆ

ಮಲೇಷ್ಯಾದಲ್ಲಿ ಮಾರಾಟವಾಗುವ ಡೀಸೆಲ್ ಜೊತೆಗೆ ಶೇ 35ರಷ್ಟು ಜೈವಿಕ ಇಂಧನ ಮಿಶ್ರಣವನ್ನು (ಬಿ35) ಕಡ್ಡಾಯ ಮಾಡಲಾಗುತ್ತಿದೆ. ಹೀಗಾಗಿ ತಾಳೆ ಎಣ್ಣೆಯಿಂದ ಉತ್ಪಾದಿಸುವ ಜೈವಿಕ ಇಂಧನಕ್ಕೆ ಬೇಡಿಕೆ ಇದೆ ಎಂಬುದನ್ನು ಅರಿತ ರೈತರು, ಭಾರಿ ಪ್ರಮಾಣದಲ್ಲಿ ತಾಳೆ ಬೆಳೆಯಲು ಆರಂಭಿಸಿದ್ದಾರೆ. ಇದಕ್ಕಾಗಿ ಅರಣ್ಯಗಳು ತಾಳೆ ತೋಟಗಳಾಗಿ ಬದಲಾಗುತ್ತಿವೆ. ದೇಶದಲ್ಲಿ ಬೇಡಿಕೆ ಇರುವ ಕಾರಣಕ್ಕೆ, ಐರೋಪ್ಯ ದೇಶಗಳಿಗೆ ಜೈವಿಕ ಇಂಧನ ರಫ್ತು ಪ್ರಮಾಣವೂ ಇತ್ತೀಚಿನ ದಿನಗಳಲ್ಲಿ ಇಳಿಕೆಯಾಗಿದೆ.



ತಾಳೆ

ಫ್ಯಾಕ್ಟ್ ಚೆಕ್

ಪಿವಿ

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಒಂದಿಷ್ಟು ಜನರ ಗುಂಪು ಗೋಧಿ ಹಿಟ್ಟಿನ ಚೀಲಕ್ಕಾಗಿ ಬೀದಿಯಲ್ಲಿ ಬಡಿದಾಡುತ್ತಿರುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಆರ್ಥಿಕ ಸಂಕಷ್ಟದಲ್ಲಿರುವ ಪಾಕಿಸ್ತಾನದಲ್ಲಿ ಜನರಿಗೆ ತಿನ್ನಲೂ ಅನ್ನವಿಲ್ಲ ಎಂಬುದನ್ನು ಈ ವಿಡಿಯೊ ಸೂಚಿಸುತ್ತದೆ ಎಂದು ಜಾಲತಾಣ ಬಳಕೆದಾರರು ಉಲ್ಲೇಖಿಸಿದ್ದಾರೆ. ಉತ್ತರ ಪ್ರದೇಶದ ಶಾಸಕ ಶಲಭ್ ಮಣಿ ತ್ರಿಪಾಠಿ ಸೇರಿದಂತೆ ಹಲವರು ಈ ವಿಡಿಯೊವನ್ನು ಹಂಚಿಕೊಂಡಿದ್ದು, ಶ್ರೀಲಂಕಾದಂತೆ ಪಾಕಿಸ್ತಾನದ ಸ್ಥಿತಿಯೂ ಆಗಿದೆ. ಪ್ರಧಾನಿ ನರೇಂದ್ರ ಮೋದಿ ಅವರಿಂದಾಗಿ ಭಾರತದ ಸ್ಥಿತಿ ಉತ್ತಮವಾಗಿದೆ ಎಂದು ಅವರು ಹೇಳಿದ್ದಾರೆ. ಆದರೆ, ಈ ವಿಡಿಯೊ ಹಳೆಯದು.



ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಯಾಗುತ್ತಿರುವ ಈ ವಿಡಿಯೊ ಪಾಕಿಸ್ತಾನದ ಈಗಿನ ಆರ್ಥಿಕ ಬಿಕ್ಕಟ್ಟಿಗೆ ಸಂಬಂಧಿಸಿದ್ದಲ್ಲ ಎಂದು 'ಆಲ್ಟ್ ನ್ಯೂಸ್' ವೆಬ್‌ಸೈಟ್ ವರದಿ ಮಾಡಿದೆ. ಪಾಕಿಸ್ತಾನವು ಈ ಹಿಂದೆ ಭೀಕರ ಪ್ರವಾಹಕ್ಕೆ ಒಳಗಾದ ಸಮಯದಲ್ಲಿ ನೀಡಲಾಗಿದ್ದ ಆಹಾರದ ಪೊಟ್ಟಣಗಳಿಗಾಗಿ ಸಂತ್ರಸ್ತರು ಮುಗಿಬಿದ್ದಿದ್ದರು. ಈ ವಿಡಿಯೊ ಕನಿಷ್ಠ ನಾಲ್ಕು ತಿಂಗಳು ಹಳೆಯದಾಗಿದ್ದು, ಈಗಿನ ಪಾಕಿಸ್ತಾನದ ಆರ್ಥಿಕ ಬಿಕ್ಕಟ್ಟನ್ನು ಕುರಿತದ್ದು ಎಂದು ತಪ್ಪಾಗಿ ಬಿಂಬಿಸಲಾಗುತ್ತಿದೆ ಎಂದು ವೆಬ್‌ಸೈಟ್ ತಿಳಿಸಿದೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಪೂರ್ಣತೆಯಲ್ಲಿ ಕೊರೆಯಿಲ್ಲ

ಹಣ್ಣೇನು ಕಾಯೇನು ಹೊಟ್ಟೆ ತುಂಬಿರುವಂಗೆ ? ||
ಪುಣ್ಯವೇಂ ಪಾಪವೇಂ ಪೂರ್ಣದರ್ಶನಿಗೆ ? ||
ಉನ್ನತದ ಶಿಖರದಿಂ ತಿಟ್ಟೇನು ಕುಳಿಯೇನು ? |
ಪೂರ್ಣತೆಗೆ ಸೊಟ್ಟೇನು? – ಮಂಕುತಿಮ್ಮ || **800** ||

ಪದ-ಅರ್ಥ: ಹೊಟ್ಟೆ + ತುಂಬಿರುವಂಗೆ (ತುಂಬಿರುವವನಿಗೆ), ಪುಣ್ಯವೇಂ = ಪುಣ್ಯವೇನು, ತಿಟ್ಟೇನು = ತಿಟ್ಟು(ಎತ್ತರದ ದಿಬ್ಬ) + ಏನು, ಕುಳಿಯೇನು = ಕುಳಿ(ತೆಗ್ಗು) + ಏನು.

ವಾಚ್ಯಾರ್ಥ: ಹೊಟ್ಟೆ ತುಂಬಿದವನಿಗೆ ಹಣ್ಣು, ಕಾಯಿಗಳಿಂದ ಏನು ಪ್ರಯೋಜನ? ಪೂರ್ಣದರ್ಶನವಾದವನಿಗೆ ಪುಣ್ಯವೇನು, ಪಾಪವೇನು? ಎತ್ತರದ ಪರ್ವತದ ಮೇಲೆ ಕುಳಿತವನಿಗೆ ಕೆಳಗಿನ ಭೂಮಿಯಲ್ಲಿ ಕಾಣುವ ತೆಗ್ಗು, ದಿಬ್ಬಗಳಿಂದ ಏನಾದೀತು? ಪೂರ್ಣತೆಗೆ ಯಾವುದೇ ಕೊರತೆ ಇಲ್ಲ.

ವಿವರಣೆ: ಗ್ರೀಸ್ ದೇಶದ ಅಥೆನ್ಸಿನಲ್ಲಿದ್ದ ಸಾಕ್ರೆಟಿಸ್ ಒಬ್ಬ ಪರಮಾನುಭವಿ. ದೊಡ್ಡ ಸಂತ. ಒಂದು ರೀತಿಯಲ್ಲಿ ಆತ ಸರ್ವಜ್ಞ. ಅವನಿಗೆ ಸಾವಿರಾರು ಜನ ಶಿಷ್ಯರು. ಅವರಲ್ಲಿ ಅನೇಕರು ಶ್ರೀಮಂತರು. ಅವರು ತಮ್ಮ ಗುರುವಾದ ಸಾಕ್ರೆಟಿಸ್‌ನಿಗೆ ಏನು ಬೇಕಾದರೂ ಕೊಡಲು ಸಿದ್ಧರಿದ್ದರು. ಆದರೆ ಅದಾವುದೂ ಸಾಕ್ರೆಟಿಸ್‌ನಿಗೆ ಬೇಕಿಲ್ಲ. ಅವನದೊಂದು ಪುಟ್ಟ ಮನೆ. ಮೈಮೇಲೆ ಕನಿಷ್ಠ ಬಟ್ಟೆ. ಅವನದೇ ಆದ ಯಾವ ವಸ್ತುಗಳೂ ಅವನ ಬಳಿಯಲ್ಲಿ ಇರಲಿಲ್ಲ. ಅವನ ಶ್ರೀಮಂತ ಶಿಷ್ಯ ಪ್ಲೇಟೋ ಹೇಳಿದ, "ಗುರುಗಳೇ ತಾವು ಪರಮಜ್ಞಾನಿಗಳು, ಸಾವಿರಾರು ಜನಕ್ಕೆ ಜ್ಞಾನದ ಬೆಳಕು ನೀಡಿದವರು. ತಮ್ಮಿಂದ ನಾವೆಲ್ಲ ಬದುಕನ್ನು ಸಾರ್ಥಕಪಡಿಸಿಕೊಂಡಿದ್ದೇವೆ. ತಾವು ಸುಖವಾಗಿರಲೆಂದು ಒಂದು ಸುಂದರವಾದ ಮನೆಯನ್ನು ಕಟ್ಟಬಯಸಿದ್ದೇನೆ. ಅದನ್ನು ತಮ್ಮ ಪದತಲದಲ್ಲಿ ಅರ್ಪಿಸುತ್ತೇವೆ. ದಯವಿಟ್ಟು ಅವಕಾಶಕೊಡಿ". ಸಾಕ್ರೆಟಿಸ್ ನಕ್ಕ. "ಮಿತ್ರ, ನಾನು ಈ ಮರದ ಕೆಳಗೆಯೇ ಕುಳಿತು ಜ್ಞಾನ ಸಂಪಾದನೆ ಮಾಡಿದವ. ನನಗೆ ಇಲ್ಲಿಯೇ ಹಿತ. ನನಗೆ ಮನೆಯೊಂದು ಬಂಧನವಾಗುತ್ತದೆ. ಇಲ್ಲಿ ಬಯಲಲ್ಲಿ ಯಾವುದೂ ಮೇಲಲ್ಲ, ಕೀಳಲ್ಲ. ಎಲ್ಲವೂ ಸುಭಗ, ಸುಂದರ". ಇದೇ ಪೂರ್ಣತೆಯನ್ನು ಪಡೆದ ಪರಮತೃಪ್ತನ ಲಕ್ಷಣ. ಅವರಿಗೆ ಎಲ್ಲವೂ ಒಂದೇ. ಯಾವುದರ ಅವಶ್ಯಕತೆಯೂ ಇಲ್ಲ. ಇದನ್ನು ವಚನಕಾರ ಜೇಡರ ದಾಸಿಮಯ್ಯ ಹೇಳುವ ರೀತಿ ಅನನ್ಯ. ಕರಿಯನಿತ್ತಡೆ ಒಲ್ಲೆ, ಸಿರಿಯವಿತ್ತಡೆ ಒಲ್ಲೆ, ಹಿರಿದಪ್ಪ ರಾಜ್ಯವನಿತ್ತಡೆ ಒಲ್ಲೆ. ನಿಮ್ಮ ಶರಣರ ಸೂಳ್ನುಡಿಯ ಒಂದರಗಳಿಗೆ ಇತ್ತಡೆ ನಿಮ್ಮನಿತ್ತೆ ಕಾಣಾ ರಾಮನಾಥಾ. ಕರಿ, ಸಿರಿ, ರಾಜ್ಯಗಳಿಗಿಂತ ಶರಣರ ಒಂದು ಮಾತು ಅಮೂಲ್ಯವೆನ್ನಿಸುತ್ತದೆ. ಪೂರ್ಣದರ್ಶನಿಗೆ.

ಈ ಮಾತುಗಳನ್ನೇ ಕೆಲವು ಉದಾಹರಣೆಗಳೊಂದಿಗೆ ಕಗ್ಗ ತಿಳಿಸುತ್ತದೆ. ಹೊಟ್ಟೆ ತುಂಬಿರುವವನ ಮುಂದೆ ಇಟ್ಟ ಹಣ್ಣೇನು, ಕಾಯೇನು? ಅವನಿಗೆ ಹಸಿವೆಯೇ ಇಲ್ಲ. ಆತ ಏನನ್ನೂ ತಿನ್ನಲಾರ. ಪೂರ್ಣದರ್ಶನವಾದವನಿಗೆ ಯಾವ ಅಂಟೂ ಇಲ್ಲದ್ದರಿಂದ ಪಾಪ, ಪುಣ್ಯಗಳ ಗೊಡವೆ ಇಲ್ಲ. ಆತ ಮಾಡಿದ್ದೆಲ್ಲ ಪುಣ್ಯಕಾರ್ಯವೆ. ಅಂತೆಯೇ ಹಿಮಾಲಯದ ಶಿಖರವನ್ನೇರಿ ಕುಳಿತವನಿಗೆ ಕೆಳಗೆ ಕಾಣುವ ತೆಗ್ಗು-ದಿನ್ನೆಗಳಿಂದ ಏನು ಪ್ರಯೋಜನ. ಅವುಗಳನ್ನೆಲ್ಲ ಆತ ದಾಟಿ ಬಂದಿದ್ದಾನೆ. ಆದ್ದರಿಂದ ಪೂರ್ಣತೆಗೆ ಯಾವ ಕೊರತೆಯೂ ಇಲ್ಲ. ಪೂರ್ಣತ್ವದ ದೃಷ್ಟಿಯಲ್ಲಿ ಯಾವುದೂ ಕೆಡುಕಲ್ಲ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಜನವರಿ 16, 2023

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಕೃಷ್ಣ ನವಮಿ ಗಂ. 19-21 ನಕ್ಷತ್ರ: ಸ್ವಾತಿ ಗಂ. 19-23 ಯೋಗ: ಧೃತಿ ಗಂ. 10-31, ಕರಣ: ತೈತಿಲ ಗಂ. 07-39, ಗರಜೆ ಗಂ. 19-21, ಮಕರ ಮಾಸದ 02 ನೇ ದಿನ.
ರಾಹುಕಾಲ : ಬೆಳಿಗ್ಗೆ 07-30 –09-00
ಸೂರ್ಯೋದಯ : 07-01 ಸೂರ್ಯಾಸ್ತ : 06-19
ಮುಸ್ಲಿಂ ದಿನಾಂಕ : 23 ಜುಮಾದುಸ್ಸಾನಿ
ಅದೃಷ್ಟ ಸಂಖ್ಯೆ : 5, 9

ಮೇಷ: ಕಣ್ಣಿನ ದೃಷ್ಟಿಯಲ್ಲಿ ಬದಲಾವಣೆ ಅನುಭವಕ್ಕೆ ಬಂದಲ್ಲಿ ತಕ್ಷಣವೇ ವೈದ್ಯರನ್ನು ಭೇಟಿ ಮಾಡಿ ಚಿಕಿತ್ಸೆ ಪಡೆಯಿರಿ. ಬದಲಾದ ಸನ್ನಿವೇಶಕ್ಕೆ ಒಗ್ಗಿಕೊಳ್ಳಬೇಕಾದ ಅನಿವಾರ್ಯತೆ ಸ್ಥಿತಿ ಎದುರಾಗುತ್ತದೆ.

ವೃಷಭ: ವಿದ್ಯಾರ್ಥಿಗಳಿಗೆ ಏಕಾಗ್ರತೆ ಹೊಂದಿದ ಶಿಸ್ತುಬದ್ಧ ಅಭ್ಯಾಸವು ಉತ್ತಮ ಫಲ ದೊರಕಿಸಿ ಕೊಡಲಿದೆ. ವೈಯಕ್ತಿಕ ವಿಚಾರಗಳನ್ನು ಆಪ್ತರೊಬ್ಬರಲ್ಲಿ ಹೇಳಿಕೊಳ್ಳಲೇ ಬೇಕಾದ ಸಂದರ್ಭ ಎದುರಾಗುವುದು.

ಮಿಥುನ: ಸರ್ಕಾರಿ ನೌಕರರಿಗೆ ಅವರ ಕ್ಷೇತ್ರದಲ್ಲಿ ಏಳಿಗೆ ಪ್ರಾಪ್ತಿ. ನಿಮ್ಮ ಸಹಭಾಗಿಗೆ ಅಥವಾ ಮಕ್ಕಳಿಗೆ ಸಹಾಯ ಮಾಡುವುದರಲ್ಲಿ ಈ ದಿನ ನಿಮಗೆ ಹೆಚ್ಚು ಆನಂದ ಸಿಗಬಹುದು. ಉದರ ವ್ಯಾಧಿಗಳು ದೂರವಾಗುತ್ತದೆ.

ಕರ್ಕಾಟಕ: ಕಾರ್ಯಕ್ಷೇತ್ರದಲ್ಲಿನ ನಷ್ಟ ಪ್ರಮಾಣ ಅಧಿಕವಾಗಿದ್ದರೂ, ಹೊಸ ಜವಾಬ್ದಾರಿಗಳು ಅರಸಿ ಬರಲಿದೆ. ಮಾನಸಿಕ ಪೀಡೆಗಳಿಗೆ ಒಳಗಾಗದಂತೆ ಕಾಳಜಿವಹಿಸಿ. ಮಕ್ಕಳ ಆರೋಗ್ಯ ಸುಖಕರವಾಗಿರುತ್ತದೆ.

ಸಿಂಹ: ವ್ಯಾಪಾರದಲ್ಲಿ ಅಭಿವೃದ್ಧಿ ಕಂಡು ಅದನ್ನು ಮತ್ತಷ್ಟು ಹೆಚ್ಚಿಸಿಕೊಳ್ಳಲು ಹಣ ತೊಡಗಿಸುವಿರಿ. ಮಕ್ಕಳಿಗಾಗಿ ವಿಶೇಷ ವಿನ್ಯಾಸದ ಉಡುಪುಗಳನ್ನು ತರುವಿರಿ. ಮಗನ ವಿದ್ಯಾಭ್ಯಾಸಕ್ಕೆ ತಾಯಿ ಶಾರದಾಂಬೆಯ ಪ್ರಾರ್ಥಿಸಿ.

ಕನ್ಯಾ: ರಾಜಕೀಯ ವ್ಯಕ್ತಿಗಳಿಗೆ ಸಂಘದಲ್ಲಿ ಸ್ಥಾನಮಾನದ ಅರಿವಾಗುವುದು. ತರಬೇತಿ ಕಲಿಕೆಯಿಂದ ಆಫೀಸಿನ ಕೆಲಸಗಳನ್ನು ಇನ್ನಷ್ಟು ತಿಳಿದುಕೊಳ್ಳುವ ಅವಕಾಶ ಸಿಗುತ್ತದೆ. ಪೂಜಾ ಕಾರ್ಯಗಳಲ್ಲಿ ಪಾಲ್ಗೊಳ್ಳುವ ಮನಸ್ಸಾಗಲಿದೆ.

ತುಲಾ: ಶತ್ರುಗಳೊಂದಿಗೆ ಇರುವ ಕಲಹ ಅಥವಾ ವಿವಾದದಿಂದ ಬಿಡುಗಡೆಯಾಗುವ ಮಾರ್ಗ ಹುಡುಕಿಕೊಳ್ಳಿರಿ. ಶೀತ ಬಾಧೆಯನ್ನು ಹೋಗಲಾಡಿಸಿಕೊಳ್ಳುವ ವಿಚಾರ ಆಯುರ್ವೇದದ ಮೊರೆಹೋಗುವುದು ಉತ್ತಮ.

ವೃಶ್ಚಿಕ: ನೆಚ್ಚಿನ ಕ್ಷೇತ್ರದಲ್ಲಿ ಅಭೂತಪೂರ್ವ ಸ್ಪರ್ಧೆಗಳನ್ನು ಎದುರಿಸುವ ಕಾಲ ಈ ದಿನವಾಗಲಿದೆ. ದೇವತಾ ಉಪಾಸನೆಯಿಂದ ಉನ್ನತಿ ಒದಗಿಬರಲಿದೆ. ಕೆಲಸ ಕಾರ್ಯಗಳಲ್ಲಿ ಪ್ರಯತ್ನಕ್ಕೆ ತಕ್ಕ ಫಲ ದೊರೆಯುತ್ತದೆ.

ಧನು: ಅವಿವಾಹಿತರಿಗೆ ಸೂಕ್ತ ಸಂಬಂಧಗಳು ಸ್ನೇಹಿತರ ಬಳಗದಿಂದ ಒದಗಿಬರಬಹುದು. ಸಂಗೀತ ಕ್ಷೇತ್ರದಲ್ಲಿ ಪ್ರೋತ್ಸಾಹ ದೊರೆಯಲಿದೆ. ಮಡದಿಯಲ್ಲಿ ಅನಗತ್ಯ ವಿಷಯ ಪ್ರಸ್ತಾಪಿಸಿ ಭಿನ್ನಾಭಿಪ್ರಾಯ ಮೂಡದಂತೆ ಗಮನವಹಿಸಿ.

ಮಕರ: ಬದುಕಿನಲ್ಲಿ ಒಂದು ಮಹತ್ವದ ದಿನವೆನಿಸಲಿದೆ. ಮುಂದಿನ ಕಾರ್ಯ ಯೋಜನೆಗಳಿಗೆ ಸ್ಪಷ್ಟ ರೂಪ ಕೊಡುವಿರಿ. ಅಗೌರವಿಸಿದ ಸಂಬಂಧಿಕರ ಎದುರು ತಲೆ ಎತ್ತಿ ನಿಲ್ಲುವಂತಾಗುತ್ತದೆ. ಮಿತ್ರರೊಂದಿಗೆ ಕಾಲ ಕಳೆಯುವಿರಿ.

ಕುಂಭ: ಸರ್ಕಾರಿ ನೌಕರರು ವರ್ಗಾವಣೆ ರದ್ದು ಮಾಡಿಸಿಕೊಳ್ಳುವಲ್ಲಿ ಸಫಲರಾಗುವಿರಿ. ಬಂಧುಗಳ ಸಹಾಯವನ್ನು ನಿಷ್ಠುರಗಳಿಲ್ಲದೇ ನಿರಾಕರಿಸುವ ಮಾರ್ಗ ಅತ್ಯಂತ ಶುಭಪ್ರದವಾದದ್ದು. ಕಂಕಣ ಬಲದ ಸಾಧ್ಯತೆ ಇದೆ.


ಮೀನ: ಗಣಪತಿಯ ಪ್ರಾರ್ಥನೆಯೊಂದಿಗೆ ಪ್ರಾರಂಭಿಸಲು ಮರೆಯದಿರಿ. ವಿಚಾರ ಸಂಕಿರಣ ಒಂದರಲ್ಲಿ ಭಾಗವಹಿಸುವ ಸಲುವಾಗಿ ಆಮಂತ್ರಣ ಸಿಗಲಿದೆ. ಆತ್ಮೀಯನಿಗೆ ಸಾಂತ್ವನ ಹೇಳ ಬೇಕಾದ ಸಂದರ್ಭ ಎದುರಾಗಬಹುದು.

ಪದಬಂಧ 5201

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಚರ್ಚೆಗೆ ಗ್ರಾಸವಾದ ವಾದ! (3)
3.ಪ್ರಯಾಸವಾಗದ ಪಯಣ (3)
5.ಅಭಿವ್ಯಕ್ತಿಗೊಳಿಸುತ್ತಿರುವ ಮನುಷ್ಯ! (2)
6.ಒಳ್ಳೆಯ ಭಾವನೆ (3)
7.ತಕಲಿ ಹಿಡಿದಿರುವ ಶೂರ! (2)
9.ನಗರದಿಂದ ತಂದಿರುವ ಆಭರಣ (2)
11.ಪುಷ್ಪಗಳನ್ನು ಜೋಡಿಸಿಡುವ ಕರಂಡ (3)
13.ದ್ವಾಪರ ಯುಗದಲ್ಲಿ ತೆರೆಯುವ ಬಾಗಿಲು! (2)
14.ಒಳ್ಳೆಯ ಸ್ವಭಾವವಿದು (3)
15.ಗರ ಬಡಿದಂತಿರುವ ಮುಖ್ಯಪಟ್ಟಣ (3)

ಮೇಲಿಂದ ಕೆಳಕ್ಕೆ
1.ಮೋಕ್ಷಕ್ಕೊಂದು ಪರ್ಯಾಯ ಪದ (3)
2. ಆ ದಿವಸ ತಂದಿಟ್ಟಿರುವ ಕಾಳುಕಡಿ (3)
3.ಭಾವ ಬೀರಿದ ವರ್ಚಸ್ಸು! (3)
4.ಈತ ಸರಿ ಸಮಾನನಾದವನು (3)
5.ಕಳೆಯುವ ಲೆಕ್ಕವಿದು (5)
8. ಲೀಲಾಜಾಲವಾಗಿ ಹರಾಜು ಹಾಕುತ್ತಿರುವವನು (5)
10.ಕತ್ತಿಯನ್ನು ಇಡುವ ಕೋಶ (3)
11.ಪುಷ್ಪದ ಶರ ಇಲ್ಲಿದೆ (3)
12.ಧನ ಉಳ್ಳವನ ಸಾವು! (3)
13.ನಾಲ್ಕು ಯುಗಗಳಲ್ಲಿ ಮೂರನೆಯದು (3)



5200ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಉತ್ಪ್ರೇಕ್ಷೆ 2.ಕಡುಹಗೆ
4.ಹರಿಹಾಯು 6.ಸಿಂಬಳ
7.ಸುಹ 9.ಕಪೋತ
11.ಹರ 13.ಮೆಲುಕು
14.ಪರೀಕ್ಷಕ 16.ತರಕಲು
17.ಅರಳೆ

ಮೇಲಿಂದ ಕೆಳಕ್ಕೆ:
1. ಉದಾಹರಿಸು
2.ಕರ್ಮ 3.ಹಣೆಬರಹ
5.ಯುವಕ 8.ಹಲಾಲುಕೋರ
10.ತದ್ರೂಪ 12.ರಣಕಹಳೆ
15.ಹಾಲು

ಸುಡೊಕು 5587

	7	9			3		8	
	4			8		2	5	9
8	1		2	6		7		
	8					1		5
	9	2	8	1	5		6	
5						8		
9		7	5					
	5			7	2		4	
4	3		6		1			2

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5586 ಸುಡೊಕು

9	2	8	3	6	7	4	5	1
3	6	4	9	1	5	8	7	2
5	7	1	2	4	8	9	6	3
7	4	2	6	3	9	1	8	5
8	3	9	5	7	1	2	4	6
1	5	6	8	2	4	3	9	7
2	8	5	1	9	6	7	3	4
4	9	3	7	5	2	6	1	8
6	1	7	4	8	3	5	2	9

‘ವಾಹನ ಬಿಡಿಭಾಗಗಳ ದೇಶಿ ಉತ್ಪಾದನೆಗೆ ಗಮನ’

ನವದೆಹಲಿ (ಪಿಟಿಐ): ದೇಶಿ ಆಟೊಮೊಬೈಲ್ ಉದ್ಯಮವು ಭಾರತದಲ್ಲಿಯೇ ಎಲೆಕ್ಟ್ರಾನಿಕ್ ಬಿಡಿಭಾಗಗಳ ತಯಾರಿಕೆಯನ್ನು ಹೆಚ್ಚಿಸುವ ಯತ್ನಕ್ಕೆ ಇನ್ನಷ್ಟು ಬಲ ನೀಡಿದೆ. ವಿದೇಶಗಳ ಮೇಲಿನ, ಅದರಲ್ಲೂ ಮುಖ್ಯವಾಗಿ ಚೀನಾ ಮೇಲಿನ, ಅವಲಂಬನೆಯನ್ನು ಕಡಿಮೆ ಮಾಡುವುದು ಇದರ ಉದ್ದೇಶ.

ಆಟೊಮೊಟಿವ್ ಬಿಡಿಭಾಗಗಳ ತಯಾರಕರ ಒಕ್ಕೂಟದ (ಎಸಿಎಂಎ) ಅಧ್ಯಕ್ಷ ಸಂಜಯ್ ಕಪೂರ್ ಅವರು ಈ ವಿಷಯ ತಿಳಿಸಿದ್ದಾರೆ. ಭಾರತೀಯ ಆಟೊಮೊಬೈಲ್ ತಯಾರಕರ ಸಂಘ, ಕೇಂದ್ರ ಬೃಹತ್ ಉದ್ದಿಮೆಗಳ ಸಚಿವಾಲಯ ಹಾಗೂ ಎಸಿಎಂಎ ಜೊತೆಯಾಗಿ ಈ ನಿಟ್ಟಿನಲ್ಲಿ ಕೆಲಸ ಮಾಡುತ್ತಿವೆ ಎಂದಿದ್ದಾರೆ.

ವಿದ್ಯುತ್ ಚಾಲಿತ ವಾಹನಗಳ ಬಳಕೆಯ ಉತ್ತೇಜನಕ್ಕೆ ಹೆಚ್ಚಿನ ಪ್ರಯತ್ನಗಳು ನಡೆಯುತ್ತಿರುವ ಕಾರಣ, ಆಟೊಮೊಬೈಲ್ ಬಿಡಿಭಾಗಗಳ ಉದ್ದಿಮೆಗೆ ಹೆಚ್ಚಿನ ಅವಕಾಶಗಳು ತೆರೆದುಕೊಳ್ಳಲಿವೆ ಎಂದು ಅವರು ಹೇಳಿದ್ದಾರೆ.

10 ಕೋಟಿ ದಾಟಿದ ಡಿ–ಮ್ಯಾಟ್ ಖಾತೆಗಳ ಸಂಖ್ಯೆ

ನವದೆಹಲಿ (ಪಿಟಿಐ): 2022ರ ಡಿಸೆಂಬರ್‌ನಲ್ಲಿ ದೇಶದಲ್ಲಿನ ಡಿ–ಮ್ಯಾಟ್ ಖಾತೆಗಳ ಒಟ್ಟು ಸಂಖ್ಯೆಯು 10.8 ಕೋಟಿಗೆ ಏರಿಕೆ ಆಗಿದೆ.

ಖಾತೆ ತೆರೆಯುವ ಪ್ರಕ್ರಿಯೆಯು ಸರಳವಾಗಿರುವುದು, ಷೇರು ಮಾರುಕಟ್ಟೆಗಳಿಂದ ಒಳ್ಳೆಯ ಲಾಭ ಸಿಗುತ್ತಿರುವುದು ಹಾಗೂ ಉಳಿತಾಯದ ಹಣವನ್ನು ಷೇರುಗಳಲ್ಲಿ ತೊಡಗಿಸುವ ಪ್ರವೃತ್ತಿ ಹೆಚ್ಚಾಗಿರುವುದು ಇದಕ್ಕೆ ಕಾರಣ ಎಂದು ತಜ್ಞರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಡಿಸೆಂಬರ್‌ನಲ್ಲಿ 21 ಲಕ್ಷ ಖಾತೆಗಳನ್ನು ತೆರೆಯಲಾಗಿದೆ ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್‌ನ ವರದಿಯೊಂದು ಹೇಳಿದೆ. 2021ರ ಡಿಸೆಂಬರ್‌ನಲ್ಲಿ 8.1 ಕೋಟಿ ಡಿ–ಮ್ಯಾಟ್ ಖಾತೆಗಳು ಇದ್ದವು.

ರಷ್ಯಾದಿಂದ ತೈಲ ಆಮದು ಏರಿಕೆ

ನವದೆಹಲಿ (ಪಿಟಿಐ): ಭಾರತವು ರಷ್ಯಾದಿಂದ ಆಮದು ಮಾಡಿಕೊಳ್ಳುವ ಕಚ್ಚಾ ತೈಲದ ಪ್ರಮಾಣವು ಡಿಸೆಂಬರ್‌ನಲ್ಲಿ ದಿನವೊಂದಕ್ಕೆ 10 ಲಕ್ಷ ಬ್ಯಾರಲ್‌ಗಿಂತ ಹೆಚ್ಚಾಗಿದೆ. ಭಾರತವು ಕಚ್ಚಾ ತೈಲ ಆಮದು ಮಾಡಿಕೊಳ್ಳುವ ದೇಶಗಳ ಸಾಲಿನಲ್ಲಿ ರಷ್ಯಾ ಸತತ ಮೂರು ತಿಂಗಳುಗಳಿಂದ ಮೊದಲ ಸ್ಥಾನದಲ್ಲಿ ಉಳಿದಿದೆ.

ನವೆಂಬರ್‌ನಲ್ಲಿ ಪ್ರತಿದಿನ 9.09 ಲಕ್ಷ ಬ್ಯಾರೆಲ್, ಅಕ್ಟೋಬರ್‌ನಲ್ಲಿ ಪ್ರತಿದಿನ 9.35 ಲಕ್ಷ ಬ್ಯಾರೆಲ್ ಕಚ್ಚಾ ತೈಲವನ್ನು ರಷ್ಯಾದಿಂದ ಆಮದು ಮಾಡಿಕೊಳ್ಳಲಾಗುತ್ತಿತ್ತು ಎಂದು ಇಂಧನ ಸಾಗಣೆಯ ಅಂಕಿ –ಅಂಶಗಳನ್ನು ದಾಖಲಿಸುವ ವೊರ್ಟೆಕ್ಸಾ ಹೇಳಿದೆ. ಈಗ ಭಾರತವು ಆಮದು ಮಾಡಿಕೊಳ್ಳುವ ಕಚ್ಚಾ ತೈಲದಲ್ಲಿ ಶೇಕಡ 25ರಷ್ಟು ರಷ್ಯಾದಿಂದ ಬರುತ್ತಿದೆ. ರಷ್ಯಾದಿಂದ ಖರೀದಿಸುವ ಕಚ್ಚಾ ತೈಲವು ಬ್ಯಾರೆಲ್‌ಗೆ 60 ಡಾಲರ್‌ಗಿಂತ ಕಡಿಮೆ ಬೆಲೆಗೆ ಸಿಗುತ್ತಿದೆ ಎಂದು ಮೂಲಗಳು ಹೇಳಿವೆ.

ತೆರಿಗೆ ಉಳಿಸಲು ಉತ್ತಮ ಆಯ್ಕೆಗಳು



ಬಂಡವಾಳ ಮಾರುಕಟ್ಟೆ

ಅವಿನಾಶ್ ಕೆ.ಟಿ.

ತೆರಿಗೆ ಉಳಿಸುವ ಹೂಡಿಕೆಗಳನ್ನು, ಉಳಿತಾಯಗಳನ್ನು ಮಾಡಲು ಮಾರ್ಚ್ 31ರವರೆಗೆ ಸಮಯ ಇದೆ, ಈಗಲೇ ಅದರ ಬಗ್ಗೆ ಚಿಂತೆ ಯಾಕೆ ಅಂದುಕೊಂಡರೆ ಕೊನೇ ಕ್ಷಣದಲ್ಲಿ ಸರಿಯಾದ ಹೂಡಿಕೆ ಆಯ್ಕೆ ಮಾಡಿ ಉಳಿತಾಯದ ಗುರಿ ಮುಟ್ಟಲು ಸಾಧ್ಯವಿಲ್ಲ. ಇನ್ನು ಇರುವ ಎರಡೂವರೆ ತಿಂಗಳನ್ನು ಹೂಡಿಕೆಗೆ ವ್ಯವಸ್ಥಿತವಾಗಿ ಬಳಸಿಕೊಂಡರೆ ತೆರಿಗೆ ಉಳಿಸುವ ಹಾದಿ ಸುಗಮವಾಗುತ್ತದೆ. ಕಾನೂನಿನ ಅನ್ವಯ ತೆರಿಗೆ ಉಳಿಸಲು ಇರುವ ಉತ್ತಮ ಮಾರ್ಗಗಳ ಬಗ್ಗೆ ಮಾಹಿತಿ ಇಲ್ಲಿದೆ.

1. ಎನ್‌ಪಿಎಸ್ (ರಾಷ್ಟ್ರೀಯ ಪಿಂಚಣಿ ಯೋಜನೆ): ತೆರಿಗೆ ಉಳಿಸಲು ಇರುವ ಅತ್ಯುತ್ತಮ ಆಯ್ಕೆಗಳಲ್ಲಿ ಎನ್‌ಪಿಎಸ್ ಪ್ರಮುಖವಾದುದು. ಎನ್‌ಪಿಎಸ್‌ನಲ್ಲಿ ದೀರ್ಘಾವಧಿಯಲ್ಲಿ ಶೇ 8ರಿಂದ ಶೇ 11ರಷ್ಟು ಲಾಭಾಂಶ ನಿರೀಕ್ಷಿಸಬಹುದು. ಎನ್‌ಪಿಎಸ್ ಹೂಡಿಕೆಗೆ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 80 ಸಿ ಅಡಿ ₹ 1.5 ಲಕ್ಷದವರೆಗೆ, ಸೆಕ್ಷನ್ 80 ಸಿಸಿಡಿ 1ಬಿ ಅಡಿ ಹೆಚ್ಚುವರಿಯಾಗಿ ₹ 50,000ಕ್ಕೆ ವಿನಾಯಿತಿ ಲಭಿಸುತ್ತದೆ. ಉದ್ಯೋಗದಾತ ಸಂಸ್ಥೆ ಉದ್ಯೋಗಿಯ ಮೂಲ ವೇತನದ ಶೇ 10ರಷ್ಟನ್ನು ಎನ್‌ಪಿಎಸ್‌ನಲ್ಲಿ ಹೂಡಿಕೆ ಮಾಡಿದರೆ ಆ ಮೊತ್ತಕ್ಕೂ ತೆರಿಗೆ ಇಲ್ಲ.

2. ಯುಲಿಪ್: ಯುಲಿಪ್ ಅಂದರೆ ಯುನಿಟ್ ಲಿಂಕ್ಡ್ ಇನ್ಶ್ಯೂರೆನ್ಸ್ ಪ್ಲಾನ್. ಯುಲಿಪ್‌ಗಳಲ್ಲಿ ಶೇ 8ರಿಂದ ಶೇ 9ರವರೆಗೆ ಲಾಭಾಂಶ ನಿರೀಕ್ಷಿಸಬಹುದು. ಈ ಹೂಡಿಕೆಯಲ್ಲಿ 5 ವರ್ಷಗಳ ಲಾಕಿನ್ ಅವಧಿ ಇದೆ. ಡೆಟ್ ಹೂಡಿಕೆಗಳು (ಸುರಕ್ಷಿತ ಹೂಡಿಕೆ ಆಯ್ಕೆ) ಮತ್ತು ಷೇರು ಮಾರುಕಟ್ಟೆಯಂತಹ ಹೆಚ್ಚಿನ ರಿಸ್ಕ್ ಇರುವ ಹೂಡಿಕೆ ಆಯ್ಕೆಗಳ ನಡುವೆ ಬದಲಾಯಿಸಿಕೊಳ್ಳಲು ಇದರಲ್ಲಿ ಅವಕಾಶವಿದೆ. ಹೂಡಿಕೆ ಮೇಲಿನ ಗಳಿಕೆಗೆ ಸೆಕ್ಷನ್ 10 (10ಡಿ) ಅಡಿಯಲ್ಲಿ ವಿನಾಯಿತಿ ಇದೆ. ಯುಲಿಪ್‌ಗೆ ಪಾವತಿಸುವ ಪ್ರೀಮಿಯಂಗೆ ಸೆಕ್ಷನ್ 80 ಸಿ ಅಡಿಯಲ್ಲಿ ₹ 1.5 ಲಕ್ಷದವರೆಗೆ ತೆರಿಗೆ ವಿನಾಯಿತಿ ಲಭಿಸುತ್ತದೆ.

3. ಹಿರಿಯ ನಾಗರಿಕರ ಉಳಿತಾಯ ಯೋಜನೆ: ಈ ಯೋಜನೆಯಲ್ಲಿ 5 ವರ್ಷ ಲಾಕಿನ್ ಅವಧಿಯಿದ್ದು ಸದ್ಯದ ಬಡ್ಡಿ ದರ ಶೇ 8ರಷ್ಟಿದೆ. ಹಿರಿಯ ನಾಗರಿಕರಿಗೆ ಇದೊಂದು ಉತ್ತಮ ಹೂಡಿಕೆ ಯೋಜನೆ. ಈ ಯೋಜನೆಯಲ್ಲಿ ಹೂಡಿಕೆ ಮೇಲಿನ ಬಡ್ಡಿ ಗಳಿಕೆ ಸಂಪೂರ್ಣವಾಗಿ ಆದಾಯ ತೆರಿಗೆಗೆ ಒಳಪಡುತ್ತದೆ. ಆದರೆ ಹಿರಿಯ ನಾಗರಿಕರು ವಾರ್ಷಿಕವಾಗಿ ಗಳಿಸುವ ₹ 50 ಸಾವಿರದವರೆಗಿನ ಮೊತ್ತಕ್ಕೆ ತೆರಿಗೆ ಕಟ್ಟಬೇಕಿಲ್ಲ. ಅಂದರೆ ಹಿರಿಯ ನಾಗರಿಕರು ಈ ಯೋಜನೆಯಲ್ಲಿ ₹ 6.25 ಲಕ್ಷ ತೊಡಗಿಸಿದರೆ ವಾರ್ಷಿಕ ಯಾವುದೇ ತೆರಿಗೆ ಅನ್ವಯಿಸದು. ಈ ಯೋಜನೆಯಲ್ಲಿ ಮೂರು ತಿಂಗಳಿಗೊಮ್ಮೆ ಬಡ್ಡಿ ಮೊತ್ತ ಪಾವತಿಯಾಗುತ್ತದೆ. ಪಿಪಿಎಫ್ ಅಥವಾ ಬ್ಯಾಂಕ್ ನಿಶ್ಚಿತ ಠೇವಣಿಗಿಂತ ಇದರಲ್ಲಿ ಹೆಚ್ಚು ಲಾಭವಿದೆ.

4. ಇಎಲ್‌ಎಸ್‌ಎಸ್: ಇಎಲ್‌ಎಸ್‌ಎಸ್ ಅಂದರೆ ‘ಈಕ್ವಿಟಿ ಲಿಂಕ್ಡ್ ಸೇವಿಂಗ್ಸ್ ಸ್ಕೀಮ್’. ಇಲ್ಲಿ ಹೂಡಿಕೆ ಮಾಡಿದರೆ ಸೆಕ್ಷನ್ 80 ಸಿ ಅಡಿಯಲ್ಲಿ ಆದಾಯ ತೆರಿಗೆ ವಿನಾಯಿತಿ ಸಿಗುತ್ತದೆ. ಈ ಯೋಜನೆಯಲ್ಲಿ 3 ವರ್ಷದ ಲಾಕಿನ್ ಇದೆ. ಈ ಯೋಜನೆಯ ಅಡಿಯಲ್ಲಿನ ಫಂಡ್‌ಗಳು ಕಳೆದ ಐದು ವರ್ಷಗಳಲ್ಲಿ ವಾರ್ಷಿಕ ಸರಾಸರಿ ಶೇ 10.01ರಷ್ಟು ಲಾಭಾಂಶ ನೀಡಿದ್ದಿದೆ. ಇದು ಷೇರು ಮಾರುಕಟ್ಟೆ ಆಧಾರಿತ ಹೂಡಿಕೆಯಾಗಿರುವುದರಿಂದ ವ್ಯವಸ್ಥಿತ ಹೂಡಿಕೆ ಯೋಜನೆ (ಎಸ್‌ಐಪಿ) ಮೂಲಕ ಹೂಡಿಕೆ ಸೂಕ್ತ. ತೆರಿಗೆ ಉಳಿತಾಯಕ್ಕೆಂದು ಒಂದೇ ಬಾರಿಗೆ ದೊಡ್ಡ ಮೊತ್ತದ ಹಣವನ್ನು ಇದರಲ್ಲಿ ತೊಡಗಿಸಬಾರದು.

5. ಪಿಪಿಎಫ್ (ಸಾರ್ವಜನಿಕ ಭವಿಷ್ಯ ನಿಧಿ): ಪಿಪಿಎಫ್ ಶೇ 7.1ರಷ್ಟು ಬಡ್ಡಿ ನೀಡುತ್ತದೆ. ಈ ಯೋಜನೆ ತೆರಿಗೆ ಉಳಿತಾಯಕ್ಕೆ ಒಳ್ಳೆಯ ಸಾಧನ. ಹೂಡಿಕೆ ಹಂತದಲ್ಲಿ, ಹೂಡಿಕೆ ಮೇಲೆ ಗಳಿಸುವ ಬಡ್ಡಿಗೆ ಮತ್ತು ಅವಧಿ ಮುಗಿದ ಬಳಿಕ ತೆಗೆದುಕೊಳ್ಳುವ ಹಣಕ್ಕೆ ಇಲ್ಲಿ ತೆರಿಗೆ ಇಲ್ಲ. ಪಿಪಿಎಫ್ ಖಾತೆ ಆರಂಭಿಸಿ 6 ವರ್ಷಗಳ ಬಳಿಕ ಶೇ 50ರಷ್ಟು ಮೊತ್ತವನ್ನು ಹಿಂಪಡೆಯುವ ಅವಕಾಶ ಇದೆ. ಸೆಕ್ಷನ್ 80 ಸಿ ಅಡಿಯಲ್ಲಿ ಪಿಪಿಎಫ್ ಹೂಡಿಕೆಗೆ ತೆರಿಗೆ ವಿನಾಯಿತಿ ಸಿಗುತ್ತದೆ.

6. ಸುಕನ್ಯಾ ಸಮೃದ್ಧಿ: 10 ವರ್ಷದೊಳಗಿನ ಹೆಣ್ಣು ಮಕ್ಕಳಿರುವ ಪೋಷಕರು ಈ ಯೋಜನೆಯನ್ನು ಪ್ರಮುಖ ಬ್ಯಾಂಕ್‌ಗಳಲ್ಲಿ, ಅಂಚೆ ಕಚೇರಿಗಳಲ್ಲಿ ಆರಂಭಿಸಬಹುದು. ಸದ್ಯ ಇದರ ಬಡ್ಡಿ ದರ ಶೇ 7.6ರಷ್ಟಿದ್ದು ಹೆಣ್ಣು ಮಗುವಿಗೆ 18 ವರ್ಷ ತುಂಬುವವರೆಗೆ ಈ ಯೋಜನೆಯಲ್ಲಿನ ಹಣ ಹಿಂಪಡೆಯಲು ಸಾಧ್ಯವಿಲ್ಲ. ಕನಿಷ್ಠ ₹ 1 ಸಾವಿರ ಹೂಡಿಕೆಯೊಂದಿಗೆ ಯೋಜನೆ ಆರಂಭಿಸಬಹುದು. ಗರಿಷ್ಠ ಹೂಡಿಕೆ ಮೊತ್ತ ವರ್ಷಕ್ಕೆ ₹ 1.5 ಲಕ್ಷ. ಸುಕನ್ಯಾ ಸಮೃದ್ಧಿ ಹೂಡಿಕೆಗೆ ಸೆಕ್ಷನ್ 80 ಸಿ ಅಡಿಯಲ್ಲಿ ತೆರಿಗೆ ವಿನಾಯಿತಿ ಸಿಗುತ್ತದೆ.

7. ಎಫ್.ಡಿ, ಎನ್‌ಎಸ್‌ಸಿ, ಜೀವ ವಿಮೆ ಪಾಲಿಸಿ: ತೆರಿಗೆ ಉಳಿಸುವ ಎಫ್.ಡಿ.ಗಳು ಉತ್ತಮ ಆಯ್ಕೆಗಳಂತೆ ತೋರುತ್ತವೆ. ಆದರೆ ಹೂಡಿಕೆ ಮೇಲಿನ ಬಡ್ಡಿ ಗಳಿಕೆಗೆ ವ್ಯಕ್ತಿಯ ಆದಾಯದ ಸ್ಲ್ಯಾಬ್‌ಗೆ ಅನುಗುಣವಾಗಿ ತೆರಿಗೆ ಕಟ್ಟಬೇಕಿರುವುದರಿಂದ ಹೊರೆಯಾಗುತ್ತದೆ. ಎನ್‌ಎಸ್‌ಸಿ ಹೂಡಿಕೆಗೆ ಶೇ 7ರಷ್ಟು ಬಡ್ಡಿ ಸಿಗುತ್ತದೆ. ಅಂಚೆ ಕಚೇರಿಗಳಲ್ಲಿ ಇದನ್ನು ಪಡೆಯಬಹುದು. ಇನ್ನು ಎಂಡೋಮೆಂಟ್ ಜೀವ ವಿಮೆ ಪಾಲಿಸಿಗಳು ಶೇ 5ರಷ್ಟು ವಾರ್ಷಿಕ ಲಾಭ ನೀಡುತ್ತವೆ. ಮೇಲಿನ ಮೂರು ಹೂಡಿಕೆಗಳು ಕೂಡ ಸೆಕ್ಷನ್ 80 ಸಿ ಅಡಿಯಲ್ಲಿ ತೆರಿಗೆ ಉಳಿತಾಯದ ದೃಷ್ಟಿಯಿಂದ ಅಷ್ಟೊಂದು ಒಳ್ಳೆಯ ಸಾಧನಗಳಲ್ಲ. ಒಂದೊಮ್ಮೆ ಈಗಾಗಲೇ ಇವುಗಳಲ್ಲಿ ಹೂಡಿಕೆ ಮಾಡಿದ್ದರೆ ತೆರಿಗೆ ವಿನಾಯಿತಿ ಲಾಭ ಪಡೆಯಬಹುದು.

(ಲೇಖಕ ಇಂಡಿಯನ್ ಮನಿ ಡಾಟ್ ಕಾಂನ ಹಣಕಾಸು ಸಲಹಾ ವಿಭಾಗದ ಮುಖ್ಯಸ್ಥ)

ಅಲ್ಪ ಚೇತರಿಕೆ ಕಂಡ ಷೇರುಪೇಟೆ

ಷೇರುಪೇಟೆ

ಜನವರಿ 13ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಅಲ್ಪ ಚೇತರಿಕೆ ಕಂಡಿವೆ. 60,261 ಅಂಶಗಳಲ್ಲಿ ವಹಿವಾಟು ಮುಗಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 0.60ರಷ್ಟು ಹೆಚ್ಚಳ ಕಂಡಿದೆ. 17,956 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ಶೇ 0.45ರಷ್ಟು ಇಳಿಕೆಯಾಗಿದೆ. ದೇಶಿ ಸಾಂಸ್ಥಿಕ ಹೂಡಿಕೆದಾರರಿಂದ ಷೇರುಗಳ ಖರೀದಿ, ರಿಟೇಲ್ ಹೂಡಿಕೆದಾರರಿಂದ ಹೂಡಿಕೆ ಹೆಚ್ಚಳ, ಐ.ಟಿ ಕಂಪನಿಗಳ ತ್ರೈಮಾಸಿಕ ಫಲಿತಾಂಶಗಳಲ್ಲಿ ಕಂಡುಬಂದ ಸಕಾರಾತ್ಮಕತೆ ಸೇರಿದಂತೆ ಹಲವು ಅಂಶಗಳು ಸೂಚ್ಯಂಕಗಳ ಚೇತರಿಕೆಗೆ ಕಾರಣ.

ವಲಯವಾರು ಪ್ರಗತಿಯಲ್ಲಿ ಬಿಎಸ್‌ಇ ಲೋಹ ಸೂಚ್ಯಂಕ, ಮಾಹಿತಿ ತಂತ್ರಜ್ಞಾನ ಸೂಚ್ಯಂಕಗಳು ತಲಾ ಶೇ 3ಕ್ಕಿಂತ ಹೆಚ್ಚು ಗಳಿಸಿಕೊಂಡಿವೆ. ಪವರ್ ಮತ್ತು ಕ್ಯಾಪಿಟಲ್ ಗೂಡ್ಸ್ ಸೂಚ್ಯಂಕಗಳು ತಲಾ ಶೇ 2ರಷ್ಟು ಜಿಗಿದಿವೆ. ಮತ್ತೊಂದೆಡೆ ಬಿಎಸ್‌ಇ ಕನ್ಸೂಮರ್ ಡ್ಯೂರೆಬಲ್ಸ್ ಶೇ 3ರಷ್ಟು ಮತ್ತು ಎಫ್‌ಎಂಸಿಜಿ ಸೂಚ್ಯಂಕ ಶೇ 1ರಷ್ಟು ಕುಸಿದಿವೆ.

ಬಿಎಸ್‌ಇ ಲಾರ್ಜ್ ಕ್ಯಾಪ್‌ನಲ್ಲಿ ಟಾಟಾ ಮೋಟರ್ಸ್, ಅದಾನಿ ಟ್ರಾನ್ಸ್‌ಮಿಷನ್, ಹಿಂಡಾಲ್ಕೊ ಇಂಡಸ್ಟ್ರೀಸ್, ಜೆಎಸ್‌ಡಬ್ಲ್ಯು ಸ್ಟೀಲ್, ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ ಮತ್ತು ಮಹಿಂದ್ರ ಆ್ಯಂಡ್ ಮಹಿಂದ್ರ ಗಳಿಕೆ ದಾಖಲಿಸಿವೆ. ಬಿಎಸ್‌ಇ ಮಿಡ್ ಕ್ಯಾಪ್‌ನಲ್ಲಿ ಸಿಜಿ ಪವರ್ ಆ್ಯಂಡ್ ಇಂಡಸ್ಟ್ರಿಯಲ್ ಸಲ್ಯೂಷನ್ಸ್, ಮ್ಯಾಕ್ಸ್ ಫೈನಾನ್ಶಿಯಲ್ ಸರ್ವಿಸಸ್, ಆಲಿಸ್ ಇಂಡಿಯಾ, ಚೋಳಮಂಡಲಂ ಇನ್ವೆಸ್ಟ್‌ಮೆಂಟ್, ಎಲ್ ಆ್ಯಂಡ್ ಟಿ ಫೈನಾನ್ಸ್ ಹೋಲ್ಡಿಂಗ್ಸ್, ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್, ಬಜಾಜ್ ಹೋಲ್ಡಿಂಗ್ ಆ್ಯಂಡ್ ಇನ್ವೆಸ್ಟ್‌ಮೆಂಟ್ ಗಳಿಕೆ ದಾಖಲಿಸಿವೆ.

ಐಡಿಬಿಐ ಬ್ಯಾಂಕ್, ಗ್ಲ್ಯಾಂಡ್ ಫಾರ್ಮಾ, ವೋಡಾಫೋನ್ ಐಡಿಯಾ, ಎಲ್ ಆ್ಯಂಡ್ ಟಿ ಟೆಕ್ನಾಲಜಿಕಲ್ ಸರ್ವಿಸಸ್, ಜೆಎಸ್‌ಡಬ್ಲ್ಯು ಎನರ್ಜಿ ಕುಸಿದಿವೆ.

ಮುನ್ನೋಟ: ಈ ವಾರ ರಿಲಯನ್ಸ್ ಇಂಡಸ್ಟ್ರೀಸ್, ಐಸಿಐಸಿಐ ಬ್ಯಾಂಕ್, ಕೋಟಕ್ ಬ್ಯಾಂಕ್, ಯೂನಿಯನ್ ಬ್ಯಾಂಕ್, ಫೆಡರಲ್ ಬ್ಯಾಂಕ್, ಏಷ್ಯನ್ ಪೇಂಟ್ಸ್, ಪಾಲಿಕ್ಯಾಬ್, ಹ್ಯಾವೆಲ್ಸ್, ಜೆಎಸ್‌ಬ್ಲ್ಯೂ ಸ್ಟೀಲ್ ಸೇರಿ ಹಲವು ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸುತ್ತಿವೆ. ಜಾಗತಿಕ ವಿದ್ಯಮಾನಗಳ ಜೊತೆ ದೇಶಿ ಬೆಳವಣಿಗೆಗಳು, ಕಂಪನಿಗಳ ತ್ರೈಮಾಸಿಕ ಸಾಧನೆಗಳು ಸೂಚ್ಯಂಕಗಳ ಮೇಲೆ ಪರಿಣಾಮ ಬೀರಲಿವೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ	
ಬೆಂಗಳೂರು	
100 ಮೊಟ್ಟೆಗೆ	₹575
12 ಮೊಟ್ಟೆಗೆ	₹75
ಮೈಸೂರು	
100 ಮೊಟ್ಟೆಗೆ	₹577

ರಾಮನಗರ ರೇಷ್ಮೆಗೂಡು ಧಾರಣೆ	
ಮಿಶ್ರತಳಿ (ಸಿ.ಬಿ)	₹455-651
ದ್ವಿತಳಿ (ಬಿ.ವಿ)	₹605-782

ಉಕ್ರೇನ್: ಕ್ಷಿಪಣಿ ದಾಳಿಗೆ 25 ಸಾವು

ನಿಪ್ರೊ/ಮಾಸ್ಕೊ (ಎಪಿ/ಎಎಫ್‌ಪಿ/ರಾಯಿಟರ್ಸ್): ಉಕ್ರೇನ್‌ನ ನಿಪ್ರೊ ನಗರದ ಗೋಪುರ ಅಪಾರ್ಟ್‌ಮೆಂಟ್ ಮೇಲೆ ರಷ್ಯಾ ನಡೆಸಿದ ಕ್ಷಿಪಣಿ ದಾಳಿಗೆ ನಾಗರಿಕರ ಸಾವಿನ ಸಂಖ್ಯೆ ಭಾನುವಾರ 25ಕ್ಕೆ ಏರಿದೆ. ಅವಶೇಷಗಳಡಿ ಸಿಲುಕಿದವರ ರಕ್ಷಣಾ ಕಾರ್ಯ ನಡೆಯುತ್ತಿದ್ದು, ಈವರೆಗೆ 39 ಮಂದಿ ರಕ್ಷಿಸಲಾಗಿದೆ.

ಶನಿವಾರ ತಡ ರಾತ್ರಿ ರಷ್ಯಾ ಕರ್ಸ್ಕ್ ಪ್ರದೇಶದಿಂದ ಹಾರಿಸಿದ ಕೆಎಚ್–22 ಕ್ಷಿಪಣಿಯು ಸುಮಾರು 1,700 ಜನರು ವಾಸವಿದ್ದ ಅಪಾರ್ಟ್‌ಮೆಂಟ್‌ಗೆ ಅಪ್ಪಳಿಸಿದೆ. 43 ಜನರು ಕಾಣೆಯಾಗಿದ್ದು, 73 ಮಂದಿಗೆ ಗಾಯಗಳಾಗಿವೆ. ರಷ್ಯಾ ಉಡಾಯಿಸಿದ 33 ಕ್ಷಿಪಣಿಗಳ ಪೈಕಿ 21 ಕ್ಷಿಪಣಿ ನಾಶಪಡಿಸಲಾಯಿತು ಎಂದು ಉಕ್ರೇನ್ ಹೇಳಿದೆ.

ಸಕಾರಾತ್ಮಕ ಮುನ್ನಡೆ– ಪುಟಿನ್ ಪ್ರಶಂಸೆ: ನಿಪ್ರೊ ಮೇಲೆ ಕ್ಷಿಪಣಿ ದಾಳಿ ನಡೆಸಿದ, ಉಪ್ಪುಗಣಿ ಸೊಲೆದಾರ್ ನಗರ ವಶಪಡಿಸಿಕೊಂಡ ನಂತರ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಭಾನುವಾರ ತಮ್ಮ ಸೇನಾಪಡೆಗಳು ‘ಸಕಾರಾತ್ಮಕ ಮುನ್ನಡೆ’ ಸಾಧಿಸಿವೆ ಎಂದು ಶ್ಲಾಘಿಸಿದರು.

ಸ್ಫೋಟ– ಮೂವರ ಸಾವು: ರಷ್ಯಾದ ಬೆಲ್ಗೊರೊಡ್‌ನಲ್ಲಿ ಸೇನಾ ನೆಲೆಗಳು ಮತ್ತು ತರಬೇತಿ ಮೈದಾನದ ಸಮೀಪವೇ ಭಾನುವಾರ ಮದ್ದುಗುಂಡು ಸ್ಫೋಟಿಸಿ ಮೂವರು ಮೃತಪಟ್ಟು, 13 ಮಂದಿ ಗಾಯಗೊಂಡಿದ್ದಾರೆ ಎಂದು ‘ರಿಯಾ ನೊವೊಸ್ತಿ’ ಸುದ್ದಿಸಂಸ್ಥೆ ವರದಿ ಮಾಡಿದೆ.



ಸಾಹಸ... ಇರಾಕ್‌ನ ಉತ್ತರ ಸ್ವಾಯತ್ತ ಕುರ್ದಿಷ್ ಪ್ರದೇಶದ ರಾಜಧಾನಿ ಅರ್ಬಿಲ್‌ನಲ್ಲಿ ಭಾನುವಾರ ಸೇನಾ ಪದವಿ ಸಮಾರಂಭದ ನಂತರ ನಡೆದ ಪಥ ಸಂಚಲನದಲ್ಲಿ ಇರಾಕಿ-ಕುರ್ದಿಷ್ ಪೆಶ್ಮೆರ್ಗಾ ಸೇನಾಧಿಕಾರಿಗಳು ಸಾಹಸ ಪ್ರದರ್ಶಿಸಿದರು –ಎಎಫ್‌ಪಿ ಚಿತ್ರ

ಯುಎಸ್ ಸಿ.ಡಿ.ಸಿಗೆ ನೀರವ್ ಶಾ ನೇಮಕ

ವಾಷಿಂಗ್ಟನ್ (ಪಿಟಿಐ): ಸಾಂಕ್ರಾಮಿಕ ರೋಗ ತಜ್ಞ, ಭಾರತೀಯ ಮೂಲದ ನೀರವ್ ಡಿ. ಶಾ ಅವರನ್ನು ಅಮೆರಿಕದ ರಾಷ್ಟ್ರೀಯ ಸಾರ್ವಜನಿಕ ಆರೋಗ್ಯ ಸಂಸ್ಥೆಯಾದ ‘ಯುಎಸ್ ಸೆಂಟರ್ ಫಾರ್ ಡಿಸೀಸ್ ಕಂಟ್ರೋಲ್ ಆಂಡ್ ಪ್ರಿವೆನ್ಷನ್’ನ (ಯುಎಸ್ ಸಿ.ಡಿ.ಸಿ) ಪ್ರಧಾನ ಉಪನಿರ್ದೇಶಕರಾಗಿ ನೇಮಿಸಲಾಗಿದೆ. ಶಾ ಅವರು ಈ ಸಂಸ್ಥೆಯ ಎರಡನೇ ಉನ್ನತ ಹುದ್ದೆಗೇರಿದ್ದಾರೆ.

ಸದ್ಯ ಇವರು ಮೈನ್ ಸಿ.ಡಿ.ಸಿ ಕೇಂದ್ರದ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ನೀರವ್ ಆಯ್ಕೆಯನ್ನು ಮೈನ್ ರಾಜ್ಯದ ಗವರ್ನರ್ ಅನುಮೋದಿಸಿದ್ದಾರೆ.

‘ಡಾ.ನೀರವ್ ಅವರ ನಾಯಕತ್ವವು ಇನ್ನು ಮುಂದೆ ಯುಎಸ್ ಸಿ.ಡಿ.ಸಿ ಮತ್ತು ಇಡೀ ದೇಶಕ್ಕೆ ದೊರಕಲಿದೆ ಎಂದು ಹೇಳಲು ಹರ್ಷಿಸುತ್ತೇನೆ’ ಎಂದು ಅವರು ತಿಳಿಸಿದ್ದಾರೆ.

ಕೋವಿಡ್: ಮಾಹಿತಿ ಒದಗಿಸಲು ಚೀನಾಕ್ಕೆ ಡಬ್ಲ್ಯುಎಚ್‌ಒ ಮನವಿ

ಬೀಜಿಂಗ್ (ಎಪಿ): ದೇಶದಲ್ಲಿ ಕಾಣಿಸಿಕೊಂಡಿರುವ ಕೋವಿಡ್–19ನ ಅಲೆ ಕುರಿತು ನಿರಂತರವಾಗಿ ಮಾಹಿತಿಯನ್ನು ಬಿಡುಗಡೆ ಮಾಡುವಂತೆ ವಿಶ್ವ ಆರೋಗ್ಯ ಸಂಸ್ಥೆಯು (ಡಬ್ಲ್ಯುಎಚ್‌ಒ) ಚೀನಾಕ್ಕೆ ಮನವಿ ಮಾಡಿದೆ.

ದೇಶದಲ್ಲಿ ಕೋವಿಡ್‌ನಿಂದಾಗಿ ಸಂಭವಿಸುತ್ತಿರುವ ಸಾವು–ನೋವುಗಳ ಬಗ್ಗೆ ಚೀನಾ ಸಮರ್ಪಕ ಮಾಹಿತಿ ನೀಡುತ್ತಿಲ್ಲ ಎಂಬ ದೂರುಗಳು ಕೇಳಿಬಂದಿದ್ದವು. ಈ ದೂರುಗಳ ಹಿನ್ನೆಲೆಯಲ್ಲಿ ಮಾಹಿತಿ ಹಂಚಿಕೊಂಡಿದ್ದ ಚೀನಾ, ಡಿಸೆಂಬರ್‌ನಿಂದ ಈ ವರೆಗೆ ಕೋವಿಡ್‌ನಿಂದಾಗಿ 60 ಸಾವಿರದಷ್ಟು ಜನರು ಮೃತಪಟ್ಟಿರುವುದಾಗಿ ಶನಿವಾರ ಹೇಳಿತ್ತು. ಇದರ ಬೆನ್ನಲ್ಲೇ, ಡಬ್ಲ್ಯುಎಚ್‌ಒ ಈ ಮನವಿ ಮಾಡಿದೆ.

‘ಚೀನಾ ನೀಡಿರುವ ಮಾಹಿತಿಯು ಆ ದೇಶದಲ್ಲಿರುವ ಕೋವಿಡ್ ಪಿಡುಗಿನ ತೀವ್ರತೆಯನ್ನು ಅರ್ಥ ಮಾಡಿಕೊಳ್ಳಲು ನೆರವಾಗಲಿದೆ. ಈ ರೀತಿಯ ಮಾಹಿತಿಯನ್ನು ವಿಶ್ವ ಆರೋಗ್ಯ ಸಂಸ್ಥೆ ಹಾಗೂ ಸಾರ್ವಜನಿಕರೊಂದಿಗೆ ಹಂಚಿಕೊಳ್ಳುವ ಪ್ರಕ್ರಿಯೆ ಮುಂದುವರಿಯಬೇಕು’ ಎಂದೂ ಡಬ್ಲ್ಯುಎಚ್‌ಒ ತಿಳಿಸಿದೆ.

ಮಾಹಿತಿ ಹಂಚಿಕೊಳ್ಳುವ ಸಂಬಂಧ ಡಬ್ಲ್ಯುಎಚ್‌ಒ ಮಹಾನಿರ್ದೇಶಕ ಟೆಡ್ರೊಸ್ ಅಧಾನೋಮ್ ಘೆಬ್ರೆಯೆಸಿಸ್ ಅವರು ಚೀನಾ ಆರೋಗ್ಯ ಸಚಿವರಾದ ಮಾ ಶವೊವೀ ಅವರೊಂದಿಗೆ ಮಾತನಾಡಿದ್ದಾರೆ ಎಂದು ಡಬ್ಲ್ಯುಎಚ್‌ಒ ಪ್ರಕಟಣೆ ತಿಳಿಸಿದೆ.

‘ಆಸ್ಪತ್ರೆಗಳಲ್ಲಿ ಸಂಭವಿಸಿದ ಸಾವುಗಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲಾಗಿದೆ. ಡಿಸೆಂಬರ್ 8ರಿಂದ ಜನವರಿ 12ರ ನಡುವೆ, ಕೋವಿಡ್‌ನಿಂದಾಗಿ ಕಂಡುಬಂದ ಉಸಿರಾಟದ ತೊಂದರೆ ಕಾರಣದಿಂದ 5,503 ಜನರು ಮೃತಪಟ್ಟಿದ್ದಾರೆ. ಕೋವಿಡ್–19 ಜೊತೆಗೆ, ಕ್ಯಾನ್ಸರ್, ಹೃದ್ರೋಗ ಹಾಗೂ ಇತರ ಕಾಯಿಲೆಗಳಿಂದಾಗಿ ಸತ್ತವರ ಸಂಖ್ಯೆ 54,435’ ಎಂದು ರಾಷ್ಟ್ರೀಯ ಆರೋಗ್ಯ ಆಯೋಗ ತಿಳಿಸಿದೆ.

ಇಸ್ತಾಂಬುಲ್‌ನಲ್ಲಿ ಹೈದರಾಬಾದ್ ನಿಜಾಮ ವಂಶಸ್ಥ ನಿಧನ

ಹೈದರಾಬಾದ್ (ಪಿಟಿಐ): 8ನೇ ನಿಜಾಮ ಎಂದೇ ಕರೆಯಲಾಗುತ್ತಿದ್ದ, ಹೈದರಾಬಾದ್‌ನ ನಿಜಾಮ ವಂಶಸ್ಥ ಮುಕರ್ರಮ್ ಜಾಹ್ (89) ಅವರು ಟರ್ಕಿಯದ ಇಸ್ತಾಂಬುಲ್‌ನಲ್ಲಿ ಶನಿವಾರ ನಿಧನರಾದರು.

‘ಅವರ ಇಚ್ಛೆಯಂತೆ, ಮುಕರ್ರಮ್ ಅವರ ಅಂತ್ಯಕ್ರಿಯೆಯನ್ನು ತಾಯ್ನಾಡಿನಲ್ಲಿಯೇ ನೆರವೇರಿಸಲಾಗುತ್ತದೆ. ಅವರ ಪಾರ್ಥಿವ ಶರೀರದೊಂದಿಗೆ ಅವರ ಮಕ್ಕಳು ಜ.17ರಂದು ಹೈದರಾಬಾದ್‌ಗೆ ಪ್ರಯಾಣಿಸುವರು’ ಎಂದು ಅವರ ಕಚೇರಿ ಭಾನುವಾರ ಪ್ರಕಟಣೆಯಲ್ಲಿ ತಿಳಿಸಿದೆ.

‘ಪೂರ್ವಜರ (ಆಸಫ್ ಜಾಹಿ ರಾಜವಂಶ) ಸಮಾಧಿಗಳು ಇರುವ ಸ್ಥಳದಲ್ಲಿಯೇ ಅಂತ್ಯಕ್ರಿಯೆ ನೆರವೇರಿಸಲಾಗುವುದು’ ಎಂದು ತಿಳಿಸಿದೆ.

1933ರಲ್ಲಿ ಜನಿಸಿದ್ದ ಅವರು, ನಂತರ ಟರ್ಕಿಯೆಗೆ ವಲಸೆ ಹೋಗಿ, ನಂತರ ಅಲ್ಲಿಯೇ ವಾಸಿಸುತ್ತಿದ್ದರು. ಮೀರ್ ಹಿಮಾಯತ್ ಅಲಿ ಖಾನ್ (ಅಜಂ ಜಾಹ್ ಬಹದೂರ್ ಎಂದೂ ಕರೆಯಲಾಗುತ್ತಿತ್ತು), ಮುಕರ್ರಮ್ ಅವರ ತಂದೆ.

ಅಮೆರಿಕದ ಆರ್ಬಾನಿ ಗೇಬ್ರಿಯಲ್ ‘ಭುವನ ಸುಂದರಿ’

ಲೂಸಿಯಾನ, ಅಮೆರಿಕ (ಎಪಿ): ಅಮೆರಿಕದ ಟೆಕ್ಸಾಸ್ ರಾಜ್ಯದ ರೂಪದರ್ಶಿ, ಮಿಸ್ ಯುಎಸ್‌ಎ ಆರ್ಬಾನಿ ಗೇಬ್ರಿಯಲ್ ಅವರು ಶನಿವಾರ ‘ಭುವನ ಸುಂದರಿ’ ಕಿರೀಟ ಮುಡಿಗೇರಿಸಿಕೊಂಡಿದ್ದಾರೆ.

ಲೂಸಿಯಾನದ ನ್ಯೂ ಆರ್ಲೀನ್ಸ್‌ನಲ್ಲಿ ಭುವನ ಸುಂದರಿ ಸ್ಪರ್ಧೆಯ 71ನೇ ಆವೃತ್ತಿಯನ್ನು ಆಯೋಜಿಸಲಾಗಿತ್ತು. ಆರ್ಬಾನಿ ಅವರು ಮಿಸ್ ಯುಎಸ್‌ಎ ಮತ್ತು ಭುವನ ಸುಂದರಿ ಸ್ಪರ್ಧೆಯಲ್ಲಿ ಜಯಗಳಿಸಿದ ಪ್ರಥಮ ಫಿಲಿಪಿನೊ ಅಮೆರಿಕನ್ ಆಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಸ್ತ್ರ ವಿನ್ಯಾಸಕಿ, ಹೊಲಿಗೆ ತರಬೇತುಗಾರ್ತಿಯಾಗಿರುವ ಇವರು ನಾರ್ತ್ ಟೆಕ್ಸಾಸ್ ವಿ.ವಿಯಿಂದ ಪದವಿ ಪಡೆದಿದ್ದಾರೆ.



ಆರ್ಬಾನಿ ಗೇಬ್ರಿಯಲ್

ಮಿಸ್ ವೆನೆಜುವೆಲಾ ಅಮಂಡಾ ಡುಡಾಮೆಲ್ ಮೊದಲ ರನ್ನರ್‌ಅಪ್ ಆಗಿ ಹೊರಹೊಮ್ಮಿದರೆ, ಮಿಸ್ ಡಾಮಿನಿಕ್ ರಿಪಬ್ಲಿಕ್ ಆ್ಯಂಡ್ರೀನಾ ಮಾರ್ಟಿನೆಝ್ ಎರಡನೇ ರನ್ನರ್‌ಅಪ್ ಆಗಿ ಆಯ್ಕೆ ಆಗಿದ್ದಾರೆ.

ಕಳೆದ ವರ್ಷ ಭಾರತದ ಹರ್ನಾಜ್ ಸಂಧು ಅವರು ಭುವನ ಸುಂದರಿ ಕಿರೀಟ ಮುಡಿಗೇರಿಸಿಕೊಂಡಿದ್ದರು.

‘ಬೆಂಬಲ ಬೆಲೆಯಲ್ಲಿ ವಾರದೊಳಗೆ ಕೊಬ್ಬರಿ ಖರೀದಿ’



ತುಮಕೂರು: ವಾರದೊಳಗೆ ನಾಫೆಡ್ ಮುಖಾಂತರ ಬೆಂಬಲ ಬೆಲೆಯಡಿ ಕೊಬ್ಬರಿಯನ್ನು ಖರೀದಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾನುವಾರ ತಿಳಿಸಿದರು.

ತಿಪಟೂರಿನಲ್ಲಿ ಸಿದ್ಧರಾಮೇಶ್ವರ ಜಯಂತಿ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಬಿಜೆಪಿ ಸರ್ಕಾರ ಪ್ರತಿ ಬಾರಿ ಕೊಬ್ಬರಿ ಖರೀದಿಗೆ ಆದ್ಯತೆ ನೀಡಲಾಗುತ್ತಿದೆ. ರಾಗಿ ಖರೀದಿಗೂ ಈಗಾಗಲೇ ರೈತರು ನೋಂದಣಿ ಮಾಡಿಕೊಂಡಿದ್ದು, ಮುಂದಿನ ವಾರದಲ್ಲಿ ಖರೀದಿ ಆರಂಭಿಸಲಾಗುವುದು ಎಂದು ಹೇಳಿದರು.

ಸಂಕ್ಷಿಪ್ತ ಸುದ್ದಿ

ಆರ್‌ವಿಎಂ ಪ್ರಾತ್ಯಕ್ಷಿಕೆ ಇಂದು

ನವದೆಹಲಿ (ಪಿಟಿಐ): ಕೇಂದ್ರ ಚುನಾವಣಾ ಆಯೋಗವು ದೂರ ನಿಯಂತ್ರಿತ ವಿದ್ಯುನ್ಮಾನ ಮತಯಂತ್ರದ (ಆರ್‌ವಿಎಂ) ಪ್ರಾತ್ಯಕ್ಷಿಕೆಯನ್ನು ಸೋಮವಾರ (ಜ.16) ಆಯೋಜಿಸಿದೆ.

ಆಯೋಗವು, ಮಾನ್ಯತೆ ಪಡೆದಿರುವ 8 ರಾಷ್ಟ್ರೀಯ ಪಕ್ಷಗಳು ಹಾಗೂ ರಾಜ್ಯಗಳ 57 ಪಕ್ಷಗಳ ಪ್ರತಿನಿಧಿಗಳನ್ನು ಈ ಪ್ರಾತ್ಯಕ್ಷಿಕೆಗೆ ಆಹ್ವಾನಿಸಿದೆ.

'ಮತದಾನ ಪ್ರಕ್ರಿಯೆಯಲ್ಲಿ ವಲಸಿಗ ಮತದಾರರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸುವ ಸಲುವಾಗಿ ಆರ್‌ವಿಎಂ ಅಭಿವೃದ್ಧಿಪಡಿಸಲಾಗಿದೆ. ಈ ವ್ಯವಸ್ಥೆಯನ್ನು ಸುಧಾರಿಸುವ ಸಲುವಾಗಿ ಚರ್ಚೆಯ ಅಗತ್ಯವಿದ್ದು, ತಮ್ಮನ್ನು ಆಹ್ವಾನಿಸಲಾಗಿದೆ' ಎಂದು ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ಬರೆದ ಪತ್ರದಲ್ಲಿ ವಿವರಿಸಲಾಗಿದೆ.

ವಲಸಿಗ ಮತದಾರರು ತಾವಿರುವ ಸ್ಥಳದಿಂದಲೇ ಮತದಾನ ಮಾಡಲು ಅನುವಾಗಲು ಆಯೋಗವು ದೂರ ನಿಯಂತ್ರಿತ ವಿದ್ಯುನ್ಮಾನ ಮತಯಂತ್ರದ (ಆರ್‌ವಿಎಂ) ಮಾದರಿಯನ್ನು ಅಭಿವೃದ್ಧಿಪಡಿಸಿದೆ. ಸಾರ್ವಜನಿಕ ವಲಯದ ಉದ್ದಿಮೆ ಎಲೆಕ್ಟ್ರಾನಿಕ್ಸ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿಮಿಟೆಡ್ (ಇಸಿಐಎಲ್) ಈ ಆರ್‌ವಿಎಂ ಅನ್ನು ಅಭಿವೃದ್ಧಿಪಡಿಸಿದೆ. ಇಸಿಐಎಲ್ ಹಾಗೂ ಬಿಇಎಲ್ ಈ ಯಂತ್ರಗಳನ್ನು ಉತ್ಪಾದಿಸುತ್ತವೆ.

ಒಂದು ಮತಗಟ್ಟೆಯಲ್ಲಿ ಇರಿಸಲಾಗುವ ಆರ್‌ವಿಎಂನಿಂದ 72 ಕ್ಷೇತ್ರಗಳಲ್ಲಿ ನಡೆಯುವ ಮತದಾನ ಪ್ರಕ್ರಿಯೆಯನ್ನು ನಿಭಾಯಿಸಲು ಸಾಧ್ಯವಿದೆ ಎಂದು ಆಯೋಗ ತಿಳಿಸಿದೆ.

'ಬೇರೆ ಪಕ್ಷಗಳ ಜೊತೆ ಮೈತ್ರಿ ಇಲ್ಲ'



ಮಾಯಾವತಿ

ಲಖನೌ (ಪಿಟಿಐ): ವಿವಿಧ ರಾಜ್ಯಗಳ ವಿಧಾನಸಭೆ ಮತ್ತು 2024ರ ಲೋಕಸಭಾ ಚುನಾವಣೆಗಳಲ್ಲಿ ಯಾವುದೇ ಪಕ್ಷದೊಂದಿಗೆ ಮೈತ್ರಿ ಮಾಡಿಕೊಳ್ಳುವುದಿಲ್ಲ ಎಂದು ಬಿಎಸ್‌ಪಿ ನಾಯಕಿ ಮಾಯಾವತಿ ಅವರು ಭಾನುವಾರ ಸ್ಪಷ್ಟಪಡಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕರ್ನಾಟಕ, ಮಧ್ಯಪ್ರದೇಶ, ರಾಜಸ್ಥಾನ, ಛತ್ತೀಸ್‌ಗಢ ಮತ್ತು ತೆಲಂಗಾಣ ವಿಧಾನಸಭಾ ಚುನಾವಣೆಯಲ್ಲಿ ಬಿಎಸ್‌ಪಿ ಏಕಾಂಗಿಯಾಗಿ ಸ್ಪರ್ಧಿಸಲಿದೆ' ಎಂದು ಹೇಳಿದರು. ಇದೇ ವೇಳೆ ಚುನಾವಣೆಗಳಲ್ಲಿ ವಿದ್ಯುನ್ಮಾನ ಮತಯಂತ್ರದ ಬದಲಿಗೆ ಬ್ಯಾಲೆಟ್ ಪೇಪರ್ ಬಳಸಬೇಕು ಎಂದು ಒತ್ತಾಯಿಸಿದರು. ಇವಿಎಂ ಬಳಕೆ ಪಕ್ಷದ ಶೇಕಡಾವಾರು ಮತಗಳಿಕೆ ಮೇಲೆ ಪರಿಣಾಮ ಬೀರಿದೆ ಮತ್ತು ಇವಿಎಂಗಳಿಂದ ವಂಚನೆಯಾಗುತ್ತಿದೆ ಎಂದು ಆರೋಪಿಸಿದರು.

ವಂದೇ ಭಾರತ್‌ಗೆ ಪ್ರಧಾನಿ ಚಾಲನೆ

ಹೈದರಾಬಾದ್ (ಪಿಟಿಐ): ತೆಲಂಗಾಣದ ಸಿಕಂದರಾಬಾದ್ ಹಾಗೂ ಆಂಧ್ರಪ್ರದೇಶದ ವಿಶಾಖಪಟ್ಟಣ ನಗರಗಳ ನಡುವೆ ಸಂಪರ್ಕ ಕಲ್ಪಿಸುವ 'ವಂದೇ ಭಾರತ್' ರೈಲು ಸಂಚಾರ ಸೇವೆಗೆ ಪ್ರಧಾನಿ ನರೇಂದ್ರ ಮೋದಿ ಭಾನುವಾರ ಚಾಲನೆ ನೀಡಿದರು.

'ದೇಶವು ಅವಲಂಬನೆಯ ಮನಸ್ಥಿತಿಯಿಂದ ಸ್ವಾವಲಂಬನೆ ಯತ್ತ ಬದಲಾಗುವುದರ ಪ್ರತಿರೂಪ ಈ ವಂದೇ ಭಾರತ್ ರೈಲು ಸೇವೆ. ಭಾರತವು ಎಲ್ಲದರಲ್ಲೂ ಉತ್ತಮವಾದುದನ್ನೇ ನಿರೀಕ್ಷಿಸಲಿದೆ ಎಂಬುದರ ಸಂಕೇತವು ಆಗಿದೆ' ಎಂದು ಪ್ರಧಾನಿ ಹೇಳಿದರು.

ರಾಷ್ಟ್ರೀಯ ಸೇನಾ ದಿನ ನಿಮಿತ್ತ ಇದೇ ಸಂದರ್ಭದಲ್ಲಿ ಅವರು ಸೇವಾ ನಿರತ ಹಾಗೂ ನಿವೃತ್ತಿಗೊಂಡಿರುವ ಯೋಧರ ಸೇವೆಯನ್ನು ಶ್ಲಾಘಿಸಿ, ಗೌರವ ಸಲ್ಲಿಸಿದರು.

ವಂದೇ ಭಾರತ್ ರೈಲಿನಲ್ಲಿ ಉಭಯ ನಗರಗಳ ಸಂಚಾರ ಅವಧಿ ಎಂಟೂವರೆ ಗಂಟೆ. ನಿಯಮಿತ ಸೇವೆ ಫೆ.16ರಿಂದ ಆರಂಭವಾಗಲಿದೆ. ಒಟ್ಟು ಪ್ರಯಾಣಿಕರ ಸಾಮರ್ಥ್ಯ 1,128 ಆಗಿದ್ದು,14 ಬೋಗಿಗಳು ಇರಲಿವೆ ಎಂದು ದಕ್ಷಿಣ ಕೇಂದ್ರ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಜೋಶಿಮಠದ ಮನೆಗಳ ಮೇಲೆ 'ಅಸುರಕ್ಷಿತ' ಫಲಕ ● ಮೂಲಸೌಕರ್ಯ ಇಲ್ಲದೆ ಸಂತ್ರಸ್ತರ ಪರದಾಟ

ಪುನರ್ವಸತಿ ಕೇಂದ್ರದಲ್ಲಿ ಸಂತ್ರಸ್ತರ ಆರ್ತನಾದ



ಸಾಕ್ಷಾತ್ ವರದಿ

ಮಂಜುನಾಥ ಹೆಬ್ಬಾರ್

ಜೋಶಿಮಠ (ಉತ್ತರಾಖಂಡ): ಪಟ್ಟಣದ ನಿವಾಸಿ ಪ್ರಕಾಶ್ ಬೋಟಿಯಾಲ್ ಅವರ ಸ್ವಂತ ಸೂರು ಹೊಂದುವ ಕನಸು ಕೆಲವು ತಿಂಗಳ ಹಿಂದೆಯಷ್ಟೇ ಸಾಕಾರಗೊಂಡಿತ್ತು. ಮನೆ ಮಂದಿಯಲ್ಲಾ ಸಂಭ್ರಮದಲ್ಲಿದ್ದರು. ಅವರ ಕನಸೆಲ್ಲ ನುಚ್ಚುನೂರು ಆಗುವ ವಿದ್ಯಮಾನ ಜನವರಿ 2ರ ರಾತ್ರಿ ಘಟಿಸಿತು.

ಮನೆಯವರೆಲ್ಲ ಮಲಗಿದ್ದ ವೇಳೆ ಮಧ್ಯರಾತ್ರಿ ಜೋರಾದ ಸದ್ದು ಕೇಳಿಸಿತು. ಬೋಟಿಯಾಲ್ ಎದ್ದು ಮನೆಯಲ್ಲೆಲ್ಲ ಹುಡುಕಾಡಿದರು, ತಡಕಾಡಿದರು. ಮನೆಯ ಎರಡು ಕೊಠಡಿಗಳಲ್ಲಿ ದೊಡ್ಡ ದೊಡ್ಡ ಬಿರುಕುಗಳು ಕಾಣಿಸಿದವು. ಒಂದು ಕ್ಷಣ ಆಘಾತಕ್ಕೆ ಒಳಗಾದರು. ಮನೆ ಮಂದಿಗೆ ಈಗಲೇ ಹೇಳಿ ಅವರನ್ನು ನೋವಿನ ದವಡೆಗೆ ನೂಕುವುದು ಬೇಡ ಎಂದು ಅವರು ಹಾಸಿಗೆಯಲ್ಲಿ ಒರಗಿದರು. ನಿದ್ರೆ ದೂರವಾಯಿತು. ಬೆಳಿಗ್ಗೆ ಎದ್ದ ನಂತರ ಮನೆ ಮಂದಿಗೆಲ್ಲ ವಿಷಯವನ್ನು ಸಾವಧಾನದಿಂದ ಹೇಳಿದರು. ಮನೆ ರಿಪೇರಿ ಮಾಡಿಸೋಣ ಎಂದು ಧೈರ್ಯ ತುಂಬಿದರು. ಸುತ್ತಮುತ್ತಲಿನ ಹಲವು ಮನೆಗಳಲ್ಲಿ ಬಿರುಕು ಬಿಟ್ಟಿರುವುದು ಸ್ವಲ್ಪ ಹೊತ್ತಿನಲ್ಲಿ ಗೊತ್ತಾಯಿತು. ನೊಂದ ನಿವಾಸಿಗಳು ಪರಸ್ಪರ ಸಾಂತ್ವನ ಹೇಳಿಕೊಂಡರು. ಜನವರಿ 4ರ ವೇಳೆಗೆ ಮತ್ತೆರಡು ಕೊಠಡಿಗಳಲ್ಲಿ ಸಮಸ್ಯೆ ಕಾಣಿಸಿಕೊಂಡಿತು. ಅಧಿಕಾರಿಗಳು ಬಂದು ಪರಿಶೀಲನೆ ನಡೆಸಿ ಈ ಕಟ್ಟಡ 'ಅಸುರಕ್ಷಿತ' ಎಂದು ಫಲಕ ಅಂಟಿಸಿ ಹೋದರು. ಕುಟುಂಬ ಸದಸ್ಯರನ್ನು ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರ ಮಾಡಿದರು.

ಜೋಶಿ ಮಠದ ನಗರಪಾಲಿಕೆಯ ಪುನರ್ವಸತಿ ಕೇಂದ್ರದಲ್ಲಿ ಶನಿವಾರ ಮಧ್ಯಾಹ್ನ ಮಾತಿಗೆ ಸಿಕ್ಕ ಪ್ರಕಾಶ್ ತಮ್ಮ ಕಥೆಯನ್ನು ಹೇಳುತ್ತಾ ಹೋದರು. ಟೇಲರ್ ಆಗಿರುವ ಪ್ರಕಾಶ್‌ಗೆ ಈಗ 52 ವರ್ಷ. '10 ದಿನಗಳಲ್ಲಿ ನಿದ್ದೆಯಿಲ್ಲದ ರಾತ್ರಿಗಳನ್ನು ಕಳೆದಿದ್ದೇವೆ. ತಡವಾಗಿ ಮಲಗುತ್ತಿದ್ದೆವು. ಸಣ್ಣ ಸದ್ದು ಆದರೂ ರಕ್ತದೊತ್ತಡ ಏರುತ್ತಿತ್ತು. ಆದರೂ, ಯಾವುದೇ ಪರಿಸ್ಥಿತಿ ಎದುರಾದರೂ ಧೃತಿಗೆಡುವುದು ಬೇಡ ಎಂಬ ನಿರ್ಧಾರಕ್ಕೆ ಬಂದೆವು. ಎಲ್ಲವೂ ಅನಿಶ್ಚಿತ. ಇಲ್ಲಿ ಇನ್ನೆಷ್ಟು ದಿನ ಕಳೆಯಬೇಕು ಎಂಬುದು ಗೊತ್ತಿಲ್ಲ' ಎಂದು ಹೇಳಿಕೊಂಡರು.

ಇಲ್ಲಿನ ಬಟ್ಟೆ ಅಂಗಡಿ ಮಾಲೀಕ ಸೂರಜ್ ಅವರ ಮನೆಗೂ 'ಅಸುರಕ್ಷಿತ' ಪಟ್ಟಿ ಬಿದ್ದಿದೆ. ಅವರು ಪುಟ್ಟ ಮಗು ಹಾಗೂ ಪತ್ನಿಯೊಂದಿಗೆ ಕೇಂದ್ರದಲ್ಲಿ ಇದ್ದಾರೆ. ಹಗಲು ಹೊತ್ತಿನಲ್ಲಿ ಅಂಗಡಿ ತೆರೆಯುತ್ತಾರೆ. ಸಂಜೆ ಕೇಂದ್ರಕ್ಕೆ ಬರುತ್ತಾರೆ. ಕೇಂದ್ರಕ್ಕೆ ಅಹವಾಲು ಆಲಿಸಲು ಬಂದಿದ್ದ ಸ್ಥಳೀಯ ಶಾಸಕರು ಹಾಗೂ ಜನಪ್ರತಿನಿಧಿಗಳ ಬಳಿ ತಮ್ಮ ಕಷ್ಟ ಹೇಳಿಕೊಂಡರು. 'ಸಣ್ಣ ಮಗುವಿನ ಜೊತೆಗೆ ಕೊರೆಯುವ ಚಳಿಯಲ್ಲಿ ಇಲ್ಲಿ ಇರಲು ಸಾಧ್ಯವೇ' ಎಂದು ಪ್ರಶ್ನಿಸಿದರು. ಶಾಸಕರದ್ದು ಮೌನವೇ ಉತ್ತರವಾಗಿತ್ತು. ದಂಪತಿಯ ಕೈಯಿಂದ ಮಗುವನ್ನು ಎತ್ತಿಕೊಂಡು ಸಮಾಧಾನಪಡಿಸುವ ಪ್ರಯತ್ನವನ್ನೂ ಮಾಡಿದರು. 'ಒಂದೆ ರಡು ದಿನಗಳಲ್ಲಿ ನಿಮಗೆ ಎಲ್ಲ ವ್ಯವಸ್ಥೆ ಕಲ್ಪಿಸಲಿದ್ದೇವೆ' ಎಂದು ಅಧಿಕಾರಿಗಳು ಭರವಸೆಯ ಮಾತುಗಳನ್ನು ಆಡಿದರು. 'ನಮ್ಮ ಜತೆಗೆ ನೀವೂ ಇಲ್ಲಿ. ಆಗ ನಮ್ಮ ಸಂಕಷ್ಟ ನಿಮಗೆ ಅರಿವಾಗುತ್ತದೆ' ಎಂದು ಸೂರಜ್ ಕಟುವಾಗಿ ಹೇಳಿದರು.



ಉತ್ತರಾಖಂಡದ ಚಮೋಲಿ ಜಿಲ್ಲೆಯ ಜೋಶಿಮಠದಲ್ಲಿ ಭೂಕುಸಿತದ ಬೆಟ್ಟಗಳಿಂದ ನೀರು ಒಸರುತ್ತಿದ್ದು, ಜನವಸತಿ ಪ್ರದೇಶದ ಮೇಲೆ ಪರಿಣಾಮ ಬೀರಿದೆ – ಪಿಟಿಐ ಚಿತ್ರ

ಸಿಂಹಧಾರ್ ನಿವಾಸಿ ಜ್ಯೋತಿ ಅವರು ತಂದೆ ಹಾಗೂ ಇಬ್ಬರು ಸಹೋದರರ ಜತೆಗೆ ಪುನರ್ವಸತಿ ಕೇಂದ್ರದಲ್ಲಿದ್ದಾರೆ. '2008ರಲ್ಲಿ ತಾಯಿ ನಿಧನರಾದರು. ತಂದೆಗೆ ಕೆಲಸ ಇಲ್ಲ. ಒಬ್ಬ ಸಹೋದರ 10ನೇ ತರಗತಿ ವಿದ್ಯಾರ್ಥಿ. ಇನ್ನೊಬ್ಬ ಸಹೋದರ ಶಾಲೆ ಬಿಟ್ಟು ಕೆಲಸದ ತಲಾಶೆಯಲ್ಲಿದ್ದಾನೆ. ನಾನು 18ನೇ ವಯಸ್ಸಿನಲ್ಲೇ ಮನೆಯ ಜವಾಬ್ದಾರಿ ಹೊತ್ತುಕೊಂಡೆ. ಸ್ವಲ್ಪ ಕೃಷಿ ಭೂಮಿ ಇತ್ತು. ಅದು ಸಹ ಕೈ ಬಿಟ್ಟು ಹೋಯಿತು. ಗೃಹೋಪಯೋಗಿ ಸಾಮಗ್ರಿಗಳು ಪಾಳು ಬಿದ್ದ ಮನೆಯಲ್ಲಿ ಬಿದ್ದಿವೆ. ಬದುಕು ಅಂಧಕಾರದತ್ತ ಸಾಗುತ್ತಿದೆ' ಎಂದು ತಾಪತ್ರಯ ತೋಡಿಕೊಂಡರು.

ಜೋಶಿಮಠದಲ್ಲಿ ಎರಡು ದಿನ ಮಳೆ ಬಿದ್ದಿದೆ. ತಾಪಮಾನ 4ಕ್ಕೆ ಇಳಿದಿದೆ. ಔಲಿ ಹಾಗೂ ಜೋಶಿಮಠದಲ್ಲಿ ಹಿಮ ಬೀಳಲಾರಂಭಿಸಿದೆ. ಇಂತಹ ಥರಗುಟ್ಟುವ ಚಳಿಯ ವಾತಾವರಣದಲ್ಲಿ ಪುನರ್ವಸತಿ ಕೇಂದ್ರದಲ್ಲಿ ಅಗತ್ಯ ಮೂಲಸೌಕರ್ಯ ಇಲ್ಲದೆ ಸಂತ್ರಸ್ತರು ನಲುಗಿದ್ದಾರೆ. ರೊಟ್ಟಿ ಬಿಟ್ಟು ಇಲ್ಲೇನೂ ಕೊಡುತ್ತಿಲ್ಲ ಎಂದು ಸಂತ್ರಸ್ತರು ಆಕ್ರೋಶ ವ್ಯಕ್ತಪಡಿಸಿದರು. ಕೇಂದ್ರದ ಸಿಬ್ಬಂದಿಯನ್ನು ಹಲವು ಮಂದಿ ತರಾಟೆಗೆ ತೆಗೆದುಕೊಂಡರು.

ಸಂತ್ರಸ್ತ ಜನರಿಗೆ ಪುನರ್ವಸತಿ ಕಲ್ಪಿಸಲು ಚಮೋಲಿ ಜಿಲ್ಲಾಡಳಿತ ಹಲವು ಹೋಟೆಲ್‌ಗಳನ್ನು ವಶಕ್ಕೆ ಪಡೆದಿದೆ. ಇನ್ನಷ್ಟು ಮನೆಗಳಲ್ಲಿ ಬಿರುಕು ಕಾಣಿಸಿಕೊಂಡರೆ ಅವರನ್ನು ಎಲ್ಲಿ ಇರಿಸುವುದು ಎಂಬ ಚಿಂತೆಯೂ ಜಿಲ್ಲಾಡಳಿತಕ್ಕೆ ಆರಂಭವಾಗಿದೆ. ಹಲವು ಹೋಟೆಲ್‌ಗಳಲ್ಲಿ ಪತ್ರಕರ್ತರು ತುಂಬಿಕೊಂಡಿದ್ದಾರೆ. ಮನೆಗಳ ತೆರವು ಕಾರ್ಯಾಚರಣೆ ಹಾಗೂ ನಿವಾಸಿಗಳ ಸ್ಥಳಾಂತರಕ್ಕೆ ಬಂದ ಅಧಿಕಾರಿಗಳು ಸರ್ಕಾರಿ ವಸತಿಗೃಹಗಳಲ್ಲಿ ಸೇರಿಕೊಂಡಿದ್ದಾರೆ. ಇಷ್ಟೆಲ್ಲ ಆದರೂ ಪ್ರವಾಸಿಗರ ಸಂಖ್ಯೆ ಕಡಿಮೆ ಆಗಿಲ್ಲ. ಹೋಟೆಲ್‌ಗಳಲ್ಲಿ ರೂಮ್‌ಗಳು ಖಾಲಿ ಇಲ್ಲ ಎಂಬ ಫಲಕಗಳು ಬಿದ್ದಿವೆ. ಇದನ್ನು ನೋಡಿ ಬೇಸರದಿಂದ ಹಿಂತಿರುಗುವವರು ಇದ್ದಾರೆ. ಯಾತ್ರಾಸ್ಥಳಕ್ಕೆ ಏನಾಗಿದೆ ಎಂದು ನೋಡಲು ಕುತೂಹಲದಿಂದ ಬರುವವರೂ ಸಂಖ್ಯೆಯೂ ಕಡಿಮೆಯಿಲ್ಲ.

'ವಿಹಾರನೌಕೆ: ಬಿಜೆಪಿ ಸುಳ್ಳು ಮಾಹಿತಿ'

ರಾಯ್‌ಬರೇಲಿ: 'ಐಷಾರಾಮಿ ವಿಹಾರ ನೌಕೆ ಎಂವಿ ಗಂಗಾ ವಿಲಾಸ್ ಬಗ್ಗೆ ಬಿಜೆಪಿ ಸರ್ಕಾರವು ಸುಳ್ಳು ಹೇಳಿಕೆಗಳನ್ನು ನೀಡುತ್ತಿದೆ. ವಾಸ್ತವವಾಗಿ ಈ ನದಿವಿಹಾರ ನೌಕಾಸೇವೆಯು ಕಳೆದ 17 ವರ್ಷಗಳಿಂದ ಇದೆ ಎಂದು ನನಗೆ ಮಾಹಿತಿ ದೊರೆತಿದೆ' ಎಂದು ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಆರೋಪಿಸಿದ್ದಾರೆ.

'ಪ್ರಧಾನಿ ಮೋದಿ ಅವರು ಚಾಲನೆ ನೀಡಿರುವ ಈ ನೌಕೆಯಲ್ಲಿ ಒಂದು ಬಾರ್ ಕೂಡಾ ಇದೆ ಎಂದು ಕೇಳಿದ್ದೇನೆ' ಎಂದೂ ಅವರು ಹೇಳಿದ್ದಾರೆ.

'ಈ ನೌಕೆಯು 17 ವರ್ಷಗಳಿಂದಲೂ ಸೇವೆಯಲ್ಲಿದೆ. ಇದು ಹೊಸದಲ್ಲ. ನೌಕೆಯಲ್ಲಿ ಕೆಲವು ಭಾಗಗಳನ್ನು ಮಾತ್ರ ಸೇರ್ಪಡೆ ಮಾಡಲಾಗಿದೆ. ಆದರೆ, ಈ ನೌಕೆಯನ್ನು ಈಗ ನಾವು ಆರಂಭಿಸಿದ್ದೇವೆ ಎಂದು ಬಿಜೆಪಿಯವರು ಹೇಳುತ್ತಿದ್ದಾರೆ' ಎಂದು ಅವರು ತಿಳಿಸಿದ್ದಾರೆ.

'ಬಿಜೆಪಿಯವರುಸುಳ್ಳು ಹೇಳುವುದರಲ್ಲಿ ಮತ್ತು ಪ್ರಚಾರದಲ್ಲಿ ಬಹಳ ಮುಂದಿದ್ದಾರೆ. ಅಲ್ಲಿ ಬಾರ್ ಕೂಡಾ ಇದೆ ಎಂಬುದು ಕೇಳಿಬಂದಿದ್ದು, ಬಾರ್ ಇದೆಯೇ ಇಲ್ಲವೇ ಎಂಬುದನ್ನು ಬಿಜೆಪಿಯವರೇ ಹೇಳಬಹುದು' ಎಂದೂ ಅಖಿಲೇಶ್ ವ್ಯಂಗ್ಯವಾಡಿದ್ದಾರೆ.

ಜಗತ್ತಿನ ಅತ್ಯಂತ ಉದ್ದದ ವಿಹಾರ ನೌಕೆ 'ಎಂವಿ ಗಂಗಾ ವಿಲಾಸ್'ಗೆ ಪ್ರಧಾನಿ ಮೋದಿ ಅವರು ಜ. 13ರಂದು ಚಾಲನೆ ನೀಡಿದ್ದರು.

ವಾಲಿದ ಮತ್ತೆರಡು ಹೋಟೆಲ್‌ಗಳು

ಜೋಶಿಮಠ (ಪಿಟಿಐ): ಮುಳುಗುವ ಭೀತಿಯಲ್ಲಿರುವ ಉತ್ತರಾಖಂಡದ ಭೂಕುಸಿತ ಪೀಡಿತ ಪಟ್ಟಣ ಜೋಶಿಮಠದಲ್ಲಿ ಮತ್ತೆರಡು ಹೋಟೆಲ್ ಕಟ್ಟಡಗಳು ಭಾನುವಾರ ಅಪಾಯಕಾರಿಯಾಗಿ ವಾಲಿವೆ. ಮುನ್ನೆಚ್ಚರಿಕೆ ಕ್ರಮವಾಗಿ ಹೋಟೆಲ್‌ನಿಂದ ಜನರನ್ನು ಸ್ಥಳಾಂತರಿಸಲಾಗಿದೆ.

ಅಸುರಕ್ಷಿತವೆಂದು ಕಳೆದ ವಾರ ತೆರವಿಗೆ ನಿರ್ಧರಿಸಿದ್ದ 'ಮಲಾರಿ ಇನ್' ಮತ್ತು 'ಮೌಂಟ್ ವ್ಯೂ' ಹೋಟೆಲ್ ಕಟ್ಟಡಗಳ ನೆಲಸಮ ಕೆಲಸ ಇನ್ನೂ ನಡೆಯುತ್ತಿದೆ. ಈ ಸ್ಥಳಕ್ಕೆ ಕೇವಲ 100 ಮೀಟರ್ ದೂರದಲ್ಲಿ ನಾಲ್ಕು ಅಡಿಗಳ ಅಂತರದಲ್ಲಿದ್ದ 'ಸ್ನೋ ಕ್ರೆಸ್ಟ್' ಮತ್ತು 'ಕಾಮೆಟ್' ಎಂಬ ಎರಡು ಹೋಟೆಲ್ ಕಟ್ಟಡಗಳ ಮೇಲ್ಭಾವಣಿಗಳು ಪರಸ್ಪರ ಅಂಟಿಕೊಳ್ಳುವಂತೆ ವಾಲಿವೆ.

'ಈ ಭಾಗದಲ್ಲಿ ಶನಿವಾರ ರಾತ್ರಿಯಿಂದ ಬಿರುಕುಗಳು ಹೆಚ್ಚುತ್ತಿವೆ' ಎಂದು 'ಸ್ನೋ ಕ್ರೆಸ್ಟ್' ಹೋಟಲ್ ಮಾಲೀಕರ ಪುತ್ರಿ ಪುಜಾ ಪ್ರಜಾಪತಿ ಹೇಳಿದರು.

ಪಟ್ಟಣದ ಮಾರ್ವರಿ ಪ್ರದೇಶದ ಜೆ.ಪಿ. ಕಾಲೋನಿಯಲ್ಲಿ ನೀರಿನ ಭೂಗತ ಚಾನೆಲ್ ಎರಡು ದಿನಗಳ ಹಿಂದೆ ಒಡೆದ ಶಂಕೆ ಇದ್ದು, ಇದರಿಂದ ಹೊರಬರುತ್ತಿರುವ ನೀರಿನ ಹರಿವು ಹೆಚ್ಚುತ್ತಿದೆ. ಇದರ ಮೂಲದ ಬಗ್ಗೆ ತಜ್ಞರು ಈವರೆಗೆ ಖಚಿತಪಡಿಸಿಲ್ಲ. ಕೆಸರು ನೀರಿನ ನಿರ್ವಹಣೆಗೆ ನಿರಂತರ ನಿಗಾ ವಹಿಸಲಾಗಿದೆ ಎಂದು ವಿಪತ್ತು ನಿರ್ವಹಣಾ ಕಾರ್ಯದರ್ಶಿ ರಂಜಿತ್ ಕುಮಾರ್ ಸಿನ್ಹಾ ತಿಳಿಸಿದರು. ಒಸರುತ್ತಿರುವ ನೀರಿನ ಹರಿವು ಪ್ರತಿ ನಿಮಿಷಕ್ಕೆ 190 ಲೀಟರ್‌ನಿಂದ 240 ಲೀಟರ್‌ಗೆ ಹೆಚ್ಚಳವಾಗಿದೆ. ಇದು ಆರಂಭದಲ್ಲಿ ಪ್ರತಿ ನಿಮಿಷಕ್ಕೆ 550 ಲೀಟರ್ ಇದ್ದದ್ದು ಜ.13ರ ವೇಳೆಗೆ 190 ಲೀಟರ್‌ಗೆ ಇಳಿದಿತ್ತು. ಈಗ ನೀರಿನ ಒಸರುವಿಕೆ ಹೆಚ್ಚುತ್ತಿದ್ದಂತೆಯೇ ಮನೆ, ಕಟ್ಟಡಗಳಿಗೆ ಹಾನಿಯೂ ತೀವ್ರವಾಗುತ್ತಿದೆ.

ರೋಪ್‌ವೇ ಮಾರ್ಗದಲ್ಲಿ ಹೆಚ್ಚಿದ ಬಿರುಕು: ಔಲಿ ರೋಪ್‌ವೇ ಮಾರ್ಗದ ಬಳಿ ಮತ್ತು ಪಟ್ಟಣದ ಭೂಕುಸಿತದ ಪ್ರದೇಶಗಳಲ್ಲಿ ವ್ಯಾಪಕ ಬಿರುಕುಗಳು ಕಾಣಿಸಿವೆ. ಮತ್ತಷ್ಟು ವಾಸದ ಮನೆಗಳು ಮತ್ತು ಕಟ್ಟಡಗಳಿಗೆ ಹಾನಿಯಾಗಿದೆ. ರೋಪ್‌ವೇ ಆವರಣದಲ್ಲಿ ಗೋಡೆಗಳ ಬಳಿ ನಾಲ್ಕು ಇಂಚು ಅಗಲ ಮತ್ತು 20 ಅಡಿ ಉದ್ದದ ಬಿರುಕು ಮೂಡಿದೆ ಎಂದು ರೋಪ್‌ವೇ ಎಂಜಿನಿಯರ್ ದಿನೇಶ್ ಭಟ್ ಹೇಳಿದ್ದಾರೆ.

ಬಿರುಕುಬಿಟ್ಟಿರುವ ಮನೆಗಳ ಸಂಖ್ಯೆ 826ಕ್ಕೆ ಏರಿದೆ. ಅಸುರಕ್ಷಿತ ವಲಯದಲ್ಲಿ 165 ಮನೆಗಳು ಇವೆ. ಭಾನುವಾರ ಮತ್ತೆ 17 ಕುಟುಂಬಗಳನ್ನು ಸ್ಥಳಾಂತರಿಸಿದ್ದು, ಈವರೆಗೆ 233 ಕುಟುಂಬ ತಾತ್ಕಾಲಿಕ ಪರಿಹಾರ ಕೇಂದ್ರಗಳಲ್ಲಿ ಆಶ್ರಯ ಪಡೆದಿವೆ. ಸಂತ್ರಸ್ತರಿಗೆ ಈವರೆಗೆ ₹2.49 ಕೋಟಿ ಮಧ್ಯಂತರ ನೆರವು, ಔಷಧ, ದಿನಬಳಕೆ ಪರಿಹಾರ ಸಾಮಗ್ರಿ ನೀಡಲಾಗಿದೆ ಎಂದು ವಿಪತ್ತು ನಿರ್ವಹಣಾ ಪ್ರಾಧಿಕಾರ ಹೇಳಿದೆ.

ಭೂ ಕುಸಿತದ ಸಮಸ್ಯೆಯಿಂದ ಪಟ್ಟಣ ಪಾರುಮಾಡುವಂತೆ ಭಾನುವಾರ ಜೋಶಿಮಠದ ನರಸಿಂಗ ದೇವಾಲಯದಲ್ಲಿ ಸ್ಥಳೀಯರು ವಿಶೇಷ ಪ್ರಾರ್ಥನೆ ಸಲ್ಲಿಸಿ, ಯಜ್ಞ ನಡೆಸಿದರು ಎಂದು ಬದರೀನಾಥ ದೇವಾಲಯದ ಮಾಜಿ ಅಧಿಕಾರಿ ಭುವನ್ ಉನಿಯಲ್ ತಿಳಿಸಿದರು.

ಮಾಹಿತಿ ಬಹಿರಂಗಪಡಿಸದಂತೆ ನಿರ್ದೇಶನ: ಜೋಶಿಮಠದ ಭೂಕುಸಿತ ಸಂಬಂಧ ಯಾವುದೇ ಮಾಹಿತಿಗಳನ್ನು ಪೂರ್ವಾನುಮತಿ ಇಲ್ಲದೇ ಮಾಧ್ಯಮಗಳು ಅಥವಾ ಸಾಮಾಜಿಕ ಮಾಧ್ಯಮಗಳೊಂದಿಗೆ ಹಂಚಿಕೊಳ್ಳಬಾರದು. ಸಾರ್ವ ಜನಿಕವಾಗಿ ಬಹಿರಂಗ ಪಡಿಸಬಾರದು ಎಂದು ಇಸ್ರೊ ಮತ್ತು ವಿವಿಧ ಇಲಾಖೆಗಳು ಹಾಗೂ ಸರ್ಕಾರಿ ಸಂಸ್ಥೆಗಳಿಗೆ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಮತ್ತು ರಾಜ್ಯ ಸರ್ಕಾರ ನಿರ್ದೇಶನ ನೀಡಿದೆ.

'ಸುಪ್ರೀಂ'ನಲ್ಲಿ ಅರ್ಜಿ ಇಂದು ವಿಚಾರಣೆ

ನವದೆಹಲಿ(ಪಿಟಿಐ): ಜೋಶಿಮಠದ ಭೂಕುಸಿತವನ್ನು 'ರಾಷ್ಟ್ರೀಯ ವಿಪತ್ತು' ಆಗಿ ಘೋಷಿಸಲು ನ್ಯಾಯಾಂಗದ ಮಧ್ಯಪ್ರವೇಶ ಕೋರಿರುವ ಮೇಲ್ಮನವಿಯ ತುರ್ತು ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಸೋಮವಾರ ನಡೆಸಲಿದೆ.

ಸ್ವಾಮಿ ಅವಿಮುಕ್ತೇಶ್ವರನಂದ್ ಸರಸ್ವತಿ ಅವರು ಸಲ್ಲಿಸಿರುವ ಅರ್ಜಿಯ ತುರ್ತು ವಿಚಾರಣೆಗೆ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿ ಪಿ.ಎಸ್. ನರಸಿಂಹ ಅವರಿದ್ದ ಪೀಠವು ಕಳೆದ ಮಂಗಳವಾರ ನಿರಾಕರಿಸಿತ್ತು.

'ಪ್ರಕೃತಿಗೆ ಮಾರಕ ಯೋಜನೆ ಬೇಡ'

ಕಣ್ಣೂರು (ಕೇರಳ): ಹಿಮಾಲಯ ಪರ್ವತಶ್ರೇಣಿಯ ಉತ್ತರಾಖಂಡದ ಜೋಶಿಮಠದ ಮೇಲೆ ಪರಿಣಾಮ ಬೀರುವ ಕಾಮಗಾರಿಗಳನ್ನು ನಿಲ್ಲಿಸು ವಂತೆ ಬದರೀನಾಥ ದೇವಾಲಯದ ಪ್ರಧಾನ ಅರ್ಚಕ ಈಶ್ವರ ಪ್ರಸಾದ್ ನಂಬೂದಿರಿ ಅವರು ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಮಿತಿಮೀರಿದ ಅಭಿವೃದ್ಧಿ ಕಾಮಗಾರಿಗಳಿಂದಾಗಿ ಪಟ್ಟಣದ ನೂರಾರು ಮನೆಗಳು ಮತ್ತು ಕಟ್ಟಡಗಳಲ್ಲಿ ದಿನೇ ದಿನೇ ಬಿರುಕುಗಳು ಹೆಚ್ಚುತ್ತಿವೆ. ಪ್ರಮುಖ ಭೂಪ್ರದೇಶವೇ ಮುಳುಗುವ ಅಪಾಯದಲ್ಲಿದ್ದು, ಜೋಶಿಮಠದ ಭೂಕುಸಿತಕ್ಕೆ ತೀವ್ರ ಕಳವಳ ವ್ಯಕ್ತಪಡಿಸಿರುವ ಅವರು, ಬೆಟ್ಟದ ಮೇಲಿನ ಪಟ್ಟಣಗಳು ಮತ್ತು ಪ್ರಕೃತಿಗೆ ಹಾನಿ ಮಾಡುವಂತಹ ಯೋಜನೆಗಳನ್ನು ಕೈಗೊಳ್ಳಬಾರದು ಎಂದು ಸರ್ಕಾರವನ್ನು ಆಗ್ರಹಿಸಿದ್ದಾರೆ.



ಜಲ್ಲಿಕಟ್ಟು

ಮದುರೈ ಸಮೀಪದ ಅವನಿಯಪುರಂನಲ್ಲಿ ಭಾನುವಾರ ನಡೆದ ಜಲ್ಲಿಕಟ್ಟು ಕ್ರೀಡೆಯಲ್ಲಿ ಹೋರಿ ಹಿಡಿಯಲು ಯುವಕರು ಯತ್ನಿಸಿದರು –ಪಿಟಿಐ

ನ್ಯಾಯಾಂಗ ಆಕ್ರಮಿಸಲು ಕೇಂದ್ರ ಯತ್ನ: ಸಿಬಲ್ ಟೀಕೆ

ನವದೆಹಲಿ (ಪಿಟಿಐ): ನ್ಯಾಯಾಂಗವು ಸ್ವಾತಂತ್ರ್ಯಕ್ಕೆ ಭದ್ರವಾದ ನೆಲೆ ಒದಗಿಸುವ ಕೊನೆಯ ವ್ಯವಸ್ಥೆಯಾಗಿದೆ. ಇಂಥ ನ್ಯಾಯಾಂಗವನ್ನೇ ಆಕ್ರಮಿಸಿಕೊಳ್ಳಲು ಕೇಂದ್ರ ಸರ್ಕಾರ ಪ್ರಯತ್ನಿಸುತ್ತಿದೆ ಎಂದು ರಾಜ್ಯಸಭಾ ಸದಸ್ಯ ಹಾಗೂ ಕೇಂದ್ರದ ಮಾಜಿ ಕಾನೂನು ಸಚಿವ ಕಪಿಲ್ ಸಿಬಲ್ ಭಾನುವಾರ ಟೀಕಿಸಿದರು.

ರಾಷ್ಟ್ರೀಯ ನ್ಯಾಯಾಂಗ ನೇಮಕಾತಿ ಆಯೋಗ (ಎನ್‌ಜೆಎಸಿ) ಕಾಯ್ದೆಯನ್ನು ಮತ್ತೊಂದು ರೂಪದಲ್ಲಿ ಜಾರಿಗೊಳಿಸಲು ಯತ್ನಿಸಲಿರುವ ಕೇಂದ್ರ, ಸುಪ್ರೀಂ ಕೋರ್ಟ್‌ನಲ್ಲಿ ಅದನ್ನು ಪರೀಕ್ಷೆಗೆ ಒಳಪಡಿಸಲು ಮತ್ತೊಂದು ಪ್ರಯತ್ನಕ್ಕೆ ಕೈಹಾಕುವ ಸಾಧ್ಯತೆ ಇದೆ ಎಂದು ಪಿಟಿಐ ಸುದ್ದಿಸಂಸ್ಥೆಗೆ ನೀಡಿರುವ ಸಂದರ್ಶನದಲ್ಲಿ ಹೇಳಿದ್ದಾರೆ.

'ಕೇಶವಾನಂದ ಭಾರತಿ ಪ್ರಕರಣಕ್ಕೆ ಸಂಬಂಧಿಸಿದ ತೀರ್ಪಿಗೆ ಪ್ರಸ್ತುತ ಸಂದರ್ಭದಲ್ಲಿ ಹೆಚ್ಚು ಮಹತ್ವ ಇದೆ. ಈ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ದೋಷದಿಂದ ಕೂಡಿದೆ ಎಂಬುದಾಗಿ ಸರ್ಕಾರ ಬಹಿರಂಗವಾಗಿ ಹೇಳಲಿ' ಎಂದು ಅವರು ಸವಾಲು ಹಾಕಿದ್ದಾರೆ.

ರಾಷ್ಟ್ರೀಯ ನ್ಯಾಯಾಂಗ ನೇಮಕಾತಿ ಆಯೋಗ ಕಾಯ್ದೆಯನ್ನು (ಎನ್‌ಜೆಎಸಿ) ಸುಪ್ರೀಂ ಕೋರ್ಟ್ ಅಸಿಂಧುಗೊಳಿಸಿದ ಕ್ರಮವನ್ನು ರಾಜ್ಯಸಭಾ ಸಭಾಪತಿಯೂ ಆಗಿರುವ ಉಪರಾಷ್ಟ್ರಪತಿ ಜಗದೀಪ್ ಧನಕರ್ ಅವರು ಈಚೆಗೆ ಟೀಕಿಸಿದ್ದರು. ಈ ಹಿನ್ನೆಲೆಯಲ್ಲಿ ಸಿಬಲ್, ಕೇಂದ್ರದ ವಿರುದ್ಧ ಹರಿಹಾಯ್ದಿದ್ದಾರೆ.

'ಉನ್ನತ ನ್ಯಾಯಾಲಯಗಳಿಗೆ ನ್ಯಾಯಮೂರ್ತಿಗಳನ್ನು ನೇಮಕ ಮಾಡುವ ವಿಷಯದಲ್ಲಿ ಸ್ಪಷ್ಟ ನಿಲುವು ತೆಗೆದುಕೊಳ್ಳಲು ಸರ್ಕಾರಕ್ಕೆ ಆಗಿಲ್ಲ. ಈ ಮಾತನ್ನು ಒಪ್ಪಿಕೊಳ್ಳಲು ಅದಕ್ಕೆ ಆಗುತ್ತಿಲ್ಲ. ಆದರೆ, ಈ ವಿಷಯದಲ್ಲಿ ದ್ವೇಷ ಹೊರಹಾಕುತ್ತಿದೆ' ಎಂದು ಸಿಬಲ್ ಟೀಕಿಸಿದ್ದಾರೆ.

ಎನ್‌ಜೆಎಸಿ ಕುರಿತ ಧನಕರ್ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ಉನ್ನತ ಸಾಂವಿಧಾನಿಕ ಹುದ್ದೆಯಲ್ಲಿರುವ ವ್ಯಕ್ತಿಯೊಬ್ಬರು ಇಂಥ ಹೇಳಿಕೆ ನೀಡಿದ್ದಾರೆ. ಹೀಗಾಗಿ, ಈ ಹೇಳಿಕೆಯನ್ನು ಅವರು ವೈಯಕ್ತಿಕ ನೆಲೆಗಟ್ಟಿನಲ್ಲಿ ನೀಡಿದ್ದಾರೋ ಅಥವಾ ಸರ್ಕಾರದ ನಿಲುವನ್ನು ತಿಳಿಸಿದ್ದಾರೋ ಎಂಬುದನ್ನು ಅವರನ್ನೇ ಕೇಳಬೇಕು' ಎಂದರು.

'ಕೇಶವಾನಂದ ಭಾರತಿ ಪ್ರಕರಣಕ್ಕೆ ಸಂಬಂಧಿಸಿದ ತೀರ್ಪು ಕುರಿತು ಧನಕರ್ ಅವರ ಹೇಳಿಕೆ ಅವರ ವೈಯಕ್ತಿಕ ಅಭಿಪ್ರಾಯವಾಗಿದ್ದರೆ, ಆ ರೀತಿ ಹೇಳಲು ಅವರಿಗೆ ಹಕ್ಕಿದೆ' ಎಂದು ಉತ್ತರಿಸಿದರು.

ಪ್ರಶಂಸೆ: ರಾಜ್ಯಸಭಾ ಸದಸ್ಯ ಹಾಗೂ ಕಾಂಗ್ರೆಸ್‌ನ ಮಾಜಿ ಮುಖಂಡ ಕಪಿಲ್ ಸಿಬಲ್ ಅವರು ಕಾಂಗ್ರೆಸ್ ಪಕ್ಷ ನಡೆಸುತ್ತಿರುವ ಭಾರತ್ ಜೋಡೊ ಯಾತ್ರೆಯನ್ನು ಪ್ರಶಂಸಿಸಿದ್ದಾರೆ.

'ಸಮಾಜದ ವಿವಿಧ ಸಮುದಾಯಗಳನ್ನು ಒಂದುಗೂಡಿಸುವಲ್ಲಿ ರಾಹುಲ್ ಗಾಂಧಿ ಯಶಸ್ವಿಯಾಗಿದ್ದು, ದೇಶದಲ್ಲಿ ಏಕತೆ ಸಾಧಿಸುವುದು ಎಷ್ಟು ಮುಖ್ಯ ಎಂಬುದನ್ನು ಅವರು ಮನಗಂಡಿದ್ದಾರೆ' ಎಂದು ಹೇಳಿದ್ದಾರೆ.

ನೇಪಾಳ ವಿಮಾನ ಪತನ: 68 ಬಲಿ

ಒಂದನೇ ಪುಟದಿಂದ...

ವಿಮಾನ ಪತನದ ನಂತರ ದೊಡ್ಡ ಪ್ರಮಾಣದಲ್ಲಿ ಬೆಂಕಿ ಹೊತ್ತಿಕೊಂಡಿತ್ತು. ಇದರ ಮಧ್ಯೆಯೂ ಕೆಲವರನ್ನು ಹೊರಗೆ ಎಳೆದುಹಾಕಿದೆವು. ಕಡಿದಾಗಿದ್ದ ಕಾರಣ ಆಳದ ಕಮರಿಗೆ ಇಳಿದು, ಇತರರನ್ನು ರಕ್ಷಿಸಲು ಸಾಧ್ಯವಾಗಲಿಲ್ಲ ಎಂದು ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿದ್ದ ಸ್ಥಳೀಯರು ಹೇಳಿದ್ದಾರೆ ಎಂದು ರಾಯಿಟರ್ಸ್ ವರದಿ ಮಾಡಿದೆ.

'75 ಮೀಟರ್‌ನಷ್ಟು ಎತ್ತರದಲ್ಲಿತ್ತು': 'ಯೂರೋಪ್‌ನ ಎಟಿಆರ್ ವಿಮಾನ ತಯಾರಿಕಾ ಕಂಪನಿಯ ಈ ವಿಮಾನದಲ್ಲಿ ಬಳಕೆಯಾಗಿರುವ ತಂತ್ರಜ್ಞಾನ ಹಳೆಯದು. ಪತನವಾದ '9ಎನ್‌ಸಿ–ಎಎನ್‌ಸಿ– ಎಟಿಆರ್–72' ವಿಮಾನವು 15 ವರ್ಷಗಳಷ್ಟು ಹಳೆಯದಾಗಿತ್ತು. ಇದರಲ್ಲಿದ್ದ ಟ್ರಾನ್ಸ್‌ಪಾಂಡರ್‌ನ ನಿಖರತೆ ಅತ್ಯಂತ ಕಡಿಮೆ. ಹೀಗಾಗಿ ಪತನ ಹೇಗಾಯಿತು ಎಂಬುದನ್ನು ತಕ್ಷಣ ಹೇಳಲು ಸಾಧ್ಯವಿಲ್ಲ ಎಂದು ಫ್ಲೈಟ್‌ರೇಡಾರ್24 ಸಂಸ್ಥೆ ಹೇಳಿದೆ' ಎಂದು ರಾಯಿಟರ್ಸ್ ವರದಿ ಮಾಡಿದೆ.

'ವಿಮಾನವು ಪತನವಾಗುವ ಮುನ್ನ ವಿಮಾನ ನಿಲ್ದಾಣದ ರೇಡಾರ್‌ನಲ್ಲಿ ದಾಖಲಾದ ಮಾಹಿತಿ ಪ್ರಕಾರ, ಅದು ರನ್‌ವೇಯಿಂದ ಕೇವಲ 75 ಮೀಟರ್‌ಗಳಷ್ಟು ಎತ್ತರದಲ್ಲಿತ್ತು ಎಂಬುದು ಪತ್ತೆಯಾಗಿದೆ' ಎಂದು ರಾಯಿಟರ್ಸ್ ವರದಿ ಮಾಡಿದೆ.

ವಿಮಾನದ ಪತನಕ್ಕೆ ನಿಖರ ಕಾರಣಗಳೇನು ಎಂಬುದನ್ನು ಪತ್ತೆ ಮಾಡಲು ತನಿಖೆಗೆ ಆದೇಶಿಸಲಾಗಿದೆ. ತನಿಖಾ ವರದಿ 45 ದಿನಗಳ ನಂತರ ಲಭ್ಯವಾಗಲಿದೆ ಎಂದು ನಾಗರಿಕ ವಿಮಾನಯಾನ ಸಚಿವಾಲಯವು ಹೇಳಿದೆ.

ಹತ್ತಾರು ಅವಘಡ: ವಿಶ್ವದ 14 ಅತ್ಯಂತ ಎತ್ತರದ ಶಿಖರಗಳಲ್ಲಿ ಎಂಟು ನೇಪಾಳದಲ್ಲೇ ಇವೆ. 1946ರಿಂದ ಈವರೆಗೆ ಇಲ್ಲಿ ಒಟ್ಟು 42 ವಿಮಾನಗಳು ಪತನವಾಗಿವೆ. 1992ರಲ್ಲಿ ಪಾಕಿಸ್ತಾನ ಏರ್‌ಲೈನ್ಸ್‌ನ ವಿಮಾನವು ಕಠ್ಮಂಡುವಿನಲ್ಲಿ ಪತನವಾಗಿ 167 ಮಂದಿ ಮೃತಪಟ್ಟಿದ್ದರು. ಆನಂತರ, ಭಾನುವಾರದ ಪತನವೇ ಅತ್ಯಂತ ದೊಡ್ಡದು ಎಂದು ಸಚಿವಾಲಯವು ಹೇಳಿದೆ.

ಭಾನುವಾರ ಪತನವಾದ ವಿಮಾನ ಕಂಪನಿ ಯೇತಿ ಏರ್‌ಲೈನ್ಸ್, ತನ್ನ ಎಲ್ಲಾ ವಿಮಾನಗಳ ಹಾರಾಟವನ್ನು ಸ್ಥಗಿತಗೊಳಿಸಿದೆ. ತುರ್ತು ಸಂದರ್ಭದ ಕಾರ್ಯಾಚರಣೆಗಳನ್ನು ಮಾತ್ರ ನಡೆಸಲಾಗುತ್ತದೆ ಎಂದು ಕಂಪನಿ ಹೇಳಿದೆ.

2024ರಲ್ಲೂ ಪ್ರಧಾನಿಯಾಗಿ ಮೋದಿ ಆಯ್ಕೆ –ಶಾ

ಗಾಂಧಿನಗರ (ಪಿಟಿಐ): ನರೇಂದ್ರ ಮೋದಿ ಅವರು 2024ರಲ್ಲಿಯೂ ಪ್ರಧಾನಿಯಾಗಿ ಆಯ್ಕೆ ಆಗಲಿದ್ದಾರೆ ಎಂಬ ಸಂದೇಶವನ್ನು ಇತ್ತೀಚೆಗೆ ನಡೆದ ಗುಜರಾತ್ ವಿಧಾನಸಭೆ ಚುನಾವಣೆ ರವಾನಿಸಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಭಾನುವಾರ ಅಭಿಪ್ರಾಯಪಟ್ಟರು.

ಕಾಂಗ್ರೆಸ್ ಮತ್ತು ಆಮ್ ಆದ್ಮಿ ಪಕ್ಷವನ್ನು ಪರೋಕ್ಷವಾಗಿ ಉಲ್ಲೇಖಿಸಿದ ಅವರು, ಪ್ರಧಾನಿ ಮತ್ತು ಗುಜರಾತ್‌ಗೆ ಅಪಖ್ಯಾತಿ ತರಲು ಯತ್ನಿಸಿದವರಿಗೆ ಜನತೆ ಚುನಾವಣೆಯಲ್ಲಿ ತಕ್ಕ ಉತ್ತರ ನೀಡಿದ್ದಾರೆ ಎಂದು ಶಾ ಹೇಳಿದರು.

ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಚಾಲನೆ ನೀಡಿದ ಅವರು, ದೆಹಲಿಯಿಂದ ಬಂದವರು ಹುಸಿ ಭರವಸೆಗಳನ್ನು ನೀಡಿದ್ದರು. ಕಾಂಗ್ರೆಸ್ ಈ ಬಾರಿ ತನಗೆ ಅವಕಾಶ ಸಿಗಲಿದೆ ಎಂದು ಭಾವಿಸಿತ್ತು. ಜನತೆ ಅವರಿಗೆ ಕಪಾಳಮೋಕ್ಷ ಮಾಡಿದ್ದಾರೆ ಎಂದರು. 2024ರ ಲೋಕಸಭೆ ಚುನಾವಣೆ ದೃಷ್ಟಿಯಿಂದಲೂ ಫಲಿತಾಂಶ ಮುಖ್ಯವಾದುದು. ಮೋದಿ ಅವರನ್ನು ಮತ್ತೆ ಪ್ರಧಾನಿ ಮಾಡಲು ದೇಶ ಸಜ್ಜಾಗುತ್ತಿದೆ ಎಂದರು.

'ಭಾರತದಲ್ಲಿ ಪ್ರಧಾನಿ ಹುದ್ದೆ ಖಾಲಿ ಇಲ್ಲ'(ಕೋಲ್ಕತ್ತ ವರದಿ): 2024ರ ಚುನಾವಣೆಯಲ್ಲಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಗೆಲ್ಲಲಿದೆ. ಹಾಗಾಗಿ ಭಾರತದಲ್ಲಿ ಪ್ರಧಾನಿ ಹುದ್ದೆ ಖಾಲಿ ಇಲ್ಲ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಹೇಳಿದ್ದಾರೆ.

ಟಿಎಂಸಿ ವರಿಷ್ಠೆ ಮಮತಾ ಬ್ಯಾನರ್ಜಿ ಅವರಿಗೆ ಪ್ರಧಾನಿ ಆಗುವ ಸಾಮರ್ಥ್ಯವಿದೆ ಎಂದು ಅಮರ್ತ್ಯ ಸೇನ್ ಅವರು ನೀಡಿರುವ ಹೇಳಿಕೆ ಕುರಿತು ಸುದ್ದಿಗಾರರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, 'ಜನರು ತಮ್ಮ ಬೆಂಬಲಕ್ಕೆ ನಿಲ್ಲುತ್ತಾರೆ' ಎಂದರು.

'ಬಡವರು, ಮಹಿಳೆಯರು, ಯುವಕರು, ಹಿಂದುಳಿದವರು ಮತ್ತು ಗ್ರಾಮೀಣ ಜನರು ದೇಶದ ಜವಾಬ್ದಾರಿಯನ್ನು ಮೋದಿ ಅವರಿಗೆ ನೀಡಿದ್ದಾರೆ. 2024ರಲ್ಲೂ ಎನ್‌ಡಿಎ ಗೆಲ್ಲುವುದರಲ್ಲಿ ಯಾವುದೇ ಸಂಶಯವಿಲ್ಲ' ಎಂದು ತಿಳಿಸಿದರು.

ಉತ್ತರ, ವಾಯವ್ಯ ಭಾರತದಲ್ಲಿ ಶೀತಗಾಳಿ

ನವದೆಹಲಿ: ಉತ್ತರ ಭಾರತ ಹಾಗೂ ವಾಯವ್ಯ ಭಾರತದ ಬಯಲುಪ್ರದೇಶಗಳಲ್ಲಿ ಭಾನುವಾರ ಶೀತಗಾಳಿ ಹೆಚ್ಚಾಗಿದ್ದು, ಕೆಲವು ಪ್ರದೇಶಗಳಲ್ಲಿ ಕನಿಷ್ಠ ತಾಪಮಾನ ಮೈನಸ್ 3ರಿಂದ 5ಕ್ಕೆ ಇಳಿದಿತ್ತು.

ರಾಜಸ್ಥಾನದ ಸಿಕರ್ ಜಿಲ್ಲೆಯ ಫತೇಪುರದಲ್ಲಿ ಅತ್ಯಂತ ಕನಿಷ್ಠ ತಾಪಮಾನ ಮೈನಸ್ 4.7 ದಾಖಲಾಗಿದೆ. ಪಂಜಾಬ್‌ನ ಫರೀದ್‌ಕೋಟ್‌ನಲ್ಲಿ ಮೈನಸ್ ಒಂದು ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ.

'ಪಂಜಾಬ್, ರಾಜಸ್ಥಾನ, ಹರಿಯಾಣ, ದೆಹಲಿ ಮತ್ತು ಮಧ್ಯಪ್ರದೇಶದ ಪಶ್ಚಿಮ ಭಾಗಗಳಲ್ಲಿ ಭಾನುವಾರ ತೀವ್ರ ಶೀತಗಾಳಿ ಇತ್ತು. ವಾಯವ್ಯ ಮತ್ತು ಆಗ್ನೇಯ ರಾಜಸ್ಥಾನದಲ್ಲಿ ಕನಿಷ್ಠ ತಾಪಮಾನ 1ರಿಂದ 3 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ. ಪಂಜಾಬ್, ಹರಿಯಾಣ, ದೆಹಲಿ, ಉತ್ತರಪ್ರದೇಶದ ನೈರುತ್ಯ ಭಾಗಗಳಲ್ಲಿ ಕನಿಷ್ಠ ತಾಪಮಾನ 3ರಿಂದ 5 ಡಿಗ್ರಿ ಸೆಲ್ಸಿಯಸ್ ವರೆಗೆ ಇತ್ತು. ಥಾರ್ ಮರುಭೂಮಿ ಸಮೀಪದ ಚುರು ಪ್ರದೇಶದಲ್ಲಿ ಮೈನಸ್ 2.5 ಡಿಗ್ರಿ ಸೆಲ್ಸಿಯಸ್ ಕನಿಷ್ಠ ತಾಪಮಾನವಿತ್ತು' ಎಂದು ಭಾರತೀಯ ಹವಾಮಾನ ಇಲಾಖೆಯು (ಐಎಂಡಿ) ಮಾಹಿತಿ ನೀಡಿದೆ. ಐಎಂಡಿಯ ಅಂಕಿ– ಅಂಶಗಳ ಪ್ರಕಾರ, ದೆಹಲಿಯಲ್ಲಿ ಜ. 5ರಿಂದ 9ರವರೆಗೆ ತೀವ್ರವಾದ ಶೀತಗಾಳಿ ದಾಖಲಾಗಿದೆ. ಹತ್ತು ವರ್ಷಗಳಲ್ಲಿ ತಿಂಗಳೊಂದರಲ್ಲಿ ಎರಡನೆ ಬಾರಿಗೆ ದೀರ್ಘಕಾಲದ ಶೀತಗಾಳಿ ಇದಾಗಿದೆ. 2019 ಅನ್ನು ಹೊರತುಪಡಿಸಿದರೆ ಈ ವರ್ಷ ದೆಹಲಿಯಲ್ಲಿ ಅತಿಹೆಚ್ಚು ಕಾಲಾವಧಿಯ ದಟ್ಟಮಂಜು ಉಂಟಾಗಿದೆ.

ಎಚ್ಚರಿಕೆ: ಜನವರಿ 17ರಿಂದ 18ರವರೆಗೆ ವಾಯವ್ಯ ಮತ್ತು ಮಧ್ಯ ಭಾರತದ ಹಲವು ಭಾಗಗಳಲ್ಲಿ ಕನಿಷ್ಠ ತಾಪಮಾನವು ಸುಮಾರು 2 ಡಿಗ್ರಿ ಸೆಲ್ಸಿಯಸ್‌ಗೆ ಕುಸಿಯುವ ಸಾಧ್ಯತೆಯಿದೆ. ರಾಜಸ್ಥಾನ, ಪಂಜಾಬ್, ಹರಿಯಾಣ ಮತ್ತು ದೆಹಲಿಯ ಹಲವು ಭಾಗಗಳಲ್ಲಿ ತೀವ್ರ ಶೀತಗಾಳಿ ಬೀಸುವ ಸಾಧ್ಯತೆ ಇದೆ ಎಂದು ಐಎಂಡಿಯು ಮುನ್ನೆಚ್ಚರಿಕೆ ನೀಡಿದೆ.

₹50 ಲಕ್ಷ ಲಂಚದ ಆರೋಪ ಪ್ರಕರಣ

ರೈಲ್ವೆ ಅಧಿಕಾರಿ ಸೇರಿ 6 ಮಂದಿ ಬಂಧನ

ನವದೆಹಲಿ: ₹ 50 ಲಕ್ಷ ಲಂಚದ ಆರೋಪ ಪ್ರಕರಣಕ್ಕೆ ಸಂಬಂಧಿಸಿದಂತೆ ಗುವಾಹಟಿಯ ಹೆಚ್ಚುವರಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕ, ಮಧ್ಯವರ್ತಿ ಮತ್ತು ಹವಾಲಾ ಆಪರೇಟರ್ ಸೇರಿದಂತೆ ಒಟ್ಟು ಆರು ಮಂದಿಯನ್ನು ಸಿಬಿಐ ಬಂಧಿಸಿದೆ ಎಂದು ಅಧಿಕಾರಿಯೊಬ್ಬರು ಭಾನುವಾರ ತಿಳಿಸಿದ್ದಾರೆ.

'ಹರಿಓಂ ಎಂದು ಗುರುತಿಸಲಾಗಿರುವ ವ್ಯಕ್ತಿಯೊಬ್ಬ 1997ರ ಬ್ಯಾಚ್‌ನ ಭಾರತೀಯ ರೈಲ್ವೆ ಸೇವಾ ಅಧಿಕಾರಿ ಜಿತೇಂದ್ರ ಪಾಲ್ ಸಿಂಗ್ ಪರವಾಗಿ ಲಂಚ ಪಡೆಯುತ್ತಿದ್ದ. ಲಂಚ ಪಡೆಯುವ ಮಾಹಿತಿ ತಿಳಿದ ಸಿಬಿಐ ಈ ಬಗ್ಗೆ ಬಲೆ ಬೀಸಿತ್ತು. ಹರಿಓಂ ನೀಡಿದ ಮಾಹಿತಿಯ ಮೇರೆಗೆ ಜಿತೇಂದ್ರ ಅವರನ್ನು ಬಂಧಿಸಿ, ದೆಹಲಿಯ ವಿಶೇಷ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ' ಎಂದೂ ಅವರು ಮಾಹಿತಿ ನೀಡಿದ್ದಾರೆ.

'ಪ್ರಕರಣಕ್ಕೆ ಸಂಬಂಧಿಸಿದಂತೆ ಗುತ್ತಿಗೆದಾರ ಶ್ಯಾಮಲ್ ಕುಮಾರ್ ದೇಬ್, ಹರಿಓಂ ಅವರ ವಾಹನ ಚಾಲಕ ಯೋಗೀಂದ್ರ ಕುಮಾರ್ ಸಿಂಗ್ ಹಾಗೂ ಹವಾಲಾ ವಹಿವಾಟು ನಡೆಸುತ್ತಿದ್ದ ಕ್ಯಾಷಿಯರ್‌ಗಳಾದ ದಿಲಾವರ್ ಖಾನ್ ಮತ್ತು ಸಂಜಿತ್ ರೇ ಎಂಬುವರನ್ನೂ ಬಂಧಿಸಲಾಗಿದೆ. ಹೆಚ್ಚುವರಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕನ ನಿವಾಸ, ದೆಹಲಿ, ನರೋರಾ, ಗುವಾಹಟಿ, ಸಿಲಿಗುರಿ ಮತ್ತು ಅಲಿಘಡ ಸೇರಿದಂತೆ ಇತರೆಡೆಗಳಲ್ಲಿ ಸಿಬಿಐ ಶೋಧ ಕಾರ್ಯಾಚರಣೆ ನಡೆಸಿದೆ. ಈ ವೇಳೆ ₹ 47 ಲಕ್ಷ ನಗದು, ಲ್ಯಾಪ್‌ಟ್ಯಾಪ್‌ಗಳು ಸೇರಿದಂತೆ ಹಲವು ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದೆ' ಎಂದೂ ಸಿಬಿಐ ವಕ್ತಾರರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

'ನಾರ್ತ್ ಈಸ್ಟ್ ಫ್ರಂಟಿಯರ್ ರೈಲ್ವೆಯಲ್ಲಿ ನಡೆಯುತ್ತಿದ್ದ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಬ್ಯಾಂಕ್ ಖಾತ್ರಿ ಹಾಗೂ ಭದ್ರತಾ ಠೇವಣಿಗಳನ್ನು ಶೀಘ್ರವಾಗಿ ಬಿಡುಗಡೆ ಮಾಡುವುದು ಸೇರಿದಂತೆ ಖಾಸಗಿ ಗುತ್ತಿಗೆದಾರರಿಗೆ ಅನುಕೂಲವಾಗುವಂತೆ ಗುತ್ತಿಗೆ ಒಪ್ಪಂದಗಳು, ಮಾಪನ ಪುಸ್ತಕಗಳನ್ನು ಸಿದ್ಧಪಡಿಸುವುದು, ಚಾಲ್ತಿಯಲ್ಲಿರುವ ಖಾತೆಗಳ ಬಿಲ್ ಪ್ರಕ್ರಿಯೆ, ಬಾಕಿ ಇರುವ ಬಿಲ್‌ಗಳನ್ನು ಮುಂಚಿತವಾಗಿಯೇ ಬಿಡುಗಡೆ ಮಾಡಿಸಲು ಆರೋಪಿ ಜಿತೇಂದ್ರ ಸಿಂಗ್ ಹಾಗೂ ಇತರ ಆರೋಪಿಗಳು ಸಂಚು ರೂಪಿಸಿದ್ದರು' ಎಂದು ಸಿಬಿಐ ಆರೋಪಿಸಿದೆ.

'ನ್ಯೂ ಜಲ್‌ಪಾಯಿಗುರಿಯಲ್ಲಿ ಮುಖ್ಯ ಎಂಜಿನಿಯರ್ ಆಗಿ ನೇಮಕಗೊಂಡ ಬಳಿಕ ಸಿಂಗ್ ಹಲವು ಗುತ್ತಿಗೆದಾರರಿಂದ ನಿಯಮಿತವಾಗಿ ಲಂಚ ಪಡೆಯುತ್ತಿದ್ದ. ದೆಹಲಿ ಮೂಲದ ಹವಾಲಾ ಆಪರೇಟರ್ ವಿನೋದ್ ಕುಮಾರ್ ಸಿಂಘಾಲ್ ಎಂಬಾತನ ಮೂಲಕ ಲಂಚದ ಹಣವನ್ನು ಗುತ್ತಿಗೆದಾರರ ಶ್ಯಾಮಲ್ ಕುಮಾರ್ ದೇಬ್ ವಿವಿಧೆಡೆ ತಲುಪಿಸುತ್ತಿದ್ದ. ದೇವ್ ಮತ್ತು ವಿನೋದ್ ಅವರನ್ನೂ ಬಂಧಿಸಲಾಗಿದೆ' ಎಂದಿದೆ.

'ಶಿವರಾಜ್ ಸಿಂಗ್ ಹೆಲಿಕಾಪ್ಟರ್‌ನಲ್ಲಿ ದೋಷ'

ಧಾರ್ (ಮಧ್ಯಪ್ರದೇಶ) (ಪಿಟಿಐ): ಮಧ್ಯಪ್ರದೇಶದ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರಿದ್ದ ಹೆಲಿಕಾಪ್ಟರ್‌ನಲ್ಲಿ ಭಾನುವಾರ ತಾಂತ್ರಿಕ ದೋಷ ಕಾಣಿಸಿಕೊಂಡು, ಧಾರ್ ಜಿಲ್ಲೆಯ ಮನಾವರ್ ನಗರಕ್ಕೆ ವಾಪಸು ಬಂದಿಳಿಯಿತು.

ಹೆಲಿಕಾಪ್ಟರ್ ಮನಾವರ್‌ನಿಂದ ಹೊರಟಿತ್ತು. ಧಾರ್‌ನಲ್ಲಿ ಮುಖ್ಯಮಂತ್ರಿ ಅವರು ಸಾರ್ವಜನಿಕ ರ‍್ಯಾಲಿಯನ್ನು ಉದ್ದೇಶಿಸಿ ಭಾಷಣ ಮಾಡಲಿದ್ದರು. ಆದರೆ, ಹೆಲಿಕಾಪ್ಟರ್‌ನಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡಿದ್ದರಿಂದ, ಪ್ರಯಾಣ ಆರಂಭಿಸಿದ ಕೆಲವೇ ಹೊತ್ತಿನ ಬಳಿಕ ವಾಪಸು ಮನಾವರ್‌ಗೆ ಬಂದಿಳಿದರು' ಎಂದು ಉಪ ವಿಭಾಗೀಯ ಪೊಲೀಸ್ ಅಧಿಕಾರಿ ಧೀರಜ್ ಬಬ್ಬರ್ ಮಾಹಿತಿ ನೀಡಿದರು.

ವಿಮಾನ ನಿಲ್ದಾಣಗಳಿಗೆ ಸಿಐಎಸ್‌ಎಫ್ ಭದ್ರತೆ

ನವದೆಹಲಿ (ಪಿಟಿಐ): 'ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಉಡಾನ್ ಯೋಜನೆಯಡಿ ದೇಶದ ಎರಡನೇ ಹಾಗೂ ಮೂರನೇ ದರ್ಜೆಯ ನಗರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 60ಕ್ಕೂ ಅಧಿಕ ವಿಮಾನ ನಿಲ್ದಾಣಗಳಿಗೆ ಶೀಘ್ರವೇ ಶಸ್ತ್ರಾಸ್ತ್ರ ಪಡೆಗಳ ಭದ್ರತೆ ಒದಗಿಸಲು ತೀರ್ಮಾನಿಸಲಾಗಿದೆ' ಎಂದು ಅಧಿಕಾರಿಗಳು ಭಾನುವಾರ ಹೇಳಿದ್ದಾರೆ.

'ಪ್ರಯಾಣಿಕರ ಸುರಕ್ಷತೆಯ ದೃಷ್ಟಿಯಿಂದ ಈ ವಿಮಾನ ನಿಲ್ದಾಣಗಳನ್ನು 'ಆ್ಯಂಟಿ ಟೆರರ್ ಸೆಕ್ಯೂರಿಟಿ ಕವರ್' ವ್ಯಾಪ್ತಿಗೆ ತರಲು ನಿರ್ಧರಿಸಲಾಗಿದೆ. ನಾಗರಿಕ ವಿಮಾನಯಾನ ಭದ್ರತಾ ಸಂಸ್ಥೆಯು (ಬಿಸಿಎಎಸ್) ಕೇಂದ್ರ ವಿಮಾನಯಾನ ಸಚಿವಾಲಯ ಹಾಗೂ ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆಯೊಂದಿಗೆ (ಸಿಐಎಸ್‌ಎಫ್) ಸಮಾಲೋಚನೆ ನಡೆಸಿ ಈ ಸಂಬಂಧ ಪ್ರಸ್ತಾವನೆಯೊಂದನ್ನು ಸಿದ್ಧಪಡಿಸಿದೆ. ಅದಕ್ಕೆ ಕೇಂದ್ರ ಗೃಹ ಸಚಿವಾಲಯದ ಅನುಮೋದನೆ ದೊರೆಯಬೇಕಿದೆ' ಎಂದು ಮಾಹಿತಿ ನೀಡಿದ್ದಾರೆ.

'ಪ್ರತಿ ನಿಲ್ದಾಣದಲ್ಲಿ ತಲಾ 57 ಭದ್ರತಾ ಸಿಬ್ಬಂದಿ ನಿಯೋಜಿಸಲು ತೀರ್ಮಾನಿಸಲಾಗಿದೆ. ಇದರಲ್ಲಿ ಸಿಐಎಸ್‌ಎಫ್‌ನ 27 ಸಿಬ್ಬಂದಿ ಇರಲಿದ್ದಾರೆ. ಉಳಿದವರನ್ನು ಮಾನ್ಯತೆ ಹೊಂದಿರುವ ಖಾಸಗಿ ಭದ್ರತಾ ಏಜೆನ್ಸಿಗಳಿಂದ ನೇಮಿಸಿಕೊಳ್ಳಲಾಗುತ್ತದೆ' ಎಂದು ಪ್ರಸ್ತಾವನೆಯಲ್ಲಿ ಉಲ್ಲೇಖಿಸಲಾಗಿದೆ. 'ವಿಮಾನ ನಿಲ್ದಾಣ ಭದ್ರತಾ ಕಾರ್ಯಕ್ಕಾಗಿ ಸಿಐಎಸ್‌ಎಫ್‌ಗೆ ಇನ್ನಷ್ಟು ಸಿಬ್ಬಂದಿ ನೇಮಿಸಿಕೊಳ್ಳಲಾಗುತ್ತದೆ. ಹೊರಗುತ್ತಿಗೆ ಆಧಾರದಲ್ಲಿ ಖಾಸಗಿ ಭದ್ರತಾ ಏಜೆನ್ಸಿಗಳಿಂದ ಒಟ್ಟು 1,924 ಮಂದಿಯನ್ನು ನೇಮಕ ಮಾಡಿಕೊಳ್ಳಲಾಗುತ್ತದೆ' ಎಂದು ಕೇಂದ್ರ ಗೃಹ ಸಚಿವಾಲಯದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರ (ಎಎಐ) ಹಾಗೂ ಸಂಬಂಧಪಟ್ಟ ರಾಜ್ಯ ಸರ್ಕಾರಗಳು ನಿಲ್ದಾಣದ ಭದ್ರತೆಗೆ ನಿಯೋಜಿಸಲಾಗುವ ಸಿಬ್ಬಂದಿಗೆ ವಸತಿ ಸೌಕರ್ಯ ಕಲ್ಪಿಸಲಿವೆ. ವಿಮಾನ ನಿಲ್ದಾಣಗಳ ಸನಿಹದಲ್ಲಿರುವ ಸರ್ಕಾರಿ ಬ್ಯಾರೆಕ್ ಅಥವಾ ವಸತಿ ಸಂಕೀರ್ಣಗಳಲ್ಲಿ ಇವರಿಗೆ ಉಳಿದುಕೊಳ್ಳುವ ವ್ಯವಸ್ಥೆ ಮಾಡಬೇಕಾಗುತ್ತದೆ' ಎಂದು ಅಧಿಕಾರಿಗಳು ಹೇಳಿದ್ದಾರೆ.

'ಉಡಾನ್ ಯೋಜನೆಯಡಿ ಅತಿ ಕಡಿಮೆ ವಿಮಾನ ಪ್ರಯಾಣ ದರ ನಿಗದಿ ಮಾಡಲಾಗಿದೆ. ಇದನ್ನು ಪರಿಷ್ಕರಿಸುವಂತೆಯೂ ಗೃಹ ಸಚಿವಾಲಯಕ್ಕೆ ಸಲ್ಲಿಸಲಾಗಿರುವ ಪ್ರಸ್ತಾವನೆಯಲ್ಲಿ ಉಲ್ಲೇಖಿಸಲಾಗಿದೆ' ಎಂದು ಭದ್ರತಾ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಏಕದಿನ ಕ್ರಿಕೆಟ್: ಶ್ರೀಲಂಕಾ ವಿರುದ್ಧ ದಾಖಲೆ 317 ರನ್ ಗೆಲುವು; ಸರಣಿ ಕ್ಲೀನ್‌ಸ್ವೀಪ್

ವಿರಾಟ್, ಗಿಲ್ ಜುಗಲ್‌ಬಂದಿ

ತಿರುವನಂತಪುರ (ಪಿಟಿಐ/ ಎಎಫ್‌ಪಿ): ವಿರಾಟ್ ಕೊಹ್ಲಿ ಮತ್ತು ಶುಭಮನ್ ಗಿಲ್ ಅವರ ಶತಕದಾಟ ಭಾರತ ತಂಡಕ್ಕೆ ಶ್ರೀಲಂಕಾ ವಿರುದ್ಧ ವಿಶ್ವದಾಖಲೆಯ ಗೆಲುವು ತಂದುಕೊಟ್ಟಿತು.

ತಿರುವನಂತಪುರದ ಗ್ರೀನ್‌ಫೀಲ್ಡ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ 3ನೇ ಹಾಗೂ ಕೊನೆಯ ಏಕದಿನ ಪಂದ್ಯದಲ್ಲಿ ಕೊಹ್ಲಿ (ಔಟಾಗದೆ 166) ಹಾಗೂ ಗಿಲ್ (116) ಬ್ಯಾಟಿಂಗ್ ವೈಭವ ಮೆರೆದರು.

ಮೊದಲು ಬ್ಯಾಟ್ ಮಾಡಿದ ರೋಹಿತ್ ಶರ್ಮ ಬಳಗ 50 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 390 ರನ್ ಗಳಿಸಿದರೆ, ಶ್ರೀಲಂಕಾ 22 ಓವರ್‌ಗಳಲ್ಲಿ 73 ರನ್‌ಗಳಿಗೆ ಆಲೌಟಾಯಿತು. 317 ರನ್‌ಗಳಿಂದ ಗೆದ್ದ ಭಾರತ, ಮೂರು ಪಂದ್ಯಗಳ ಸರಣಿಯಲ್ಲಿ ಕ್ಲೀನ್‌ಸ್ವೀಪ್ ಸಾಧನೆ ಮಾಡಿತು.

ಏಕದಿನ ಕ್ರಿಕೆಟ್ ಇತಿಹಾಸದಲ್ಲಿ ರನ್‌ಗಳ ಅಂತರದಲ್ಲಿ ತಂಡವೊಂದಕ್ಕೆ ದೊರೆತ ಅತಿದೊಡ್ಡ ಗೆಲುವು ಇದು. ನ್ಯೂಜಿಲೆಂಡ್ 2008 ರಲ್ಲಿ ಐರ್ಲೆಂಡ್ ವಿರುದ್ಧ ಪಡೆದಿದ್ದ 290 ರನ್‌ಗಳ ಗೆಲುವಿನ ದಾಖಲೆಯನ್ನು ಭಾರತ ಮುರಿಯಿತು. 2007 ರಲ್ಲಿ ಬರ್ಮುಡಾ ತಂಡವನ್ನು 257 ರನ್‌ಗಳಿಂದ ಮಣಿಸಿದ್ದು ಭಾರತದ ಅತಿದೊಡ್ಡ ಗೆಲುವು ಆಗಿತ್ತು.

ಸವಾಲಿನ ಗುರಿ ಬೆನ್ನಟ್ಟಿದ ಪ್ರವಾಸಿ ತಂಡ ಮೊಹಮ್ಮದ್ ಸಿರಾಜ್ (32ಕ್ಕೆ 4) ಒಳಗೊಂಡಂತೆ ಭಾರತದ ಬೌಲರ್‌ಗಳ ಶಿಸ್ತಿನ ದಾಳಿಯ ಮುಂದೆ ನಲುಗಿತು.

ಉತ್ತಮ ಆರಂಭ: ಮೊದಲು ಬ್ಯಾಟ್ ಮಾಡಿದ ಭಾರತ ತಂಡಕ್ಕೆ ರೋಹಿತ್ (42 ರನ್, 49 ಎ.) ಮತ್ತು ಗಿಲ್ ಮೊದಲ ವಿಕೆಟ್‌ಗೆ 95 ರನ್ ಸೇರಿಸಿ ಉತ್ತಮ ಆರಂಭ ನೀಡಿದರು.

ರೋಹಿತ್ ಔಟಾದ ಬಳಿಕ ಜತೆಯಾದ ಕೊಹ್ಲಿ ಹಾಗೂ ಗಿಲ್ ಎದುರಾಳಿ ಬೌಲರ್‌ಗಳನ್ನು ಕಾಡಿದರು. ಎರಡನೇ ವಿಕೆಟ್‌ಗೆ 131 ರನ್‌ಗಳು ಬಂದವು. ಆಕರ್ಷಕ ಹೊಡೆತಗಳ ಮೂಲಕ ಪ್ರೇಕ್ಷಕರನ್ನು ರಂಜಿಸಿದ ಗಿಲ್, ಏಕದಿನ ಕ್ರಿಕೆಟ್‌ನಲ್ಲಿ ಎರಡನೇ ಶತಕ ಗಳಿಸಿದರು.

ಗಿಲ್ ಔಟಾದ ಬಳಿಕ ಬಿರುಸಿನ ಆಟಕ್ಕಿಳಿದ ಕೊಹ್ಲಿ ಬೌಂಡರಿ, ಸಿಕ್ಸರ್‌ಗಳ ಮಳೆಗರೆದರು. ಏಕದಿನ ಕ್ರಿಕೆಟ್‌ನಲ್ಲಿ 46ನೇ ಶತಕ ಪೂರೈಸಿದರು. ಸಚಿನ್ ತೆಂಡೂಲ್ಕರ್ (49 ಶತಕ) ಅವರ ದಾಖಲೆ ಸರಿಗಟ್ಟಲು ಇನ್ನು ಮೂರು ಶತಕಗಳು ಬೇಕು.

ಕೊನೆಯಲ್ಲಿ ಅಬ್ಬರ: ಕೊಹ್ಲಿ ಇನಿಂಗ್ಸ್‌ನ ಕೊನೆಯ ಓವರ್‌ಗಳಲ್ಲಿ ಅಬ್ಬರಿಸಿದರು. ಅಂತಿಮ 10 ಓವರ್‌ಗಳಲ್ಲಿ ತಂಡ 116 ರನ್ ಕಲೆಹಾಕಿತು. ಅದರಲ್ಲಿ 84 ರನ್‌ಗಳು ಕೊಹ್ಲಿ ಬ್ಯಾಟ್‌ನಿಂದ ಬಂದವು. ತಾವೆದುರಿಸಿದ ಕೊನೆಯ 25 ಎಸೆತಗಳಲ್ಲಿ ಅವರು 66 ರನ್ ಗಳಿಸಿದರು. ಶ್ರೇಯಸ್ ಅಯ್ಯರ್ (38, 32 ಎ.) ಅವರೊಂದಿಗೆ ಮೂರನೇ ವಿಕೆಟ್‌ಗೆ 108 ರನ್ ಸೇರಿಸಿದರು.

ಐದನೇ ಸ್ಥಾನಕ್ಕೆ: ಕೊಹ್ಲಿ, ಏಕದಿನ ಕ್ರಿಕೆಟ್‌ನಲ್ಲಿ ಅತ್ಯಧಿಕ ರನ್ ಗಳಿಸಿದ ಬ್ಯಾಟರ್‌ಗಳ ಪಟ್ಟಿಯಲ್ಲಿ ಶ್ರೀಲಂಕಾದ ಜಯವರ್ಧನೆ (12,650) ಅವರನ್ನು ಹಿಂದಿಕ್ಕಿ ಐದನೇ ಸ್ಥಾನಕ್ಕೇರಿದರು. ಭಾರತದ ಬ್ಯಾಟರ್ 268 ಪಂದ್ಯಗಳಿಂದ 12,754 ರನ್ ಕಲೆಹಾಕಿದ್ದಾರೆ.

ಬಂಡಾರ, ವಂಡರ್ಸೆಗೆ ಗಾಯ: ಶ್ರೀಲಂಕಾ ತಂಡದ ಆಶನ್ ಬಂಡಾರ ಮತ್ತು ಜೆಫ್ರಿ ವಂಡರ್ಸೆ ಅವರು ಬೌಂಡರಿ ತಡೆಯುವ ಪ್ರಯತ್ನದಲ್ಲಿ ಪರಸ್ಪರ ಡಿಕ್ಕಿಯಾಗಿ ಗಾಯ ಗೊಂಡರು. 43ನೇ ಓವರ್‌ನಲ್ಲಿ ಕೊಹ್ಲಿ ಹೊಡೆದ ಚೆಂಡನ್ನು ತಡೆಯುವ ವೇಳೆ ಈ ಘಟನೆ ನಡೆಯಿತು. ಇಬ್ಬರನ್ನೂ ಸ್ಟ್ರೆಚರ್‌ನಲ್ಲಿ ಅಂಗಳದಲ್ಲಿ ಹೊರಕ್ಕೆ ತರಲಾಯಿತು. 'ಆಶನ್ ಮತ್ತು ವಂಡರ್ಸೆ ಅವರನ್ನು ಸ್ಕ್ಯಾನಿಂಗ್‌ಗಾಗಿ ಆಸ್ಪತ್ರೆಗೆ ಕರೆದೊಯ್ಯಲಾಗಿದೆ' ಎಂದು ಶ್ರೀಲಂಕಾ ಕ್ರಿಕೆಟ್ ಮಂಡಳಿ ತಿಳಿಸಿದೆ.

ಸಂಕ್ಷಿಪ್ತ ಸ್ಕೋರ್: ಭಾರತ 50 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 390 (ರೋಹಿತ್ ಶರ್ಮ 42, ಶುಭಮನ್ ಗಿಲ್ 116, ವಿರಾಟ್ ಕೊಹ್ಲಿ ಔಟಾಗದೆ 166, ಶ್ರೇಯಸ್ ಅಯ್ಯರ್ 38, ಕೆ.ಎಲ್.ರಾಹುಲ್ 7, ಸೂರ್ಯಕುಮಾರ್ ಯಾದವ್ 4, ಅಕ್ಷರ್ ಪಟೇಲ್ ಔಟಾಗದೆ 4, ಕಸುನ್ ರಜಿತ 81ಕ್ಕೆ 2) ಶ್ರೀಲಂಕಾ: 22 ಓವರ್‌ಗಳಲ್ಲಿ 73 (ನುವಾನಿದು ಫರ್ನಾಂಡೊ 19, ಮೊಹಮ್ಮದ್ ಸಿರಾಜ್ 32ಕ್ಕೆ 4, ಶಮಿ 20ಕ್ಕೆ 2, ಕುಲದೀಪ್ ಯಾದವ್ 16ಕ್ಕೆ 2) ಫಲಿತಾಂಶ: ಭಾರತಕ್ಕೆ 317 ರನ್ ಗೆಲುವು; 3-0 ರಲ್ಲಿ ಸರಣಿ ಜಯ

ಸಚಿನ್ ಹಿಂದಿಕ್ಕಿದ ಕೊಹ್ಲಿ

ವಿರಾಟ್ ಕೊಹ್ಲಿ ಅವರು ಈ ಶತಕದ ಮೂಲಕ ಸಚಿನ್ ತೆಂಡೂಲ್ಕರ್ ಹೆಸರಿನಲ್ಲಿದ್ದ ಎರಡು ದಾಖಲೆಗಳನ್ನು ತಮ್ಮ ಹೆಸರಿಗೆ ಬರೆಯಿಸಿಕೊಂಡರು. ಏಕದಿನ ಕ್ರಿಕೆಟ್‌ನಲ್ಲಿ ತವರು ನೆಲದಲ್ಲಿ ಅತ್ಯಧಿಕ ಶತಕ (21) ಗಳಿಸಿದ ಬ್ಯಾಟರ್ ಎಂಬ ಗೌರವ ಕೊಹ್ಲಿಗೆ ಒಲಿಯಿತು. ಈ ದಾಖಲೆ ಸಚಿನ್ (20) ಹೆಸರಲ್ಲಿತ್ತು.

ಅದೇ ರೀತಿ ಏಕದಿನ ಕ್ರಿಕೆಟ್‌ನಲ್ಲಿ ಒಂದೇ ಎದುರಾಳಿಯ ವಿರುದ್ಧ ಅತ್ಯಧಿಕ ಶತಕ ಗಳಿಸಿದ ಹಿರಿಮೆಗೂ ಕೊಹ್ಲಿ ಪಾತ್ರರಾದರು. ಲಂಕಾ ವಿರುದ್ಧ ಅವರಿಗೆ ಇದು 10ನೇ ಶತಕ. ಸಚಿನ್ ಅವರು ಆಸ್ಟ್ರೇಲಿಯಾ ವಿರುದ್ಧ 9 ಶತಕ ಗಳಿಸಿದ್ದಾರೆ.

ಏಕದಿನ ಕ್ರಿಕೆಟ್‌ನಲ್ಲಿ ಅತ್ಯಧಿಕ ರನ್ ಗಳಿಸಿದವರು

ಆಟಗಾರ	ದೇಶ	ಪಂದ್ಯ	ಇನಿಂಗ್ಸ್	ರನ್
ಸಚಿನ್ ತೆಂಡೂಲ್ಕರ್	ಭಾರತ	463	452	18,426
ಕುಮಾರ ಸಂಗಕ್ಕಾರ	ಶ್ರೀಲಂಕಾ	404	380	14,234
ರಿಕಿ ಪಾಂಟಿಂಗ್	ಆಸ್ಟ್ರೇಲಿಯಾ	375	365	13,704
ಸನತ್ ಜಯಸೂರ್ಯ	ಶ್ರೀಲಂಕಾ	445	433	13,430
ವಿರಾಟ್ ಕೊಹ್ಲಿ	ಭಾರತ	268	259	12,754
ಮಾಹೇಲ ಜಯವರ್ಧನೆ	ಶ್ರೀಲಂಕಾ	448	418	12,650

ಶುಭಮನ್ ಗಿಲ್: 116 ರನ್ | 97 ಎಸೆತ | 14 ಬೌಂಡರಿ | 2 ಸಿಕ್ಸರ್

ವಿರಾಟ್ ಕೊಹ್ಲಿ: 166 ರನ್ | 13 ಬೌಂಡರಿ | 110 ಎಸೆತ | 8 ಸಿಕ್ಸರ್



ಶುಭಮನ್ ಗಿಲ್ (ಎಡ) ಮತ್ತು ವಿರಾಟ್ ಕೊಹ್ಲಿ ರನ್ ಗಳಿಸಿದ ಕ್ಷಣ —ಪಿಟಿಐ ಚಿತ್ರ

ಗರಿಷ್ಠ ರನ್ ಅಂತರದ ಗೆಲುವು

ತಂಡ	ಅಂತರ	ಎದುರಾಳಿ
ಭಾರತ	317	ಶ್ರೀಲಂಕಾ
ನ್ಯೂಜಿಲೆಂಡ್	290	ಐರ್ಲೆಂಡ್
ಆಸ್ಟ್ರೇಲಿಯಾ	275	ಅಫ್ಗಾನಿಸ್ತಾನ
ದ.ಆಫ್ರಿಕಾ	272	ಜಿಂಬಾಬ್ವೆ
ದ.ಆಫ್ರಿಕಾ	258	ಶ್ರೀಲಂಕಾ

ಭಾರತ– ಇಂಗ್ಲೆಂಡ್ ಪಂದ್ಯ ಡ್ರಾ

ಹಾಕಿ: ಉಭಯ ತಂಡಗಳ ಡಿಫೆಂಡರ್‌ಗಳ ಉತ್ತಮ ಆಟ

ರೂರ್ಕೆಲಾ (ಪಿಟಿಐ): ಭಾರತ ಮತ್ತು ಇಂಗ್ಲೆಂಡ್ ತಂಡಗಳ ನಡುವಣ ಎಫ್‌ಐಎಚ್ ವಿಶ್ವಕಪ್ ಹಾಕಿ ಟೂರ್ನಿಯ ಪಂದ್ಯ ಗೋಲುರಹಿತ ಡ್ರಾದಲ್ಲಿ ಕೊನೆಗೊಂಡಿತು.

ಬಿರ್ಸಾ ಮುಂಡಾ ಕ್ರೀಡಾಂಗಣದಲ್ಲಿ ಭಾನುವಾರ ನಡೆದ 'ಡಿ' ಗುಂಪಿನ ಪಂದ್ಯದಲ್ಲಿ ಉಭಯ ತಂಡಗಳು ಗೋಲು ಗಳಿಸುವ ಹಲವು ಅವಕಾಶಗಳನ್ನು ಸೃಷ್ಟಿಸಿಕೊಂಡವಾದರೂ ಚೆಂಡನ್ನು ಗುರಿ ಸೇರಿಸಲು ವಿಫಲವಾದವು.

ಇಂಗ್ಲೆಂಡ್ ತಂಡಕ್ಕೆ ಎಂಟು ಹಾಗೂ ಭಾರತಕ್ಕೆ ನಾಲ್ಕು ಪೆನಾಲ್ಟಿ ಕಾರ್ನರ್ ಅವಕಾಶಗಳು ಲಭಿಸಿದ್ದವು. ಆದರೆ ಗೋಲು ಮಾತ್ರ ಬರಲಿಲ್ಲ. ಆತಿಥೇಯ ತಂಡ ಡಿಫೆನ್ಸ್‌ನಲ್ಲಿ ಉತ್ತಮವಾಗಿ ಆಡಿತು.

ಈ ಪಂದ್ಯ ಡ್ರಾದಲ್ಲಿ ಕೊನೆಗೊಂಡಿರುವುದರಿಂದ 'ಡಿ' ಗುಂಪಿನಿಂದ ಕ್ವಾರ್ಟರ್ ಫೈನಲ್‌ಗೆ ನೇರ ಪ್ರವೇಶ ಪಡೆಯುವ ತಂಡ ಯಾವುದು ಎಂಬುದು ಜ.19 ರಂದು ನಿರ್ಧಾರವಾಗಲಿದೆ. ಅಂದು ಇಂಗ್ಲೆಂಡ್– ಸ್ಪೇನ್ ಹಾಗೂ ಭಾರತ– ವೇಲ್ಸ್ ಎದುರಾಗಲಿವೆ. ಇಂಗ್ಲೆಂಡ್ ಮತ್ತು ಭಾರತ ತಲಾ ನಾಲ್ಕು ಪಾಯಿಂಟ್ಸ್ ಹೊಂದಿವೆ. ಉತ್ತಮ ಗೋಲು ಸರಾಸರಿಯಿಂದ ಇಂಗ್ಲೆಂಡ್ ಮೊದಲ ಸ್ಥಾನದಲ್ಲಿದ್ದರೆ, ಭಾರತ ಎರಡನೇ ಸ್ಥಾನದಲ್ಲಿದೆ. ಇಂಗ್ಲೆಂಡ್ ಮೊದಲ ಪಂದ್ಯದಲ್ಲಿ 5–0 ರಲ್ಲಿ ವೇಲ್ಸ್ ತಂಡವನ್ನು ಮಣಿಸಿದ್ದರೆ, ಭಾರತ 2–0 ರಲ್ಲಿ ಸ್ಪೇನ್ ವಿರುದ್ಧ ಗೆದ್ದಿತ್ತು.

ಪಂದ್ಯದ ಮೊದಲ ಕ್ವಾರ್ಟರ್‌ನಲ್ಲಿ ಇಂಗ್ಲೆಂಡ್ ಪ್ರಭುತ್ವ ಸಾಧಿಸಿತು. ಒಂದರ ಮೇಲೊಂದರಂತೆ ಐದು ಪೆನಾಲ್ಟಿ ಕಾರ್ನರ್ ಅವಕಾಶಗಳನ್ನು ಗಿಟ್ಟಿಸಿಕೊಂಡಿತು. ಆದರೆ ಎಲ್ಲವನ್ನೂ ಭಾರತದ ಆಟಗಾರರು ವಿಫಲಗೊಳಿಸಿದರು.

ಮೊದಲ ಕ್ವಾರ್ಟರ್‌ನ ಕೊನೆಯಲ್ಲಿ ಭಾರತಕ್ಕೆ ಪೆನಾಲ್ಟಿ ಕಾರ್ನರ್ ಸಿಕ್ಕಿತು. ಮನ್‌ಪ್ರೀತ್ ಅವರ ಹೊಡೆತ ನಿಖರವಾಗಿಲ್ಲದ ಕಾರಣ ಹರ್ಮನ್‌ಪ್ರೀತ್ ಸಿಂಗ್‌ಗೆ ಡ್ರ್ಯಾಗ್‌ಫ್ಲಿಕ್ ಮಾಡಲು ಆಗಲಿಲ್ಲ.

2ನೇ ಕ್ವಾರ್ಟರ್‌ನ ಬಹುತೇಕ ಸಮಯದಲ್ಲಿ ಚೆಂಡಿನ ನಿಯಂತ್ರಣ ಭಾರತದ ಆಟಗಾರರ ಕೈಯಲ್ಲಿತ್ತು. 38ನೇ ನಿಮಿಷದಲ್ಲಿ ಹಾರ್ದಿಕ್ ಅವರ ಗೋಲು ಗಳಿಸುವ ಪ್ರಯತ್ನವನ್ನು ಇಂಗ್ಲೆಂಡ್ ಗೋಲ್‌ಕೀಪರ್ ಅಮೋಘವಾಗಿ ತಡೆದರು. 41ನೇ ನಿಮಿಷದಲ್ಲಿ ಮನ್‌ದೀಪ್ ಅವರು ತಮಗೆ ಲಭಿಸಿದ ಉತ್ತಮ ಅವಕಾಶವನ್ನು ಕೈಚೆಲ್ಲಿದರು.



ಭಾರತ ತಂಡದ ಗೋಲು ಗಳಿಸುವ ಪ್ರಯತ್ನವನ್ನು ಇಂಗ್ಲೆಂಡ್ ಆಟಗಾರರು ತಡೆದರು —ಪಿಟಿಐ ಚಿತ್ರ



ಇಂದಿನ ಪಂದ್ಯಗಳು

ಮಲೇಷ್ಯಾ–ಚಿಲಿ — ಮಧ್ಯಾಹ್ನ 1ರಿಂದ

ನ್ಯೂಜಿಲೆಂಡ್–ನೆದರ್ಲೆಂಡ್ಸ್ — ಮಧ್ಯಾಹ್ನ 3ರಿಂದ

ಫ್ರಾನ್ಸ್–ದಕ್ಷಿಣ ಆಫ್ರಿಕಾ — ಸಂಜೆ 5ರಿಂದ

ಅರ್ಜೆಂಟೀನಾ–ಆಸ್ಟ್ರೇಲಿಯಾ — ಸಂಜೆ 7ರಿಂದ

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಸ್ಪೇನ್ ಜಯಭೇರಿ

ರೂರ್ಕೆಲಾ: ಇಲ್ಲಿ ನಡೆದ ಹಾಕಿ ವಿಶ್ವಕಪ್ ಡಿ ಗುಂಪಿನ ಇನ್ನೊಂದು ಪಂದ್ಯದಲ್ಲಿ ಸ್ಪೇನ್ 5–1ರಿಂದ ವೇಲ್ಸ್ ತಂಡವನ್ನು ಸೋಲಿಸಿತು. ವಿಜೇತ ತಂಡಕ್ಕಾಗಿ ರೇಯ್ನ್ ಮಾರ್ಕ್ ಮತ್ತು ಮಿರಾಲಸ್ ತಲಾ 2 ಗೋಲು ಹೊಡೆದರು. ಇಗ್ಲೆಸಿಯಸ್ ಅಲ್ವೆರೊ ಇನ್ನೊಂದು ಗೋಲು ಗಳಿಸಿದರು.

ವೇಲ್ಸ್ ತಂಡದ ಪರ ಕಾರ್ಸನ್ ಜೇಮ್ಸ್ ಗೋಲು ಹೊಡೆದರು.



ವಿಶ್ವಕಪ್ ಕ್ರಿಕೆಟ್: ಭಾರತ– ಯುಇಎ ಮುಖಾಮುಖಿ ಇಂದು

ಬೆನೊನಿ, ದಕ್ಷಿಣ ಆಫ್ರಿಕಾ: 19 ವರ್ಷದೊಳಗಿನ ಮಹಿಳೆಯರ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಭಾರತ ತಂಡವು ಸೋಮವಾರ ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ತಂಡವನ್ನು ಎದುರಿಸಲಿದೆ.



ಶಫಾಲಿ ವರ್ಮಾ

ಇಲ್ಲಿಯ ವಿಲ್ಲೊಮೂರ್ ಪಾರ್ಕ್ ಕ್ರೀಡಾಂಗಣದಲ್ಲಿ ಉಭಯ ತಂಡಗಳ ನಡುವಣ ಹಣಾಹಣಿಗೆ ವೇದಿಕೆ ಸಜ್ಜುಗೊಂಡಿದೆ.

ಶಫಾಲಿ ವರ್ಮಾ ನಾಯಕತ್ವದ ತಂಡವು ಟೂರ್ನಿಯಲ್ಲಿ ಜಯದ ಆರಂಭ ಮಾಡಿತ್ತು. ಶನಿವಾರ ನಡೆದ ಡಿ ಗುಂಪಿನ ಪಂದ್ಯದಲ್ಲಿ ಏಳು ವಿಕೆಟ್‌ಗಳಿಂದ ದಕ್ಷಿಣ ಆಫ್ರಿಕಾ ತಂಡಕ್ಕೆ ಸೋಲುಣಿಸಿತ್ತು. ಶಫಾಲಿ ಆಲ್‌ರೌಂಡ್ ಆಟದ ಮೂಲಕ ಮಿಂಚಿದ್ದರು. ಶ್ವೇತಾ ಶೆರಾವತ್ ಸ್ಫೋಟಕ ಬ್ಯಾಟಿಂಗ್ ಮಾಡಿದ್ದರು. ಅದೇ ಲಯವನ್ನು ಮುಂದುವರಿಸುವ ತವಕದಲ್ಲಿ ತಂಡವಿದೆ. ಯುಎಇ ಕೂಡ ಬಲಿಷ್ಠ ಭಾರತ ತಂಡವನ್ನು ಮಣಿಸುವ ವಿಶ್ವಾಸದಲ್ಲಿದೆ.

ಪಂದ್ಯ ಆರಂಭ: ಮಧ್ಯಾಹ್ನ 1.30

ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿ ಇಂದಿನಿಂದ: ಪ್ರಶಸ್ತಿ ನಿರೀಕ್ಷೆಯಲ್ಲಿ ಸ್ವೆಟೆಕ್

ಜೊಕೊವಿಚ್, ರಫೆಲ್ ನಡಾಲ್ ಮೇಲೆ ಚಿತ್ತ

ಮೆಲ್ಬರ್ನ್ (ರಾಯಿಟರ್ಸ್): ಋತುವಿನ ಮೊದಲ ಗ್ರ್ಯಾನ್‌ಸ್ಲಾಮ್ ಟೆನಿಸ್ ಟೂರ್ನಿ ಆಸ್ಟ್ರೇಲಿಯಾ ಓಪನ್‌ಗೆ ಸೋಮವಾರ ಚಾಲನೆ ಲಭಿಸಲಿದ್ದು, ಎಲ್ಲರ ಚಿತ್ತ ಅನುಭವಿ ಆಟಗಾರರಾದ ರಫೆಲ್ ನಡಾಲ್ ಮತ್ತು ನೊವಾಕ್ ಜೊಕೊವಿಚ್ ಮೇಲೆ ನೆಟ್ಟಿದೆ.

ದಿಗ್ಗಜ ಆಟಗಾರ ಸ್ವಿಟ್ಜರ್ಲೆಂಡ್‌ನ ರೋಜರ್ ಫೆಡರರ್ ನಿವೃತ್ತಿಯ ಬಳಿಕ ನಡೆಯುತ್ತಿರುವ ಮೊದಲ ಗ್ರ್ಯಾನ್‌ಸ್ಲಾಮ್ ಟೂರ್ನಿ ಇದಾಗಿದ್ದು, ಸ್ಪೇನ್‌ನ ನಡಾಲ್ 23ನೇ ಕಿರೀಟಕ್ಕಾಗಿ ಪೈಪೋಟಿ ನಡೆಸಲಿದ್ದಾರೆ.

ನಡಾಲ್ ಕಳೆದ ವರ್ಷ ಇಲ್ಲಿ ಚಾಂಪಿಯನ್ ಆಗಿದ್ದರು. ಫೈನಲ್‌ನಲ್ಲಿ ಎರಡು ಸೆಟ್‌ಗಳಿಂದ ಹಿನ್ನಡೆಯಲ್ಲಿದ್ದರೂ, ಪುಟಿದೆದ್ದು ಬಂದು ಡೇನಿಯಲ್ ಮೆಡ್ವೆಡೆವ್ ಅವರನ್ನು ಮಣಿಸಿದ್ದರು. ಆದರೆ 36 ವರ್ಷದ ಅವರು ಪ್ರಶಸ್ತಿಯನ್ನು ತಮ್ಮಲ್ಲಿ ಉಳಿಸಿಕೊಳ್ಳುವರೇ ಎಂಬುದು ಕುತೂಹಲಕ್ಕೆ ಕಾರಣವಾಗಿದೆ.

ಅಗ್ರಶ್ರೇಯಾಂಕ ಹೊಂದಿರುವ ನಡಾಲ್, ಮೊದಲ ಸುತ್ತಿನಲ್ಲಿ ಬ್ರಿಟನ್‌ನ ಜಾಕ್ ಡ್ರೇಪರ್ ವಿರುದ್ಧ ಪೈಪೋಟಿ ನಡೆಸುವರು. ಸೆಪ್ಟೆಂಬರ್‌ನಲ್ಲಿ ನಡೆದಿದ್ದ ಅಮೆರಿಕ ಓಪನ್ ಟೂರ್ನಿಯ ಬಳಿಕ ನಡಾಲ್ ಕೇವಲ ಒಂದು ಪಂದ್ಯದಲ್ಲಿ ಮಾತ್ರ ಗೆದ್ದಿದ್ದಾರೆ. ಆಸ್ಟ್ರೇಲಿಯಾ ಓಪನ್‌ಗೆ ಪೂರ್ವಭಾವಿಯಾಗಿ ನಡೆದಿದ್ದ ಎರಡೂ ಟೂರ್ನಿಗಳಲ್ಲಿ ಮೊದಲ ಸುತ್ತಿನಲ್ಲೇ ಸೋತಿದ್ದರು.

ಸರ್ಬಿಯಾದ ನೊವಾಕ್ ಜೊಕೊವಿಚ್ ಈ ಬಾರಿ ಗೆದ್ದರೆ ನಡಾಲ್ ಅವರ 22 ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳ ಸಾಧನೆ ಸರಿಗಟ್ಟಲಿದ್ದಾರೆ. ಜೊಕೊವಿಚ್ ಇಲ್ಲಿ ದಾಖಲೆಯ 10ನೇ ಕಿರೀಟದ ನಿರೀಕ್ಷೆಯಲ್ಲಿದ್ದಾರೆ. ಕೋವಿಡ್ ಲಸಿಕೆ ಹಾಕದ್ದಕ್ಕೆ ಅವರಿಗೆ ಕಳೆದ ವರ್ಷ ಆಡಲು ಅವಕಾಶ ನೀಡಿರಲಿಲ್ಲ.

ನಾರ್ವೆಯ ಕ್ಯಾಸ್ಪರ್ ರೂಡ್, ಗ್ರೀಸ್‌ನ ಸ್ಟೆಫಾನೊಸ್ ಸಿಟ್ಸಿಪಸ್, ರಷ್ಯಾದ ಆಂಡ್ರೆ ರುಬ್ಲೆವ್, ಡೇನಿಯಲ್ ಮೆಡ್ವೆಡೆವ್ ಅಲ್ಲದೆ ಕೆನಡಾದ ಫೆಲಿಕ್ಸ್ ಉಜೆರ್ ಅಲಿಯಾಸಿಮ್ ಅವರು ಕಣದಲ್ಲಿರುವ ಇತರ ಪ್ರಮುಖರು. ವಿಶ್ವದ ಅಗ್ರ ರ್‍ಯಾಂಕ್‌ನ ಆಟಗಾರ ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ ಅವರು ಗಾಯದ ಕಾರಣ ಆಡುತ್ತಿಲ್ಲ.

ಮಹಿಳೆಯರ ವಿಭಾಗದಲ್ಲಿ ಪೋಲೆಂಡ್‌ನ ಇಗಾ ಸ್ವೆಟೆಕ್ ಅಗ್ರ ಶ್ರೇಯಾಂಕ ಹೊಂದಿದ್ದು, ಇಲ್ಲಿ ಮೊದಲ ಕಿರೀಟದ ಕನಸಿನಲ್ಲಿದ್ದಾರೆ. ಕಳೆದ ಬಾರಿ ಚಾಂಪಿಯನ್ ಆಗಿದ್ದ ಆಶ್ಲೆ ಬಾರ್ಟಿ ಅವರು ನಿವೃತ್ತಿ ಹೊಂದಿರುವ ಕಾರಣ ಈ ಸಲ ಮಹಿಳಾ ವಿಭಾಗದಲ್ಲಿ ಹೊಸ ಚಾಂಪಿಯನ್ ಉದಯಿಸಲಿದ್ದಾರೆ.

ಟ್ಯುನೀಷಿಯಾದ ಆನ್ಸ್ ಜಬೇರ್, ಅಮೆರಿಕದ ಜೆಸ್ಸಿಕಾ ಪೆಗುಲಾ, ಫ್ರಾನ್ಸ್‌ನ ಕೆರೊಲಿನಾ ಗಾರ್ಸಿಯಾ ಮತ್ತು ಬೆಲಾರಸ್‌ನ ಅರ್ಯನಾ ಸಬಲೆಂಕಾ ಅವರು ಕ್ರಮವಾಗಿ ಎರಡರಿಂದ ಐದರವರೆಗಿನ ಶ್ರೇಯಾಂಕ ಹೊಂದಿದ್ದು, ಪ್ರಶಸ್ತಿ ಗೆಲ್ಲುವ ನೆಚ್ಚಿನ ಆಟಗಾರ್ತಿಯರು ಎನಿಸಿಕೊಂಡಿದ್ದಾರೆ.

ಪಂದ್ಯಗಳ ನೇರಪ್ರಸಾರ: ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್

ಆರಂಭ: ಬೆಳಿಗ್ಗೆ 5.30 (ಭಾರತೀಯ ಕಾಲಮಾನ)



ಜೊಕೊವಿಚ್ —ಎಎಫ್‌ಪಿ ಚಿತ್ರ

ಟೂರ್ನಿಯ ಮಾಹಿತಿ

ಅವಧಿ	ಜ.16 ರಿಂದ 29
ಸ್ಥಳ	ಮೆಲ್ಬರ್ನ್
ಪ್ರಮುಖ ಅಂಕಣ	ರಾಡ್ ಲೇವರ್ ಅರೆನಾ, ಮಾರ್ಗರೆಟ್ ಕೋರ್ಟ್ ಅರೆನಾ
ಹಾಲಿ ಚಾಂಪಿಯನ್ನರು	ರಫೆಲ್ ನಡಾಲ್, ಸ್ಪೇನ್ (ಪುರುಷರ ವಿಭಾಗ), ಆಶ್ಲೆ ಬಾರ್ಟಿ, ಆಸ್ಟ್ರೇಲಿಯಾ (ಮಹಿಳೆಯರ ವಿಭಾಗ)

ಬಹುಮಾನ ಮೊತ್ತ (₹ ಕೋಟಿಗಳಲ್ಲಿ)

₹16.88 ಚಾಂಪಿಯನ್ | ₹9.22 ರನ್ನರ್ಸ್ ಅಪ್ | ₹5.24 ಸೆಮಿಫೈನಲಿಸ್ಟ್



ರಫೆಲ್ ನಡಾಲ್ —ಎಎಫ್‌ಪಿ ಚಿತ್ರ



ಪ್ರಶಸ್ತಿಯೊಂದಿಗೆ ವಿಕ್ಟರ್ ಅಕ್ಸೆಲ್ಸನ್

ಮಲೇಷ್ಯಾ ಬ್ಯಾಡ್ಮಿಂಟನ್: ಅಕ್ಸೆಲ್ಸನ್‌ಗೆ ಕಿರೀಟ

ಕ್ವಾಲಾಲಂಪುರ (ಎಎಫ್‌ಪಿ): ಡೆನ್ಮಾರ್ಕ್‌ನ ವಿಕ್ಟರ್ ಅಕ್ಸೆಲ್ಸನ್ ಅವರು ಮಲೇಷ್ಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿದ್ದಾರೆ.

ಭಾನುವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಫೈನಲ್ ಹಣಾಹಣಿಯಲ್ಲಿ ಅವರು 21-6, 21-15ರಿಂದ ಜಪಾನ್‌ನ ಕೊಡೈ ನರವೊಕಾ ಅವರನ್ನು ಪರಾಭವಗೊಳಿಸಿದರು. ಸತತ ಎರಡನೇ ಬಾರಿ ಟ್ರೋಫಿ ತಮ್ಮದಾಗಿಸಿಕೊಂಡರು.

ಯಮಗುಚಿ ಚಾಂಪಿಯನ್: ಮಹಿಳಾ ವಿಭಾಗದ ಪ್ರಶಸ್ತಿಯು ಜಪಾನ್‌ನ ಅಕಾನೆ ಯಮಗುಚಿ ಅವರ ಪಾಲಾಯಿತು. ಫೈನಲ್ ಪಂದ್ಯದಲ್ಲಿ ಅವರು 12-21, 21-19, 21-11ರಿಂದ ದಕ್ಷಿಣ ಕೊರಿಯಾದ ಆ್ಯನ್ ಸೆ ಯಂಗ್ ಅವರನ್ನು ಸೋಲಿಸಿದರು.

ಬ್ಯಾಸ್ಕೆಟ್‌ಬಾಲ್: ಚೆನ್ನೈ ಹೀಟ್ಸ್ ತಂಡಕ್ಕೆ ಪ್ರಶಸ್ತಿ

ಬೆಂಗಳೂರು: ಚೆನ್ನೈ ಹೀಟ್ಸ್ ತಂಡದವರು ಇಲ್ಲಿ ಕೊನೆಗೊಂಡ ಐಎನ್‌ಬಿಎಲ್ ಬ್ಯಾಸ್ಕೆಟ್‌ಬಾಲ್ ಲೀಗ್‌ನಲ್ಲಿ ಚಾಂಪಿಯನ್ ಆದರು.

ಕಂಠೀರವ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಫೈನಲ್‌ನಲ್ಲಿ ಚೆನ್ನೈ 91–74ರಲ್ಲಿ ಬೆಂಗಳೂರು ಕಿಂಗ್ಸ್ ತಂಡವನ್ನು ಮಣಿಸಿತು. ಕೊಚ್ಚಿ ಟೈಗರ್ಸ್ ತಂಡವನ್ನು 85–69 ರಲ್ಲಿ ಮಣಿಸಿದ ಚಂಡೀಗಢ ವಾರಿಯರ್ಸ್ ಮೂರನೇ ಸ್ಥಾನ ಗಳಿಸಿತು.

ಚಾಂಪಿಯನ್ ತಂಡ ₹ 10 ಲಕ್ಷ ಹಾಗೂ ರನ್ನರ್ಸ್ ಅಪ್ ತಂಡ ₹ 7.5 ಲಕ್ಷ ನಗದು ಬಹುಮಾನ ಪಡೆದವು.

ಸಂಕ್ಷಿಪ್ತ ಸುದ್ದಿ

ರಣಜಿ ಕ್ರಿಕೆಟ್: ಜಡೇಜ ಆಡುವ ಸಾಧ್ಯತೆ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಪ್ರಮುಖ ಆಲ್‌ರೌಂಡರ್ ರವೀಂದ್ರ ಜಡೇಜ ಅವರು ರಣಜಿ ಟೂರ್ನಿಗೆ ಮರಳಲು ಸಜ್ಜಾಗಿದ್ದಾರೆ.



ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ನಡೆದ ಏಷ್ಯಾಕಪ್ ಟೂರ್ನಿಯ ವೇಳೆ ಗಾಯಗೊಂಡಿದ್ದ ಅವರು ಮೊಣಕಾಲು ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. ಸದ್ಯ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯ (ಎನ್‌ಸಿಎ) ಪುನಶ್ಚೇತನ ಶಿಬಿರದಲ್ಲಿರುವ ಅವರು, ಸೌರಾಷ್ಟ್ರ ತಂಡದ ಪರ ಆಡುವ ಸಾಧ್ಯತೆಯಿದೆ.

ಇದೇ 24ರಂದು ಚೆನ್ನೈನಲ್ಲಿ ತಮಿಳುನಾಡು ಎದುರು ನಡೆಯುವ ಪಂದ್ಯದಲ್ಲಿ ಕಣಕ್ಕಿಳಿಯಲು ಜಡೇಜ ತಯಾರಿ ನಡೆಸಿದ್ದಾರೆ.

ಭಾರತ ತಂಡವು ಫೆಬ್ರುವರಿ 9ರಿಂದ ನಾಗಪುರದಲ್ಲಿ ಆಸ್ಟ್ರೇಲಿಯಾ ವಿರುದ್ಧದ ಟೆಸ್ಟ್ ಸರಣಿಯಲ್ಲಿ ಆಡಲಿದೆ. ನಾಲ್ಕು ಪಂದ್ಯಗಳ ಈ ಸರಣಿಯ ಮೊದಲ ಎರಡು ಪಂದ್ಯಗಳಿಗೆ ಆಯ್ಕೆ ಮಾಡಲಾಗಿರುವ 17 ಆಟಗಾರರ ತಂಡದಲ್ಲಿ ಜಡೇಜಾ ಅವರಿಗೆ ಸ್ಥಾನ ಲಭಿಸಿದೆ. ಆದರೂ ಅವರ ಲಭ್ಯತೆಯು ಫಿಟ್‌ನೆಸ್‌ಅನ್ನು ಅವಲಂಬಿಸಿದೆ.

ಮ್ಯಾರಥಾನ್: ಲೆಮಿ, ಹಯ್ಮನೋಟ್‌ಗೆ ಪ್ರಶಸ್ತಿ

ಮುಂಬೈ (ಪಿಟಿಐ): ಇಥಿಯೋಪಿಯಾದ ಹಯ್ಲೆ ಲೆಮಿ ಮತ್ತು ಅಂಚಲೆಮ್ ಹಯ್ಮನೋಟ್ ಅವರು ಮುಂಬೈ ಮ್ಯಾರಥಾನ್‌ನ ಕ್ರಮವಾಗಿ ಪುರುಷ ಮತ್ತು ಮಹಿಳೆಯರ ವಿಭಾಗಗಳಲ್ಲಿ ಕೂಟ ದಾಖಲೆಯೊಂದಿಗೆ ಪ್ರಶಸ್ತಿ ಜಯಿಸಿದರು.

ಹಯ್ಲೆ ಲೆಮಿ 2 ತಾಸು 7 ನಿಮಿಷ 32 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಅಂಚಲೆಮ್ 2 ತಾಸು 24 ನಿ. 15 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು.

ಭಾರತೀಯ ಎಲೀಟ್ ಪುರುಷರ ವಿಭಾಗದಲ್ಲಿ ಟಿ. ಗೋಪಿ 2 ತಾಸು 16 ನಿ. 41 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ಮೊದಲಿಗರಾದರೆ, ಮಾನ್ ಸಿಂಗ್ ಮತ್ತು ಕಾಳಿದಾಸ್ ಹಿರಾವೆ ಕ್ರಮವಾಗಿ 2 ಮತ್ತು 3ನೇ ಸ್ಥಾನ ಪಡೆದರು. ಎಲೀಟ್ ಮಹಿಳೆಯರ ವಿಭಾಗದಲ್ಲಿ ಚವಿ ಯಾದವ್ (2 ತಾಸು 50.35 ನಿ.) ಮೊದಲ ಸ್ಥಾನ ಗಳಿಸಿದರು.

ಪುರುಷರ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಬಾಲ್ ಬ್ಯಾಡ್ಮಿಂಟನ್

ಆಚಾರ್ಯ, ಕೇರಳ ಪ್ರೀ ಕ್ವಾರ್ಟರ್ ಫೈನಲ್‌ಗೆ

ಪ್ರಜಾವಾಣಿ ವಾರ್ತೆ

ಉಪ್ಪಿನಂಗಡಿ (ದಕ್ಷಿಣ ಕನ್ನಡ): ಕೇರಳ ವಿವಿ, ತಮಿಳುನಾಡು ಚಿದಂಬರಂನ ಅಣ್ಣಾಮಲೈ ವಿವಿ ಮತ್ತು ಆಂಧ್ರಪ್ರದೇಶದ ಆಚಾರ್ಯ ನಾಗಾರ್ಜುನ ವಿವಿ ತಂಡಗಳು ಮಂಗಳೂರು ವಿವಿ ಆಶ್ರಯದಲ್ಲಿ ಇಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆಯುತ್ತಿರುವ ಪುರುಷರ ಅಖಿಲ ಭಾರತ ಅಂತರ ವಿವಿ ಬಾಲ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಪ್ರೀ ಕ್ವಾರ್ಟರ್ ಫೈನಲ್ ಪ್ರವೇಶಿಸಿವೆ.

ಚೆನ್ನೈನ ಅಣ್ಣಾ ವಿವಿ, ತಮಿಳುನಾಡು ತಿರುಚಿನಾಪಳ್ಳಿಯ ಭಾರತಿದಾಸನ್ ವಿವಿ, ಮದ್ರಾಸ್ ವಿವಿ, ಸೇಲಂನ ಪೆರಿಯಾರ್ ವಿವಿ ಮತ್ತು ಕೊಯಮತ್ತೂರಿನ ಭಾರತಿಯಾರ್ ವಿವಿಗಳು ಕೂಡ 16ರ ಘಟ್ಟಕ್ಕೆ ಲಗ್ಗೆ ಇರಿಸಿವೆ. ಎರಡನೇ ದಿನವಾದ ಭಾನುವಾರ ಕಣದಲ್ಲಿದ್ದ ಕರ್ನಾಟಕದ 8 ವಿಶ್ವವಿದ್ಯಾಲಯಗಳು ಕೂಡ ನಿರಾಸೆ ಕಂಡವು. ಕಳೆದ ಬಾರಿ ಮೂರನೇ ಸ್ಥಾನ ಗಳಿಸುವ ಮೂಲಕ ನೇರವಾಗಿ ಕ್ವಾರ್ಟರ್ ಫೈನಲ್ ಪ್ರವೇಶಿಸಿರುವ ಆತಿಥೇಯ ಮಂಗಳೂರು ವಿವಿ ಮೇಲೆ ಈಗ ನಿರೀಕ್ಷೆಯ ಭಾರ ಇದೆ. ಸೋಮವಾರ ಆಚಾರ್ಯ ನಾಗಾರ್ಜುನ ಮತ್ತು ಅಣ್ಣಾಮಲೈ ವಿವಿ ನಡುವಿನ ಪಂದ್ಯದಲ್ಲಿ ಗೆದ್ದ ತಂಡವನ್ನು ಮಂಗಳೂರು ವಿವಿ ಎದುರಿಸಲಿದೆ.

ಭಾನುವಾರ ನಡೆದ ನಾಕೌಟ್ ಹಂತದ ಕೊನೆಯ ಪಂದ್ಯಗಳಲ್ಲಿ ಕೇರಳ ವಿವಿ ತಂಡ ಮಧುರೈ ಕಾಮರಾಜ್ ವಿವಿಯನ್ನು 27-35, 35-30, 35-20ರಲ್ಲಿ ಮಣಿಸಿತು. ಅಣ್ಣಾಮಲೈ ವಿವಿ ಕೋಟಯಂನ ಎಂ.ಜಿ ವಿವಿಯನ್ನು 35-25, 35-28ರಲ್ಲಿ ಮಣಿಸಿತು. ತಿರುನಲ್ವೇಲಿಯ ಎಂ.ಎಸ್ ವಿವಿಯನ್ನು ಆಚಾರ್ಯ ನಾಗಾರ್ಜುನ 35-33, 35-28ರಲ್ಲಿ ಸೋಲಿಸಿತು. ಬೆಳಗಾವಿಯ ವಿಟಿಯು 35-21, 35-24ರಲ್ಲಿ ಅಣ್ಣಾ ವಿವಿಗೆ ಮಣಿಯಿತು. ಭಾರತಿದಾಸನ್ ಎದುರು ಕೃಷ್ಣಾ ವಿವಿ 35-33, 35-20ರಲ್ಲಿ ಸೋತಿತು. ಕಾಕಿನಾಡದ ಜೆಎನ್‌ಟಿಯು 35-23, 35-21ರಲ್ಲಿ ಮದ್ರಾಸ್ ವಿವಿಗೆ ಮಣಿಯಿತು. ಪೆರಿಯಾರ್ ವಿವಿ 35-28, 35-25ರಲ್ಲಿ ಮುಂಬೈ ವಿವಿಯನ್ನು ಮತ್ತು ಭಾರತಿಯಾರ್ 35-20, 35-15ರಲ್ಲಿ ಆದಿಕವಿ ನಾಣಯ್ಯ ವಿವಿಯನ್ನು ಸೋಲಿಸಿತು.

ಎರಡನೇ ದಿನದ ಇತರ ನಾಕೌಟ್ ಪಂದ್ಯಗಳ ಫಲಿತಾಂಶ: ಬೆಂಗಳೂರಿನ ಆರ್‌ಜಿಯುಎಚ್‌ಎಸ್ ವಿರುದ್ಧ ಕಣ್ಣೂರು ವಿವಿಗೆ 35-16, 35-17ರಲ್ಲಿ, ಬೆಂಗಳೂರಿನ ಯುಎಎಸ್ ವಿರುದ್ಧ ಕಾಕಿನಾಡದ ಜೆಎನ್‌ಟಿಯುಗೆ 31-35, 35-25, 35-33ರಲ್ಲಿ, ಮೈಸೂರು ವಿವಿ ಎದುರು ಬೆಂಗಳೂರು ವಿವಿಗೆ 35-30, 35-24ರಲ್ಲಿ, ತಿರುವಳ್ಳುವರ್ ವಿವಿ ವಿರುದ್ಧ ಮಹಾರಾಜ ಗಂಗಾಸಿಂಗ್ ವಿವಿಗೆ 38-36, 35-33ರಲ್ಲಿ, ಡಾ.ಬಿಎಎಂ ವಿವಿ ವಿರುದ್ಧ ಉತ್ಕಲ್ ವಿವಿಗೆ 35-17, 35-21ರಲ್ಲಿ, ಮುಂಬೈ ವಿವಿ ವಿರುದ್ಧ ಮಂಡ್ಯ ವಿವಿಗೆ 35-32, 23-35, 35-32ರಲ್ಲಿ, ವಿಜಯನಗರ ವಿವಿ ವಿರುದ್ಧ ಶ್ರೀ ವೆಂಕಟೇಶ್ವರ ವಿವಿಗೆ 35-26, 35-18ರಲ್ಲಿ, ಎಸ್‌ಆರ್‌ಟಿಎಂ ವಿರುದ್ಧ ಯೋಗಿ ವೇಮನ ವಿವಿಗೆ 35-25, 35-24ರಲ್ಲಿ, ರಾಯಲಸೀಮ ವಿರುದ್ಧ ಕೇರಳ ವಿವಿಗೆ 35-30, 35-28ರಲ್ಲಿ ಜಯ.

ಕಾಕಾತಿಯ ವಿವಿ ವಿರುದ್ಧ ಮಧುರೈ ಕಾಮರಾಜ್ ವಿವಿಗೆ 35-29, 35-25ರಲ್ಲಿ, ಗೊಂಡ್ವಾನ ವಿವಿ ವಿರುದ್ಧ ಬೆಳಗಾವಿಯ ವಿಟಿಯುಗೆ 35-17, 35-21ರಲ್ಲಿ, ಶ್ರೀ ವೆಂಕಟೇಶ್ವರ ವಿವಿ ವಿರುದ್ಧ ಕೃಷ್ಣಾ ವಿವಿಗೆ 35-29, 34-36, 35-24ರಲ್ಲಿ, ಶಿವಮೊಗ್ಗದ ಕೆಎಸ್‌ಎನ್‌ಯುಎಎಚ್‌ಎಸ್ ವಿರುದ್ಧ ಆಚಾರ್ಯ ನಾಗಾರ್ಜುನ ವಿವಿ ವಿರುದ್ಧ 35-26, 35-24ರಲ್ಲಿ, ವಿಕ್ರಮಸಿಂಹಪುರಿ ವಿವಿ ವಿರುದ್ಧ ಎಂ.ಎಸ್.ವಿವಿಗೆ 28-35, 35-19, 35-31ರಲ್ಲಿ, ಮಹಾರಾಜ ಗಂಗಾಸಿಂಗ್ ವಿವಿ ವಿರುದ್ಧ ಎಂ.ಜಿ ವಿಗೆ 35-24, 39-37ರಲ್ಲಿ, ವಿನಾಯಕ ಮಿಷನ್ ವಿವಿ ವಿರುದ್ಧ ಅಣ್ಣಾ ವಿವಿಗೆ 35-18, 35-24ರಲ್ಲಿ, ಭಗಲ್‌ಪುರ್ ವಿರುದ್ಧ ಭಾರತಿದಾಸನ್ ವಿವಿಗೆ 35-18, 35-19ರಲ್ಲಿ ಮತ್ತು ಕಣ್ಣೂರು ವಿವಿ ವಿರುದ್ಧ ಅಣ್ಣಾಮಲೈ ವಿವಿಗೆ 35-13, 35-18ರಲ್ಲಿ ಗೆಲುವು.

ತುಮಕೂರು ವಿರುದ್ಧ ಎಸ್‌ಕೆ ವಿವಿಗೆ 35-21, 35-28ರಲ್ಲಿ, ಕ್ಯಾಲಿಕಟ್ ವಿವಿ ವಿರುದ್ಧ ಪೆರಿಯಾರ್ ವಿವಿಗೆ 35-31, 35-27ರಲ್ಲಿ, ಮುಂಬೈ ವಿವಿ ವಿರುದ್ಧ ಪೆರಿಯಾರ್ ವಿವಿಗೆ 35-28, 35-25ರಲ್ಲಿ, ಎಂ.ಎಸ್ ವಿವಿ ವಿರುದ್ಧ ಆಚಾರ್ಯ ನಾಗಾರ್ಜುನಕ್ಕೆ 35-33, 35-28ರಲ್ಲಿ, ಯೋಗಿ ವೇಮನ ವಿರುದ್ಧ ಭಾರತಿಯಾರ್‌ಗೆ 35-19, 35-25ರಲ್ಲಿ, ಬಿಎಎಂ ವಿವಿ ವಿರುದ್ಧ ಕ್ಯಾಲಿಕಟ್‌ಗೆ 35-18, 35-20ರಲ್ಲಿ, ಬೆಂಗಳೂರು ವಿವಿ ವಿರುದ್ಧ ಆದಿಕವಿ ನಾಣಯ್ಯ ವಿವಿಗೆ 35-29, 35-19ರಲ್ಲಿ ಗೆಲುವು.

